ಶುಕ್ರವಾರ, ಆಗಸ್ಟ್ 23, 2024 | ₹ 7.00

www.prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

prajavani.net prajavani prajavani prajavani

**ಅಂತಿಮ ಸ್ಪರ್ಶ**
ಕೃಷ್ಣ ಜನ್ಮಾಷ್ಟಮಿಗಾಗಿ ತಯಾರಿಸಿದ ಕೃಷ್ಣನ ಮೂರ್ತಿಗೆ ಬೆಂಗಳೂರಿನ ಕಲಾವಿದರೊಬ್ಬರು ಅಂತಿಮ ಸ್ಪರ್ಶ ನೀಡಿದರು





# ವಜ್ರಾಭರಣಗಳಿಂದ ಕಂಗೊಳಿಸಲಿದೆ ನಗರ

ನಾವು ನಮ್ಮ ಎರಡನೇ ಮಳಿಗೆಯನ್ನು ಡಿಕನ್ಸನ್ ರೋಡ್ ನಲ್ಲಿ ತೆರೆಯುತ್ತಿದ್ದೇವೆ.




## ಚಿನ್ನ

ಚಿನ್ನದ ದರದಲ್ಲಿ
**10%**
ವರೆಗೆ
ರಿಯಾಯಿತಿ*

## ವಜ್ರ

ಪ್ರತಿ ಕ್ಯಾರೆಟ್‌ಗೆ ಫ್ಲಾಟ್
**₹7,000***
ರಿಯಾಯಿತಿ +
ಪ್ರತಿ ಕ್ಯಾರೆಟ್‌ನೊಂದಿಗೆ
ಒಂದು ಗ್ರಾಂ ಉಚಿತ
ಚಿನ್ನದ ನಾಣ್ಯದ ಹೆಚ್ಚುವರಿ
ಬೋನಸ್ ಪಡೆಯಿರಿ

## ಬೆಳ್ಳಿ

ಪ್ರತಿ ಕೆಜಿಗೆ
**₹2,500**
ವರೆಗೆ ಉಳಿಸಿ +
ಪ್ರತಿ ಕೆಜಿಗೆ ಹೆಚ್ಚುವರಿ
₹2,500*
ಕ್ಯಾಶ್‌ಬ್ಯಾಕ್ ಪಡೆಯಿರಿ

*ನಿಯಮ ಮತ್ತು ಷರತ್ತುಗಳು ಅನ್ವಯ.

ಆಫರ್ 23 ರಿಂದ 25 ಆಗಸ್ಟ್ 2024 ರವರೆಗೆ ಮಾನ್ಯ

# BHIMA

FORMERLY BHIMA JEWELLERS GOLD • DIAMONDS • SILVER • PLATINUM

BHIMA Helpline
1800-121-9076
(10:00 a.m. to 7:00 p.m.)

ನಂ.10, ಸಿವನ್‌ಚೆಟ್ಟಿ ಗಾರ್ಡನ್ಸ್, ಕಮರ್ಷಿಯಲ್ ಸ್ಟ್ರೀಟ್ ಹತ್ತಿರ,
ಡಿಕನ್ಸನ್ ರೋಡ್, ಬೆಂಗಳೂರು. ದೂರವಾಣಿ: 8904954475/76.

ಬೆಂಗಳೂರು • ಉಡುಪಿ • ಹಾಸನ • ಮಂಗಳೂರು • ಶಿವಮೊಗ್ಗ • ವಿಜಯವಾಡ • ಚೆನ್ನೈ • ರಾಜಮಂಡ್ರಿ • ಹೊಸೂರು • ಬೆಳಗಾವಿ • ಹುಬ್ಬಳ್ಳಿ

ಶುಕ್ರವಾರ, ಆಗಸ್ಟ್ 23, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 235 | ಪುಟ 20

• www.prajavani.net

prajavani.net prajavani prajavani prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

‘ಭೀಮ’ ಸಿನಿಮಾ ಮೂಲಕ ‘ಗಿರಿಜಾ’ಳಾಗಿ ಖ್ಯಾತಿ ಪಡೆದಿದ್ದಾರೆ ನಟ ಪ್ರಿಯಾ



ಆಳ-ಅಗಲ
ರಕ್ಷಣೆಗೆ ಆರೋಗ್ಯ ‘ರಕ್ಷಕ’ರ ಮೊರೆ

ಹಣದುಬ್ಬರ ಇಳಿಕೆ ನಿರೀಕ್ಷೆ 12

ಶಾಂತಿ ಸ್ಥಾಪನೆಗೆ ಭಾರತದ ಸಕಲ ನೆರವು: ಮೋದಿ 12

‘ಬ್ಲ್ಯಾಕ್‌ಮೇಲ್‌ಗೆ ಹೆದರಿ ಚಂದ್ರಶೇಖರನ್ ಆತ್ಮಹತ್ಯೆ’ 4

| ಸೆನ್ಸೆಕ್ಸ್ | ನಿಫ್ಟಿ | ₹/$ |
|---|---|---|
| 81,053 | 24,811 | 83.97 |

ಬಿಜೆಪಿ ಅವಧಿಯ ತೀರ್ಮಾನ • ಯಥಾವತ್ ಅನುಮೋದನೆ ನೀಡಿದ ಕಾಂಗ್ರೆಸ್ ಸರ್ಕಾರ

# ಜಿಂದಾಲ್‌ಗೆ 3,677 ಎಕರೆ ಮಾರಾಟ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜಿಂದಾಲ್ ಉಕ್ಕು ಕಂಪನಿಗೆ ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 3,677 ಎಕರೆ ಜಮೀನನ್ನು ಮಾರಾಟ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ತೀರ್ಮಾನಿಸಿದೆ.

2021ರಲ್ಲಿ ಬಿ.ಎಸ್.ಯಡಿಯೂರಪ್ಪ ಮುಖ್ಯ-ಮಂತ್ರಿಯಾಗಿದ್ದಾಗ, ಇದೇ ಕಂಪನಿಗೆ ಶುದ್ಧಕ್ರಯ ಪತ್ರ ಮಾಡಿಕೊಡುವ ತೀರ್ಮಾನ ವಿರೋಧಿಸಿ ಕಾಂಗ್ರೆಸ್ ಬೃಹತ್ ಹೋರಾಟ ನಡೆಸಿತ್ತು. ಬಿಜೆಪಿ ಶಾಸಕ ಅರವಿಂದ ಬೆಲ್ಲದ ಸೇರಿ ಆ ಪಕ್ಷದ ಹಲವು ಶಾಸಕರು ತಮ್ಮದೇ ಸರ್ಕಾರದ ಕ್ರಮವನ್ನು ವಿರೋಧಿಸಿದ್ದರು. ರಾಜಕೀಯ ಒತ್ತಡ ಹೆಚ್ಚಾಗಿದ್ದರಿಂದಾಗಿ, ಬಿಜೆಪಿ ಸರ್ಕಾರವು ಸಂಪುಟ ನಿರ್ಧಾರವನ್ನು ವಾಪಸ್ ಪಡೆದಿತ್ತು.

ಆಗಿನ ಬಿಜೆಪಿ ಸಚಿವ ಸಂಪುಟ ತೆಗೆದುಕೊಂಡಿದ್ದ ನಿರ್ಣಯದಲ್ಲಿ ಯಾವುದೇ ಬದಲಾವಣೆ ಮಾಡದೇ ಯಥಾವತ್ತು ಅನುಮೋದನೆ ನೀಡಲು, ಗುರುವಾರ ನಡೆದ ಸಚಿವ ಸಂಪುಟ ಸಭೆ ನಿರ್ಧರಿಸಿದೆ.

ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿ-ಯಲ್ಲಿ, ಸಂಡೂರು ತಾಲ್ಲೂಕಿನ ತೋರಣಗಲ್ಲು ಮತ್ತು ಕುರೇಕುಪ್ಪ ಗ್ರಾಮಗಳಲ್ಲಿ 2000.58 ಎಕರೆ ಭೂಮಿಯನ್ನು ಪ್ರತಿ ಎಕರೆಗೆ ₹1,22,200 ರಂತೆ ಮತ್ತು ಮುಸೇನಾಯಕನಹಳ್ಳಿ ಮತ್ತು ಯರಬನಹಳ್ಳಿ ಗ್ರಾಮಗಳಲ್ಲಿನ 1666.75 ಎಕರೆ ಭೂಮಿಯನ್ನು ಪ್ರತಿ ಎಕರೆಗೆ ₹1,50,635 ಅನ್ನು ಅಂತಿಮ ಬೆಲೆಯಾಗಿ ನಿಗದಿಪಡಿಸಲಾಗಿದೆ ಎಂದು ವಿವರಿಸಿದರು.

ಭೂಮಿಯನ್ನು ಪಡೆದುಕೊಳ್ಳಲು 2006ರಷ್ಟು ಹಿಂದೆಯೇ ಪ್ರಕ್ರಿಯೆ ಆರಂಭಿಸಲಾಗಿತ್ತು.

4ನೇ ಪುಟ ನೋಡಿ

## ಆಡಳಿತದಲ್ಲಿದ್ದಾಗ ಪರ, ವಿಪಕ್ಷದಲ್ಲಿ ವಿರೋಧ

**1 ಮೊದಲ ಒಪ್ಪಿಗೆ**

- **2005:** ಕಾಂಗ್ರೆಸ್‌ನ ಧರಂಸಿಂಗ್ ಮುಖ್ಯಮಂತ್ರಿಯಾಗಿದ್ದಾಗ ಜಿಂದಾಲ್ ಸೌತ್ ವೆಸ್ಟ್ ಐರನ್ ಸ್ಟೀಲ್ಸ್‌ಗೆ ತೋರಣಗಲ್‌ನಲ್ಲಿ ಲೀಸ್ ಕಂ ಸೇಲ್ (ಗುತ್ತಿಗೆ ಮಾರಾಟ) ಪ್ರತಿ ಎಕರೆಗೆ ₹90,000ದಂತೆ 2,000.58 ಎಕರೆ ಭೂಮಿ ಹಂಚಿಕೆಗೆ ಸಂಪುಟ ಅನುಮೋದನೆ

**2 ಎಚ್‌ಡಿಕೆ ಅವಧಿಯಲ್ಲಿ ಮಂಜೂರು**

- **2006ರ ಜೂನ್ 12:** ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ 2,000.58 ಎಕರೆ ಜಮೀನು ಆರು ವರ್ಷಗಳ ಲೀಸ್‌ಗೆ ಸರ್ಕಾರದಿಂದ ಮಂಜೂರಾತಿ
- **2007:** ಕುಮಾರಸ್ವಾಮಿ ಅವಧಿಯಲ್ಲೇ ತೋರಣಗಲ್, ಮುಸೇನಾಯಕನಹಳ್ಳಿ, ಎರಬನಹಳ್ಳಿ ಗ್ರಾಮಗಳಲ್ಲಿ ಪ್ರತಿ ಎಕರೆಗೆ ₹1.22 ಲಕ್ಷದಂತೆ ಅಡಿಯಲ್ಲಿ 1,666.73 ಎಕರೆ ಹಂಚಿಕೆ

**3 ಸಿದ್ದರಾಮಯ್ಯ ಸರ್ಕಾರದಲ್ಲಿ ಆಕ್ಷೇಪ, ಒಪ್ಪಿಗೆ**

- **2015, ಜನವರಿ 30:** ಸಿದ್ದರಾಮಯ್ಯ ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದಾಗ ಶುದ್ಧ ಕ್ರಯಪತ್ರ ಮಾಡಿಕೊಡುವಂತೆ ಜಿಂದಾಲ್‌ನಿಂದ ಅರ್ಜಿ
- **2017, ಡಿಸೆಂಬರ್ 12:** ‘ಜಿಂದಾಲ್‌ಗೆ ನೀಡಿರುವ ಜಮೀನಿನಲ್ಲಿ ಅಪಾರ ಪ್ರಮಾಣದ ಖನಿಜ ಸಂಪತ್ತು ಇದ್ದು, ಪರ್ಯಾಯ ಭೂಮಿ ಸ್ವಾಧೀನಕ್ಕೆ ತಗಲುವ ಹೆಚ್ಚುವರಿ ವೆಚ್ಚವನ್ನು ಕಂಪನಿ ಭರಿಸಬೇಕು. ಅಲ್ಲಿಯವರೆಗೆ ಕ್ರಯಪತ್ರ ಮಾಡಬಾರದು’ ಎಂದ ಕಾನೂನು ಇಲಾಖೆ
- **2018, ಮಾರ್ಚ್ 3:** ‘ಮಾರಾಟ ಬೆಲೆ ನಿಗದಿಪಡಿಸಿ, ಸಚಿವ ಸಂಪುಟದ ಅನುಮೋದನೆ ಪಡೆದು ಕ್ರಯಪತ್ರ ಮಾಡಿಕೊಡಬಹುದು’ ಎಂದ ಅಡ್ವೊಕೇಟ್ ಜನರಲ್

**4 ಎಚ್‌ಡಿಕೆ ಸರ್ಕಾರ ಒಪ್ಪಿಗೆ, ವಿರೋಧ**

- **2019ರ ಮೇ 27:** ಜಿಂದಾಲ್‌ಗೆ ಪ್ರತಿ ಎಕರೆಗೆ ₹1.22 ಲಕ್ಷದಂತೆ ಒಟ್ಟು 3,667 ಎಕರೆ ಮಾರಾಟ ಮಾಡಲು ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಮೈತ್ರಿ ಸರ್ಕಾರದ ಸಂಪುಟ ಸಭೆ ಒಪ್ಪಿಗೆ
- **ಮೇ 28:** ಆಗ ಕಾಂಗ್ರೆಸ್ ಶಾಸಕರಾಗಿದ್ದ ಎಚ್.ಕೆ.ಪಾಟೀಲರಿಂದ ಕಡು ವಿರೋಧ, ಸರ್ಕಾರಕ್ಕೆ ಪತ್ರ. ‘ಜಿಂದಾಲ್ ಕಂಪನಿಯು ಮೈಸೂರು ಮಿನರಲ್ಸ್‌ಗೆ ಸಾವಿರಾರು ಕೋಟಿ ಬಾಕಿ ಇರಿಸಿಕೊಂಡಿದ್ದು, ಅಂತಹ ವಂಚಕ ಕಂಪನಿಗೆ ಜಮೀನು ಮಾರಾಟ ಮಾಡಬಾರದು’ ಎಂದು ಆಗ್ರಹ
- **ಮೇ 28:** ರಾಜ್ಯ ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ಎಸ್.ಯಡಿಯೂರಪ್ಪ ಆಗ್ರಹ. ಬಿಜೆಪಿಯಿಂದ ಪ್ರತಿಭಟನೆ
- **ಜೂನ್ 7:** ಅತ್ಯಂತ ಕಡಿಮೆ ಬೆಲೆಗೆ ಜಿಂದಾಲ್‌ಗೆ ಭೂಮಿ ನೀಡಲು ಮುಖ್ಯಮಂತ್ರಿ ಕುಮಾರಸ್ವಾಮಿ ಲಂಚ ಪಡೆದಿದ್ದಾರೆ: ಯಡಿಯೂರಪ್ಪ ಆರೋಪ
- **ಜೂನ್ 11:** ವಿರೋಧ ವ್ಯಾಪಕವಾದ ಕಾರಣ, ನಿರ್ಧಾರ ಮರುಪರಿಶೀಲನೆಗೆ ಮುಖ್ಯಮಂತ್ರಿ ಕುಮಾರಸ್ವಾಮಿ, ಸಚಿವರಾದ ಜಿ.ಪರಮೇಶ್ವರ ಮತ್ತು ಕೆ.ಜೆ.ಜಾರ್ಜ್ ಚರ್ಚೆ. ನಂತರದ ದಿನಗಳಲ್ಲಿ ಪ್ರಸ್ತಾವ ಹಾಗೇ ಉಳಿಸಿದ ರಾಜ್ಯ ಸರ್ಕಾರ

**5 ಬಿಎಸ್‌ವೈ ಸರ್ಕಾರದಲ್ಲಿ ಮತ್ತೆ ಒಪ್ಪಿಗೆ, ವಾಪಸ್**

- **2021, ಏಪ್ರಿಲ್ 21:** ಜಿಂದಾಲ್‌ಗೆ 3,667 ಎಕರೆಯನ್ನು ಲೀಸ್ ಕಂ ಸೇಲ್ ಒಪ್ಪಂದದಂತೆ ಶುದ್ಧ ಕ್ರಯಪತ್ರ ಮಾಡಿಕೊಡಲು ಮುಖ್ಯಮಂತ್ರಿ ಯಡಿಯೂರಪ್ಪ ನೇತೃತ್ವದ ಸಂಪುಟ ಸಭೆ ಒಪ್ಪಿಗೆ
- ಆಗಲೂ ಶಾಸಕರಾಗಿದ್ದ, ಈಗಿನ ಸಚಿವ ಎಚ್.ಕೆ.ಪಾಟೀಲ, ಬಿಜೆಪಿ ಶಾಸಕ ಅರವಿಂದ ಬೆಲ್ಲದ ವ್ಯಾಪಕ ವಿರೋಧ. ಕಾಂಗ್ರೆಸ್ ಶಾಸಕರು ಮತ್ತು ಬಿಜೆಪಿಯ ಕೆಲ ಶಾಸಕರಿಂದಲೂ ವಿರೋಧ
- **2021, ಮೇ 27:** ಸಂಪುಟ ಸಭೆಯ ತೀರ್ಮಾನ ವಾಪಸ್ ಪಡೆದ ಸರ್ಕಾರ



ಸಾಮರ್ಥ್ಯ ಪರೀಕ್ಷೆ

ತಮಿಳುನಾಡಿನ ರಾಮೇಶ್ವರಂ ದ್ವೀಪಕ್ಕೆ ಸಂಪರ್ಕ ಕಲ್ಪಿಸುವ ಭಾರತದ ಮೊದಲ ‘ವರ್ಟಿಕಲ್ ಲಿಫ್ಟ್’ ರೈಲು ಸೇತುವೆಯ ಬಳಕೆ ನಿಲ್ಲಿಸಲಾಗಿದೆ. ಹೊಸದಾಗಿ ನಿರ್ಮಾಣಗೊಳ್ಳುತ್ತಿರುವ ಸೇತುವೆಯ ಸಾಮರ್ಥ್ಯ ಪರೀಕ್ಷೆ ಗುರುವಾರ ನಡೆಸಲಾಯಿತು –ಪಿಟಿಐ ಚಿತ್ರ

ಅತ್ಯಾಚಾರ, ಹತ್ಯೆ ಪ್ರಕರಣ: ಸುಪ್ರೀಂ ಕೋರ್ಟ್ ಸೂಚನೆ

# ‘ರಾಜಕೀಯಕ್ಕೆ ಬಳಸದಿರಿ’

**ನವದೆಹಲಿ (ಪಿಟಿಐ):** ಕೋಲ್ಕತ್ತದ ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ವೈದ್ಯ ವಿದ್ಯಾರ್ಥಿನಿ ಮೇಲೆ ನಡೆದ ಅತ್ಯಾಚಾರ ಹಾಗೂ ಆಕೆಯ ಹತ್ಯೆ ಪ್ರಕರಣವನ್ನು ರಾಜಕೀಯಕ್ಕೆ ಬಳಸಬಾರದು ಎಂದು ರಾಜಕೀಯ ಪಕ್ಷಗಳಿಗೆ ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

‘ತಪ್ಪು ಮಾಡಿದವರು ಕಾನೂನಿಗೆ ಅನುಗುಣವಾಗಿ ಶಿಕ್ಷೆ ಅನುಭ-ವಿಸುತ್ತಾರೆ’ ಎಂಬುದನ್ನು ರಾಜಕೀಯದಲ್ಲಿ ಇರುವ ಎಲ್ಲ ಪಕ್ಷಗಳೂ ಅರಿಯಬೇಕು ಎಂಬ ಮಾತನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ಪೀಠವು ಸಿಬಿಐ ಪರ ವಕೀಲ, ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮತ್ತು ಪಶ್ಚಿಮ ಬಂಗಾಳ ಸರ್ಕಾರದ ಪರ ವಕೀಲ ಕಪಿಲ್ ಸಿಬಲ್ ಅವರನ್ನು ಉದ್ದೇಶಿಸಿ ಹೇಳಿದೆ.



‘ನಮ್ಮ ನಾಯಕಿಯ (ಮಮತಾ ಬ್ಯಾನರ್ಜಿ) ವಿರುದ್ಧ ಯಾರಾದರೂ ಏನಾದರೂ ಮಾತನಾಡಿದರೆ ಅವರ ಬೆರಳುಗಳನ್ನು ಕಡಿದುಹಾಕಲಾಗುತ್ತದೆ ಎಂದು ಪಶ್ಚಿಮ ಬಂಗಾಳದ ಹಾಲಿ ಸಚಿವರೊಬ್ಬರು ಹೇಳಿದ್ದಾರೆ’ ಎಂದು ಮೆಹ್ತಾ ಅವರು ಪೀಠಕ್ಕೆ ತಿಳಿಸಿದರು.

ಈ ಮಾತಿಗೆ ತಿರುಗೇಟು ನೀಡಿದ ಸಿಬಲ್ ಅವರು, ‘ಪಶ್ಚಿಮ ಬಂಗಾಳದ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಅವರು ಗುಂಡು ಹಾರಿಸಲಾಗುತ್ತದೆ ಎಂದಿದ್ದಾರೆ’ ಎಂದರು.

11ನೇ ಪುಟ ನೋಡಿ

### ಟಿಎಂಸಿ, ಬಿಜೆಪಿ ಸ್ವಾಗತ

**ಕೋಲ್ಕತ್ತ:** ಪ್ರಕರಣವನ್ನು ರಾಜಕೀಯಕ್ಕೆ ಬಳಸಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿರುವುದನ್ನು ಟಿಎಂಸಿ ಮತ್ತು ಬಿಜೆಪಿ ಸ್ವಾಗತಿಸಿವೆ.

ಪ್ರಕರಣದ ತನಿಖೆ ನಡೆಸುತ್ತಿರುವ ಸಿಬಿಐ, ತಪ್ಪುದಾರಿಗೆ ಎಳೆಯುವ ಮಾಹಿತಿಯನ್ನು ನೀಡಿದೆ ಎಂದು ಆರೋಪಿಸಿದೆ.

‘ಸುಪ್ರೀಂ ಕೋರ್ಟ್ ಆಡಿರುವ ಮಾತುಗಳ ಬಗ್ಗೆ ನಾವು ಅಭಿಪ್ರಾಯ ನೀಡುವ ಕೆಲಸ ಮಾಡುವುದಿಲ್ಲ. ಆದರೆ, ರಾಜಕೀಯ ಪಕ್ಷಗಳು ಇದನ್ನು ರಾಜಕೀಯಕ್ಕೆ ಬಳಸಬಾರದು ಎಂದು ಕೋರ್ಟ್ ಹೇಳಿರುವುದನ್ನು ನಾವು ಸ್ವಾಗತಿಸುತ್ತೇವೆ... ಕೆಲವು ಪಕ್ಷಗಳು ಇದನ್ನು ರಾಜಕೀಯಕ್ಕೆ ಬಳಸಲು ಯತ್ನಿಸುತ್ತಿವೆ’ ಎಂದು ಟಿಎಂಸಿ ನಾಯಕ ಕುನಾಲ್ ಘೋಷ್ ಹೇಳಿದ್ದಾರೆ.

### ‘ಪ್ರಕರಣ ಮುಚ್ಚಿಹಾಕುವ ಯತ್ನ’

‘ಪ್ರಕರಣವನ್ನು ಮುಚ್ಚಿಹಾಕುವ ಯತ್ನವು ಸ್ಥಳೀಯ ಪೊಲೀಸರಿಂದ ನಡೆದಿದೆ’ ಎಂದು ಸಿಬಿಐ ಸುಪ್ರೀಂ ಕೋರ್ಟ್‌ನಲ್ಲಿ ಗುರುವಾರ ಆರೋಪಿಸಿದೆ.

11ನೇ ಪುಟ ನೋಡಿ

# ಕುಮಾರಸ್ವಾಮಿ ವಿರುದ್ಧ ಕ್ರಮಕ್ಕೆ ‘ಸಂಪುಟ’ ಸಲಹೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಶಾಸಕರಾದ ಶಶಿಕಲಾ ಜೊಲ್ಲೆ, ಜಿ. ಜನಾರ್ದನ ರೆಡ್ಡಿ ಮತ್ತು ಮಾಜಿ ಸಚಿವ ಮುರುಗೇಶ ನಿರಾಣಿ ಅವರ ಮೇಲಿನ ಪ್ರಕರಣಗಳ ಸಂಬಂಧ ಶೀಘ್ರವೇ ‘ಅನುಮೋದನೆ’ ಮತ್ತು ‘ಪೂರ್ವಾನುಮತಿ’ ನೀಡಬೇಕು ಎಂದು ರಾಜ್ಯಪಾಲರಿಗೆ ಸಲಹೆ ನೀಡಲು ಗುರುವಾರ ನಡೆದ ಸಚಿವ ಸಂಪುಟ ಸಭೆ ನಿರ್ಧರಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ, ರಾಜ್ಯಪಾಲರ ಬಳಿ ಬಾಕಿ ಇರುವ ಪ್ರಕರಣಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು. ಕೆಲವು ಪ್ರಕರಣಗಳು ಲೋಕಾಯುಕ್ತರಿಂದ ಹೋಗಿವೆ. ಇನ್ನೂ ಕೆಲವು ಪ್ರಕರಣಗಳಲ್ಲಿ ತನಿಖಾ ಸಂಸ್ಥೆಗಳಿಂದ ವರದಿಗಳೂ ಸಲ್ಲಿಕೆಯಾಗಿವೆ. ಕುಮಾರಸ್ವಾಮಿ ಮತ್ತು ಜನಾರ್ದನ ರೆಡ್ಡಿ ಅವರ ಪ್ರಕರಣಗಳಲ್ಲಿ ದೋಷಾರೋಪ ಪಟ್ಟಿಯೂ ಸಿದ್ಧವಾಗಿದೆ. ಅದರ ಸಲ್ಲಿಕೆಗೆ ರಾಜ್ಯಪಾಲರ ಒಪ್ಪಿಗೆ ಬೇಕಿದೆ ಎಂದರು.

ಭ್ರಷ್ಟಾಚಾರ ತಡೆ ಕಾಯ್ದೆಯ ಸೆಕ್ಷನ್ 19ರಡಿ ಅನುಮೋದನೆ ಮತ್ತು ಸೆಕ್ಷನ್ 17ಎ ಅಡಿ ಪೂರ್ವಾನುಮತಿ ಬಾಕಿ ಇವೆ. ಈ ಬಗ್ಗೆ ಶೀಘ್ರವೇ ತೀರ್ಮಾನ ತೆಗೆದುಕೊಳ್ಳಲು ಸಂವಿಧಾನದ 163ನೇ ವಿಧಿ ಅನ್ವಯ ಸಲಹೆ ನೀಡಲು ನಿರ್ಣಯಿಸಲಾಯಿತು ಎಂದರು.

ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಸಚಿವ ಪಾಟೀಲ, ‘ರಾಜ್ಯಪಾಲರ ವಿವೇಚನಾಧಿಕಾರ ಸೀಮಿತ’ ಎಂದೂ ಹೇಳಿದರು.

‘ಸಿದ್ದರಾಮಯ್ಯ ವಿರುದ್ಧ ವ್ಯಕ್ತಿಯೊಬ್ಬರು ದೂರು ನೀಡಿದಾಗ ರಾಜ್ಯಪಾಲರು ತರಾತುರಿಯಲ್ಲಿ ಶೋಕಾಸ್ ನೋಟಿಸ್ ನೀಡಿದರು. ಆದರೆ, ಕುಮಾರಸ್ವಾಮಿ, ಜೊಲ್ಲೆ, ನಿರಾಣಿ ಮತ್ತು ಜನಾರ್ದನ ರೆಡ್ಡಿ ಪ್ರಕರಣದಲ್ಲಿ ಯಾವುದೇ ಕ್ರಮ ಆಗಿಲ್ಲ. ಸಂಪುಟದ ತೀರ್ಮಾನದಲ್ಲಿ ದ್ವೇಷದ ರಾಜಕಾರಣ ಇಲ್ಲ’ ಎಂದೂ ಅವರು ಹೇಳಿದರು.

ಬದ್ಲಾಪುರ ಪ್ರಕರಣ: ‘ಪ್ರತಿಭಟಿಸದೇ ಆಡಳಿತ ಎಚ್ಚೆತ್ತುಕೊಳ್ಳದು’ 11

ಮುಡಾ: 4 ತಿಂಗಳಲ್ಲಿ 79 ಎಕರೆಗೆ ಬದಲಿ ನಿವೇಶನ 10

ಬಿಎಸ್‌ವೈ ಬಂಧನ ಬೇಡ; ಆದೇಶ ವಿಸ್ತರಣೆ 4

ಚಿನಕುರುಳಿ

ಪ್ರಕಾಶ್ ಶೆಟ್ಟಿ




ಸಚಿವ ಸಂಪುಟ ಒಪ್ಪಿಗೆ • 190 ಕಿ.ಮೀ. ಉದ್ದದ 11 ಕಾರಿಡಾರ್ ಅಭಿವೃದ್ಧಿ

# ಸುರಂಗಕ್ಕೆ ₹ 12,690 ಕೋಟಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ಹೆಬ್ಬಾಳ ಮೇಲ್ಸೇತುವೆ (ಎಸ್ಟೀಮ್ ಮಾಲ್) ಪ್ರದೇಶದಿಂದ ಹೊಸೂರು ರಸ್ತೆಯ ಸಿಲ್ಕ್ ಬೋರ್ಡ್ ಜಂಕ್ಷನ್‌ನ ಮೇಲ್ಸೇತುವೆಯವರೆಗೆ ಭೂಗತ ವಾಹನ ಸುರಂಗ(ಅಂಡರ್‌ಗ್ರೌಂಡ್ ವೆಹಿಕ್ಯುಲರ್ ಟನೆಲ್ ಇನ್ ಟ್ವಿನ್ ಟ್ಯೂಬ್ ಮೋಡ್) ಮಾರ್ಗವನ್ನು ನಿರ್ಮಿಸುವ ಯೋಜನೆಗೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಕನಸಿನ ಈ ಯೋಜನೆಯ ಅಂದಾಜು ವೆಚ್ಚ ₹12,690 ಕೋಟಿ. ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ, ‘ಬೆಂಗಳೂರು ನಗರದ ವಾಹನ ದಟ್ಟಣೆ ನಿವಾರಿಸಲು ಇದೊಂದು ಉತ್ತಮ ಯೋಜನೆ’ ಎಂದರು. ‘ಬೆಂಗಳೂರು ನಗರದ ಒಟ್ಟು ಸುಮಾರು 190 ಕಿ.ಮೀ ಉದ್ದದ ವಾಹನ ದಟ್ಟಣೆಯ 11 ಕಾರಿಡಾರ್‌ಗಳನ್ನು ಆಯ್ಕೆ ಮಾಡಿ, ಭೂಗತ ವಾಹನ ಸುರಂಗ ಮಾರ್ಗ ನಿರ್ಮಾಣ ಮಾಡಲು ಸೂಕ್ತವೆಂದು ಅಭಿಪ್ರಾಯಪಡಲಾಗಿದೆ. ಅಲ್ಲದೆ, ಬೆಂಗಳೂರು ಹೃದಯ ಭಾಗದಲ್ಲಿ ಒಟ್ಟು ಸುಮಾರು 99.50 ಕಿ.ಮೀ ಉದ್ದದ 17 ಮೇಲ್ಸೇತುವೆ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಇದಕ್ಕೆ ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಬೇಕಿದೆ’ ಎಂದು ತಿಳಿಸಿದರು.

**52 ಹೊಸ ಇಂದಿರಾ ಕ್ಯಾಂಟೀನ್:** ಬಿಬಿಎಂಪಿ ವ್ಯಾಪ್ತಿಯಲ್ಲಿ ಹೊಸದಾಗಿ 52 ಇಂದಿರಾ ಕ್ಯಾಂಟೀನ್‌ಗಳನ್ನು ಆರಂಭಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

3A ಪುಟ ನೋಡಿ

### ಸ್ಕೈ ಡೆಕ್‌ಗೆ ₹ 500 ಕೋಟಿ



ಪ್ರಸ್ತಾವಿತ ಸ್ಕೈ ಡೆಕ್ ವಿನ್ಯಾಸ

ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಯಡಿ ನಗರವನ್ನು ಆಕರ್ಷಣೆಯ ಕೇಂದ್ರವನ್ನಾಗಿಸಲು, ಪ್ರವಾಸೋದ್ಯಮವನ್ನು ಉತ್ತೇಜಿಸಲು ಬೆಂಗಳೂರು ಸಂಸ್ಕೃತಿ-ಪರಂಪರೆಯನ್ನು ಅನಾವರಣಗೊಳಿಸುವ 250 ಅಡಿ ಎತ್ತರ ಸ್ಕೈ ಡೆಕ್ (ವೀಕ್ಷಣಾ ಗೋಪುರ) ನಿರ್ಮಾಣಕ್ಕೆ ಸಚಿವ ಸಂಪುಟ ಅನುಮೋದನೆ ನೀಡಿದೆ.

ಹೆಮ್ಮಿಗೆಪುರದಲ್ಲಿ (ನೈಸ್ ರಸ್ತೆ ಕ್ಲೋವರ್ ಲೀಫ್) ₹ 500 ಕೋಟಿ ಅಂದಾಜು ವೆಚ್ಚದಲ್ಲಿ ಸ್ಕೈ ಡೆಕ್ ನಿರ್ಮಾಣಗೊಳ್ಳಲಿದೆ ಎಂದು ಸಚಿವ ಎಚ್.ಕೆ.ಪಾಟೀಲ ಹೇಳಿದರು.

## ದರ್ಶನ್ ಭೇಟಿಯಾದ ನಟಿ ರಚಿತಾ ರಾಮ್



ಬೆಂಗಳೂರು: ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ನಟ ದರ್ಶನ್ ಅವರನ್ನು ನಟಿ ರಚಿತಾ ರಾಮ್ ಅವರು ಗುರುವಾರ ಭೇಟಿಯಾಗಿ ಚರ್ಚಿಸಿದರು.

ಮಧ್ಯಾಹ್ನ 3 ಗಂಟೆ ಸುಮಾರಿಗೆ ಕಾರಾಗೃಹಕ್ಕೆ ತೆರಳಿದ ಅವರು ದರ್ಶನ್ ಅವರೊಂದಿಗೆ ಅರ್ಧ ತಾಸು ಚರ್ಚೆ ನಡೆಸಿ ವಾಪಸ್ ಬಂದರು. ನಂತರ ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿದ ರಚಿತಾ ರಾಮ್, 'ದರ್ಶನ್ ಅವರು ಆರೋಗ್ಯವಾಗಿದ್ದಾರೆ. ಅವರು ಚಿತ್ರರಂಗದ ರಾಜನಿದ್ದಂತೆ. ಅದೇ ಸ್ಥಾನದಲ್ಲಿ ಅವರನ್ನು ನೋಡುತ್ತೇನೆ' ಎಂದು ಹೇಳಿ ಭಾವುಕರಾದರು.



### ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್.,

Kirloskar

**ನೋಂದಾಯಿತ ಕಛೇರಿ** : ಸಂ. 19, 2ನೇ ಮುಖ್ಯ ರಸ್ತೆ, ಪೀಣ್ಯ 1ನೇ ಸ್ಟೇಜ್, ಫೇಸ್–1, ಪೀಣ್ಯ, ಬೆಂಗಳೂರು – 560058. **ದೂರವಾಣಿ** : 080 28397256; **ಫ್ಯಾಕ್ಸ್** : 080 28396727;
**ವೆಬ್‌ಸೈಟ್** : www.kirloskarelectric.com ಇ–ಮೇಲ್ : investors@kirloskarelectric.com
CIN : L31100KA1946PLC000415

**ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್‌ನ 77ನೇ ವಾರ್ಷಿಕ ಮಹಾಸಭೆಯ ಸೂಚನೆ**

ಈ ಮೂಲಕ ಸೂಚನೆ ನೀಡುವುದೇನೆಂದರೆ, ಕಾರ್ಪೋರೇಟ್ ವ್ಯವಹಾರಗಳ ಮಂತ್ರಾಲಯ ('ಎಂ.ಸಿ.ಎ')ದ ಎಲ್ಲಾ ಕಾಯಿದೆ ಕಟ್ಟಳೆಗಳನ್ವಯ ಕಂಪನಿ ಕಾಯ್ದೆ 2013ರ (ಕಾಯ್ದೆ) ಅನ್ವಯವಾಗುವ ಎಲ್ಲಾ ನಿಯಮಗಳೂ ಮತ್ತು ಅದರ ಅಡಿಯಲ್ಲಿ ರೂಪಿಸಲಾದ ನಿಯಮಗಳು ಮತ್ತು ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ('ಸೆಬಿ') (ಪಟ್ಟಿಮಾಡುವ ಕಟ್ಟುಪಾಡುಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು 2015ರ ಅನುಸಾರವಾಗಿ ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್ (ಕಂಪನಿ) ಯ 77ನೇ ವಾರ್ಷಿಕ ಮಹಾಸಭೆಯು ('ಎಜಿಎಂ') ಸೋಮವಾರ, ಸೆಪ್ಟೆಂಬರ್ 16, 2024 ರಂದು ಬೆಳಿಗ್ಗೆ 11.00 ಗಂಟೆಗೆ ವಿಡಿಯೋ ಕಾನ್ಫರೆನ್ಸ್ ('ವಿಸಿ') / ಇತರೆ ಆಡಿಯೋ ವಿಷುಯಲ್ ಮೀನ್ಸ್ ('ಒಎವಿಎಂ') ಮೂಲಕ ನಡೆಯಲಿದೆ.

2013ರ ಕಂಪನಿಗಳ ಕಾಯಿದೆ ಕಟ್ಟಳೆಗಳ ಅನುಸಾರ ಹಾಗೂ 2015ರ ಸೆಬಿ (ಲಿಸ್ಟಿಂಗ್ ಹೊಣೆಗಾರಿಕೆಗಳು ಮತ್ತು ಬಹಿರಂಗ–ಪಡಿಸುವಿಕೆಯ ಅಗತ್ಯತೆಗಳು) ನಿಯಂತ್ರಣಗಳು (ಸೆಬಿ ಲಿಸ್ಟಿಂಗ್ ರೆಗ್ಯೂಲೇಶನ್ ಮತ್ತು ಎಂಸಿಎ ಸುತ್ತೋಲೆಗಳಂತೆ ಕಂಪನಿಯ ಎಜಿಎಂನ್ನು ವಿಸಿ/ಓಎವಿಎಂ ಮೂಲಕ ನಡೆಸಲಾಗುತ್ತದೆ. ಹಾಗಾಗಿ ಸದಸ್ಯರು ಮುಂಬರುವ ಎಜಿಎಂಗೆ ವಿಸಿ/ಓಎವಿಎಂ ಮೂಲಕ ಹಾಜರಾಗಿ ಭಾಗವಹಿಸಬಹುದಾಗಿರುತ್ತದೆ.

77ನೇ ಎಜಿಎಂನ ಸೂಚನೆಯನ್ನು ಮತ್ತು ಹಣಕಾಸು ವರ್ಷ 2023–24 ರ ವಾರ್ಷಿಕ ವರದಿಯನ್ನು ವಿದ್ಯುನ್ಮಾನ ಮಾದರಿ–ಯಲ್ಲಿ ಕಂಪನಿ/ ರಿಜಿಸ್ಟ್ರಾರ್ ಮತ್ತು ಷೇರು ಟ್ರಾನ್ಸ್‌ಫರ್ ಏಜೆಂಟ್ / ಡೆಪಾಸಿಟರೀಸ್ / ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ ಇವರಲ್ಲಿ ಇ–ಮೇಲ್ ವಿಳಾಸ ನೋಂದಾಯಿತವಾದ ಸದಸ್ಯರಿಗೆ ಕಳುಹಿಸಲಾಗುತದೆ. ವಾರ್ಷಿಕ ವರದಿಯ ಭೌತಿಕ ಪ್ರತಿಗಳನ್ನು ನೀಡುವುದಕ್ಕೆ ವಿನಾಯಿತಿ ಇದ್ದರೂ ನಿರ್ದಿಷ್ಟವಾಗಿ ವಿನಂತಿಸುವ ಸದಸ್ಯರಿಗೆ ಕಳುಹಿಸಲಾಗುತ್ತದೆ. ಎಜಿಎಂನ ಸೂಚನೆ ಮತ್ತು ವಾರ್ಷಿಕ ವರದಿಯು ಕಂಪನಿಯ ವೆಬ್ ಸೈಟ್ www.kirloskarelectric.com ದಲ್ಲಿ ಲಭ್ಯವಿದ್ದು, ಹಾಗೂ ಸ್ಟಾಕ್ ಎಕ್ಸ್‌ಚೇಂಜ್‌ನ ವೆಬ್‌ಸೈಟ್‌ಗಳಾದ ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯ ಲಿಮಿಟೆಡ್ ವೆಬ್‌ಸೈಟ್‌ಗಳಾದ ಕ್ರಮವಾಗಿ www.bseindia.com ಮತ್ತು www.nseindia.com ಮತ್ತು ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ ('ಸಿಡಿಎಸ್‌ಎಲ್') ನ ವೆಬ್‌ಸೈಟ್ www.evotingindia.com ಗಳಲ್ಲಿ ಲಭ್ಯವಿರುತ್ತದೆ.

ಕಂಪನಿಯು ವಿಸಿ / ಓಎವಿಎಂ ಸೌಲಭ್ಯವನ್ನು ಸಿಡಿಎಸ್‌ಎಲ್ ನಿಂದ ಪಡೆಯುತ್ತಿದೆ. ಸದಸ್ಯರು ವಿಸಿ / ಓಎವಿಎಂ ಸೌಲಭ್ಯದ ಮೂಲಕ ಮಾತ್ರ ಎಜಿಎಂಗೆ ಹಾಜರಾಗಿ ಭಾಗವಹಿಸಬಹುದು. ವಿಸಿ / ಓಎವಿಎಂ ಮೂಲಕ ಸಭೆಗೆ ಹಾಜರಾಗುವ ಸದಸ್ಯರನ್ನು ಕಂಪನಿಗಳ ಕಾಯಿದೆ 2013 ರ ಸೆಕ್ಷನ್ 103 ಅಡಿಯಲ್ಲಿ ಕೋರಂ ಉದ್ದೇಶಕ್ಕಾಗಿ ಎಣಿಕೆ ಮಾಡಲಾಗುತ್ತದೆ. ಎಜಿಎಂ ಗೆ ಸೇರುವ ಸೂಚನೆಗಳು ಮತ್ತು ಎಜಿಎಂ ನಲ್ಲಿ ಭಾಗವಹಿಸುವ ವಿಧಾನವನ್ನು ಎಜಿಎಂ ನ ಸೂಚನೆಯಲ್ಲಿ ಒದಗಿಸಲಾಗಿದೆ.

ಸದಸ್ಯರುಗಳು ರಿಮೋಟ್ ಇ–ಮತದಾನದ ಮೂಲಕ ಎಜಿಎಂ ಸೂಚನೆಯಲ್ಲಿ ಸೂಚಿಸಿರುವಂತೆ ತಮ್ಮ ಮತಗಳನ್ನು ದೂರದಿಂದಲೇ ವ್ಯವಹಾರದ ಮೇಲೆ ಚಲಾಯಿಸಲು ಅವಕಾಶವನ್ನು ಹೊಂದಿರುತ್ತಾರೆ. ಎಲೆಕ್ಟ್ರಾನಿಕ್ ಫೋಲಿಯೊ, ಭೌತಿಕ ಫೋಲಿಯೋ ಮತ್ತು ಇ–ಮೇಲ್ ವಿಳಾಸವನ್ನು ನೋಂದಾಯಿಸದ ಸದಸ್ಯರುಗಳು ರಿಮೋಟ್ ಇ–ಮತದಾನ ಮಾಡುವ ವಿಧಾನವನ್ನು ಎಜಿಎಂ ಸೂಚನೆಯಲ್ಲಿ ತಿಳಿಯಪಡಿಸಲಾಗುತ್ತದೆ, ಎಜಿಎಂಗೆ ವಿಸಿ / ಓಎವಿಎಂ ಮೂಲಕ ಹಾಜರಾದಾಗ ಪಾಲಿಸಬೇಕಾದ ಸೂಚನೆಗಳು ಎಜಿಎಂ ಸೂಚನೆಯಲ್ಲಿ ತಿಳಿಯಪಡಿಸಲಾಗಿದೆ. ಇ–ಮತದಾನದ ವ್ಯವಸ್ಥೆಯನ್ನು ಎಜಿಎಂಗೆ ಹಾಜರಾಗುವ ಸದಸ್ಯರುಗಳಿಗೆ ಎಜಿಎಂ ನಲ್ಲಿ ನೀಡಲಾಗುವದು, ಯಾರು ರಿಮೋಟ್ ಇ–ಮತದಾನವನ್ನು ಮಾಡಿರುವದಿಲ್ಲವೋ ಅವರು ಸಭೆ ನಡೆಯುವ ವೇಳೆಯಲ್ಲಿ ಇ–ಮತದಾನ ಮಾಡಬಹುದಾಗಿದೆ. ಎಲೆಕ್ಟ್ರಾನಿಕ್ ರೂಪದಲ್ಲಿ ಅಥವಾ ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ಟ್ರಾನ್ಸ್‌ಫರ್ ಏಜೆಂಟ್ **("ಆರ್‌ಟಿಎ")** ಷೇರುಗಳನ್ನು ಹೊಂದಿದ್ದರೆ, ಸದಸ್ಯರು ತಮ್ಮ ಅರ್ಜಿ, ಇ–ಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಗಳನ್ನು ಮೌಲೀಕರಿಸಲು / ನವೀಕರಿಸಲು ಡಿಪಾಸಿಟರಿ ಭಾಗೀದಾರರನ್ನು (ಡಿಪಿ) ಸಂಪರ್ಕಿಸಲು ಕೋರಲಾಗಿದೆ. ತಮ್ಮ ಇ–ಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರು ತಾತ್ಕಾಲಿಕವಾಗಿ ತಮ್ಮ ಇ–ಮೇಲ್ ವಿಳಾಸಗಳನ್ನು ಮತ್ತು ಆರ್‌ಟಿಎನಲ್ಲಿ ನೋಂದಾಯಿಸಿದ ಮೊಬೈಲ್ ಸಂಖ್ಯೆಗಳನ್ನು ಪಡೆಯಬಹುದು. ಯಾವುದೇ ಪ್ರಶ್ನೆಗಳಿದ್ದಲ್ಲಿ ಸದಸ್ಯರು irg@integratedindia.in ಪರ್ಯಾಯವಾಗಿ ಎಲೆಕ್ಟ್ರಾನಿಕ್ ಫೋಲಿಯೋ ಮತ್ತು ಭೌತಿಕ ಫೋಲಿಯೋ ಸಂದರ್ಭದಲ್ಲಿ ಷೇರು ಪ್ರಮಾಣಪತ್ರದ ಪ್ರತಿಯೊಂದಿಗೆ ಸದಸ್ಯರು ಇ–ಮೇಲ್ ಐಡಿಗಾಗಿ ವಿನಂತಿಯನ್ನು irg@integratedindia.in ಕಳುಹಿಸಬಹುದು ಮತ್ತು ಮೊಬೈಲ್ ಸಂಖ್ಯೆ, ಇ–ಮೇಲ್ ವಿಳಾಸ, ಸ್ವಯಂ ದೃಢೀಕೃತ ಪ್ಯಾನ್ ಪ್ರತಿ ಮತ್ತು ಕ್ಲೈಂಟ್ ಮಾಸ್ಟರ್ ಒದಗಿಸುವ ಸಹಿ ಮಾಡಿದ ವಿನಂತಿಯ ಪತ್ರದ ಸ್ಕ್ಯಾನ್ ಮಾಡಿದ ಪ್ರತಿಯನ್ನು ಕಳುಹಿಸಬಹುದು. ಅಲ್ಲದೇ ಭೌತಿಕ ಷೇರುಗಳನ್ನು ಹೊಂದಿರುವ ಹಾಗೂ ಕೆವೈಸಿ ವಿವರಗಳನ್ನು ಸಲ್ಲಿಸಿರದ ಸದಸ್ಯರುಗಳು ಕಂಪನಿಯ ಆರ್‌ಟಿಎ ಗೆ ಆಯ್.ಎಸ್.ಆರ್–1 ಅರ್ಜಿಯನ್ನು ಪ್ಯಾನ ಮತ್ತು ಇತರೆ ಕೆವೈಸಿ ವಿವರಗಳನ್ನು ನವೀಕರಿಸಲು ಸಲ್ಲಿಸಬೇಕು. ಅರ್ಜಿಯ ನಮೂನೆಯನ್ನು ಕಂಪನಿಯ ವೆಬ್‌ಸೈಟ್ www.kirloskarelectric.com/investors/investors-information/investor-service-request.html ನಲ್ಲಿ ಪಡೆಯಬಹುದು.

ಸದಸ್ಯರುಗಳು ತಮಗೆ ಕೊಡಮಾಡಲಾಗುವ ಎಜಿಎಂ ಸೂಚನೆಯಲ್ಲಿನ ಎಲ್ಲಾ ವಿವರಗಳನ್ನು ವಿಶೇಷವಾಗಿ ಎಜಿಎಂ ಗೆ ಭಾಗವಹಿಸುವ, ಮತವನ್ನು ದೂರದಿಂದ ಚಲಾಯಿಸುವ ಅಥವಾ ಸಭೆಯಲ್ಲಿ ಭಾಗವಹಿಸುವಾಗ ಮತ ಚಲಾಯಿಸುವ ಕುರಿತಾದ ವಿವರಗಳನ್ನು ಜಾಗರೂಕತೆಯಿಂದ ಓದಿಕೊಳ್ಳಲು ಸೂಚಿಸಲಾಗಿದೆ.

ನಿರ್ದೇಶಕರ ಮಂಡಳಿಯ ಆದೇಶದ ಅನುಸಾರ,
**ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್‌ನ ಪರವಾಗಿ,**
ಮಹಾಬಲೇಶ್ವರ ಭಟ್,
**ಕಂಪನಿ ಕಾರ್ಯದರ್ಶಿ ಮತ್ತು ಕಂಪ್ಲಯೆನ್ಸ್ ಆಫಿಸರ್**

ಸ್ಥಳ : ಬೆಂಗಳೂರು
ದಿನಾಂಕ: ಆಗಸ್ಟ್ 23, 2024

39 ಚಿಕಿತ್ಸಾಲಯಗಳಲ್ಲಿ ವೈದ್ಯಕೀಯ ಸೇವೆಗೆ ತೊಂದರೆ: ಆರೋಗ್ಯ ಇಲಾಖೆ ಮಾಹಿತಿ

# 'ನಮ್ಮ ಕ್ಲಿನಿಕ್'ಗಳಲ್ಲಿ ವೈದ್ಯರ ಕೊರತೆ

• ವರುಣ ಹೆಗಡೆ

ಬೆಂಗಳೂರು: ಜನರ ಸಮಗ್ರ ಆರೋಗ್ಯ ವೃದ್ಧಿಗೆ ವಾರ್ಡ್ ಮಟ್ಟದಲ್ಲಿ ಪ್ರಾರಂಭಿಸಲಾದ 'ನಮ್ಮ ಕ್ಲಿನಿಕ್'ಗಳಲ್ಲಿ ವೈದ್ಯರ ಕೊರತೆ ಮುಂದುವರಿದಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 39 'ನಮ್ಮ ಕ್ಲಿನಿಕ್'ಗಳಲ್ಲಿ ಹಲವು ತಿಂಗಳುಗಳಿಂದ ವೈದ್ಯಾಧಿಕಾರಿಗಳೇ ಇಲ್ಲ.

ಸದ್ಯ ನಗರದಲ್ಲಿ 243 'ನಮ್ಮ ಕ್ಲಿನಿಕ್'ಗಳು ಕಾರ್ಯನಿರ್ವಹಿಸುತ್ತಿವೆ. ಈ ಕ್ಲಿನಿಕ್‌ಗಳಿಗೆ ತಲಾ ಒಬ್ಬರು ವೈದ್ಯಾಧಿಕಾರಿ, ಶುಶ್ರೂಷಕರು, ಪ್ರಯೋಗಾಲಯ ತಂತ್ರಜ್ಞರು ಹಾಗೂ ಡಿ ದರ್ಜೆ ಸಿಬ್ಬಂದಿ ಹುದ್ದೆ ಮಂಜೂರು ಮಾಡಲಾಗಿದೆ.

ಕಡಿಮೆ ವೇತನ, ಒಂದು ವರ್ಷಕ್ಕೆ ಗುತ್ತಿಗೆ ಆಧಾರದಲ್ಲಿ ನೇಮಕಾತಿ ಸೇರಿ ವಿವಿಧ ಕಾರಣಗಳಿಂದ ಇಲ್ಲಿ ಕಾರ್ಯ ನಿರ್ವಹಿಸಲು ವೈದ್ಯರು ನಿರಾಸಕ್ತಿ ತೋರುತ್ತಿದ್ದಾರೆ. ಇದರಿಂದಾಗಿ ಕ್ಲಿನಿಕ್‌ಗಳು ಪ್ರಾರಂಭವಾಗಿ ಎರಡು ವರ್ಷಗಳಾದರೂ ವೈದ್ಯರ ಕೊರತೆಯ ಸಮಸ್ಯೆ ನಿವಾರಣೆಯಾಗಿಲ್ಲ. 39 ಕ್ಲಿನಿಕ್‌ಗಳಲ್ಲಿ ವೈದ್ಯಾಧಿಕಾರಿಗಳಿಲ್ಲ ಎಂಬುದು ಆರೋಗ್ಯ ಇಲಾಖೆಯ ದಾಖಲೆಗಳಲ್ಲೇ ಇದೆ.



2022ರ ಫೆಬ್ರವರಿ ತಿಂಗಳಲ್ಲಿ ಮೊದಲ ಹಂತದಲ್ಲಿ 108 ಕ್ಲಿನಿಕ್‌ಗಳಿಗೆ ಚಾಲನೆ ನೀಡಲಾಗಿತ್ತು. ಇನ್ನುಳಿದ ಕ್ಲಿನಿಕ್‌ಗಳು ತದನಂತರ ಕಾರ್ಯಾರಂಭಿಸಿವೆ. ಬೆಳಿಗ್ಗೆ 9ರಿಂದ ಸಂಜೆ 4.30ರವರೆಗೆ ಈ ಕ್ಲಿನಿಕ್‌ಗಳು ಕಾರ್ಯನಿರ್ವಹಿಸುತ್ತಿವೆ. ಜ್ವರದಂತಹ ಸಾಮಾನ್ಯ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ಒದಗಿಸುವುದರ ಜೊತೆಗೆ ರಕ್ತ ಸೇರಿ ವಿವಿಧ ಪರೀಕ್ಷೆಗಳನ್ನೂ ಇಲ್ಲಿ ನಡೆಸಲಾಗುತ್ತದೆ. ಆದರೆ, ಈ ಕ್ಲಿನಿಕ್‌ಗಳಲ್ಲಿ ಕಾರ್ಯನಿರ್ವಹಿಸಲು ವೈದ್ಯರು ನಿರಾಸಕ್ತಿ ತೋರುತ್ತಿರುವುದರಿಂದ ಗುಣಮಟ್ಟದ ವೈದ್ಯಕೀಯ ಸೇವೆಗೆ ತೊಡಕಾಗಿದೆ.

**ದಕ್ಷಿಣ, ಪೂರ್ವ ವಲಯದಲ್ಲಿ ಸಮಸ್ಯೆ:** 'ನಮ್ಮ ಕ್ಲಿನಿಕ್'ಗಳಲ್ಲಿನ ವೈದ್ಯಾಧಿಕಾರಿ ಹುದ್ದೆಗಳಿಗೆ ಎಂಬಿಬಿಎಸ್ ಪದವೀಧರರನ್ನು ನೇಮಿಸಿಕೊಳ್ಳಲಾಗುತ್ತಿದ್ದು, ತಿಂಗಳಿಗೆ ₹47,250 ವೇತನ ನಿಗದಿಪಡಿಸಲಾಗಿದೆ. ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದಲ್ಲಿ ನೇಮಕ ರಾದವರಲ್ಲಿ ಕೆಲವರು ಉನ್ನತ ವ್ಯಾಸಂಗ, ಬೇರೆಡೆಗೆ ವೃತ್ತಿ ಆಯ್ಕೆ ಸೇರಿ ವಿವಿಧ ಕಾರಣದಿಂದ ಅರ್ಧದಲ್ಲೆ ಹುದ್ದೆ ತ್ಯಜಿಸುತ್ತಿದ್ದಾರೆ. ಇದರಿಂದಾಗಿಯೂ ಹುದ್ದೆಗಳು ಖಾಲಿ ಉಳಿಯುತ್ತಿವೆ. ಮಂಜೂರಾಗಿರುವ ವೈದ್ಯಾಧಿಕಾರಿ ಹುದ್ದೆಗಳಲ್ಲಿ ಬಿಬಿಎಂಪಿ ಪೂರ್ವ ವಲಯ (12 ಹುದ್ದೆಗಳು) ಹಾಗೂ ದಕ್ಷಿಣ ವಲಯದಲ್ಲಿ (10 ಹುದ್ದೆಗಳು) ಅಧಿಕ ಹುದ್ದೆಗಳು ಖಾಲಿ ಉಳಿದಿವೆ.

'ವೈದ್ಯರ ಅನುಪಸ್ಥಿತಿಯಿಂದ ಕಾರ್ಯನಿರ್ವಹಣೆ ಕಷ್ಟವಾಗಿದೆ. ಈ ಕ್ಲಿನಿಕ್‌ಗಳ ಪರಿಕಲ್ಪನೆ ಉತ್ತಮವಾಗಿದ್ದರೂ ಜನರನ್ನು ತಲುಪಲು ಸಾಧ್ಯವಾಗುತ್ತಿಲ್ಲ. ವೃದ್ಧರು ಮಾತ್ರ ವಿವಿಧ ಮಾತ್ರೆಗಳಿಗೆ ನಿಯಮಿತವಾಗಿ ಭೇಟಿ ನೀಡುತ್ತಿದ್ದು, ಅವರಿಗೆ ಲಭ್ಯವಿರುವ ಮಾತ್ರೆಗಳನ್ನು ಒದಗಿಸುತ್ತಿದ್ದೇವೆ' ಎಂದು ಬಿಬಿಎಂಪಿ ದಕ್ಷಿಣ ವಲಯದ 'ನಮ್ಮ ಕ್ಲಿನಿಕ್' ಒಂದರ ಹೆಸರು ಬಹಿರಂಗ ಪಡಿಸಲು ಇಚ್ಛಿಸದ ಶುಶ್ರೂಷಕರೊಬ್ಬರು ತಿಳಿಸಿದರು.

### ಶುಶ್ರೂಷಕರು, ತಂತ್ರಜ್ಞರ ಕೊರತೆ

ಬಿಬಿಎಂಪಿ ವ್ಯಾಪ್ತಿಯಲ್ಲಿರುವ 'ನಮ್ಮ ಕ್ಲಿನಿಕ್'ಗಳು ಶುಶ್ರೂಷಕರು ಹಾಗೂ ಪ್ರಯೋಗಾಲಯ ತಂತ್ರಜ್ಞರ ಕೊರತೆಯನ್ನೂ ಎದುರಿಸುತ್ತಿದೆ. ಎಂಟು 'ನಮ್ಮ ಕ್ಲಿನಿಕ್'ಗಳಲ್ಲಿ ಶುಶ್ರೂಷಕ ಹುದ್ದೆಗಳು ಖಾಲಿಯಿವೆ. 12 'ನಮ್ಮ ಕ್ಲಿನಿಕ್'ಗಳು ಪ್ರಯೋಗಾಲಯ ತಂತ್ರಜ್ಞರ ಕೊರತೆ ಎದುರಿಸುತ್ತಿವೆ. ಶುಶ್ರೂಷಕ ಹುದ್ದೆಗೆ ಬಿಎಸ್‌ಸಿ, ನರ್ಸಿಂಗ್‌ನಲ್ಲಿ ಡಿಪ್ಲೊಮಾ ಮಾಡಿದವರನ್ನು ನೇಮಿಸಿಕೊಳ್ಳಲಾಗಿದೆ. ಅವರಿಗೆ ತಿಂಗಳಿಗೆ ₹ 15,750 ವೇತನ ನಿಗದಿಪಡಿಸಲಾಗಿದೆ. ಇದರಿಂದಾಗಿ ಶುಶ್ರೂಷಕರು ಇಲ್ಲಿ ಕಾರ್ಯನಿರ್ವಹಿಸಲು ನಿರಾಸಕ್ತಿ ತೋರಿದ್ದಾರೆ.

ಚಿಕಿತ್ಸೆಗೆ ಸಂಬಂಧಿಸಿದಂತೆ ಒಟ್ಟು 12 ಆರೋಗ್ಯ ಸೇವೆಗಳ ಪ್ಯಾಕೇಜ್ 'ನಮ್ಮ ಕ್ಲಿನಿಕ್'ಗಳಲ್ಲಿ ಲಭ್ಯವಿದೆ. ಗರ್ಭಿಣಿಯರ ಆರೈಕೆ, ನವಜಾತ ಶಿಶುವಿನ ಸಮಗ್ರ ಆರೋಗ್ಯ ರಕ್ಷಣೆ, ಜ್ವರದಂತಹ ಸಾಮಾನ್ಯ ಸಮಸ್ಯೆಗಳಿಗೆ ಹೊರ ರೋಗಿ ಸೇವೆ, ಬಾಯಿ ಆರೋಗ್ಯ ಸೇರಿ ವಿವಿಧ ಚಿಕಿತ್ಸಾ ಸೇವೆಗಳು ಲಭ್ಯವಿದೆ.

> **ಎಂಬಿಬಿಎಸ್ ಪದವೀಧರರು ಉನ್ನತ ವ್ಯಾಸಂಗ ಸೇರಿ ವಿವಿಧ ಕಾರಣದಿಂದ ಸೇವೆಯಿಂದ ಬಿಡುಗಡೆ ಹೊಂದಿದಾಗ ಹುದ್ದೆ ಖಾಲಿಯಾಗುತ್ತದೆ. ನಮ್ಮ ಕ್ಲಿನಿಕ್ ಖಾಲಿ ಹುದ್ದೆಗಳನ್ನು ಕಾಲ ಕಾಲಕ್ಕೆ ಭರ್ತಿ ಮಾಡಲಾಗುತ್ತಿದೆ**
> **ಕಿಶೋರ್ ವಿಕಾಸ್ ಸುರಳ್ಕರ್**, ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ)

## ಸಹಾಯಕ ಧರ್ಮಾಧ್ಯಕ್ಷರ ಎಪಿಸ್ಕೋಪಲ್ ದೀಕ್ಷೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಧರ್ಮಪ್ರಾಂತ್ಯದ ನೂತನ ಸಹಾಯಕ ಧರ್ಮಾಧ್ಯಕ್ಷರ ಎಪಿಸ್ಕೋಪಲ್ ದೀಕ್ಷಾ ಸಮಾರಂಭ ಶನಿವಾರ (ಆಗಸ್ಟ್ 24) ಬೆಳಿಗ್ಗೆ 9ರಿಂದ ಸೇಂಟ್ ಫ್ರಾನ್ಸಿಸ್ ಕ್ಸೇವಿಯರ್ ಕೆಥೆಡ್ರಲ್‌ನಲ್ಲಿ ನಡೆಯಲಿದೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದ ಬೆಂಗಳೂರು ಧರ್ಮಪ್ರಾಂತ್ಯದ ಆರ್ಚ್‌ಬಿಷಪ್ ಪೀಟರ್ ಮಚಾಡೊ, 'ಈ ಧರ್ಮ-ಪ್ರಾಂತ್ಯದ ಧರ್ಮಾಧ್ಯಕ್ಷನಾಗಿ ನಾನು ಒಬ್ಬನೇ ಕಾರ್ಯನಿರ್ವಹಿಸುತ್ತಿದ್ದೆ. ಸುಸೂತ್ರವಾಗಿ ಆಡಳಿತ ನಡೆಸಿಕೊಂಡು ಹೋಗುವುದಕ್ಕಾಗಿ ಇಬ್ಬರು ಸಹಾಯಕ ಧರ್ಮಾಧ್ಯಕ್ಷರನ್ನು ಪೋಪ್ ಅವರು ನೇಮಕ ಮಾಡಿದ್ದಾರೆ. ಭಾರತೀಯ ಸಂಸ್ಕೃತಿಯಂತೆ ಪೀಠಾರೋಹಣ ನಡೆಯಲಿದೆ' ಎಂದು ತಿಳಿಸಿದರು.

ಮೈಸೂರು ಅಪೋಸ್ಟೊಲಿಕ್ ಆಡಳಿತಗಾರ ಬರ್ನಾರ್ಡ್ ಮೋರಸ್, ಚಿಕ್ಕಮಗಳೂರು ಬಿಷಪ್ ಟಿ. ಅಂಥೋಣಿ ಸ್ವಾಮಿ ಸೇರಿದಂತೆ ಬೇರೆ ಬೇರೆ ಧರ್ಮಪ್ರಾಂತ್ಯಗಳ 15–16 ಧರ್ಮಾಧ್ಯಕ್ಷರು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. 400 ಧರ್ಮ ಗುರುಗಳು, ಸುಮಾರು 300 ಸನ್ಯಾಸಿನಿಯರು, ಸಾವಿರಕ್ಕೂ ಅಧಿಕ ಜನರು ಪಾಲ್ಗೊಳ್ಳುವರು ಎಂದು ಮಾಹಿತಿ ನೀಡಿದರು.



ಬೆಂಗಳೂರು ಧರ್ಮಪ್ರಾಂತ್ಯದ ಆರ್ಚ್‌ಬಿಷಪ್ ಪೀಟರ್ ಮಚಾಡೊ ಅವರೊಂದಿಗೆ (ಮಧ್ಯದಲ್ಲಿರುವವರು) ಸಹಾಯಕ ಧರ್ಮಾಧ್ಯಕ್ಷರಾದ ಆರೋಕ್ಯರಾಜ್ ಸತೀಶ್ ಕುಮಾರ್ ಮತ್ತು ಜೋಸೆಫ್ ಸೂಸೈನಾದನ್ –ಪ್ರಜಾವಾಣಿ ಚಿತ್ರ

ಬೆಳಿಗ್ಗೆ 9ಕ್ಕೆ ಕಾರ್ಯಕ್ರಮ ಆರಂಭಗೊಳ್ಳಲಿದೆ. ಪ್ರಾರ್ಥನೆ, ಆಶೀರ್ವಾದ, ಬೋಧನೆ ಮುಂತಾದ ಸಾಂಪ್ರದಾಯಿಕ ಕಾರ್ಯಕ್ರಮಗಳು ನಡೆಯಲಿವೆ. ಮಧ್ಯಾಹ್ನ 12ರಿಂದ ಸಾರ್ವಜನಿಕ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು. 'ಪ್ರಾರ್ಥನೆಯಷ್ಟೇ ಸೇವೆಗೂ ನಾವು ಮಹತ್ವವನ್ನು ನೀಡುತ್ತಾ ಬಂದಿದ್ದೇವೆ. ನಮ್ಮ ಧರ್ಮಪ್ರಾಂತ್ಯದ ಅಡಿಯಲ್ಲಿ 150ಕ್ಕೂ ಅಧಿಕ ಚರ್ಚ್‌ಗಳಿವೆ. 60 ಕಿರು ದೇವಾಲಯಗಳಿವೆ. 600 ಕಾನ್ವೆಂಟ್‌ಗಳು, 110 ಶಾಲಾ, ಕಾಲೇಜುಗಳಿವೆ' ಎಂದು ಹೇಳಿದರು.

**ಕನ್ನಡಕ್ಕೆ ಒತ್ತು:** 'ನಾವು ಈ ರಾಜ್ಯದ ಪ್ರಜೆಗಳಾಗಿ ಕನ್ನಡಕ್ಕೆ ಮಹತ್ವ ನೀಡಲೇಬೇಕು. ಕನ್ನಡಿಗರಿಗೆ ಕನ್ನಡದಲ್ಲಿಯೇ ಪ್ರಾರ್ಥನೆ ಮಾಡಲು ಅವಕಾಶ ನೀಡಲಾಗಿದೆ. ಅದೇ ರೀತಿ ತಮಿಳು, ಇಂಗ್ಲಿಷ್‌ನಲ್ಲಿಯೂ ಪ್ರಾರ್ಥನೆ ಮಾಡಲು ಬೇರೆ ಬೇರೆ ಸಮಯದಲ್ಲಿ ಅವಕಾಶ ಮಾಡಿಕೊಟ್ಟಿದ್ದೇವೆ. ದೇವರ ಭಾಷೆ ಪ್ರೀತಿಯೇ ಆಗಿರುವುದರಿಂದ ನಮ್ಮ ನಮ್ಮ ಭಾಷೆಗಳಲ್ಲಿ ಪ್ರಾರ್ಥನೆ ಮಾಡಬಹುದು' ಎಂದು ತಿಳಿಸಿದರು.

ನೂತನ ಸಹಾಯಕ ಧರ್ಮಾಧ್ಯಕ್ಷರಾದ ಧರ್ಮಗುರು ಆರೋಕ್ಯರಾಜ್ ಸತೀಶ್ ಕುಮಾರ್ ಮತ್ತು ಧರ್ಮಗುರು ಜೋಸೆಫ್ ಸೂಸೈನಾದನ್ ಮಾತನಾಡಿ, 'ನಾವು ಹೊಸ ಯೋಜನೆ ರೂಪಿಸುತ್ತಿಲ್ಲ. ಧರ್ಮಾಧ್ಯಕ್ಷರಿಗೆ ಎಲ್ಲ ಸಹಕಾರ, ಸಲಹೆ ನೀಡಲು ಬಂದಿದ್ದೇವೆ. ಅವರ ಯೋಜನೆಗಳನ್ನು ಕಾರ್ಯಗತಗೊಳಿಸುತ್ತೇವೆ. ಸಮಾಜದ ಹಿತದ ದೃಷ್ಟಿಯಿಂದ ಕೆಲಸ ಮಾಡುತ್ತೇವೆ' ಎಂದರು.

## ಟೋಕಿಯೊ -ಬೆಂಗಳೂರು ವಾರಕ್ಕೆ 5 ವಿಮಾನ ಸಂಚಾರ

ಅಕ್ಟೋಬರ್ ಕೊನೆಯ ವಾರದಿಂದ ಐದು ವಿಮಾನಗಳ ಸಂಚಾರ ಆರಂಭವಾಗಲಿದೆ.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೋಕಿಯೊ-ಬೆಂಗಳೂರು ನಡುವೆ ವಾರದಲ್ಲಿ ಐದು ದಿನ ವಿಮಾನಗಳು ಸಂಚರಿಸಲಿವೆ ಎಂದು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ (ಬಿಐಎಎಲ್) ಹಾಗೂ ಜಪಾನ್ ಏರ್‌ಲೈನ್ಸ್ (ಜೆಎಎಲ್) ತಿಳಿಸಿವೆ.

ಈ ಮಾರ್ಗದಲ್ಲಿ ಪ್ರಸ್ತುತ ವಾರಕ್ಕೆ ಮೂರು ವಿಮಾನಗಳು ಮಾತ್ರ ಸಂಚರಿಸುತ್ತಿವೆ.



ಬಿಐಎಎಲ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸತ್ಯಕಿ ರಘುನಾಥ್ ಮಾತನಾಡಿ, '2020ರ ಏಪ್ರಿಲ್ 12 ರಂದು ಬೆಂಗಳೂರು ವಿಮಾನ ನಿಲ್ದಾಣದಿಂದ ಜಪಾನ್ ಏರ್‌ಲೈನ್ಸ್ ಕಾರ್ಯಾಚರಣೆ ಆರಂಭಿಸಿತು. ಅಂದಿನಿಂದ ಬೆಂಗಳೂರು ಮತ್ತು ಜಪಾನ್ ನಡುವೆ ಪ್ರಯಾಣಿಕರ ದಟ್ಟಣೆ ಹೆಚ್ಚಾಗಿದೆ. 2022ರಲ್ಲಿ 23,532 ಪ್ರಯಾಣಿಕರು ಮತ್ತು 2023ರಲ್ಲಿ 62,959 ಪ್ರಯಾಣಿಕರು ಈ ಮಾರ್ಗವಾಗಿ ಪ್ರಯಾಣಿಸಿದ್ದಾರೆ ಎಂದು ಹೇಳಿದರು.


### 'ಎಂಜಿನಿಯರ್ ಎಕ್ಸಲೆನ್ಸ್' ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಮೀಡಿಯಾ ವಿಷನ್ ಬೆಂಗಳೂರು ಹಾಗೂ ಬಸವ ಪರಿಷತ್‌ನಿಂದ ನೀಡುವ 'ಎಂಜಿನಿಯರಿಂಗ್ ಎಕ್ಸಲೆನ್ಸ್–2024' ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಎಂಜಿನಿಯರ್‌ಗಳು ಸ್ವವಿವರ ಹಾಗೂ ಸೇವಾ ದಾಖಲಾತಿಗಳೊಂದಿಗೆ ಸೆಪ್ಟೆಂಬರ್ 10ರೊಳಗಾಗಿ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ 80951 75780, 72594 56555ಗೆ ಸಂಪರ್ಕಿಸಿ.

## ರಾಕೇಶ್ ಸಿಂಗ್ ರೇರಾ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ (ರೇರಾ) ಮುಖ್ಯಸ್ಥರನ್ನಾಗಿ ನಿವೃತ್ತ ಐಎಎಸ್ ಅಧಿಕಾರಿ ರಾಕೇಶ್ ಸಿಂಗ್ ಅವರನ್ನು ನೇಮಿಸಿ ಸರ್ಕಾರ ಅಧಿಸೂಚನೆ ಹೊರಡಿಸಿದೆ.



ಅಧ್ಯಕ್ಷರಾಗಿದ್ದ ಎಚ್.ಸಿ. ಕಿಶೋರ್ ಚಂದ್ರ ಅವರ ಅಧಿಕಾರ ಅವಧಿ ಮುಗಿದ ಕಾರಣ ಈ ಹುದ್ದೆ ತೆರವಾಗಿತ್ತು. ರಾಕೇಶ್ ಸಿಂಗ್ ಅವರ ಅಧಿಕಾರಾವಧಿ ಐದು ವರ್ಷ ಇರಲಿದೆ.

ರೇರಾಕ್ಕೆ ಅಧ್ಯಕ್ಷ ಮತ್ತು ಸದಸ್ಯರನ್ನು ನೇಮಕ ಮಾಡಲು ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಕೆಯಾಗಿತ್ತು. ಅಧ್ಯಕ್ಷರು ಇಲ್ಲದ ಕಾರಣ ಪ್ರಾಧಿಕಾರದಲ್ಲಿ ನೂರಾರು ದೂರುಗಳು ವಿಲೇವಾರಿ ಆಗದೆ ಬಾಕಿ ಉಳಿದಿದ್ದವು. ಶೀಘ್ರವೇ ನೇಮಕ ಮಾಡಲಾಗುವುದೆಂದು ಹೈಕೋರ್ಟ್‌ಗೆ ಸರ್ಕಾರ ಮಾಹಿತಿ ನೀಡಿತ್ತು.

## ವರ್ಗಾವಣೆಯಿಂದ ವಿನಾಯಿತಿ

ಬೆಂಗಳೂರು: ಅಂಗವಿಕಲ ನೌಕರರು ಮತ್ತು ತಮ್ಮ ಮೇಲೆ ಅವಲಂಬಿತವಾಗಿರುವ ಅಂಗವಿಕಲರನ್ನು ಹೊಂದಿರುವ ನೌಕರರಿಗೆ ವರ್ಗಾವಣೆಯಿಂದ ವಿನಾಯಿತಿ ನೀಡುವ ಅಥವಾ ಹತ್ತಿರದ ಸ್ಥಳಗಳಿಗೆ ನಿಯುಕ್ತಿಗೊಳಿಸುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶವನ್ನು ಕಾಲೇಜು ಶಿಕ್ಷಣ ಇಲಾಖೆಯ ಬೋಧಕ ಸಿಬ್ಬಂದಿಗೂ ಅನ್ವಯಿಸಲು ಸಂಪುಟ ಸಭೆ ಅನುಮೋದನೆ ನೀಡಿದೆ.

ಇದಕ್ಕಾಗಿ ಕರ್ನಾಟಕ ಸಿವಿಲ್ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆಯ ಬೋಧಕ ಸಿಬ್ಬಂದಿ ವರ್ಗಾವಣೆ ನಿಯಂತ್ರಣ) 2ನೇ ತಿದ್ದುಪಡಿ ನಿಯಮಗಳು 2024 ಕ್ಕೆ ಅನುಮೋದನೆ ನೀಡಲಾಗಿದೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.



### ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

KPTCL

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂ:ಅಇಂವಿ/ಪ್ರ(ನಿ)/ಬೆಂ.ಮ.ಕ್ಷೇ.ವ.(ಉ)/ಕಾನಿಇಂ(ಕ)/ಸಕಾನಿಇಂ-2/F-76(9) & F-71(7,13 & 21)/24-25/3903-05&3919-21 ದಿನಾಂಕ: 22.08.2024

**ಟೆಂಡರ್ ಪ್ರಕಟಣೆ**
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ)

ಕವಿಪ್ರನಿನಿಯು ಕೆಳಕಂಡ ಕಾಮಗಾರಿಗಳಿಗೆ ಬಿಡ್‌ಗಳನ್ನು ಆಹ್ವಾನಿಸಿದೆ.

1) ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂ(ವಿ)/ಪ್ರ(ನಿ)/ಬೆಂ.ಮ.ಕ್ಷೇ.ವ(ಉ)/ಕಾನಿಇಂ(ಕ)/ಸಕಾಇಂ–2/24–25/ಇಹಿಆರ್–03 ದಿನಾಂಕ: 19.08.2024ರ ಮೂಲ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ ಹಾಗೂ ಶೇಕಡವಾರು ಟೆಂಡರ್ ಆಧಾರದ ಮೇಲೆ ಬೆಂಗಳೂರು ಮಹಾನಗರ ಕ್ಷೇತ್ರ ವಲಯ ಉತ್ತರ ವೃತ್ತದಲ್ಲಿ ಪೀಣ್ಯ ವಿಭಾಗದಲ್ಲಿನ 66/11ಕೆವಿ ಎಂಇಐ ಲೇಔಟ್ ಉಪಕೇಂದ್ರದಲ್ಲಿ ಬಿಬಿಎಲ್ ತಯಾರಿಕೆಯ ಕ್ರಮ ಸಂಖ್ಯೆ 4949/12, 20 ಎಂವಿಎ ಪರಿವರ್ತಕವನ್ನು ದುರಸ್ತಿಗೊಳಿಸುವ ಕಾಮಗಾರಿ.

2) ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂ(ವಿ)/ಪ್ರ(ನಿ)/ಬೆಂ.ಮ.ಕ್ಷೇ.ವ(ಉ)/ಕಾನಿಇಂ(ಕ)/ಸಕಾಇಂ–2/22–23/ಇಹಿಆರ್–38/ಕರೆ–7 ದಿನಾಂಕ:28.12.2022ರ ಮೂಲ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ ಬೆಂಗಳೂರು ಮಹಾನಗರ ಕ್ಷೇತ್ರ ವಲಯ ಉತ್ತರ ವೃತ್ತದ ಹೆಬ್ಬಾಳ ವಿಭಾಗದಲ್ಲಿನ ಈ ಕೆಳಗೆ ನಮೂದಿಸಿರುವ ಉಪಕೇಂದ್ರಗಳಲ್ಲಿ ಹಳೆ ಸಿ & ಆರ್ ಪ್ಯಾನಲ್ ತೆಗೆದು ಹೊಸ ಸಿ & ಆರ್ ಪ್ಯಾನಲ್ ಅಳವಡಿಸುವ ಕಾಮಗಾರಿಗಳಿಗೆ ಬಿಡ್‌ಗಳನ್ನು ಆಹ್ವಾನಿಸಿದೆ. (1) 66/11 ಕೆ.ವಿ 'ಸಿ' ಸ್ಟೇಷನ್ ಉಪಕೇಂದ್ರದಲ್ಲಿರುವ 2x31.5 ಎಂ.ವಿ.ಎ ಪರಿವರ್ತಕ. (2) 66/11 ಕೆ.ವಿ ಬಾಣಸವಾಡಿ ಉಪ ಕೇಂದ್ರದಲ್ಲಿರುವ 1x31.5 ಎಂ.ವಿ.ಎ ಪರಿವರ್ತಕ. (3) 66/11 ಕೆ.ವಿ ಪಾಟರಿ ರೋಡ್ ಉಪ ಕೇಂದ್ರದಲ್ಲಿರುವ 1x31.5 ಎಂ.ವಿ.ಎ ಪರಿವರ್ತಕ ಮತ್ತು 66ಕೆ.ವಿ ಐ.ಟಿ.ಐ ಮಾರ್ಗ (ಐ.ಟಿ.ಐ–ಪಾಟರಿ ರೋಡ್ ಮಾರ್ಗ)

ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಗ್ಗೆ ವಿವರಗಳನ್ನು ದಿನಾಂಕ 23.08.2024 ರಂದು ಅಥವಾ ಆನಂತರ ಕವಿಪ್ರನಿನಿ ವೆಬ್‌ಸೈಟ್ https://kptcl.karnataka.gov.in ಗೆ "E Procurement KPTCL" ಹೈಪರ್‌ಲಿಂಕ್‌ನಲ್ಲಿ ಅಥವಾ https://kppp.karnataka.gov.in ಇಲ್ಲಿಗೆ ಲಾಗ್‌ಇನ್ ಆಗಿ ಪಡೆದುಕೊಳ್ಳಬಹುದು.

ಸಹಿ/–, ಅಧೀಕ್ಷಕ ಇಂಜಿನಿಯರ್, ವಿದ್ಯುತ್, ಪ್ರಸರಣ (ನಿರ್ವಹಣೆ), ಬೆಂ.ಮ.ಕ್ಷೇ.ವ., ಉತ್ತರ ವೃತ್ತ, ನೆಲಮಹಡಿ, ಕವಿಪ್ರನಿನಿ ಕಛೇರಿ ಸಂಕೀರ್ಣ, ಕವಿಪ್ರನಿನಿ, ಆನಂದರಾವ್ ವೃತ್ತ, ಬೆಂಗಳೂರು-560 009.

### ಭಾರತೀಯ ವಿಮಾನ ನಿಲ್ದಾಣಗಳ ಆರ್ಥಿಕ ನಿಯಂತ್ರಣ ಪ್ರಾಧಿಕಾರ

(ಭಾರತ ಸರ್ಕಾರದ ಒಂದು ಶಾಸನಬದ್ಧ ಅಂಗಸಂಸ್ಥೆ)
3ನೇ ಮಹಡಿ, ಉಡಾನ್ ಭವನ, ಸಫ್ದರ್‌ಜಂಗ್ ಏರ್‌ಪೋರ್ಟ್, ನವದೆಹಲಿ–110003, ಫೋನ್: 24695044–47, ಫ್ಯಾಕ್ಸ್: 24695048, ವೆಬ್‌ಸೈಟ್: http://aera.gov.in

सत्यमेव जयते

**ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ ವಿಸ್ತರಣೆ**

ದಿನಾಂಕ 01.08.2024 ರಂದು ಪ್ರಕಟಗೊಂಡಿರುವ ಖಾಲಿಹುದ್ದೆ ಸುತ್ತೋಲೆ ಸಂ. ಎ–20014/ಕನ್ಸಲ್ಟಂಟ್ಸ್/2023–24–ಎಸ್ಟಾ. ಮತ್ತು ಎಇಆರ್‌ಎ/10015/ಐಟಿ–11/2020–21/ಐಟಿ ಪ್ರೊಫೆಷನಲ್ ಪ್ರಕಟಣೆಗೆ ಸಂಬಂಧಿಸಿದಂತೆ, ಸೂಕ್ತ ವಿಧಾನದ ಮೂಲಕ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕವನ್ನು **11.09.2024** ರಂದು ಸಂಜೆ 5:30 ಗಂಟೆವರೆಗೆ ವಿಸ್ತರಿಸಲಾಗಿದೆ.

CBC 03112/12/0008/2425 ಸಹಾಯಕ ಮುಖ್ಯಸ್ಥರು, ಎಇಆರ್‌ಎ

### ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.,

ಕೇಂದ್ರ ಕಛೇರಿ : ಮಲ್ಲೇಶ್ವರಂ, ಬೆಂಗಳೂರು – 560 055.
ದೂರವಾಣಿ: 080–23442648, 23341972

**ವಾರ್ಷಿಕ ಮಹಾಸಭೆಯ ತಿಳುವಳಿಕೆ**

ಬ್ಯಾಂಕಿನ **2023-2024ನೇ** ಸಾಲಿನ 59ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು **ದಿನಾಂಕ 25.08.2024 ರಂದು ಭಾನುವಾರ ಬೆಳಗ್ಗೆ 9.30 ಘಂಟೆಗೆ ಸರಿಯಾಗಿ ಶ್ರೀ ವೈ. ಮುನಿಸ್ವಾಮಪ್ಪ ಕಲ್ಯಾಣ ಮಂಟಪ, ಯಶವಂತಪುರ** (ಗೋಪಾಲ್ ಟಾಕೀಸ್ ಪಕ್ಕ), **ಬೆಂಗಳೂರು-22** ಈ ವಿಳಾಸದಲ್ಲಿ ಬ್ಯಾಂಕಿನ ಅಧ್ಯಕ್ಷರಾದ **ಶ್ರೀ ಸಿ.ಎಲ್. ಮರಿಗೌಡ** ಇವರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ, ಸದಸ್ಯರಿಗೆ ಸಭೆಯ ನೋಟೀಸನ್ನು ಅಂಚೆ ಮೂಲಕ ಕಳುಹಿಸಲಾಗಿದ್ದು ನೋಟೀಸ್ ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ಅಧಿಕೃತ ನೋಟೀಸ್ ಎಂದು ತಿಳಿದು ಮಾನ್ಯ ಸಾಮಾನ್ಯ ಸದಸ್ಯರು ಗುರುತಿನ ಚೀಟಿಯ ಜೊತೆಗೆ ಸಭೆಗೆ ಹಾಜರಾಗಲು ಕೋರಲಾಗಿದೆ.

**ವಿಶೇಷ ಸೂಚನೆ:-**

| | |
|---|---|
| ಹಿರಿಯ ಸದಸ್ಯರಿಗೆ ಸನ್ಮಾನ: | ದಿನಾಂಕ:24.08.2024 ರಂದು ಶನಿವಾರ ಬೆಳಿಗ್ಗೆ 10.00 ರಿಂದ 1.00 ಘಂಟೆಯವರೆಗೆ. |
| ಸಾಂಸ್ಕೃತಿಕ ಕಾರ್ಯಕ್ರಮ: | ದಿನಾಂಕ:24.08.2024 ರಂದು ಶನಿವಾರ ಸಂಜೆ 3.00 ರಿಂದ 5.00 ಘಂಟೆಯವರೆಗೆ. |
| ಪ್ರತಿಭಾ ಪುರಸ್ಕಾರ ಸಮಾರಂಭ: | ದಿನಾಂಕ:24.08.2024 ರಂದು ಶನಿವಾರ ಸಂಜೆ 5.00 ಘಂಟೆಗೆ. |
| ಸ್ಥಳ : | ಶ್ರೀ ವೈ. ಮುನಿಸ್ವಾಮಪ್ಪ ಕಲ್ಯಾಣ ಮಂಟಪ, ಯಶವಂತಪುರ (ಗೋಪಾಲ್ ಟಾಕೀಸ್ ಪಕ್ಕ), ಬೆಂಗಳೂರು-560 022. |

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು (ಪ್ರಭಾರ)

### ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಮಹಾನಗರ ಆಯುಕ್ತರವರ ಕಛೇರಿ, ನಂ.1002, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560 052. ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/TP/ಭೂ.ಪ–ಆನ್‌ಲೈನ್/26/2024–25 ದಿನಾಂಕ: 22.08.2024

**"ಸಾರ್ವಜನಿಕ ಪ್ರಕಟಣೆ"**

ಅರ್ಜಿದಾರರಾದ ಸಿ ಭವ್ಯ ಕೋಂ ಎ ವೀರೇಗೌಡ., ರವರು ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಶಿವಪುರ ಗ್ರಾಮದ ಸ.ನಂ.15/1ರಲ್ಲಿ 02ಎಕರೆ–10ಗುಂಟೆ ವಿಸ್ತೀರ್ಣದ ಜಮೀನನ್ನು ಶೈಕ್ಷಣಿಕ ಸಂಸ್ಥೆ ಉದ್ದೇಶಕ್ಕೆ ಭೂಪರಿವರ್ತನೆ ಕೋರಿರುತ್ತಾರೆ. ಈ ಪ್ರಸ್ತಾವನೆ ಕುರಿತು ಸಾರ್ವಜನಿಕರಿಂದ ಸಲಹೆ/ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಈ ಪತ್ರಿಕಾ ಪ್ರಕಟಣೆಯ ದಿನಾಂಕದಿಂದ 15 ದಿನಗಳ ಒಳಗಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರ, ಮಹಾನಗರ ಆಯುಕ್ತರವರ ಕಛೇರಿ, ನಂ.01, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560 052, ಬೆಂಗಳೂರು ಜಿಲ್ಲೆ ಇವರಿಗೆ ಲಿಖಿತ ರೂಪದಲ್ಲಿ ಅಂಚೆ ಮೂಲಕ ಅಥವಾ ಖುದ್ದಾಗಿ ಸಲ್ಲಿಸಲು ತಿಳಿಸಲಾಗಿದೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ,
ಬೆಂಗಳೂರು.

DIPR/CP/1609/Zen/2024-25

ಬಾಗಲಗುಂಟೆ ಕಾರ್ಖಾನೆಯಲ್ಲಿ ನಿರ್ಮಾಣ ಕಾರ್ಯ

# ಭುವನೇಶ್ವರಿ ಪ್ರತಿಮೆ ಪರಿಶೀಲನೆ

ಪ್ರಜಾವಾಣಿ ವಾರ್ತೆ



ಭುವನೇಶ್ವರಿ ಪ್ರತಿಮೆ ನಿರ್ಮಾಣ ಕಾಮಗಾರಿಯನ್ನು ಸಚಿವ ಶಿವರಾಜ ತಂಗಡಗಿ ಪರಿಶೀಲಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಅಜಯ್ ನಾಗಭೂಷಣ್, ನಿರ್ದೇಶಕಿ ಕೆ. ಧರಣೀದೇವಿ ಉಪಸ್ಥಿತರಿದ್ದರು

**ಬೆಂಗಳೂರು:** ನಗರದ ಹೊರ ವಲಯದ ಕಾರ್ಖಾನೆಯೊಂದರಲ್ಲಿ ನಾಡ ದೇವಿ ಭುವನೇಶ್ವರಿಯ ಕಂಚಿನ ಪ್ರತಿಮೆ ಸಿದ್ದಗೊಳ್ಳುತ್ತಿದ್ದು, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಅವರು ಪ್ರತಿಮೆ ನಿರ್ಮಾಣ ಕಾಮಗಾರಿಯನ್ನು ಗುರುವಾರ ಪರಿಶೀಲಿಸಿದರು.

ವಿಧಾನಸೌಧ ಪಶ್ಚಿಮ ದ್ವಾರದ ಮುಂಭಾಗ ಈ ಪ್ರತಿಮೆ ಸ್ಥಾಪಿಸಿ, ಮುಂಬರುವ ನವೆಂಬರ್ 1ರಂದು ಅನಾವರಣ ಮಾಡಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ಧರಿಸಿದೆ. 25 ಅಡಿ ಎತ್ತರದ ಪ್ರತಿಮೆ ಇದಾಗಿದ್ದು, ನೆಲಮಟ್ಟದಿಂದ ಒಟ್ಟು 41 ಅಡಿ ಎತ್ತರ ಇರಲಿದೆ. ಕರ್ನಾಟಕ ನಕ್ಷೆಯ ಕಂಚಿನ ಉಬ್ಬು ಶಿಲ್ಪವನ್ನೂ ಯೋಜನೆ ಒಳಗೊಂಡಿದ್ದು, ಪ್ರತಿಮೆ ಹಾಗೂ ಉಬ್ಬು ಶಿಲ್ಪ ಒಟ್ಟು 31.50 ಟನ್ ತೂಕ ಹೊಂದಿರಲಿದೆ.

ಬಾಗಲಗುಂಟೆಯಲ್ಲಿರುವ ಶಿಲ್ಪಿ ಕೆ. ಶ್ರೀಧರಮೂರ್ತಿ ಅವರ ಕಾರ್ಖಾನೆಗೆ ಭೇಟಿ ನೀಡಿದ ಸಚಿವರು, ಪ್ರತಿಮೆ ನಿರ್ಮಾಣ ಕೆಲಸದ ಮಾಹಿತಿ ಪಡೆದುಕೊಂಡರು.

'ಮೊದಲು ಸಿಮೆಂಟ್‌ನಲ್ಲಿ ಪ್ರತಿಮೆ ನಿರ್ಮಿಸಿ, ನಂತರ ಫೈಬರ್ ಗ್ಲಾಸ್‌ನಲ್ಲಿ ಅಚ್ಚು ತೆಗೆಯಲಾಗುತ್ತದೆ. ಅದಕ್ಕೆ ಕಂಚಿನಲ್ಲಿ ಎರಕ ಹಾಕಲಾಗುತ್ತದೆ. ಈಗಾಗಲೇ ಸಿಮೆಂಟ್‌ನಲ್ಲಿ ಪ್ರತಿಮೆ ನಿರ್ಮಿಸಲಾಗಿದ್ದು, 45 ದಿನಗಳಲ್ಲಿ ನಿರ್ಮಾಣ ಕಾರ್ಯ ಪೂರ್ಣಗೊಳಿಸಲಾಗುವುದು' ಎಂದು ಶಿಲ್ಪಿ ಶ್ರೀಧರಮೂರ್ತಿ ತಿಳಿಸಿದರು.

'ನಾಡ ದೇವಿ ಪ್ರತಿಮೆಯ ಹಿಂದೆ ಕರ್ನಾಟಕ ನಕ್ಷೆ ಹಾಗೂ ಉಬ್ಬು ಶಿಲ್ಪ ಇರಲಿದೆ. ಮುಂಭಾಗದಲ್ಲಿ ಭೌಗೋಳಿಕ ನಕ್ಷೆ ಇದ್ದರೆ, ಹಿಂಬದಿಯಲ್ಲಿ ನಾಡಗೀತೆಯ ಕೆತ್ತನೆ ಅಳವಡಿಸಲಾಗುತ್ತದೆ. ಹೊಯ್ಸಳ, ಚಾಲುಕ್ಯ, ಕದಂಬ ಹಾಗೂ ಆಧುನಿಕ ನೈಜ ಶಿಲ್ಪಗಳ ಶೈಲಿಗಳನ್ನು ಅಳವಡಿಸಿಕೊಂಡು ಈ ಪ್ರತಿಮೆಯನ್ನು ನಿರ್ಮಿಸಲಾಗುತ್ತಿದೆ. ಇದರಲ್ಲಿ ಹೊಯ್ಸಳ ಲಾಂಛನ, ವೈಜಯಂತಿ ಮಾಲೆ ಕಂಠಿಹಾರ, ಗಂಡಭೇರುಂಡ ರಾಜಲಾಂಛನಗಳು ಇರಲಿವೆ' ಎಂದು ಅಧಿಕಾರಿಗಳು ಯೋಜನೆ ಬಗ್ಗೆ ಮಾಹಿತಿ ನೀಡಿದರು.

ಪರಿಶೀಲನೆ ವೇಳೆ ಇಲಾಖೆ ಕಾರ್ಯದರ್ಶಿ ಅಜಯ್ ನಾಗಭೂಷಣ್, ನಿರ್ದೇಶಕಿ ಕೆ. ಧರಣೀದೇವಿ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

# ಜಾಮೀನು ರದ್ದುಗೊಳಿಸಲು 'ಸುಪ್ರೀಂ' ನಕಾರ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣದ 11ನೇ ಆರೋಪಿ ಎನ್. ಮೋಹನ್ ನಾಯಕ್‌ಗೆ ನೀಡಿರುವ ಜಾಮೀನು ರದ್ದುಗೊಳಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ನಾಯಕ್‌ಗೆ ಕರ್ನಾಟಕ ಹೈಕೋರ್ಟ್ 2023ರ ಡಿಸೆಂಬರ್‌ನಲ್ಲಿ ಷರತ್ತುಬದ್ಧ ಜಾಮೀನು ನೀಡಿತ್ತು. ಇದನ್ನು ಪ್ರಶ್ನಿಸಿ ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿತ್ತು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಹಾಗೂ ಸತೀಶ್ ಚಂದ್ರ ಶರ್ಮಾ ಅವರಿದ್ದ ಪೀಠವು ಹೈಕೋರ್ಟ್ ಆದೇಶವನ್ನು ಎತ್ತಿ ಹಿಡಿಯಿತು.

ಆರೋಪಿಯು ವಿಚಾರಣಾ ನ್ಯಾಯಾಲಯಕ್ಕೆ ಸಹಕರಿಸುತ್ತಿದ್ದಾರೆ ಎಂದು ಪೀಠ ಅಭಿಪ್ರಾಯಪಟ್ಟು ಕರ್ನಾಟಕ ಸರ್ಕಾರದ ಅರ್ಜಿಯನ್ನು ವಜಾಗೊಳಿಸಿತು.

ಸುಮಾರು 100 ಸಾಕ್ಷಿಗಳ ವಿಚಾರಣೆ ಬಾಕಿ ಇದೆ ಎಂದು ಕರ್ನಾಟಕ ಸರ್ಕಾರದ ವಕೀಲರು ನ್ಯಾಯಪೀಠದ ಗಮನಕ್ಕೆ ತಂದರು.

'ಆರೋಪಿಯು ಯಾವುದೇ ಜಾಮೀನು ಷರತ್ತುಗಳನ್ನು ಉಲ್ಲಂಘಿಸಿದರೆ ಅಥವಾ ವಿಚಾರಣೆ ವಿಳಂಬಗೊಳಿಸಿದರೆ ಜಾಮೀನು ರದ್ದುಗೊಳಿಸುವಂತೆ ವಿಚಾರಣಾ ನ್ಯಾಯಾಲಯಕ್ಕೆ ತೆರಳಲು ಕಕ್ಷಿದಾರರಿಗೆ ಸ್ವಾತಂತ್ರ್ಯವಿದೆ' ಎಂದು ಪೀಠ ಸ್ಪಷ್ಟಪಡಿಸಿತು.

# 'ಸುಸ್ಥಿರತೆ ಇಲ್ಲದ ಅಭಿವೃದ್ಧಿ ಪರಿಸರಕ್ಕೆ ಮಾರಕ'

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ ಎಂ.ಆರ್. ಸೀತಾರಾಂ ಅವರು ತರುಣ್ ಸೌರದೀಪ್ ಅವರನ್ನು ಗೌರವಿಸಿದರು. ಗೋಕುಲ ಶಿಕ್ಷಣ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಪಾರ್ಶ್ವನಾಥ್ ಎಚ್.ವಿ., ಕರಿಸಿದ್ದಪ್ಪ, ಗೋಕುಲ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಎಂ.ಆರ್. ರಾಮಯ್ಯ ಹಾಗೂ ಕಿಂಗ್ ಮೊಂಗ್‌ಕುಟ್‌ನ ತಂತ್ರಜ್ಞಾನ ವಿಶ್ವವಿದ್ಯಾಲಯದ ಅಂತರರಾಷ್ಟ್ರೀಯ ತಂತ್ರಗಾರಿಕೆಯ ಅಧ್ಯಕ್ಷರಾದ ಮ್ಯಾಲೈನ್ ಶ್ರೀಅರಿಯನುಂ ಉಪಸ್ಥಿತರಿದ್ದರು

**ಬೆಂಗಳೂರು:** 'ತಂತ್ರಜ್ಞಾನಗಳ ಬೆಳವಣಿಗೆಯ ಭರದಲ್ಲಿ ನಾವು ಪರಿಸರ ಕಾಳಜಿ ಮರೆಯಬಾರದು. ಸುಸ್ಥಿರತೆ ಇಲ್ಲದ ಅಭಿವೃದ್ಧಿ ಪರಿಸರಕ್ಕೆ ಮಾರಕ ಎಂಬುದನ್ನು ಅರ್ಥಮಾಡಿಕೊಳ್ಳಬೇಕು' ಎಂದು ಗೋಕುಲ ಶಿಕ್ಷಣ ಸಂಸ್ಥೆ ಉಪಾಧ್ಯಕ್ಷ ಎಂ.ಆರ್. ಸೀತಾರಾಂ ತಿಳಿಸಿದರು.

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ನಗರದಲ್ಲಿ ಹಮ್ಮಿಕೊಂಡಿದ್ದ 'ಸುಸ್ಥಿರ ಅಭಿವೃದ್ಧಿಯಲ್ಲಿ ನೂತನ ತಂತ್ರಜ್ಞಾನ' ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಮಾತನಾಡಿದರು.

'ವಿವಿಧ ದೇಶಗಳು ಸುಸ್ಥಿರ ಅಭಿವೃದ್ಧಿಗೆ ಆದ್ಯತೆ ನೀಡುತ್ತಿವೆ. ನಮ್ಮಲ್ಲಿನ ಎಂಜಿನಿಯರ್‌ಗಳೂ ತಾವು ಕೈಗೆತ್ತಿಕೊಳ್ಳುವ ಯೋಜನೆಗಳಲ್ಲಿ ಸುಸ್ಥಿರತೆ ಕಾಯ್ದುಕೊಳ್ಳುವುದಕ್ಕೆ ಆದ್ಯತೆ ನೀಡಬೇಕು. ಹೊಗೆ ರಹಿತ ಉತ್ಪನ್ನಗಳ ಬಳಕೆ ಹೆಚ್ಚಬೇಕು. ನಾವು ಎಂಜಿನಿಯರಿಂಗ್ ವ್ಯಾಸಂಗ ಮಾಡುವ ವೇಳೆ 'ಮೆಟೀರಿಯಲ್ಸ್ ಸೈನ್ಸ್'ನಲ್ಲಿ ತಂತ್ರಜ್ಞಾನ ಅಷ್ಟಾಗಿ ಬೆಳವಣಿಗೆ ಹೊಂದಿರಲಿಲ್ಲ. ಆ ವೇಳೆ ಜರ್ಮನ್ ತಂತ್ರಜ್ಞಾನ ಹೆಚ್ಚು ಬಳಕೆಯಲ್ಲಿತ್ತು. ಈಗ ಕಾಲ ಬದಲಾಗಿದ್ದು, ಇಲ್ಲಿಯೂ ತಂತ್ರಜ್ಞಾನ ಕ್ಷೇತ್ರ ಸಾಕಷ್ಟು ಬೆಳವಣಿಗೆ ಸಾಧಿಸಿದೆ' ಎಂದು ಹೇಳಿದರು.

ಗೋಕುಲ ಶಿಕ್ಷಣ ಸಂಸ್ಥೆಯ ಮುಖ್ಯ ಶೈಕ್ಷಣಿಕ ಸಲಹೆಗಾರ ಕರಿಸಿದ್ದಪ್ಪ ಮಾತನಾಡಿ, 'ಬದಲಾಗುತ್ತಿರುವ ಕಾಲಘಟ್ಟದಲ್ಲಿ ಹೊಸ ರೀತಿಯ ತಂತ್ರಜ್ಞಾನ ಬಂದಿದೆ. ಕಟ್ಟಡಗಳನ್ನು ಬೇಗ ನಿರ್ಮಾಣ ಮಾಡುವ ಉದ್ದೇಶದಿಂದ ಪರಿಸರಕ್ಕೆ ಹಾನಿ ಮಾಡುವಂತಹ ಉತ್ಪನ್ನಗಳನ್ನು ಬಳಕೆ ಮಾಡುವುದು ಸರಿಯಾದ ಕ್ರಮವಲ್ಲ' ಎಂದು ಹೇಳಿದರು.

ರಾಮನ್ ಸಂಶೋಧನಾ ಸಂಸ್ಥೆ ನಿರ್ದೇಶಕ ತರುಣ್ ಸೌರದೀಪ್ ಮಾತನಾಡಿದರು.

ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಕೆ ಆರೋಪದ ಪ್ರಕರಣ

# ಡಿಕೆಶಿಗೆ ಲೋಕಾಯುಕ್ತ ವಿಚಾರಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರು ಗುರುವಾರ ಎರಡು ತಾಸು ವಿಚಾರಣೆ ನಡೆಸಿದ್ದಾರೆ.

ವಿಚಾರಣೆಗೆ ಹಾಜರಾಗುವಂತೆ ಲೋಕಾಯುಕ್ತಪೊಲೀಸರುಶಿವಕುಮಾರ್ ಅವರಿಗೆ ಸಮನ್ಸ್ ನೀಡಿದ್ದರು. ಅದರಂತೆ ನಗರದಲ್ಲಿನ ಲೋಕಾಯುಕ್ತ ಕಚೇರಿಗೆ ಅವರು ಗುರುವಾರ ಮಧ್ಯಾಹ್ನ ಬಂದಿದ್ದರು. ಲೋಕಾಯುಕ್ತ ಎಸ್‌ಪಿ ಕೆ.ವಂಶಿಕೃಷ್ಣ ಮತ್ತು ಡಿವೈಎಸ್‌ಪಿ ಸತೀಶ್ ಎಂ.ಎಚ್. ಅವರ ತಂಡವು ವಿಚಾರಣೆ ನಡೆಸಿದೆ ಎಂದು ಲೋಕಾಯುಕ್ತ ಮೂಲಗಳು ಹೇಳಿವೆ. 'ಮಧ್ಯಾಹ್ನ 2.15ರಿಂದ 4.15ರವರೆಗೆ ವಿಚಾರಣೆ ನಡೆಸಲಾಗಿದೆ. ಆದಾಯ ಮತ್ತು ಆಸ್ತಿಗೆ ಸಂಬಂಧಿಸಿದಂತೆ ಮಾಹಿತಿ ನೀಡುವಂತೆ ಹಾಗೂ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ವಿಚಾರಣೆ ಮುಗಿಸಿ ಹೊರಬಂದ ಶಿವಕುಮಾರ್, 'ಬುಧವಾರ ವಿಚಾರಣೆಗೆ ಹಾಜರಾಗಲು ನೋಟಿಸ್ ನೀಡಿದ್ದರು. ಆಲಮಟ್ಟಿ ಅಣೆಕಟ್ಟೆಗೆ ಬಾಗಿನ ಅರ್ಪಿಸುವ ಕಾರ್ಯಕ್ರಮವಿದ್ದ ಕಾರಣ ಗುರುವಾರ ಹಾಜರಾಗುತ್ತೇನೆ ಎಂದು ಮನವಿ ಮಾಡಿಕೊಂಡಿದ್ದೆ. ಅದರಂತೆ ವಿಚಾರಣೆಗೆ ಬಂದಿದ್ದೆ. ಅಧಿಕಾರಿಗಳು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದೇನೆ. ಒಂದಷ್ಟು ವಿಚಾರಗಳಲ್ಲಿ ಸ್ಪಷ್ಟನೆ ಕೇಳಿದ್ದಾರೆ. ನನ್ನ ಬಳಿ ಇರುವ ದಾಖಲೆಗಳನ್ನು ಸಲ್ಲಿಸುತ್ತೇನೆ' ಎಂದರು.

ಶಿವಕುಮಾರ್ ವಿರುದ್ಧ 2017ರಲ್ಲಿ ಸಿಬಿಐ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿತ್ತು. ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಸಿಬಿಐ ತನಿಖೆಗೆ ನೀಡಿದ್ದ ಅನುಮತಿಯನ್ನು ಈಗಿನ ಕಾಂಗ್ರೆಸ್ ಸರ್ಕಾರವು ವಾಪಸ್ ಪಡೆದುಕೊಂಡಿತ್ತು. ಪ್ರಕರಣದ ತನಿಖೆಯನ್ನು ನಡೆಸುವಂತೆ ಲೋಕಾಯುಕ್ತಕ್ಕೆ ಸೂಚಿಸಿತ್ತು. ಪ್ರಕರಣದಲ್ಲಿ ಶಿವಕುಮಾರ್ ಅವರನ್ನು ಲೋಕಾಯುಕ್ತ ವಿಚಾರಣೆಗೆ ಒಳಪಡಿಸಿದ್ದು ಇದೇ ಮೊದಲು.

## 'ಸಿಬಿಐ ಅಧಿಕಾರಿಗಳೇ ಪರವಾಗಿಲ್ಲ'

'ಸಿಬಿಐನವರೇ ಪ್ರಶ್ನೆ ಕೇಳಲಿಲ್ಲ, ಒಂದು ದಿನವೂ ವಿಚಾರಣೆಗೆ ಕರೆಯಲಿಲ್ಲ. ಆದರೆ ಲೋಕಾಯುಕ್ತದವರು ವಿಚಿತ್ರ ಪ್ರಶ್ನೆಗಳನ್ನು ಕೇಳಿ, ಹಿಂಸೆ ಕೊಡುತ್ತಿದ್ದಾರೆ. ಇವರಿಗಿಂತ ಸಿಬಿಐನವರೇ ಪರವಾಗಿಲ್ಲ' ಎಂದು ಶಿವಕುಮಾರ್ ಹೇಳಿದ್ದಾರೆ. ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪ್ರಕರಣವನ್ನು ರಾಜ್ಯ ಸರ್ಕಾರ ಸಿಬಿಐನಿಂದ ಲೋಕಾಯುಕ್ತಕ್ಕೆ ವರ್ಗಾವಣೆ ಮಾಡಿತ್ತು. ಆದರೆ ಸಿಬಿಐ ತನಿಖೆ ನಿಲ್ಲಿಸಿಲ್ಲ. ನನ್ನ ಕುಟುಂಬ ಮತ್ತು ಸ್ನೇಹಿತರಲ್ಲಿ ನೂರಕ್ಕೂ ಹೆಚ್ಚು ಜನರಿಗೆ ಸಿಬಿಐ ಕಿರುಕುಳ ನೀಡುತ್ತಿದೆ. ಲೋಕಾಯುಕ್ತವೂ ಇದೇ ಕೆಲಸ ಮಾಡುತ್ತಿದೆ' ಎಂದು ಹೇಳಿದ್ದಾರೆ.

## ಪ್ರಿಯಾಂಕ್ ಖರ್ಗೆ ವಿರುದ್ಧದ ವಿಚಾರಣೆಗೆ ತಡೆ



**ಬೆಂಗಳೂರು:** ಗುತ್ತಿಗೆದಾರ ಸಂತೋಷ್ ಆತ್ಮಹತ್ಯೆ ಹಿನ್ನೆಲೆಯಲ್ಲಿ ಅಂದು ಸಚಿವರಾಗಿದ್ದ ಕೆ.ಎಸ್.ಈಶ್ವರಪ್ಪ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಿ ಸಾರ್ವಜನಿಕರ ಸಂಚಾರಕ್ಕೆ ಅಡ್ಡಿಪಡಿಸಿದ ಮತ್ತು ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟು ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿನ ವಿಚಾರಣೆಗೆ ಹೈಕೋರ್ಟ್ ತಡೆ ನೀಡಿದೆ.

'ನನ್ನ ವಿರುದ್ಧದ ವಿಚಾರಣೆ ರದ್ದುಪಡಿಸಬೇಕು' ಎಂದು ಕೋರಿ ಪ್ರಿಯಾಂಕ್ ಖರ್ಗೆ ಸಲ್ಲಿಸಿದ್ದ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದರು.

ಸಚಿವ ಪ್ರಿಯಾಂಕ್ ಪರ ಹಾಜರಾಗಿದ್ದ ಹಿರಿಯ ವಕೀಲ ಸಂದೇಶ್ ಜೆ.ಚೌಟ, 'ಪ್ರಕರಣದ ಸಹ ಆರೋಪಿಗಳು ವಿಶೇಷ ನ್ಯಾಯಾಲಯದ ವಿಚಾರಣೆ ರದ್ದುಪಡಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್‌ನ ಮತ್ತೊಂದು ಪೀಠ 2024ರ ಮೇ 7ರಂದು ವಜಾಗೊಳಿಸಿದೆ. ಸಹ ಆರೋಪಿಗಳಿಗೆ ₹10 ಸಾವಿರ ದಂಡ ಸಹ ವಿಧಿಸಲಾಗಿತ್ತು' ಎಂದರು.

'ಹೈಕೋರ್ಟ್ ನೀಡಿದ್ದ ಈ ಆದೇಶವನ್ನು ಪ್ರಶ್ನಿಸಿ ಸಹ ಆರೋಪಿಗಳು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ವಿಚಾರಣಾ ಪ್ರಕ್ರಿಯೆಗೆ ಈಗಾಗಲೇ ತಡೆ ನೀಡಿದೆ. ಆದ್ದರಿಂದ, ಪ್ರಿಯಾಂಕ್ ಖರ್ಗೆ ವಿರುದ್ಧದ ವಿಚಾರಣೆಗೂ ತಡೆ ನೀಡಬೇಕು' ಎಂದು ಕೋರಿದರು. ಈ ಮನವಿಯನ್ನು ಮಾನ್ಯ ಮಾಡಿದ ನ್ಯಾಯಪೀಠ ತಡೆ ಆದೇಶ ನೀಡಿತು.

# ಲಲಿತಕಲಾ ಅಕಾಡೆಮಿ: ಕಲಾ ಸ್ಪರ್ಧೆ, ಪ್ರದರ್ಶನಕ್ಕೆ ಅರ್ಜಿ ಆಹ್ವಾನ

**ಬೆಂಗಳೂರು:** ಕರ್ನಾಟಕ ಲಲಿತಕಲಾ ಅಕಾಡೆಮಿಯು 52ನೇ ವಾರ್ಷಿಕ ಕಲಾ ಸ್ಪರ್ಧೆ ಹಾಗೂ ಕಲಾ ಪ್ರದರ್ಶನಕ್ಕೆ ಚಿತ್ರಕಲಾವಿದರಿಂದ ಅರ್ಜಿ ಆಹ್ವಾನಿಸಿದೆ.

ಒಟ್ಟು 10 ಕಲಾಕೃತಿಗಳ ಕಲಾವಿದರಿಗೆ ತಲಾ ₹ 25 ಸಾವಿರ ನಗದು ಬಹುಮಾನ ಹಾಗೂ ಪ್ರಶಸ್ತಿ ಫಲಕವನ್ನು ನೀಡಲಾಗುತ್ತದೆ. ಪ್ರವೇಶ ಶುಲ್ಕ ₹ 300 ನಗದು ರೂಪದಲ್ಲಿ ಅಥವಾ ಡಿಡಿ ಮೂಲಕ ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿಗೆ ಪಾವತಿಸಬೇಕಾಗುತ್ತದೆ. ಭರ್ತಿ ಮಾಡಿದ ಅರ್ಜಿ ನಮೂನೆಯ ಜತೆಗೆ ಕಲಾಕೃತಿಯ ಛಾಯಾಚಿತ್ರ ಹಾಗೂ ದಾಖಲಾತಿಗಳನ್ನು ಸೆ.21ರ ಒಳಗೆ ಇ ಮೇಲ್ ವಿಳಾಸ kla.karnataka@gmail.comಗೆ ಕಳುಹಿಸಬೇಕು. ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ, 2ನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560002 ಈ ವಿಳಾಸಕ್ಕೆ ನೇರವಾಗಿ ಅಥವಾ ಅಂಚೆಯ ಮೂಲಕ ಸಲ್ಲಿಸಬಹುದಾಗಿದೆ. ಲಕೋಟೆಯ ಮೇಲೆ 52ನೇ ವಾರ್ಷಿಕ ಕಲಾ ಪ್ರದರ್ಶನಕ್ಕಾಗಿ ಅರ್ಜಿ ಎನ್ನುವುದನ್ನು ಸ್ಪಷ್ಟವಾಗಿ ಸಮೂದಿಸಿರಬೇಕು ವಿವರಕ್ಕೆ www.lalitkala.karnataka.gov.inಗೆ ಭೇಟಿ ನೀಡಿ ಎಂದು ಪ್ರಕಟಣೆಯಲ್ಲಿ ಅಕಾಡೆಮಿಯ ರಿಜಿಸ್ಟ್ರಾರ್ ತಿಳಿಸಿದ್ದಾರೆ. ಸಂಪರ್ಕಕ್ಕೆ: 080-22480297



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಸ್ವಾತಂತ್ರ್ಯ ಉದ್ಯಾನದಲ್ಲಿ ಬಿಜೆಪಿ ಪ್ರತಿಭಟನೆ

# ಸಿ.ಎಂ ರಾಜೀನಾಮೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವು ರಾಜ್ಯಪಾಲರಿಗೆ ಅವಮಾನ ಮಾಡಿದೆ ಎಂದು ಆರೋಪಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದ ಬಿಜೆಪಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆಗೆ ಆಗ್ರಹಿಸಿತು.

ದಲಿತರಿಗೆ ಮೀಸಲಿಟ್ಟ ಹಣ ವರ್ಗಾವಣೆ ಪ್ರಕರಣ, ವಾಲ್ಮೀಕಿ ನಿಗಮದ ಹಗರಣ, ಮುಡಾ ಹಗರಣ- ಇವೆಲ್ಲವೂ ದಲಿತ ಸಮುದಾಯಕ್ಕೆ ಸೇರಿದ ವಿಚಾರಗಳು. ದಲಿತರಿಗೆ ಅನ್ಯಾಯ ಮಾಡಿದ ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕು ಎಂದು ಮುಖಂಡರು ಆಗ್ರಹಿಸಿದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಚಲವಾದಿ ನಾರಾಯಣಸ್ವಾಮಿ ಮಾತನಾಡಿ, 'ಹಿಂದುಳಿದ ವರ್ಗದ ನಾಯಕನೆಂಬ ಕಾರಣಕ್ಕೆ ತೊಂದರೆ ಕೊಡುತ್ತಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಹಾಗಿದ್ದರೆ ಈ ದೇಶದ ಪ್ರಧಾನ ಮಂತ್ರಿ ಯಾರು? ಅವರು ಕೂಡ ಹಿಂದುಳಿದವರು. ಆದರೆ ಅವರು ಕಳಂಕರಹಿತರು' ಎಂದರು.

ಡಾ. ಸಿ.ಎನ್. ಅಶ್ವತ್ಥ ನಾರಾಯಣ ಮಾತನಾಡಿ, 'ಭ್ರಷ್ಟ ಸರ್ಕಾರದ ವಿರುದ್ಧ ಜನಜಾಗೃತಿ ಮೂಡಿಸಬೇಕು. ಲೂಟಿ ಹೊಡೆಯುವುದೇ ಕಾಂಗ್ರೆಸ್ ಸರ್ಕಾರದ ನೀತಿಯಾಗಿದೆ. ಸಂವಿಧಾನ ಕೈಯಲ್ಲಿ ಹಿಡಿದು ಹಕ್ಕುಗಳ ಕುರಿತು ಮಾತನಾಡುತ್ತಾರೆ. ಆದರೆ, ಸಂವಿಧಾನದ ಆಶಯಗಳನ್ನು ಗೌರವಿಸುವುದಿಲ್ಲ. ರಾಜಭವನಕ್ಕೆ ನುಗ್ಗಿ ಹಲ್ಲೆ ಮಾಡುವುದಾಗಿ ಹೇಳುತ್ತಾರೆ' ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಮಾತನಾಡಿ, 'ಮುಡಾ ಹಗರಣ ತನಿಖೆಯನ್ನು ಸಿಬಿಐಗೆ ಕೊಡಬೇಕು. ವೈಟ್ನರ್ ಹಚ್ಚಿದ್ದು ತಮ್ಮ ಸರ್ಕಾರದ ಅವಧಿಯಲ್ಲಿ ಅಲ್ಲ ಎಂದು ಧರ್ಮಸ್ಥಳದ ಮಂಜುನಾಥನ ಸನ್ನಿಧಿಯಲ್ಲಿ ಪ್ರಮಾಣ ಮಾಡಿ ಹೇಳಬೇಕು' ಎಂದು ಸಿದ್ದರಾಮಯ್ಯ ಅವರಿಗೆ ಸವಾಲು ಹಾಕಿದರು.

ಶಾಸಕರಾದ ಮುನಿರತ್ನ, ಗೋಪಾಲಯ್ಯ, ವಿಧಾನ ಪರಿಷತ್ ಸದಸ್ಯೆ ಭಾರತಿ ಶೆಟ್ಟಿ, ಬಿಜೆಪಿ ರೈತ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಎ.ಎಸ್.ಪಾಟೀಲ ನಡಹಳ್ಳಿ, ಬೆಂಗಳೂರು ಕೇಂದ್ರ ಜಿಲ್ಲಾ ಘಟಕದ ಅಧ್ಯಕ್ಷ ಸಪ್ತಗಿರಿ ಗೌಡ, ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಸಿ.ಕೆ. ರಾಮಮೂರ್ತಿ ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.

## ವಿವೇಚನೆಯಿಂದ ಕಾವೇರಿ ನೀರು ಬಳಸಲು ಸೂಚನೆ

**ನವದೆಹಲಿ:** ಕಾವೇರಿ ನೀರನ್ನು ಕರ್ನಾಟಕ ಹಾಗೂ ತಮಿಳುನಾಡು ಸರ್ಕಾರಗಳು ವಿವೇಚನೆಯಿಂದ ಬಳಸಿ ಭವಿಷ್ಯದ ಬಳಕೆಗೆ ಜಲಾಶಯಗಳಲ್ಲಿ ನೀರು ಸಂಗ್ರಹಿಸಿಟ್ಟುಕೊಳ್ಳಬೇಕು ಎಂದು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಸೂಚಿಸಿದೆ.

ಕಾವೇರಿ ಜಲಾನಯನ ಪ್ರದೇಶದ ಜಲವಿಜ್ಞಾನ ಪರಿಸ್ಥಿತಿಯನ್ನು ಪರಿಶೀಲಿಸಲು ಗುರುವಾರ ಇಲ್ಲಿ ಸಭೆ ನಡೆಸಿದ ಪ್ರಾಧಿಕಾರವು ಅನಿಯಮಿತ ಮುಂಗಾರಿನ ಸಂದರ್ಭದಲ್ಲಿ ನೀರನ್ನು ವಿವೇಚನೆಯಿಂದ ಬಳಸುವ ಅಗತ್ಯವನ್ನು ಒತ್ತಿ ಹೇಳಿತು.

ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಈ ವರ್ಷದ ಮುಂಗಾರಿನಲ್ಲಿ ತಮಿಳುನಾಡಿಗೆ ಇಲ್ಲಿಯವರೆಗೆ 71.56 ಟಿಎಂಸಿ ನೀರು ಹರಿಸಬೇಕಿತ್ತು. ಆದರೆ, ಇಲ್ಲಿ ತನಕ 170 ಟಿಎಂಸಿ ನೀರು ಬಿಡಲಾಗಿದೆ. ಬಿಳಿಗುಂಡ್ಲುವಿನಲ್ಲಿ ಹರಿದ ಹೆಚ್ಚುವರಿ ನೀರಿನ ಪ್ರಮಾಣವನ್ನು ಮುಂಬರುವ ತಿಂಗಳುಗಳಲ್ಲಿ ಕರ್ನಾಟಕ ರಾಜ್ಯವು ಹರಿಸಬೇಕಾದ ನೀರಿನ ಮೊತ್ತಕ್ಕೆ ತಮಿಳುನಾಡು ಜಮೆ ಮಾಡಿಕೊಳ್ಳಬೇಕು ಎಂದು ಕರ್ನಾಟಕ ಸರ್ಕಾರ ಹೇಳಿತು.

ಬಿಳಿಗುಂಡ್ಲುವಿನಲ್ಲಿ ನಿಗದಿತ ಪ್ರಮಾಣಕ್ಕಿಂತ ವಾಸ್ತವವಾಗಿ ಹರಿದ ಹೆಚ್ಚುವರಿ ನೀರಿನ ಪ್ರಮಾಣವು, ಕರ್ನಾಟಕದ ಜಲಾಶಯಗಳಿಗೆ ಹರಿದು ಬಂದ ಹೆಚ್ಚುವರಿ ಒಳಹರಿವಿನ ಪ್ರಮಾಣದ ಕೊಡುಗೆಯಾಗಿರುತ್ತದೆ. ಹಾಗಾಗಿ, ಕಾವೇರಿ ನ್ಯಾಯಮಂಡಳಿ ಆದೇಶದಂತೆ ಮತ್ತು ಸುಪ್ರೀಂ ಕೋರ್ಟ್‌ನ ಅಂತಿಮ ತೀರ್ಪಿನಂತೆ, ಕರ್ನಾಟಕ ರಾಜ್ಯವು ಪ್ರತಿ ತಿಂಗಳ ನಿಗದಿತ ನೀರಿನ ಪ್ರಮಾಣವನ್ನು ಹರಿಸುವಂತೆ ಪ್ರಾಧಿಕಾರವು ನಿರ್ದೇಶನ ನೀಡಬೇಕು ಎಂದು ತಮಿಳುನಾಡು ಸರ್ಕಾರ ಆಗ್ರಹಿಸಿತು.

# ವಾಹನ ಸುರಂಗಕ್ಕೆ ₹12,690 ಕೋಟಿ

**ಒಂದನೇ ಪುಟದಿಂದ...**

ಪ್ರತಿ ಕ್ಯಾಂಟೀನ್‌ಗೆ ತಲಾ ₹40 ಲಕ್ಷದಂತೆ ಒಟ್ಟು ₹20 ಕೋಟಿ ವೆಚ್ಚದಲ್ಲಿ ಆರಂಭಿಸಲಾಗುವುದು. ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆ 198 ರಿಂದ 243 ಕ್ಕೆ ಹೆಚ್ಚಿರುವುದರಿಂದ 52 ಹೆಚ್ಚುವರಿ ಕ್ಯಾಂಟೀನ್ ಆರಂಭಿಸಲಾಗುವುದು ಎಂದರು.

**ಎಲ್‌ಇಡಿ ದೀಪ ಅಳವಡಿಸಲು ₹ 684 ಕೋಟಿ:** 'ಇಂಧನ ಉಳಿತಾಯ–ಇಎಂಐ/ವಾರ್ಷಿಕ ಪಾವತಿ ಮಾದರಿ' ಕೇಂದ್ರೀಕೃತ ನಿಯಂತ್ರಣ ಮತ್ತು ಮೇಲ್ವಿಚಾರಣಾ ವ್ಯವಸ್ಥೆ ಯೋಜನೆಯಡಿ ಎಲ್‌ಇಡಿ ಬೀದಿ ದೀಪಗಳನ್ನು ಅಳವಡಿಸುವ ಹಾಗೂ ಏಳು ವರ್ಷಗಳ ನಿರ್ವಹಣಾ ವೆಚ್ಚಕ್ಕೆ ₹ 684.34 ಕೋಟಿ ಒದಗಿಸುವ ಪ್ರಸ್ತಾವಕ್ಕೆ ಸಂಪುಟ ಅನುಮೋದನೆ ನೀಡಿದೆ.

ವಾರ್ಷಿಕವಾಗಿ ₹ 300 ಕೋಟಿ ಇಂಧನ ವೆಚ್ಚ ಉಳಿತಾಯ ಮಾಡಲು ಏಳು ವಲಯಗಳಲ್ಲಿ ನಾಲ್ಕು ಪ್ಯಾಕೇಜ್‌ಗಳಾಗಿ ಕ್ರಿಯಾ ಯೋಜನೆ ತಯಾರಿಸಲಾಗಿತ್ತು.

### ಭೂಪರಿಹಾರಕ್ಕೆ ಮಾರ್ಗಸೂಚಿ

ಬಿಬಿಎಂಪಿ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಅಭಿವೃದ್ಧಿ ಹಕ್ಕುಗಳ ವರ್ಗಾವಣೆ (ಟಿಡಿಆರ್) ಮಾದರಿಯಲ್ಲಿ ಭೂಸ್ವಾಧೀನ ಪ್ರಕ್ರಿಯೆ ಯಲ್ಲಿ ಮಾರ್ಗಸೂಚಿ ದರದ ಆಧಾರದಲ್ಲಿ ಸಾರ್ವಜನಿಕರಿಗೆ ಟಿಡಿಆರ್ ರೂಪದಲ್ಲಿ ಪರಿಹಾರ ನೀಡಲು ಮಾರ್ಗಸೂಚಿ ಹೊರಡಿಸಲು ಸಂಪುಟ ಒಪ್ಪಿಗೆ ನೀಡಿದೆ.

ಜಮೀನನ್ನು ಬಿಟ್ಟುಕೊಡುವ ಭೂಮಾಲೀಕರಿಗೆ ಭೂಮಿಯ ಮೌಲ್ಯ ನಿಗದಿಪಡಿಸುವಲ್ಲಿ ತಾರತಮ್ಯ ಆಗದಂತೆ ಸಾಧ್ಯವಾದಷ್ಟು ಮಟ್ಟಿಗೆ ಏಕರೂಪತೆ ಕಾಯ್ದುಕೊಂಡು ಭೂಮಿಯ ಮೌಲ್ಯವನ್ನು ನಿಗದಿಪಡಿಸಲಾಗುವುದು ಎಂದು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

### ವಾಹನ ಸುರಂಗ ಮಾರ್ಗದ ಪ್ರಮುಖ ಅಂಶಗಳು




- ಹೆಬ್ಬಾಳ ಕೆರೆಯ ಮುಂಭಾಗದಿಂದ ಉತ್ತರ–ದಕ್ಷಿಣ ಸುರಂಗ ರಸ್ತೆ ಕಾರಿಡಾರ್ ಆರಂಭವಾಗಿ ಕೇಂದ್ರೀಯ ರೇಷ್ಮೆ ಮಂಡಳಿಯವರೆಗೆ ಸಾಗಲಿದೆ.
- ಕೆರೆಯ ಮುಂಭಾಗ ವಾಹನಗಳ ಪ್ರವೇಶ ಹಾಗೂ ನಿರ್ಗಮನಕ್ಕೆ ಅವಕಾಶವಿರುತ್ತದೆ. ಮುಂದೆ ಹೆಬ್ಬಾಳ ಪಶುವೈದ್ಯ ಆಸ್ಪತ್ರೆ ಬಳಿ ವಾಹನಗಳ ನಿರ್ಗಮನ ಮತ್ತು ಪ್ರವೇಶಕ್ಕಾಗಿ 'ಪಾಯಿಂಟ್' ನಿರ್ಮಿಸಲಾಗುತ್ತದೆ.
- ಮೇಖ್ರಿ ವೃತ್ತದ ಅರಮನೆ ಮೈದಾನ, ಗಾಲ್ಫ್ ಮೈದಾನ ಮತ್ತು ಮಹಾರಾಣಿ ಕಾಲೇಜಿನ ಬಳಿಯಲ್ಲಿ 'ಪಾಯಿಂಟ್' ನಿರ್ಮಾಣಗೊಳ್ಳಲಿದೆ.
- ಅಲ್ಲಿಂದ ಮುಂದಕ್ಕೆ ಎರಡನೇ ಹಂತದಲ್ಲಿ ಕಾಮಗಾರಿ ಸಾಗಲಿದೆ.

**27** ಕಿಲೋಮೀಟರ್ | **₹ 12,690** ಕೋಟಿ ಯೋಜನೆಯ ಅಂದಾಜು ವೆಚ್ಚ

- ಪೂರ್ವ–ಪಶ್ಚಿಮ ಕಾರಿಡಾರ್, ಉತ್ತರ–ದಕ್ಷಿಣ ಕಾರಿಡಾರ್ ನಿರ್ಮಾಣ
- ರಾಷ್ಟ್ರೀಯ ಹೆದ್ದಾರಿ 7 ಹಾಗೂ ರಾಷ್ಟ್ರೀಯ ಹೆದ್ದಾರಿ 4ಕ್ಕೆ ಸಂಪರ್ಕ
- ಪ್ರಮುಖ ರಸ್ತೆ, ಬೈಪಾಸ್ ರಸ್ತೆಗಳಲ್ಲಿ ಪ್ರವೇಶ–ನಿರ್ಗಮನಕ್ಕೆ ಅನುವು

# 'ರೊಬೊಟಿಕ್ ತಂತ್ರಜ್ಞಾನ ಬಳಸಿ ನಿಖರ ಶಸ್ತ್ರಚಿಕಿತ್ಸೆ'

ಪ್ರಜಾವಾಣಿ ವಾರ್ತೆ



ಡಾ.ಎಸ್ ವಿದ್ಯಾಧರ

**ಬೆಂಗಳೂರು:** 'ರೊಬೊಟಿಕ್ ತಂತ್ರಜ್ಞಾನದ ನೆರವಿನಿಂದ ಒಂಬತ್ತು ತಿಂಗಳಲ್ಲಿ 500 ಬೆನ್ನುಮೂಳೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಈ ಅತ್ಯಾಧುನಿಕ ತಂತ್ರಜ್ಞಾನದ ನೆರವಿನಿಂದ ನಿಖರ ಶಸ್ತ್ರಚಿಕಿತ್ಸೆ ಸಾಧ್ಯವಾಗುತ್ತಿರುವುದರ ಜತೆಗೆ ರೋಗಿಯೂ ಬೇಗ ಚೇತರಿಸಿಕೊಳ್ಳುತ್ತಾನೆ' ಎಂದು ಮಣಿಪಾಲ್ ಆಸ್ಪತ್ರೆಯ ಬೆನ್ನುಮೂಳೆ ಶಸ್ತ್ರಚಿಕಿತ್ಸಕ ಡಾ.ಎಸ್. ವಿದ್ಯಾಧರ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬೆನ್ನು ಮೂಳೆ ಸಂಬಂಧಿ ಸಮಸ್ಯೆಗಳು ವ್ಯಕ್ತಿಯ ದೈನಂದಿನ ಜೀವನದ ಮೇಲೆ ಗಮನಾರ್ಹ ಪರಿಣಾಮ ಬೀರುತ್ತವೆ. ವಯಸ್ಸಾದಂತೆ ಬೆನ್ನುಮೂಳೆ ತನ್ನ ಗಡಸುತನವನ್ನು ಕಳೆದುಕೊಳ್ಳುತ್ತದೆ. ಬೆನ್ನು ಹುರಿ ಸೇರಿ ವಿವಿಧ ಶಸ್ತ್ರಚಿಕಿತ್ಸೆಗಳನ್ನು ಸಾಂಪ್ರದಾಯಿಕ ವಿಧಾನದಲ್ಲಿ ನಡೆಸಿದರೆ ರೋಗಿ ಚೇತರಿಸಿಕೊಳ್ಳಲು ಹೆಚ್ಚಿನ ಅವಧಿ ಅಗತ್ಯ. ರೊಬೊಟಿಕ್ ಶಸ್ತ್ರಚಿಕಿತ್ಸೆಯಲ್ಲಿ ಗಾಯದ ಪ್ರಮಾಣವೂ ಕಡಿಮೆ ಇರುವುದರಿಂದ ವ್ಯಕ್ತಿ ಬೇಗ ಚೇತರಿಸಿಕೊಳ್ಳುತ್ತಾನೆ. ಇದರಿಂದಾಗಿ ಆಸ್ಪತ್ರೆ ವಾಸದ ಅವಧಿಯೂ ಕಡಿತ ಆಗಲಿದೆ' ಎಂದು ಹೇಳಿದರು.

'ವಯಸ್ಕರ ಜತೆಗೆ ಮಕ್ಕಳು, ವೃದ್ಧರಿಗೂ ರೊಬೊಟಿಕ್ ತಂತ್ರಜ್ಞಾನದ ನೆರವಿನಿಂದ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. 'ಸ್ಕೋಲಿಯೋಸಿಸ್' ಸಮಸ್ಯೆ ಎದುರಿಸುತ್ತಿದ್ದ ತುಮಕೂರಿನ ಸಿದ್ದನಹಳ್ಳಿಯ ಯುವತಿಗೆ ಬೆನ್ನು ಹುರಿ 120 ಡಿಗ್ರಿಗಳಷ್ಟು ಬಾಗಿತ್ತು. ಆಕೆಗೆ ರೊಬೊಟಿಕ್ ತಂತ್ರಜ್ಞಾನದ ನೆರವಿನಿಂದ 8 ಗಂಟೆಗಳ ಅವಧಿಯಲ್ಲಿ ಸಂಕೀರ್ಣ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಆರು ಗಂಟೆಗಳ ಬಳಿಕ ಅವಳು ಎಲ್ಲರಂತೆ ನಡೆಯಲು ಸಾಧ್ಯವಾಯಿತು' ಎಂದು ವಿವರಿಸಿದರು.

## ವರ್ಗಾವಣೆಗೆ ರಾಜಕೀಯ 'ಪ್ರಭಾವ' ಶಿಸ್ತು ಕ್ರಮಕ್ಕೆ ಸಿ.ಎಸ್‌ಗೆ ಸಿ.ಎಂ ಸೂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವರ್ಗಾವಣೆ ಮತ್ತು ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ಸರ್ಕಾರಿ ನೌಕರರು ರಾಜಕೀಯ ಪ್ರಭಾವ ಬೀರುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಅಂಥವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳುವಂತೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಸೂಚನೆ ನೀಡಿದ್ದಾರೆ.

ಈ ಕುರಿತು ಇದೇ 20ರಂದು ಮುಖ್ಯ ಕಾರ್ಯದರ್ಶಿಗೆ ಟಿಪ್ಪಣಿ ನೀಡಿರುವ ಮುಖ್ಯಮಂತ್ರಿ, 'ಸರ್ಕಾರಿ ನೌಕರರು ಸರ್ಕಾರಕ್ಕೆ ಸಲ್ಲಿಸುವ ಮನವಿಗಳನ್ನು ಸಂಬಂಧಪಟ್ಟ ಇಲಾಖೆಯ ಕಾರ್ಯದರ್ಶಿಗೆ ಸಲ್ಲಿಸಬೇಕು. ಇಲಾಖೆಯ ಸಚಿವರಿಗೆ ನೇರವಾಗಿ ಸಲ್ಲಿಸಬಾರದೆಂದು 1966ರ ಆಗಸ್ಟ್ 29ರಂದು ಆದೇಶ ಹೊರಡಿಸಲಾಗಿದೆ. ಅಲ್ಲದೆ, 1980ರ ಮೇ 21ರಂದು ಹೊರಡಿಸಿದ ಅಧಿಕೃತ ಜ್ಞಾಪನ ಪತ್ರದಲ್ಲಿ, ತಮ್ಮ ಸೇವಾ ವಿಷಯಗಳ ಬಗ್ಗೆ ರಾಜಕೀಯ ಅಥವಾ ಇತರ ಯಾವುದೇ ಪ್ರಭಾವವನ್ನು ಬೀರಬಾರದೆಂದು ಸರ್ಕಾರಿ ನೌಕರರಿಗೆ ನಿರ್ದೇಶನ ನೀಡಲಾಗಿದೆ' ಎಂದಿದ್ದಾರೆ.

'ಆದರೆ, ಕೆಲವು ಸರ್ಕಾರಿ ನೌಕರರು ಈ ಸೂಚನೆಗಳನ್ನು ಪಾಲಿಸುತ್ತಿಲ್ಲ. ತಮ್ಮ ವರ್ಗಾವಣೆ ಮತ್ತು ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ, ಸಚಿವರು, ಶಾಸಕರಿಗೆ ನೇರವಾಗಿ ಮನವಿಗಳನ್ನು ಸಲ್ಲಿಸುತ್ತಿದ್ದಾರೆ. ಅಲ್ಲದೆ, ರಾಜಕೀಯ ಪ್ರಭಾವ ಬೀರುತ್ತಿರುವುದೂ ಗೊತ್ತಾಗಿದೆ. ಹೀಗಾಗಿ, ಈ ಹಿಂದೆಯೇ ನೀಡಿರುವ ಸರ್ಕಾರಿ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲ ಸರ್ಕಾರಿ ನೌಕರರಿಗೆ ಸೂಚನೆ ನೀಡಬೇಕು. ಈ ಸೂಚನೆ ಉಲ್ಲಂಘಿಸಿದವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಅಗತ್ಯ ಕ್ರಮ ವಹಿಸಬೇಕು' ಎಂದು ಮುಖ್ಯ ಕಾರ್ಯದರ್ಶಿಗೆ ಸೂಚನೆ ನೀಡಿದ್ದಾರೆ.

ವಾಹನ ಸವಾರರಿಗೆ ಗಾಯ: ಹಾಲೇನಹಳ್ಳಿ ಗ್ರಾಮಸ್ಥರ ಆಕ್ರೋಶ

# ರಸ್ತೆಯಲ್ಲಿ ಗುಂಡಿ: ಸಂಚಾರ ದುಸ್ತರ

ಪ್ರಜಾವಾಣಿ ವಾರ್ತೆ



ಹಾಲೇನಹಳ್ಳಿ ಮಾರ್ಗವಾಗಿ ಸಾಗುವ ರಸ್ತೆಯ ತುಂಬೆಲ್ಲಾ ಗುಂಡಿಗಳು

**ದಾಬಸ್‌ಪೇಟೆ:** ನೆಲಮಂಗಲ ತಾಲ್ಲೂಕಿನ ನರಸೀಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಾಲೇನಹಳ್ಳಿ ಗ್ರಾಮದ ರಸ್ತೆ ಗುಂಡಿಮಯವಾಗಿದ್ದು, ಸಂಚಾರಕ್ಕೆ ತೊಂದರೆಯಾಗುತ್ತಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹಾಲೇನಹಳ್ಳಿ ಗ್ರಾಮದ ಮೂಲಕ ಲಕ್ಷ್ಮೀಪುರ, ಜಾಜೂರು, ಪಾಂಡವಪುರ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ. ಗುಂಡಿಗಳಲ್ಲಿ ನೀರು ನಿಂತಿದ್ದು, ವಾಹನ ಸವಾರರು ಬಿದ್ದು ಗಾಯಗೊಂಡಿದ್ದಾರೆ.

ಗುಂಡಿ ಬಿದ್ದು ತಿಂಗಳುಗಳೇ ಕಳೆದಿವೆ. ರಸ್ತೆ ದುರಸ್ತಿಗೆ ನರಸೀಪುರ ಗ್ರಾಮ ಪಂಚಾಯಿತಿ ಆಡಳಿತ ಪ್ರಯತ್ನ ಮಾಡಿಲ್ಲ. ಇದೇ ರಸ್ತೆಯಲ್ಲಿ ಮಕ್ಕಳು, ಹಿರಿಯರು, ವ್ಯಾಪಾರಿಗಳು ವಾಹನಗಳಲ್ಲಿ ನಿತ್ಯವೂ ಸಂಚರಿಸುತ್ತಾರೆ. ದೊಡ್ಡ ಪ್ರಮಾಣದ ಅನಾಹುತ ಸಂಭವಿಸುವ ಮುನ್ನ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮದ ಜಯರಾಮ್ ಆಗ್ರಹಿಸಿದ್ದಾರೆ.

ಸಾಲಹಟ್ಟಿ, ಲಕ್ಷ್ಮೀಪುರ ಗ್ರಾಮಗಳಿಂದ ಹಾಲು ಉತ್ಪಾದಕರು ನಿತ್ಯ ಎರಡು ಬಾರಿ ಹಾಲೇನಹಳ್ಳಿಯ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಹಾಲು ತಲುಪಿಸುತ್ತಾರೆ. ಹಲವು ಮಂದಿ ಗುಂಡಿಯಲ್ಲಿ ಬಿದ್ದು, ಹಾಲು ಚೆಲ್ಲಿ ನಷ್ಟವಾಗಿ ಎಂದು ಹಾಲೇನಹಳ್ಳಿ ಡೇರಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿ.ವನಿತಾ ಹೇಳಿದ್ದಾರೆ.

ಸೋಂಪುರ ಹೋಬಳಿಗೆ ಸಂಪರ್ಕ ಕಲ್ಪಿಸುವ ಗ್ರಾಮಗಳ ಬಹುತೇಕ ರಸ್ತೆಗಳ ಡಾಂಬರು ಕಿತ್ತು ಬಂದಿದೆ. ಮಳೆಯಿಂದ ರಸ್ತೆಗಳು ಇನ್ನಷ್ಟು ಹದಗೆಟ್ಟಿವೆ. ಕೆಸರುಮಯ ರಸ್ತೆಯಲ್ಲಿಯೇ ಸಂಚರಿಸಬೇಕಿದೆ. ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಸರ್ಕಾರ ಗಮನ ಹರಿಸಬೇಕು ಎಂದು ಗ್ರಾಮಸ್ಥ ರವಿಕುಮಾರ್ ಮನವಿ ಮಾಡಿದ್ದಾರೆ.

ಹಳ್ಳಿಗಳಿಗೆ ಕಾವೇರಿ ನೀರಿನ ಸಂಪರ್ಕ ಅಭಿಯಾನಕ್ಕೆ ಚಾಲನೆ ನೀಡಿದ ಉಪಮುಖ್ಯಮಂತ್ರಿ

# ನೀರಿನ ದರ ಏರಿಕೆ ಅನಿವಾರ್ಯ: ಡಿಕೆಶಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಯಾರೇ ಆಕ್ಷೇಪ ವ್ಯಕ್ತಪಡಿಸಿದರೂ ನಗರದಲ್ಲಿ ನೀರಿನ ದರ ಏರಿಕೆ ಮಾಡುತ್ತೇವೆ. ಎಷ್ಟು ದರ ಹೆಚ್ಚಿಸಬೇಕು? ಯಾವ ವರ್ಗದ ಗ್ರಾಹಕರಿಗೆ ಹೆಚ್ಚಿಸಬೇಕು ಎಂಬುದನ್ನು ನಿರ್ಧರಿಸಲಾಗುವುದು' ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ವಿಧಾನಸೌಧದ ಆವರಣದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ 'ಬಾಗಿಲಿಗೆ ಬರಲಿದೆ ಕಾವೇರಿ ಸಂಪರ್ಕ, 110 ಹಳ್ಳಿಗಳಿಗೆ ಕಾವೇರಿ ನೀರಿನ ಸಂಪರ್ಕ' ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

12-13 ವರ್ಷಗಳಿಂದ ನಗರದಲ್ಲಿ ನೀರಿನ ದರ ಹೆಚ್ಚಿಸಿಲ್ಲ. ನೀರು ಸರಬರಾಜು ಮಂಡಳಿ (ಬಿಡಬ್ಲ್ಯು-ಎಸ್ಎಸ್‌ಬಿ) ಕಷ್ಟಪಟ್ಟು ನಿರ್ವಹಣೆ ಮಾಡುತ್ತಿದೆ. ದರ ಹೆಚ್ಚಳ ಮಾಡದಿದ್ದರೆ ಮಂಡಳಿ ಉಳಿಯುವುದಿಲ್ಲ. ನೌಕರರಿಗೆ ವೇತನ ನೀಡಲು ಆಗುವುದಿಲ್ಲ. ಸಂಸ್ಥೆಗೆ ವಿದ್ಯುತ್ ಬಿಲ್ ಕಟ್ಟಲು ಸಾಧ್ಯವಾಗುತ್ತಿಲ್ಲ ಎಂದು ಸಮರ್ಥಿಸಿಕೊಂಡರು.

'ರಾಜಧಾನಿಯಲ್ಲಿ 1.40 ಕೋಟಿ ಜನಸಂಖ್ಯೆ ಇದ್ದು, ಎಲ್ಲರಿಗೂ ನೀರನ್ನು ಒದಗಿಸಲೇಬೇಕು. ಇದಕ್ಕಾಗಿ ಸಾಲ ಮಾಡಿ, ಸಂಪರ್ಕ ಜಾಲವನ್ನು ಹೆಚ್ಚಿಸಬೇಕಿದೆ' ಎಂದು ಹೇಳಿದರು.



ಖಾಸಗೀಕರಣ ಆಗುವುದಿಲ್ಲ: 'ಬಿಡಬ್ಲ್ಯು ಎಸ್ ಎಸ್ ಬಿ ನನ್ನ ವ್ಯಾಪ್ತಿಯಲ್ಲೇ ಇರುವ ಕಾರಣ ಅನೇಕರು ನೂತನ ಯೋಜನೆ ಕುರಿತು ಚರ್ಚೆ ನಡೆಸಲು ಬಂದರು. ಈ ಹಿಂದೆ ಇಂಧನ ಇಲಾಖೆಯಲ್ಲಿ ಇದ್ದಾಗಲೂ ಇದೇ ಪ್ರಸ್ತಾವ ಬಂದಿತ್ತು. ನಾನು ಈ ಖಾತೆ ಹೊಂದಿರುವವರೆಗೆ ಖಾಸಗೀಕರಣ ಮಾಡಲು ಬಿಡುವುದಿಲ್ಲ' ಎಂದು ತಿಳಿಸಿದರು.

ನ್ಯಾಯ ಸಿಗುವ ನಂಬಿಕೆ ಇದೆ: 'ನಾನು ಅಧಿಕಾರ ವಹಿಸಿಕೊಂಡ ತಕ್ಷಣ 6 ಎಂಎಲ್‌ಡಿ ನೀರು ಸರಬರಾಜನ್ನು ಹೆಚ್ಚಳ ಮಾಡಲಾಗಿದೆ. ತಮಿಳುನಾಡಿಗೆ ನಿಗದಿತ ನೀರಿಗಿಂತ 100 ಟಿಎಂಸಿ ಅಡಿ ಹೆಚ್ಚು ನೀರು ಹರಿಸಲಾಗಿದೆ. ನಮ್ಮಲ್ಲಿ ಹೆಚ್ಚುವರಿ ನೀರನ್ನು ಹಿಡಿದಿಟ್ಟುಕೊಳ್ಳಲು ಆಗುತ್ತಿಲ್ಲ. ಮತ್ತೊಂದು ಅಣೆಕಟ್ಟೆ ಇರುತ್ತಿದ್ದರೆ ಅನುಕೂಲವಾಗುತ್ತಿತ್ತು. ಮೇಕೆದಾಟು ಯೋಜನೆ ವಿಷಯದಲ್ಲಿ ನ್ಯಾಯಾಲಯದಲ್ಲಿ ನಮಗೆ ನ್ಯಾಯ ಸಿಗುವ ವಿಶ್ವಾಸವಿದೆ' ಎಂದರು.

'ನಗರಕ್ಕೆ ನಿಗದಿಯಾದ ನೀರನ್ನು ಕೆಆರ್‌ಎಸ್‌ನಿಂದ ನೇರವಾಗಿ ತರಬಹುದು ಎಂದು ಒಂದಷ್ಟು ಜನ ವರದಿ ಕೊಟ್ಟಿದ್ದಾರೆ. ಶರಾವತಿಯಿಂದ ನೀರು ತರಬೇಕು ಎನ್ನುವ ಆಲೋಚನೆಯಿದೆ. ಅಲ್ಲಿನ ಸ್ಥಳೀಯರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಎತ್ತಿನಹೊಳೆ ಯೋಜನೆ ರಾಜಕಾರಣದಿಂದಾಗಿ ಬೇರೆ, ಬೇರೆ ಕಡೆ ತಿರುವು ಪಡೆದುಕೊಂಡಿದೆ. ಇದನ್ನೂ ಒಂದು ಹಂತಕ್ಕೆ ತಲುಪಿಸಿದ್ದೇನೆ. ಕಾವೇರಿ ಐದನೇ ಹಂತದ ಕಾಮಗಾರಿ ಸ್ಥಗಿತಗೊಂಡಿದ್ದು, ಮತ್ತೆ ಚಾಲನೆ ನೀಡಲಾಗುವುದು' ಎಂದು ತಿಳಿಸಿದರು.

## ಪ್ರತ್ಯೇಕ ವಿದ್ಯುತ್ ಕಂಪನಿಗೆ ಸಲಹೆ


'14 ವರ್ಷಗಳಲ್ಲಿ ಹಲವು ಬಾರಿ ವಿದ್ಯುತ್ ದರ ಹೆಚ್ಚಳವಾಗಿದೆ. ಇದಕ್ಕಾಗಿ ಇಲಾಖೆಯದ್ದೇ ಪ್ರತ್ಯೇಕ ಕಂಪನಿ ಸ್ಥಾಪಿಸಿ ಸೋಲಾರ್ ಸೇರಿದಂತೆ ಇತರ ಮೂಲಗಳಿಂದ ವಿದ್ಯುತ್ ತಯಾರಿಸಿದರೆ ಹಣ ಉಳಿತಾಯವಾಗುತ್ತದೆ. ಬೆಂಗಳೂರಿಗೆ ಸಂಬಂಧಿಸಿದ ಎಲ್ಲ ಇಲಾಖೆಗಳು ಜಂಟಿಯಾಗಿ ಈ ಕಾರ್ಯಕ್ರಮ ರೂಪಿಸಬಹುದು. ಪ್ರತ್ಯೇಕ ವಿದ್ಯುತ್ ಉತ್ಪಾದನಾ ಕಂಪನಿ ಆರಂಭಕ್ಕೆ ಈಗಾಗಲೇ ಪ್ರಸ್ತಾವ ಸಿದ್ಧಪಡಿಸಲಾಗಿದೆ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

## 'ದರ ಏರಿಸಿದರೆ ಹೋರಾಟ'

ಮಂಡ್ಯ: 'ರಾಜ್ಯದಲ್ಲಿ ಪೆಟ್ರೋಲ್, ಹಾಲಿನ ದರ ಹೆಚ್ಚಿಸಿದ್ದಾಯ್ತು. ಈಗ ನೀರಿನ ದರ ಹೆಚ್ಚಿಸಲು ಹೊರಟಿದ್ದಾರೆ. ನೌಕರರಿಗೆ ಸಂಬಳ ಮತ್ತು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೊಡೋಕು ದುಡ್ಡಿಲ್ಲದೆ ರಾಜ್ಯ ಸರ್ಕಾರ ಪಾಪರ್ ಆಗಿದೆ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ್ ವಾಗ್ದಾಳಿ ನಡೆಸಿದರು.

ನಗರದಲ್ಲಿ ಗುರುವಾರ ಬಿಜೆಪಿ ಏರ್ಪಡಿಸಿದ್ದ ಪ್ರತಿಭಟನೆಯಲ್ಲಿ ಮಾತನಾಡಿ, 'ಗ್ಯಾರಂಟಿ ಯೋಜನೆಗಳಿಗೂ ಹಣವಿಲ್ಲ. ಅದನ್ನು ನಿಲ್ಲಿಸಿದರೆ ರಾಷ್ಟ್ರ ಮಟ್ಟದಲ್ಲೂ ಪಕ್ಷಕ್ಕೆ ತೊಂದರೆಯಾಗುತ್ತದೆ ಎಂದು ಪಕ್ಷದ ವರಿಷ್ಠರು ತಿಳಿಸಿದ್ದಾರೆ. ನೀರಿನ ದರ ಹೆಚ್ಚಿಸುತ್ತಿರುವುದು ದೊಡ್ಡ ಅಪರಾಧ. ಅದರ ವಿರುದ್ಧ ದೊಡ್ಡ ಹೋರಾಟ ಮಾಡುತ್ತೇವೆ' ಎಂದರು.

'ಹಗರಣವಾದರೂ ಸಿದ್ದರಾಮಯ್ಯ ರಾಜೀನಾಮೆ ಕೊಡಲ್ಲ ಅಂತಾರೆ. ಡಿ.ಕೆ.ಶಿವಕುಮಾರ್ ನೀರಿನ ದರ ಹೆಚ್ಚಿಸುತ್ತೇವೆ ಅಂತಾರೆ. ಸರ್ಕಾರ ಹೆಚ್ಚು ದಿನ ಇರಲ್ಲ ಅನ್ನುವುದು ಅವರಿಗೆ ಗ್ಯಾರಂಟಿಯಾಗಿದೆ. ಹೀಗಾಗಿ ಅಧಿಕಾರದಲ್ಲಿರುವ ಅಷ್ಟೂ ದಿನ ಲೂಟಿ ಮಾಡೋಕೆ ನಿಂತಿದ್ದಾರೆ. ತುಘಲಕ್ ಆಡಳಿತ ನಡೆಸುತ್ತಿದ್ದಾರೆ. ಕಾಂಗ್ರೆಸ್ ಪಕ್ಷದ್ದು ಮುಗಿದ ಕತೆ' ಎಂದು ಜರಿದರು.



'ದೇವೇಗೌಡರ ಕುಟುಂಬವನ್ನು ಬಹಳ ದಿನಗಳಿಂದ ಕಾಂಗ್ರೆಸ್ ನಾಯಕರು ದ್ವೇಷಿಸುತ್ತಿದ್ದಾರೆ. ರೇವಣ್ಣ ಅವರನ್ನು ಜೈಲಿಗೆ ಹಾಕಿದ್ದಾಯ್ತು. ಈಗ ಕುಮಾರಸ್ವಾಮಿಯನ್ನು ಗುರಿಯಾಗಿಸಿಕೊಂಡಿದ್ದಾರೆ. ಆದರೆ ಅವರೊಂದಿಗೆ ನಾವಿದ್ದೇವೆ' ಎಂದರು.

## ದರ ಹೆಚ್ಚಿಸದೆ ನೀರು ಪೂರೈಸಿ ಮೋಹನ್ ದಾಸರಿ

ಕುಡಿಯುವ ನೀರಿನ ದರ ಏರಿಕೆ ಮಾಡದೆ ನಗರದ ಜನರಿಗೆ ನೀರಿನ ಪೂರೈಕೆ ಮಾಡಲು ಅಸಾಧ್ಯ ವೆನಿಸಿದರೆ ಬೆಂಗಳೂರು ಅಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ಅವರು ಕೂಡಲೇ ರಾಜೀನಾಮೆ ನೀಡಲಿ ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ಮೋಹನ್ ದಾಸರಿ ಆಗ್ರಹಿಸಿದ್ದಾರೆ.

'ಮೈಸೂರು ಮಹಾರಾಜರ ರೀತಿಯಲ್ಲಿ ತಮ್ಮ ಆಸ್ತಿಪಾಸ್ತಿಗಳನ್ನೆಲ್ಲ ಅಡವಿಟ್ಟು ಬೆಂಗಳೂರಿಗೆ ನೀರು ಪೂರೈಕೆ ಮಾಡುತ್ತಿದ್ದೇನೆಂಬ ಅಹಂ ಭಾವದಲ್ಲಿ ಡಿ.ಕೆ.ಶಿವಕುಮಾರ್ ಇದ್ದಂತೆ ಕಾಣುತ್ತಿದೆ. ನೀರು ಪೂರೈಕೆ ಮಾಡುವುದು ಸರ್ಕಾರದ ಕರ್ತವ್ಯ. ಬೆಂಗಳೂರಿಗೆ ಸಂಬಂಧವಿಲ್ಲದವರು ಬೆಂಗಳೂರು ಅಭಿವೃದ್ಧಿ ಮಾಡಲು ಹೊರಟಾಗ ಈ ರೀತಿ ಆಗುತ್ತದೆ' ಎಂದು ಪತ್ರಿಕಾ ಹೇಳಿಕೆಯಲ್ಲಿ ಟೀಕಿಸಿದ್ದಾರೆ.

'ಮೇಕೆದಾಟು ಹೆಸರಿನಲ್ಲಿ ಪಾದಯಾತ್ರೆ ಮಾಡುವ ಮೂಲಕ ಅಧಿಕಾರ ಪಡೆದುಕೊಂಡ ಶಿವಕುಮಾರ್, ಈ ಕೂಡಲೇ ನಗರದ ಜನರ ಕ್ಷಮೆಯಾಚಿಸಬೇಕು. ಇಲ್ಲದಿದ್ದಲ್ಲಿ ಆಮ್ ಆದ್ಮಿ ಪಕ್ಷ ಹೋರಾಟ ಆರಂಭಿಸುತ್ತದೆ. ಬೆಂಗಳೂರು ಜಲಮಂಡಳಿಯ ವ್ಯಾಪಕ ಭ್ರಷ್ಟಾಚಾರಗಳನ್ನು ತಡೆಗಟ್ಟುವುದನ್ನು ಬಿಟ್ಟು, ಕುಡಿಯುವ ನೀರಿನ ದರ ಹೆಚ್ಚಿಸಲು ಸರ್ಕಾರ ಮುಂದಾದಲ್ಲಿ ಪಕ್ಷದ ವತಿಯಿಂದ ಹೋರಾಟ ನಡೆಸಲಾಗುವುದು' ಎಂದು ಅವರು ಎಚ್ಚರಿಸಿದ್ದಾರೆ.

## 'ತೆರಿಗೆ ವಿಷಯದಲ್ಲಿ ಕಾಂಗ್ರೆಸ್ ಔರಂಗಜೇಬನ ಅಪ್ಪಂದಿರು'

ಪ್ರಜಾವಾಣಿ ವಾರ್ತೆ

**ಚಿಕ್ಕಮಗಳೂರು:** 'ಬೆಂಗಳೂರಿನಲ್ಲಿ ನೀರಿನ ದರ ಏರಿಕೆ ಮಾಡಲು ಸರ್ಕಾರ ಹೊರಟಿದೆ. ಇನ್ನು ಉಸಿರಾಡುವ ಗಾಳಿಯ ಮೇಲೆ ತೆರಿಗೆ ವಿಧಿಸುವುದಷ್ಟೇ ಬಾಕಿ ಇದೆ. ಅದನ್ನು ಮಾಡಿದರೆ ಕಾಂಗ್ರೆಸ್‌ನವರು ಔರಂಗಜೇಬನ ಅಪ್ಪಂದಿರು ಎಂಬುದನ್ನು ಸಾಬೀತು ಮಾಡಿದಂತೆ ಆಗಲಿದೆ' ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಲೇವಡಿ ಮಾಡಿದರು.

'ಅಧಿಕಾರಕ್ಕೆ ಬಂದ ಕೂಡಲೇ ಮದ್ಯದ ದರ, ಆಸ್ತಿ ನೋಂದಣಿ ಶುಲ್ಕ, ವಿದ್ಯುತ್ ದರ ಏರಿಸಿದ್ದರು. ಈಗ ನೀರಿನ ದರ ಏರಿಸಲು ಹೊರಟಿದ್ದಾರೆ. ಔರಂಗಜೇಬ ಜಿಜಿಯಾ ತೆರಿಗೆ ಕಡ್ಡಾಯ ವಿಧಿಸುತ್ತಿದ್ದ, ಕಾಂಗ್ರೆಸ್‌ನವರು ಗಾಳಿಗೂ ತೆರಿಗೆ ವಿಧಿಸಲಿ. ಆಗ ತೆರಿಗೆ ವಿಧಿಸಲು ಇನ್ನೇನು ಬಾಕಿ ಉಳಿಯುವುದಿಲ್ಲ' ಎಂದು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

'ಜೇಬಿನಲ್ಲಿ ಹಣ ಕದಿಯುವವರಿಂದ ಕಳ್ಳರು ವ್ಯಕ್ತಿಯ ಗಮನ ಬೇರೆಡೆ ಸೆಳೆಯಲು ರಸ್ತೆಗೆ ಐದು ರೂಪಾಯಿ ಎಸೆಯುತ್ತಾರೆ. ಅದರ ಅದನ್ನು ತೆಗೆದುಕೊಳ್ಳಲು ಬಗ್ಗಿದಾಗ ಜೇಬಿನಿಂದ ₹500 ಎತ್ತುತ್ತಾರೆ. ಕಾಂಗ್ರೆಸ್‌ನವರು ಗ್ಯಾರಂಟಿ ಹೆಸರಿನಲ್ಲಿ ₹2 ಸಾವಿರ ನೀಡಿ ಜನರ ಗಮನ ಬೇರೆಡೆ ಸೆಳೆದು ಅವರಿಂದಲೇ ₹20 ಸಾವಿರ ವನ್ನು ಕಿತ್ತು ಕೊಳ್ಳುತ್ತಿದ್ದಾರೆ' ಎಂದು ಟೀಕಿಸಿದರು.



ಸಿ.ಟಿ.ರವಿ

'ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು ಬಂಧಿಸಲು ಅದೇನು ಪುಗಸಟ್ಟೆ ಪುಟಗಲ್ಲ, ನ್ಯಾಯಾಲಯ ಇದೆ, ಕಾನೂನಿದೆ. 2013ರಿಂದ ಕಾಂಗ್ರೆಸ್ ಆಡಳಿತದಲ್ಲಿ ಇತ್ತು, 2018ರಲ್ಲಿ ಕಾಂಗ್ರೆಸ್ ಬೆಂಬಲದಿಂದಲೇ ಮುಖ್ಯಮಂತ್ರಿ ಆಗಿದ್ದರು. ಆಗ ಏಕೆ ಕುಮಾರಸ್ವಾಮಿ ವಿರುದ್ಧದ ಈ ಪ್ರಕರಣ ಕೆದಕಲಿಲ್ಲ. ಕಾಂಗ್ರೆಸ್ ಹಗರಣಗಳು ಬಹಿರಂಗವಾದ ಬಳಿಕ ಕುಮಾರಸ್ವಾಮಿ ವಿರುದ್ಧದ ಪ್ರಕರಣ ಕೆದಕಲು ಹೊರಟಿದ್ದಾರೆ. ಈ ದ್ವೇಷ ಏಕೆ ಎಂಬುದು ಎಲ್ಲರಿಗೂ ಅರ್ಥವಾಗಿದೆ' ಎಂದರು.

'ಡಿ.ಕೆ.ಶಿವಕುಮಾರ್ ಅವರು ಈ ಹಿಂದೆ ಜೋಡೆತ್ತು, ಅಣ್ಣಾ, ಜನುಮ ಜನುಮದ ಜೋಡಿ ಎಂದೆಲ್ಲಾ ಕರೆದುಕೊಂಡಿದ್ದರು. ಈಗ ಬಿಜೆಪಿ ಜತೆಗೆ ಹೋದ ಕೂಡಲೇ ಕುಮಾರಸ್ವಾಮಿ ಖಳನಾಯಕರಾದರೆ' ಎಂದು ಸಿ.ಟಿ.ರವಿ ಪ್ರಶ್ನಿಸಿದರು.

ಬ್ಯಾಂಕ್ ವ್ಯವಸ್ಥಾಪಕ, ಸಿವಿಲ್ ಎಂಜಿನಿಯರ್ ಬಂಧನ • ವಿದ್ಯಾರಣ್ಯಪುರದಲ್ಲಿ ಘಟನೆ

# ಕಾರಿನಿಂದ ಬೈಕ್‌ಗೆ ಡಿಕ್ಕಿ ಹೊಡೆಸಿ ಕೊಲೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮುಂದಕ್ಕೆ ಸಾಗಲು ರಸ್ತೆ ಬಿಡದ ವಿಚಾರಕ್ಕೆ ಕಾರಿನಿಂದ ಬೈಕ್‌ಗೆ ಡಿಕ್ಕಿ ಹೊಡೆಸಿ ಸವಾರನನ್ನು ಕೊಲೆ ಮಾಡಿರುವ ಘಟನೆ ವಿದ್ಯಾರಣ್ಯಪುರದಲ್ಲಿ ಬುಧವಾರ ರಾತ್ರಿ ನಡೆದಿದೆ.

ಚಾಮುಂಡೇಶ್ವರಿ ಬಡಾವಣೆ ನಿವಾಸಿ ಮಹೇಶ್ (21) ಕೊಲೆಯಾದ ಯುವಕ. ಕೊಲೆ ಮಾಡಿದ ಆರೋಪದ ಅಡಿ ಬ್ಯಾಂಕ್‌ವೊಂದರ ಬೆಳ್ಳಂದೂರು ಶಾಖೆಯ ವ್ಯವಸ್ಥಾಪಕ ಆರವಿಂದ ಹಾಗೂ ಸಿವಿಲ್ ಎಂಜಿನಿಯರ್ ಚನ್ನಕೇಶವ ಅವರನ್ನು ಪೊಲೀಸರು ಬಂಧಿಸಿದ್ದಾರೆ. ಇಬ್ಬರೂ ಕೊಡಿಗೇಹಳ್ಳಿಯ ನಿವಾಸಿಗಳು.

'ಕೋಲಾರ ಜಿಲ್ಲೆ ಕೆಜಿಎಫ್‌ನ ಮಹೇಶ್ ಅವರು ಕೆಲವು ವರ್ಷಗಳ ಹಿಂದೆ ಪೋಷಕರೊಂದಿಗೆ ಬೆಂಗಳೂರಿಗೆ ಬಂದು ಚಾಮುಂಡೇಶ್ವರಿ ಬಡಾವಣೆಯಲ್ಲಿ ನೆಲೆಸಿದ್ದರು. ಪೋಷಕರು ಕೂಲಿ ಕೆಲಸ ಮಾಡುತ್ತಿದ್ದಾರೆ. ಮಹೇಶ್ ಅವರು ಬಿ.ಕಾಂ ವ್ಯಾಸಂಗ ಮಾಡಿದ್ದರು. ನಂತರ, ವಿದ್ಯಾಭ್ಯಾಸ ಮುಂದುವರಿಸದೆ ಆಹಾರ ಡೆಲಿವರಿ ಕೆಲಸಕ್ಕೆ ಸೇರಿಕೊಂಡಿದ್ದರು. ಬುಧವಾರ ರಾತ್ರಿ ತಮ್ಮ ಸ್ನೇಹಿತರಾದ ನಿಖಿಲ್ ಹಾಗೂ ಬಾಲಾಜಿ ಅವರೊಂದಿಗೆ ವಿದ್ಯಾರಣ್ಯಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗಾಂಧಿ ಕೃಷಿ ವಿಜ್ಞಾನ ಕೇಂದ್ರಕ್ಕೆ ಸಂಪರ್ಕಿಸುವ ಮಾರ್ಗದಲ್ಲಿದ್ದ ಅಂಗಡಿಗೆ ತೆರಳಿ ಟೀ ಕುಡಿದು ಒಂದೇ ಬೈಕ್‌ನಲ್ಲಿ ಮೂವರು ವಾಪಸ್ ಬರುತ್ತಿದ್ದರು. ಅದೇ ಮಾರ್ಗದಲ್ಲಿ ಆರೋಪಿಗಳು ಕಾರಿನಲ್ಲಿ ಬರುತ್ತಿದ್ದರು. ಮುಂದಕ್ಕೆ ಸಾಗಲು ಕಾರಿಗೆ ದಾರಿ ಬಿಡುವಂತೆ ಹಾರ್ನ್ ಮಾಡಿದ್ದರೂ ಮಹೇಶ್ ಬೈಕ್ ಚಲಾಯಿಸಿಕೊಂಡು ಹೋಗುತ್ತಿದ್ದರು. ಸ್ವಲ್ಪ ದೂರ ಸಾಗಿದ ಮೇಲೆ ಕಾರಿನಿಂದ ಬೈಕ್‌ಗೆ ಡಿಕ್ಕಿ ಹೊಡೆಸಲಾಗಿದೆ. ಆಗ ಹಿಂದಿದ್ದ ನಿಖಿಲ್ ಬೈಕ್‌ನಿಂದ ಜಿಗಿದು ಪಾರಾಗಿದ್ದರು' ಎಂದು ಪೊಲೀಸರು ಹೇಳಿದರು.

'ಬೈಕ್ 300 ಮೀಟರ್‌ನಷ್ಟು ದೂರ ಸಾಗಿದ ಮೇಲೆ ಕಾರು ಹಿಂಬಾಲಿಸುತ್ತಾ ರುವುದನ್ನು ಕಂಡ ಬಾಲಾಜಿ ಅವರೂ ಜಿಗಿದು ಪ್ರಾಣ ಉಳಿಸಿಕೊಂಡಿದ್ದರು. ಬಳಿಕ ಬೈಕ್ ನಿಲ್ಲಿಸುವಂತೆ ಆರೋಪಿ ಅರವಿಂದ್ ಮನವಿ ಮಾಡಿದ್ದರು. ಅದಕ್ಕೆ ಕಿವಿಗೊಡದೇ ಸವಾರ ಮುಂದಕ್ಕೆ ಸಾಗಿದ್ದರು. ಕೋಪಗೊಂಡ ಅರವಿಂದ್ ಕಾರಿನಲ್ಲಿ ಹಿಂಬಾಲಿಸಿದ್ದರು. ಗಾಬರಿಗೊಂಡ ಮಹೇಶ್ ಅವರು ಬೈಕ್ ಅನ್ನು ಸಣ್ಣಗಿನ ಬಡಾವಣೆ ಕಡೆಗೆ ತಿರುಗಿಸಿದ್ದರು. ಆಗ ಕಾರಿನಿಂದ ಬೈಕ್‌ಗೆ ಡಿಕ್ಕಿ ಹೊಡೆಸಿದ ಪರಿಣಾಮ ಅವರು ಬೈಕ್ ಸಮೇತ ಕಾಂಪೌಂಡ್‌ಗೆ ಡಿಕ್ಕಿಯಾಗಿ ಉರುಳಿ ಬಿದ್ದಿದ್ದರು. ಹೆಲ್ಮೆಟ್ ಧರಿಸಲಿಲ್ಲ. ತಲೆಗೆ ಗಂಭೀರವಾದ ಗಾಯವಾಗಿತ್ತು. ಕಾರಿನಲ್ಲಿದ್ದ ಚನ್ನಕೇಶವ ಅವರು ಆಸ್ಪತ್ರೆಗೆ ಸಾಗಿಸಲು ಪ್ರಯತ್ನಿಸಿದ್ದರು. ಅಷ್ಟರಲ್ಲಿ ಮಹೇಶ್ ಮೃತಪಟ್ಟಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

**ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆ:** 'ಕಾರು ಹಿಂಬಾಲಿಸುತ್ತಿರುವುದು ಹಾಗೂ ಡಿಕ್ಕಿ ಹೊಡೆಸುತ್ತಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಆರಂಭದಲ್ಲಿ ಅಪಘಾತ ಪ್ರಕರಣ ಎಂದು ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲಿಸಿದ್ದರು. ನಂತರ, ಕೊಲೆ ಪ್ರಕರಣ ಎಂದು ಗೊತ್ತಾದ ಬಳಿಕ ವಿದ್ಯಾರಣ್ಯಪುರ ಠಾಣೆ ಪೊಲೀಸರು ಬುಧವಾರ ರಾತ್ರಿಯೇ ಆರೋಪಿಗಳನ್ನು ಬಂಧಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ. ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ.



ಚನ್ನಕೇಶವ



ಕೊಲೆಯಾದ ಮಹೇಶ್



ಆರವಿಂದ್

## ಪೋಷಕರ ಕಣ್ಣೀರು

ಗುರುವಾರ ಬೆಳಿಗ್ಗೆ ವಿದ್ಯಾರಣ್ಯಪುರ ಠಾಣೆಗೆ ಬಂದಿದ್ದ ಪೋಷಕರು ಕಣ್ಣೀರು ಸುರಿಸಿದರು.

'ಮಗನನ್ನು ಕಷ್ಟಪಟ್ಟು ಸಾಕಿದ್ದೆವು. ದಾರಿ ಬಿಡದ ಸಣ್ಣ ವಿಚಾರಕ್ಕೆ ಮಗನನ್ನೇ ಕೊಲೆ ಮಾಡಿದ್ದಾರೆ. ಆರೋಪಿಗಳಿಗೆ ಕಠಿಣ ಶಿಕ್ಷೆ ಆಗಬೇಕು' ಎಂದು ಆಗ್ರಹಿಸಿದರು. ನಗರದಲ್ಲಿ ಇತ್ತೀಚೆಗೆ ರಸ್ತೆಯಲ್ಲಿ ವಾಹನಕ್ಕೆ ಮತ್ತೊಂದು ವಾಹನ ತಾಗಿದ ವಿಚಾರಕ್ಕೆ ಹಲ್ಲೆ ನಡೆಸುತ್ತಿರುವ ಘಟನೆಗಳು ಹೆಚ್ಚುತ್ತಿವೆ. ಒಂದು ವಾರದಲ್ಲಿ ಈ ರೀತಿ ನಾಲ್ಕು ಪ್ರಕರಣಗಳು ನಡೆದಿವೆ.

## ಅಂತಿಮ ದರ್ಶನದ ವೇಳೆ ಯುವತಿಗೆ ನಿಂದನೆ: ಕಾರ್ಮಿಕನ ಕೊಲೆ

**ಬೆಂಗಳೂರು:** ಬಣ್ಣದ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರೊಬ್ಬರನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಕಾಟನ್‌ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಶರತ್

ಕೆ.ಪಿ. ಅಗ್ರಹಾರದ ಮಾರ್ಕಂಡೇಶ್ವರ ನಗರದ ನಿವಾಸಿ ಶರತ್ ಕುಮಾರ್ (30) ಕೊಲೆಯಾದವರು. ಅಂಜನಪ್ಪ ಗಾರ್ಡನ್‌ನಲ್ಲಿ ನೆಲೆಸಿದ್ದ ಪರಿಚಯಸ್ಥರೊಬ್ಬರು ಮೃತಪಟ್ಟಿದ್ದರು. ಅವರ ಅಂತಿಮ ದರ್ಶನ ಪಡೆಯಲು ಗುರುವಾರ ಬೆಳಿಗ್ಗೆ 6.30ರ ಸುಮಾರಿಗೆ ಶರತ್ ತೆರಳಿದ್ದರು. ಅಂತಿಮ ದರ್ಶನ ಪಡೆದು, ಸಮೀಪದಲ್ಲಿರುವ ಅಣ್ಣ ಪ್ರಭು ಅವರ ಮನೆಗೆ ಹೋಗಿದ್ದರು.

ಆ ನಂತರ ಕೆ.ಪಿ.ಅಗ್ರಹಾರದ ಮನೆಗೆ ಹೋಗುವಾಗ ನಾಲ್ಕೈದು ಮಂದಿ ಶರತ್ ಜತೆ ಜಗಳ ಮಾಡಿದ್ದರು. ಅದು ವಿಕೋಪಕ್ಕೆ ಹೋದಾಗ ಕೋಪಗೊಂಡ ಆರೋಪಿಗಳು, ಶರತ್ ಹೊಟ್ಟೆಯ ಎಡಭಾಗಕ್ಕೆ ಚಾಕುವಿನಿಂದ ಚುಚ್ಚಿದ್ದರು. ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಮೃತರ ಪತ್ನಿ ಆನಂದಿ ನೀಡಿದ ದೂರಿನ ಮೇರೆಗೆ ಕೊಲೆ ಪ್ರಕರಣ ದಾಖಲಿಸಿಕೊಂಡು, ಆರೋಪಿಗಳ ಪತ್ತೆಗೆ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

'ಅಂತಿಮ ದರ್ಶನ ಸಂದರ್ಭದಲ್ಲಿ ಶರತ್ ಅವರು ಯುವತಿಯೊಬ್ಬರಿಗೆ ನಿಂದಿಸಿದ್ದರು ಎಂದು ಹೇಳಲಾಗಿದೆ. ಅದೇ ವಿಚಾರಕ್ಕೆ ಕೋಪಗೊಂಡಿರುವ ಯುವತಿ ಕಡೆಯವರು, ಶರತ್ ಅವರನ್ನು ಅಡ್ಡಗಟ್ಟಿ ಕೊಲೆ ಮಾಡಿದ್ದಾರೆ ಎಂದು ಗೊತ್ತಾಗಿದೆ. ಆರೋಪಿಗಳ ಸುಳಿವು ಸಿಕ್ಕಿದ್ದು, ಶೀಘ್ರದಲ್ಲೇ ಸದ್ಯದಲ್ಲೇ ಬಂಧಿಸಲಾಗುವುದು' ಎಂದು ಪೊಲೀಸರು ಹೇಳಿದರು.



ಅನಂತಪಥ

ನಗರದ ಅದಮ್ಯ ಚೇತನದಲ್ಲಿ ಅನಂತಕುಮಾರ್ ಪ್ರತಿಷ್ಠಾನ ಆಯೋಜಿಸಿದ್ದ ಅನಂತಪಥ ಸುವರ್ಣ ಸಂಚಿಕೆಯ ಅನಾವರಣ ಕಾರ್ಯಕ್ರಮದಲ್ಲಿ ಅನಂತಪಥ ಪತ್ರಿಕೆ ಸಂಪಾದಕ ಟಿ.ಎಸ್. ಗೋಪಾಲ್, ಪ್ರತಿಷ್ಠಾನದ ಅಧ್ಯಕ್ಷ ಪಿ.ವಿ. ಕೃಷ್ಣಭಟ್ಟ, ಲೇಖಕ ದಾಮು ಕೃಷ್ಣಮೂರ್ತಿ ಮತ್ತು ಪ್ರತಿಷ್ಠಾನದ ಕಾರ್ಯದರ್ಶಿ ತೇಜಸ್ವಿನಿ ಅನಂತಕುಮಾರ್ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

## 'ಉದ್ಯಮದಲ್ಲೂ ಮಹಿಳೆಯರ ಸಾಧನೆ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೂಲಿ ಕಾರ್ಮಿಕಳಾಗಿ ದುಡಿಯುವುದು ಮಾತ್ರವಲ್ಲದೆ ಉದ್ಯಮ ಕ್ಷೇತ್ರದಲ್ಲೂ ತೊಡಗಿಸಿಕೊಂಡು ಮಹಿಳೆ ಯಶಸ್ವಿಯಾಗಿದ್ದಾಳೆ ಎಂದು ರಾಜ್ಯ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಹಾಗೂ ಉಬುಂಟು ಒಕ್ಕೂಟದ ಸಂಸ್ಥಾಪಕ ಅಧ್ಯಕ್ಷೆ ಕೆ. ರತ್ನಪ್ರಭಾ ಹೇಳಿದರು.

ಉಬುಂಟು ಒಕ್ಕೂಟ, ಮೀಡಿಯಾ ಟುಡೆ ಮತ್ತು ಫುಡ್ ಕೌನ್ಸಿಲ್ ಆಫ್ ಇಂಡಿಯಾ ಸಹಯೋಗದಲ್ಲಿ ಬೆಂಗಳೂರು ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ಗುರುವಾರ ಕೃಷಿ ಮತ್ತು ಆಹಾರ ಉದ್ಯಮ ಮೇಳ 'ಅಗ್ರಿಟೆಕ್ ಇಂಡಿಯಾ 2024' ಉದ್ಘಾಟಿಸಿ ಮಾತನಾಡಿದರು.

ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯ ಸಂಸ್ಥೆ ನಿರ್ದೇಶಕ ಶ್ರೀದೇವಿ ಅನ್ನಪೂರ್ಣ ಸಿಂಗ್ ಮಾತನಾಡಿದರು. ವಸ್ತುಪ್ರದರ್ಶನದಲ್ಲಿ ಆಹಾರ ಉತ್ಪನ್ನಗಳು, ಬೇಕರಿ ತಿನಿಸು, ಸಾವಯವ ಉತ್ಪನ್ನಗಳು, ತಾಜಾ ಹಣ್ಣುಗಳು, ಡೇರಿ ಉತ್ಪನ್ನಗಳು, ಚಹಾ, ಕಾಫಿ ಮತ್ತು ಹಣ್ಣಿನ ಪಾನೀಯಗಳ ಪ್ರದರ್ಶನದಲ್ಲಿ ಗಮನ ಸೆಳೆದವು.



ಮೇಳದಲ್ಲಿ ವಿದೇಶಿ ಗಣ್ಯರೊಂದಿಗೆ ನಿವೃತ್ತ ಮುಖ್ಯ ಕಾರ್ಯದರ್ಶಿ ಕೆ. ರತ್ನಪ್ರಭಾ ಅವರು ವಸ್ತುಪ್ರದರ್ಶನ ವೀಕ್ಷಿಸಿದರು

# ₹6 ಲಕ್ಷ ಜೀವನಾಂಶ: ಹೈಕೋರ್ಟ್ ಆಕ್ಷೇಪ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನನ್ನನ್ನು ತೊರೆದಿರುವ ಪತಿ ನನಗೆ ತಿಂಗಳಿಗೆ ₹6 ಲಕ್ಷ ಜೀವನಾಂಶ ನೀಡುವಂತೆ ನಿರ್ದೇಶಿಸಬೇಕು' ಎಂದು ಕೋರಿದ ಪತ್ನಿಯ ನಡೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ಹೈಕೋರ್ಟ್, 'ಇಷ್ಟೊಂದು ಹಣವನ್ನು ಪ್ರತಿ ತಿಂಗಳೂ ಖರ್ಚು ಮಾಡುವ ಬಯಕೆಯಿದ್ದರೆ ನೀವೇ ದುಡಿಯಿರಿ' ಎಂದು ಕುಟುಕಿದೆ.

'ಕೌಟುಂಬಿಕ ನ್ಯಾಯಾಲಯ ನಿಗದಿಪಡಿಸಿರುವ ಜೀವನಾಂಶದ ಮೊತ್ತವನ್ನು ಹೆಚ್ಚಿಸಬೇಕು' ಎಂದು ಕೋರಿ 46 ವರ್ಷದ ಮಹಿಳೆಯೊಬ್ಬರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಲಲಿತಾ ಕನ್ನೆಗಂಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.


ವಿಚಾರಣೆ ವೇಳೆ ಮಹಿಳೆ ಪರ ಆಕರ್ಷ ಸುಧಾಕರ ಕಾಂಡೆ, 'ಅರ್ಜಿದಾರ ಮಹಿಳೆಗೆ ಪೌಷ್ಟಿಕಾಂಶಯುಕ್ತ ಆಹಾರ ಬೇಕಿದೆ. ಪತಿ ಅವರನ್ನು ತೊರೆದ ನಂತರ ಅವರು ಹೊರಗಡೆ ಊಟ ಮಾಡುವಂತಾಗಿದೆ. ಊಟದ ಖರ್ಚ ಪ್ರತಿ ತಿಂಗಳಿಗೆ ₹40 ಸಾವಿರದಷ್ಟಿದೆ. ಅವರನ್ನು ತೊರೆದಿರುವ ಪತಿ ಪ್ರತಿದಿನ ಬ್ರ್ಯಾಂಡೆಡ್ ಬಟ್ಟೆಗಳನ್ನು ಧರಿಸುತ್ತಿದ್ದಾರೆ. ಅವರು ಧರಿಸುವ ಒಂದು ಷರ್ಟ್ ಬೆಲೆಯೇ ₹10 ಸಾವಿರ ದಷ್ಟಿರುತ್ತದೆ. ಇವರು ಮಾತ್ರ ಹಳೆಯ ಬಟ್ಟೆ ಧರಿಸಬೇಕಿದೆ! ಇವರ ಬಟ್ಟೆ, ಸೌಂದರ್ಯ ವರ್ಧಕ, ಔಷಧ ವೆಚ್ಚ ಮತ್ತು ಇತರ ವಸ್ತುಗಳ ಖರೀದಿ ಸೇರಿದಂತೆ ಒಟ್ಟು ₹60 ಸಾವಿರದಷ್ಟು ಬೇಕಿದೆ' ಎಂದರು.

ಈ ಮಾತಿಗೆ ಕುಪಿತಗೊಂಡ ನ್ಯಾಯಪೀಠ, 'ನೀವು ನ್ಯಾಯಿಕ ಪ್ರಕ್ರಿಯೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದೀರಿ. ಅರ್ಜಿದಾರ ಮಹಿಳೆಯು ತಮ್ಮ ಮಗುವಿನ ಖರ್ಚಿನ ಬಗ್ಗೆ ಎಲ್ಲೂ ಹೇಳಿಲ್ಲ. ಆದರೆ, ತಮ್ಮ ವೈಯಕ್ತಿಕ ಖರ್ಚಿಗೆ ₹6,16,300 ಬೇಕು ಎಂದು ಹೇಳಿದ್ದಾರೆ. ಚೌಕಾಸಿ ನಡೆಸಲು ನ್ಯಾಯಾಲಯವೇನೂ ಮಾರುಕಟ್ಟೆಯಲ್ಲ. ನಿಮ್ಮ ಕಕ್ಷಿದಾರರಿಗೆ ಇದೆಲ್ಲಾ ಅರ್ಥವಾಗುತ್ತಿಲ್ಲ. ನೀವೇ ಅವರಿಗೆ ಅರ್ಥ ಮಾಡಿಸಿ. ಕಾನೂನನ್ನು ದುರ್ಬಳಕೆ ಮಾಡಿಕೊಳ್ಳಬಹುದು ಎಂದುಕೊಳ್ಳುವ ನಿಮ್ಮಂತಹವರಿಗೆ ಈ ಪ್ರಕರಣದ ಮೂಲಕವೇ ಸ್ಪಷ್ಟ ಆದೇಶ ಹೊರಡಿಸಲಾಗುವುದು' ಎಂದು ಕಟುವಾಗಿ ನುಡಿಯಿತು.

'ಪತಿ ಎನಿಸಿಕೊಂಡವರು ₹10 ಕೋಟಿ ಸಂಪಾದಿಸಬಹುದು. ಹಾಗೆಂದ ಮಾತ್ರಕ್ಕೆ ವ್ಯಾಜ್ಯ ನಡೆಸುತ್ತಿರುವ ಹೆಂಡತಿ ಪತ್ನಿಗೆ ₹5 ಕೋಟಿ ಕೊಡಬೇಕು ಎಂದು ನ್ಯಾಯಾಲಯ ಆದೇಶ ಮಾಡಲಾಗುತ್ತದೆಯೆ? ಅಷ್ಟಕ್ಕೂ ಒಬ್ಬ ಮಹಿಳೆ ತನಗಾಗಿ ತಿಂಗಳಿಗೆ ಇಷ್ಟೊಂದು ಬೃಹತ್ ಮೊತ್ತವನ್ನು ಖರ್ಚು ಮಾಡಬಲ್ಲರೇ' ಎಂದು ಆಶ್ಚರ್ಯ ವ್ಯಕ್ತಪಡಿಸಿದ ನ್ಯಾಯಪೀಠ, ವಿಚಾರಣೆಯನ್ನು ಸೆಪ್ಟೆಂಬರ್ 9ಕ್ಕೆ ಮುಂದೂಡಿದೆ. ಪತಿಯ ಪರ ವಕೀಲ ಅದಿನಾಥ ನಾರದೆ ಹಾಜರಿದ್ದರು.

## ಪೂಂಜ ವಿರುದ್ಧದ ಪ್ರಕರಣ: ತಡೆ ಆದೇಶ ವಿಸ್ತರಣೆ

**ಬೆಂಗಳೂರು:** 'ಪರವಾನಗಿ ಪಡೆಯದೆ ಅಕ್ರಮ ಗಣಿಗಾರಿಕೆ ನಡೆಸಿದ ಹಾಗೂ ಸ್ಫೋಟಕ ವಸ್ತುಗಳನ್ನು ದಾಸ್ತಾನು ಮಾಡಿದ್ದ ವ್ಯಕ್ತಿಯ ಬಂಧನವನ್ನು ಖಂಡಿಸಿ ಪೊಲೀಸ್ ಠಾಣೆ ಮುಂದೆ ಪ್ರತಿಭಟಿಸಿ, ಅವಾಚ್ಯ ಶಬ್ದಗಳಿಂದ ನಿಂದಿಸಿದ ಹಾಗೂ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ' ಎಂಬ ಆರೋಪದಡಿ ಬೆಳ್ತಂಗಡಿ ಕ್ಷೇತ್ರದ ಬಿಜೆಪಿ ಶಾಸಕ ಹರೀಶ್ ಪೂಂಜ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣಕ್ಕೆ ಈ ಹಿಂದೆ ನೀಡಲಾಗಿರುವ ಮಧ್ಯಂತರ ತಡೆ ಆದೇಶವನ್ನು ಹೈಕೋರ್ಟ್ ಪುನಃ ವಿಸ್ತರಿಸಿದೆ.



ವಕೀಲರ ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ ವಿಚಾರಣೆಯನ್ನು ಸೆಪ್ಟೆಂಬರ್ 5ಕ್ಕೆ ಮುಂದೂಡಿತು. ಅಂತೆಯೇ, ವಿಚಾರಣೆಗೆ ಖುದ್ದು ಹಾಜರಾತಿಯಿಂದ ಅರ್ಜಿದಾರರಿಗೆ ವಿನಾಯಿತಿ ನೀಡಿ ಜುಲೈ 10ರಂದು ಹೊರಡಿಸಿದ್ದ ಮಧ್ಯಂತರ ಆದೇಶವನ್ನು ವಿಸ್ತರಿಸಿತು.

## ನಗರದಲ್ಲಿ ಇಂದು

**'ಸಮರ್ಥ ಭಾರತಕ್ಕಾಗಿ ಸಮಗ್ರ ಶಿಕ್ಷಣ ನೀತಿ' ಕುರಿತ ರಾಷ್ಟ್ರೀಯ ವಿಚಾರಸಂಕಿರಣ:** ಉದ್ಘಾಟನೆ: ಶೈಲೇಶ್ ನಾಯಕ್, ಗಣೇಶನ್ ಕಣ್ಣಬೀರನ್, ಅಭಯ್ ಜೆ. ಭಟ್ಟಿ, ತೇಜಸ್ವಿ ವೆಂಕಪ್ಪ ಕಟ್ಟಿಮನಿ, ಎಸ್.ಸಿ. ಶರ್ಮಾ, ಐನ್–ಉಲ್–ಹಸನ್, ಗುಂಟಾ ಲಕ್ಷ್ಮಣ್, ಆಯೋಜನೆ: ಅಖಿಲ ಭಾರತೀಯ ಶೈಕ್ಷಿಕ ಮಹಾಸಂಘ, ಅಲಯನ್ಸ್ ವಿಶ್ವವಿದ್ಯಾಲಯ, ಸ್ಥಳ: ಜೆಎನ್ ಟಾಟಾ ಸಭಾಂಗಣ, ಐಐಎಸ್‌ಸಿ, ಬೆಳಿಗ್ಗೆ 9.30

**ಹೊಸ ಕಟ್ಟಡದ ಉದ್ಘಾಟನೆ:** ಅತಿಥಿಗಳು: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ರವಿ ಸುಬ್ರಮಣ್ಯ, ತೇಜಸ್ವಿ ಸೂರ್ಯ, ಉಪಸ್ಥಿತಿ: ಬಿ.ಪಿ. ಸೀತಾ, ಎಂ. ನರಸಿಂಹನ್, ಆಯೋಜನೆ ಮತ್ತು ಸ್ಥಳ: ಜ್ಯೋತಿ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಆಂಡ್ ಮ್ಯಾನೇಜ್‌ಮೆಂಟ್, ತಾತಗುಣಿ, ಕನಕಪುರ ರಸ್ತೆ, ಬೆಳಿಗ್ಗೆ 9.45

**'ವಿರಿಂಚಿ-2024' ಜ್ಞಾನ ಆಕ್ಷದ ವಿತರಣ:** ಅಧ್ಯಕ್ಷತೆ: ಎಂ.ಆರ್. ದೊರೆಸ್ವಾಮಿ, ಅತಿಥಿ: ಶೈಲಶ್ರೀ ಹರಿದಾಸ್, ಆಯೋಜನೆ ಮತ್ತು ಸ್ಥಳ: ಶಿವಾನಿ ವಿದ್ಯಾ ಕಾಲೇಜು, ಹನುಮಂತನಗರ ಕ್ಯಾಂಪಸ್ ಆವರಣ, ಬೆಳಿಗ್ಗೆ 10

**ಜಯರಾಮ್ ಕೃಷ್ಣನ್ ಅವರ ಏಕವ್ಯಕ್ತಿ ಕಲಾಕೃತಿಗಳ ಪ್ರದರ್ಶನ:** ಉದ್ಘಾಟನೆ: ಎಸ್.ಆರ್. ವಿಶ್ವನಾಥ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರ ಕೃಪಾ ರಸ್ತೆ, ಬೆಳಿಗ್ಗೆ 11

**ಭರತನಾಟ್ಯ ರಂಗಪ್ರವೇಶ:** ಪ್ರಸ್ತುತಿ: ಖುಷಿ ದೇವರಾಜ್, ಆಯೋಜನೆ: ನವಚೇತನ ನೃತ್ಯಕಲಾ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 2

**ಸಂಯುಕ್ತ ಸಹಕಾರಿಯ ಪ್ರಕಟಣೆಗಳ, ಗಣ್ಯ ಲೇಖಕರ ಪುಸ್ತಕಗಳ ವಿತರಣೆ:** ಉದ್ಘಾಟನೆ: ಕೆ.ಎನ್. ರಾಜಣ್ಣ, ಅತಿಥಿ: ಅಜಯ್ ನಾಗಭೂಷಣ್ ಎಂ.ಎನ್., ಅಧ್ಯಕ್ಷತೆ: ಜಿ. ನಂಜನಗೌಡ, ಯಶವಂತ್ ಡೋಂಗ್ರೆ ಅವರ 'ಆಟೊನೊಮಿ, ಗವರ್ನನ್ಸ್ ಆಂಡ್ ಎಂಪವರ್‌ಮೆಂಟ್ ಸ್ಟಡಿ ಆಫ್ ಸೌಹಾರ್ದ ಕೋ-ಆಪರೇಟಿವ್' ಪುಸ್ತಕ ಬಿಡುಗಡೆ: ಎಚ್.ಕೆ. ಪಾಟೀಲ, ಆಯೋಜನೆ: ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ, ಸ್ಥಳ: ಪ್ರಿನ್ಸ್ ಗಾಲ್ಫ್, ಗೇಟ್ ಸಂಖ್ಯೆ-9, ಅರಮನೆ ಮೈದಾನ, ಬಳ್ಳಾರಿ ರಸ್ತೆ, ಮಧ್ಯಾಹ್ನ 2.30

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಮಗಮ ಸಂಸ್ಥಾಪನ ದಿನಾಚರಣೆ:** ಅತಿಥಿಗಳು: ರಾಮಲಿಂಗಾರೆಡ್ಡಿ, ಸ್ಥಳ: ಬೆಂಗಳೂರು ಕೇಂದ್ರ ವಿಭಾಗದ ಘಟಕ 2ರ ಆವರಣ, ಶಾಂತಿನಗರ, ಮಧ್ಯಾಹ್ನ 3.30

**'ಭೂಮಿ ಮತ್ತು ಮನುಷ್ಯರು' ಸಂವಾದ:** ವಿಶಾಲಾಕ್ಷಿ, ಸಾಹುಕಾರ್ ಅಟ್ಟು, ಅಶಿಕ್ ಮುಲ್ಕಿ, ಸ್ಥಳ: ವರ್ತಾ ಆರ್ಟ್ ಗ್ಯಾಲರಿ, ರವೀಂದ್ರ ಕಲಾಕ್ಷೇತ್ರದ ಆವರಣ, ಜೆ.ಸಿ. ರಸ್ತೆ, ಸಂಜೆ 5



**ರಾಷ್ಟ್ರೀಯ ಬಾಹ್ಯಾಕಾಶ ದಿನ:** ಅತಿಥಿ: ಆರ್. ಉಮಾ ಮಹೇಶ್ವರನ್, ಆಯೋಜನೆ ಮತ್ತು ಸ್ಥಳ: ಜೆನೆಸ್ಸ್ ಸ್ಕೂಲ್, ಕೋರಮಂಗಲ, ಬೆಳಿಗ್ಗೆ 9

**ರಾಷ್ಟ್ರೀಯ ಬಾಹ್ಯಾಕಾಶ ದಿನ:** ಅತಿಥಿಗಳು: ರಾಜೇಶ್ ಎನ್.ಎಲ್., ರಾಜ್ ಕುಮಾರ್ ಖತ್ರಿ, ಗಣೇಶ್ ರಾಜ್, ಅಧ್ಯಕ್ಷತೆ: ಎಸ್.ಎಂ. ಜಯಕರ್, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ ಸ್ಪೇಸ್ ಪೋರಂ, ಸ್ಥಳ: ಜಿಯೋಗ್ರಫಿ ವಿಭಾಗದ ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯದ ಆವರಣ, ಜ್ಞಾನಭಾರತಿ, ಬೆಳಿಗ್ಗೆ 10.15

**ರಾಷ್ಟ್ರೀಯ ಅಂತರಿಕ್ಷ ದಿನ:** ಚಿತ್ರಕಲೆ, ಪಿಕ್ ಆಂಡ್ ಸ್ಪಿಕ್, ಜಿಗ್–ಸಾ ಪಜಲ್ ಅಸ್ಸೆಂಬ್ಲಿ, ವಾಕ್ ಇನ್ ಕ್ವಿಜ್: ಉದ್ಘಾಟನೆ: ಎನ್.ಎಸ್. ಬೋಸರಾಜು, ಆಯೋಜನೆ ಮತ್ತು ಸ್ಥಳ: ಜವಾಹರಲಾಲ್ ನೆಹರು ತಾರಾಲಯ, ಹೈಗ್ರೌಂಡ್, ಬೆಳಿಗ್ಗೆ 11

**ರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆ ಉದ್ಘಾಟನೆ:** ಎಂ. ವೆಂಕಟರಾವ್, ಅತಿಥಿಗಳು: ವೆಂಕಟೇಶಮೂರ್ತಿ, ಭಾರತಿ ರಾವ್, ಅಶೋಕ ಸುಬ್ಬಿ: ಈ. ಬಸವರಾಜು, ಆಯೋಜನೆ: ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ಸ್ಥಳ: ಡಾ.ಎಚ್. ನರಸಿಂಹಯ್ಯ ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 11

**ಭರತನಾಟ್ಯ ರಂಗಪ್ರವೇಶ:** ಪ್ರಸ್ತುತಿ: ಭಾವನಾ ಧೃತಿ, ಅತಿಥಿಗಳು: ಎ.ಎಸ್. ಪೊನ್ನಣ್ಣ, ಭಾವನಾ ರಾಮಣ್ಣ, ಅನನ್ಯಾ ಉಪೇಂದ್ರ, ಕೆ. ಹರೀಶ್, ಆಯೋಜನೆ: ಸಾಧನ ಡಾನ್ಸ್ ಸೆಂಟರ್, ಸ್ಥಳ: ಯುವಪಥ ಸಭಾಂಗಣ, ಜಯನಗರ, ಸಂಜೆ 5

**ಬೆಂಗಳೂರು ಪೌರಾಣಿಕ ಯಕ್ಷ ಹಬ್ಬ:** 'ಶ್ರೀಮತಿ ಪರಿಣಯ–ಅಗ್ರ ಪೂಜೆ' ಯಕ್ಷಗಾನ ಪ್ರದರ್ಶನ: ಆಯೋಜನೆ: ಮಹಾಗಣಪತಿ ಯಕ್ಷಗಾನ ಮಂಡಳಿ ನಿಡ್ಲೆ, ಸ್ಥಳ: ಬ್ರಾಹ್ಮಣ ಸೌಹಾರ್ದ ಭವನ, ಎಚ್‌ಬಿಆರ್ ಲೇಔಟ್, ಸಂಜೆ 5.30

ವಿವಿಧ ಇಲಾಖೆಗಳಿಗೆ ಜವಾಬ್ದಾರಿ ವಹಿಸಲು ತೀರ್ಮಾನ; ಸಭೆ ಬಳಿಕ ಕಾನೂನು ಸಚಿವ ಎಚ್‌.ಕೆ.ಪಾಟೀಲ ಹೇಳಿಕೆ

# ಬಾಲ ಗರ್ಭಿಣಿ ಪ್ರಕರಣ ತಡೆಗೆ ಸರ್ಕಾರ ಕ್ರಮ

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ಬಾಲಕಿಯರು ಗರ್ಭಧರಿಸುವುದನ್ನು ತಡೆಗಟ್ಟಲು ವಿವಿಧ ಇಲಾಖೆಗಳಿಗೆ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿಗದಿಪಡಿಸಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ ಎಂದು ಕಾನೂನು ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

ಬಾಲ ಗರ್ಭಿಣಿಯರ ಪ್ರಕರಣಗಳನ್ನು ತಡೆಗಟ್ಟಲು ಕೈಗೊಳ್ಳಬೇಕಿರುವ ಕ್ರಮ ಕೈಗೊಳ್ಳಲು ಸಂಬಂಧ ಚರ್ಚೆ ನಡೆಸಲಾಯಿತು. ಇದಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳಿಗೆ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿಗದಿಪಡಿಸಬೇಕು ಎಂಬ ಅಭಿಪ್ರಾಯ ವ್ಯಕ್ತವಾಯಿತು ಎಂದರು.

18 ವರ್ಷಗಳ ಒಳಗಿನ ಬಾಲಕಿಯರು ಗರ್ಭಧರಿಸಿದಾಗ ಅವರ ರಕ್ಷಣೆ, ವೈದ್ಯಕೀಯ ನೆರವು ಮತ್ತು ಮನೋಸ್ಥೈರ್ಯ ಹೆಚ್ಚಿಸಲು ಮತ್ತು ಕಾನೂನಾತ್ಮಕ ಕ್ರಮ ಜರುಗಿಸುವ ನಿಟ್ಟಿನಲ್ಲಿ ವಿವಿಧ ಇಲಾಖೆಗಳ ಮಧ್ಯೆ ಸಮನ್ವಯದ ಅಗತ್ಯವೂ ಇದೆ. ಇದಕ್ಕಾಗಿ ನಿಯಮಾವಳಿ ರೂಪಿಸಲಾಗುವುದು ಎಂದು ಹೇಳಿದರು.

**ಗ್ರಾಮಗಳಿಗೆ ಸೌರ ಬೀದಿ ದೀಪ:** ಕರ್ನಾಟಕ ಸರ್ಕಾರದ 'ಹೊಂಬೆಳಕು' ಯೋಜನೆಯಡಿ 50 ಗ್ರಾಮಗಳಲ್ಲಿ ₹25 ಕೋಟಿ ವೆಚ್ಚದಲ್ಲಿ ಸೌರ ಬೀದಿ ದೀಪ ಅಳವಡಿಸಲು ಒಪ್ಪಿಗೆ ನೀಡಲಾಗಿದೆ. ಈ ವರ್ಷ ₹10 ಕೋಟಿ ವೆಚ್ಚದಲ್ಲಿ ಯೋಜನೆ ಅನುಷ್ಠಾನಗೊಳಿಸಲಾಗುವುದು ಎಂದರು.

**ಕ್ರಯಪತ್ರ ಕಾಲಾವಧಿ ಇಳಿಕೆ:** ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ವತಿಯಿಂದ ಲೀಸ್ ಕಂ ಸೇಲ್ ಆಧಾರದಲ್ಲಿ ಹಂಚಿಕೆಯಾದ ಮಳಿಗೆ ಮತ್ತು ನಿವೇಶನಗಳ ಕ್ರಯಪತ್ರ ನೀಡುವ ಕನಿಷ್ಠ ಕಾಲಾವಧಿ 10 ವರ್ಷಗಳಿಂದ 2 ವರ್ಷಗಳಿಗೆ ಇಳಿಸಲು ಒಪ್ಪಿಗೆ ನೀಡಲಾಗಿದೆ ಎಂದು ಹೇಳಿದರು.

**ಹಣಕಾಸು ಆಯೋಗಕ್ಕೆ ಜ್ಞಾಪನ ಪತ್ರ:** 16 ನೇ ಕೇಂದ್ರ ಹಣಕಾಸು ಆಯೋಗಕ್ಕೆ ಜ್ಞಾಪನ ಪತ್ರವನ್ನು ಸಲ್ಲಿಸಲು ತೀರ್ಮಾನಿಸಲಾಗಿದ್ದು, ಜ್ಞಾಪನ ಪತ್ರವನ್ನು ಅಂತಿಮಗೊಳಿಸಲು ಮುಖ್ಯಮಂತ್ರಿ ಅವರಿಗೆ ಅಧಿಕಾರ ನೀಡಲಾಗಿದೆ ಎಂದು ಪಾಟೀಲ ತಿಳಿಸಿದರು.

### ಪ್ರಮುಖ ತೀರ್ಮಾನಗಳು

- ₹85 ಕೋಟಿ ವೆಚ್ಚದಲ್ಲಿ 592 ಅಂಗನವಾಡಿ ಕೇಂದ್ರಗಳು ನಿರ್ಮಾಣ
- ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆ ಮತ್ತು ಕಾಲೇಜುಗಳ ವಿದ್ಯಾರ್ಥಿಗಳಿಗೆ ಆಹಾರ ಪೂರೈಕೆ ಮಾಡಲು ಜಿಲ್ಲಾವಾರು ಟೆಂಡರ್ ಆಹ್ವಾನಿಸಲು ಒಪ್ಪಿಗೆ
- ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕಿನ ಚಿಕ್ಕಲಪರ್ವಿ ಗ್ರಾಮದ ಹತ್ತಿರ ತುಂಗಭದ್ರಾ ನದಿಗೆ ಅಡ್ಡಲಾಗಿ ₹397.50 ಕೋಟಿ ವೆಚ್ಚದಲ್ಲಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಿಸಲು ಒಪ್ಪಿಗೆ
- ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಕಾರ್ಯಕ್ಷಮತೆ ಹೆಚ್ಚಿಸುವ ಮತ್ತು ವೇಗಗೊಳಿಸುವ ಕೇಂದ್ರ ಸರ್ಕಾರದ (ಆರ್‌ಎಎಂಪಿ) ಕಾರ್ಯಕ್ರಮವನ್ನು ಜಾರಿಗೊಳಿಸಲು ಅನುಮೋದನೆ. ಇದರಲ್ಲಿ ಕೇಂದ್ರದ ಪಾಲು ₹118.72 ಕೋಟಿ ಮತ್ತು ರಾಜ್ಯದ ಪಾಲು ₹147.87 ಕೋಟಿ
- ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಜಂಟಿ ನಿರ್ದೇಶಕರ 5 ಹುದ್ದೆಗಳನ್ನು ಇಲಾಖೆಯ ಹೆಚ್ಚುವರಿ ನಿರ್ದೇಶಕರೆಂದು ಉನ್ನತೀಕರಿಸಿ ಹೆಚ್ಚುವರಿ ನಿರ್ದೇಶಕರ ವೃಂದ ಬಲವನ್ನು 13 ರಿಂದ 18 ಕ್ಕೆ ಹೆಚ್ಚಿಸಲು ಕರ್ನಾಟಕ ಕೈಗಾರಿಕೆ ಮತ್ತು ವಾಣಿಜ್ಯ ಸೇವೆ(ತಿದ್ದುಪಡಿ) ನಿಯಮಗಳು 2024ಕ್ಕೆ ಅನುಮೋದನೆ

### ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಬಡ್ತಿ; ತಿದ್ದುಪಡಿಗೆ ಸಮ್ಮತಿ

**ಬೆಂಗಳೂರು:** ಪ್ರಾಥಮಿಕ ಶಾಲೆಗಳ ಪದವೀಧರ ಶಿಕ್ಷಕರ ಬಡ್ತಿ ತಾರತಮ್ಯ ಹೋಗಲಾಡಿಸಲು ನೇಮಕಾತಿ ನಿಯಮಗಳ ತಿದ್ದುಪಡಿಗೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

2016ಕ್ಕಿಂತ ಮೊದಲು ನೇಮಕವಾದ ಶಿಕ್ಷಕರಿಗೆ 2017ರ ನಿಯಮ ಅನ್ವಯವಾಗಬಾರದು. 1ರಿಂದ 8ನೇ ತರಗತಿಯ ಪ್ರಾಥಮಿಕ ಶಾಲೆಗಳಿಗೆ ನೇಮಕವಾದ ಶಿಕ್ಷಕರನ್ನು 1ರಿಂದ 5ನೇ ತರಗತಿಗೆ ಸೀಮಿತಗೊಳಿಸುವ ಆದೇಶವನ್ನು ಹಿಂಪಡೆಯಬೇಕು. ಪದವಿ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ಪದವೀಧರ ಪ್ರಾಥಮಿಕ ಶಿಕ್ಷಕರು (ಜಿಪಿಟಿ) ಎಂದು ಪರಿಗಣಿಸಬೇಕು. ಅದಕ್ಕಾಗಿ ಬಡ್ತಿ, ವರ್ಗಾವಣೆಗೆ ಅನ್ವಯವಾಗುವ ವೃಂದ ಮತ್ತು ನೇಮಕಾತಿ ನಿಯಮ-2017ಕ್ಕೆ ತಿದ್ದುಪಡಿ ತಂದು ನ್ಯಾಯ ದೊರಕಿಸಿಕೊಡಬೇಕು ಎಂಬ ಬೇಡಿಕೆ ಇಟ್ಟಿದ್ದರು.

ಅಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು, ತಾರತಮ್ಯ ನಿವಾರಿಸಿ, ಬಡ್ತಿ ನೀಡುವ ಭರವಸೆ ನೀಡಿದ್ದರು. ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಸಹ ಪದವೀಧರ ಪ್ರಾಥಮಿಕ ಶಿಕ್ಷಕರ ವೃಂದಕ್ಕೆ ಬಡ್ತಿ ನೀಡಲು ಆದೇಶಿಸಿತ್ತು. ಈಗ ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ತಾಂತ್ರಿಕ ಶಿಕ್ಷಣ ಇಲಾಖೆ) (ವೃಂದ ಮತ್ತು ನೇಮಕಾತಿ) ನಿಯಮಗಳು 2024ಕ್ಕೆ ಸಂಪುಟ ಸಭೆಯ ಅನುಮೋದನೆ ದೊರೆತಿದೆ.

ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕ ಹುದ್ದೆಗಳನ್ನು ಎಐಸಿಟಿಇ ವೇತನ ಶ್ರೇಣಿ ನಿಯಮಗಳ ಪ್ರಕಾರ ಭರ್ತಿ ಮಾಡಬೇಕು. 7ನೇ ವೇತನ ಶ್ರೇಣಿಯನ್ನು ಅಳವಡಿಸಿಕೊಳ್ಳಲು ಹೊಸ ವೃಂದ ಮತ್ತು ನೇಮಕಾತಿ ನಿಯಮಾವಳಿ ಜಾರಿ ಮಾಡಲು ಸಭೆ ಸಮ್ಮತಿಸಿದೆ.

## ಸುದ್ದಿ 2 ನಿಮಿಷ

### ಪೋಕ್ಸೊ: ಬಿಎಸ್‌ವೈ ಬಂಧನ ಬೇಡ– ಆದೇಶ ವಿಸ್ತರಣೆ

**ಬೆಂಗಳೂರು:** 'ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್‌.ಯಡಿಯೂರಪ್ಪ ವಿರುದ್ಧದ ಪೋಕ್ಸೊ ಪ್ರಕರಣದಲ್ಲಿ ಪೊಲೀಸರು ಅವರನ್ನು ಬಂಧಿಸಬಾರದು ಮತ್ತು ವಿಚಾರಣೆಗಾಗಿ ಅವರ ಖುದ್ದು ಹಾಜರಾತಿಗೆ ಒತ್ತಾಯಿಸಬಾರದು' ಎಂದು ತನ್ನ ಮಧ್ಯಂತರ ಆದೇಶವನ್ನು ಹೈಕೋರ್ಟ್ ಪುನಃ ವಿಸ್ತರಿಸಿದೆ.

ಪ್ರಕರಣ ರದ್ದುಪಡಿಸುವಂತೆ ಕೋರಿ ಬಿ.ಎಸ್‌.ಯಡಿಯೂರಪ್ಪ ಸಲ್ಲಿಸಿರುವ ರಿಟ್ ಅರ್ಜಿಯ ಮುದ್ದತ್ತು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಮುಂದೆ ಗುರುವಾರಕ್ಕೆ (ಆ.22) ನಿಗದಿಯಾಗಿತ್ತು.

ಆದರೆ, ದಿನದ ಕಾಸ್‌ಲಿಸ್ಟ್‌ನಲ್ಲಿ ಪ್ರಕರಣದ ಸಂಖ್ಯೆ ನಮೂದಾಗಿದ್ದ ಕಾರಣ ನ್ಯಾಯಪೀಠ, ಈ ಮನವಿಯನ್ನು ದಿನದ ಕಲಾಪದ ಕೊನೆಗೆ ಕೈಗೆತ್ತಿಕೊಂಡಿತಾದರೂ, 'ಈಗ ಸಂಜೆ 5 ಗಂಟೆಯಾಗಿರುವ ಕಾರಣ ವಾದ ಆಲಿಸಲು ಸಮಯಾವಕಾಶದ ಕೊರತೆ ಇದೆ' ಎಂಬ ಹಿನ್ನೆಲೆಯಲ್ಲಿ ವಿಚಾರಣೆಯನ್ನು ಇದೇ 30ಕ್ಕೆ ಮುಂದೂಡಿತು.



ಪ್ರಾಸಿಕ್ಯೂಷನ್ ಪರ ವಿಶೇಷ ಪ್ರಾಸಿಕ್ಯೂಟರ್ ಅಶೋಕ್ ಎನ್‌.ನಾಯಕ್, ಬಿ.ಎಸ್‌. ಯಡಿಯೂರಪ್ಪ ಪರ ಹೈಕೋರ್ಟ್ ವಕೀಲೆ ಸ್ವಾಮಿನಿ ಗಣೇಶ ಮೋಹನಂಬಾಳ್ ಹಾಗೂ ಸಂತ್ರಸ್ತ ಬಾಲಕಿಯ ಪರವಾಗಿ ಎಸ್‌. ಬಾಲನ್ ಹಾಜರಿದ್ದರು.

### ವೈದ್ಯಕೀಯ ಪ್ರವೇಶ ಆಯ್ಕೆ ವಿದ್ಯಾರ್ಥಿಗಳ ಪರದಾಟ

**ಬೆಂಗಳೂರು:** ವೈದ್ಯಕೀಯ, ದಂತ ವೈದ್ಯಕೀಯ, ಆಯುಷ್ ಕೋರ್ಸ್‌ಗಳ ಪ್ರವೇಶಕ್ಕೆ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಲು ಗುರುವಾರ ಬೆಳಿಗ್ಗೆ 10ರ ನಂತರ ಅವಕಾಶ ನಿರಾಕರಿಸಿದ್ದರಿಂದ ನೂರಾರು ವಿದ್ಯಾರ್ಥಿಗಳು ಆತಂಕಕ್ಕೆ ಒಳಗಾದರು.

ಕೋರ್ಸ್‌ಗಳು ಹಾಗೂ ಕಾಲೇಜುಗಳ ಆಯ್ಕೆ ದಾಖಲಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಆ.22ರ ಬೆಳಿಗ್ಗೆ 10ರವರೆಗೆ ಅವಕಾಶ ನೀಡಿತ್ತು. ಇದೇ ಮೊದಲ ಬಾರಿಗೆ ಅಭ್ಯರ್ಥಿಗಳ ನೋಂದಾಯಿತ ಮೊಬೈಲ್‌ಗಳಿಗೆ ವಾಟ್ಸ್ ಆ್ಯಪ್ ಸಂದೇಶ ರವಾನಿಸುವ ವ್ಯವಸ್ಥೆ ಆರಂಭಿಸಲಾಗಿತ್ತು. ಆದರೆ, ಹಲವರಿಗೆ ಬೆಳಿಗ್ಗೆ 10ಕ್ಕೆ ಸಮಯ ಕೊನೆಯಾಗುವ ಮಾಹಿತಿ ಲಭ್ಯವಾಗಿರಲಿಲ್ಲ. ಹಾಗಾಗಿ, ವಿದ್ಯಾರ್ಥಿಗಳು ಹಾಗೂ ಅವರ ಜೊತೆಗೆ ಬಂದಿದ್ದ ಪೋಷಕರು ಪರದಾಡಿದರು.

'ಆ.20ರಿಂದ 22ರವರೆಗೆ ಅವಕಾಶ ನೀಡಲಾಗಿತ್ತು. ಸಾಮಾನ್ಯವಾಗಿ ಕೊನೆಯ ದಿನದ ಸಂಜೆ 5ರವರೆಗೂ ಕಚೇರಿ ಕಾರ್ಯನಿರ್ವಹಿಸುವ ಕಾರಣ ಬಹಳಷ್ಟು ವಿದ್ಯಾರ್ಥಿಗಳು 10 ಗಂಟೆಗೆ ಮಲ್ಲೇಶ್ವರ ಕೆಇಎ ಕಚೇರಿಗೆ ಬಂದೆವು. ಆದರೆ, ಬೆಳಿಗ್ಗೆ 10ಕ್ಕೆ ಕೊನೆಯಾಗಿದೆ ಎಂದು ಮಾಹಿತಿ ತಿಳಿದು ಆತಂಕಕ್ಕೆ ಒಳಗಾದೆವು. ವಿದ್ಯಾರ್ಥಿಗಳ ಅಹವಾಲು ಆಲಿಸಿದ ಕಾರ್ಯನಿರ್ವಾಹಕ ನಿರ್ದೇಶಕ ಎಚ್‌. ಪ್ರಸನ್ನ ಅವರು ಎಲ್ಲರಿಗೂ ಅವಕಾಶ ನೀಡಿದರು' ಎಂದು ವಿದ್ಯಾರ್ಥಿ ಪೋಷಕರಾದ ಅನಿಲ್‌ಕುಮಾರ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಆ.25ರ ರಾತ್ರಿ 8ಕ್ಕೆ ಎರಡನೇ ಅಣಕು ಸೀಟು ಹಂಚಿಕೆಯ ಫಲಿತಾಂಶ ಪ್ರಕಟಿಸಲಾಗುತ್ತದೆ. ನಂತರ ಆಗಸ್ಟ್ 27ರ ಬೆಳಿಗ್ಗೆ 11ರವರೆಗೆ ಇಚ್ಛೆಗಳನ್ನು ಬದಲಿಸಿಕೊಳ್ಳಬಹುದು. ಸೆ.1ರಂದು ಸಂಜೆ 6ಕ್ಕೆ ನೈಜ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಿಸಲಾಗುತ್ತದೆ. ಶುಲ್ಕದ ಮಾಹಿತಿ ಆಧರಿಸಿ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು ಕೆಇಎ ಹೇಳಿದೆ.

# 'ಬ್ಲ್ಯಾಕ್‌ಮೇಲ್‌ಗೆ ಹೆದರಿ ಚಂದ್ರಶೇಖರನ್ ಆತ್ಮಹತ್ಯೆ'

## ಆತ್ಮಹತ್ಯೆ ಪ್ರಕರಣ: ಪ್ರಾಥಮಿಕ ಆರೋಪ ಪಟ್ಟಿಯಲ್ಲಿ ಬಿ.ನಾಗೇಂದ್ರ, ದದ್ದಲ್; ಸುಚಿಸ್ಮಿತಾ ಹೆಸರಿಲ್ಲ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕ ವಾಲ್ಮೀಕಿ ಅಭಿವೃದ್ಧಿ ನಿಗಮದ ಲೆಕ್ಕಾಧೀಕ್ಷಕರಾಗಿದ್ದ ಪಿ.ಚಂದ್ರಶೇಖರನ್ ಅವರ ಆತ್ಮಹತ್ಯೆ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ವಿಶೇಷ ತನಿಖಾ ದಳವು (ಎಸ್‌ಐಟಿ) ಶಿವಮೊಗ್ಗದ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಗುರುವಾರ ಪ್ರಾಥಮಿಕ ಆರೋಪ ಪಟ್ಟಿಯನ್ನು ಸಲ್ಲಿಸಿದ್ದು, 'ಚಂದ್ರಶೇಖರನ್ ಆತ್ಮಹತ್ಯೆಗೆ ನಿಗಮದ ಇಬ್ಬರು ಅಧಿಕಾರಿಗಳು ಮಾನಸಿಕವಾಗಿ ಒತ್ತಡ ಹೇರಿ ಬ್ಲ್ಯಾಕ್‌ಮೇಲ್ ಮಾಡಿದ್ದೇ ಕಾರಣ' ಎಂದು ಉಲ್ಲೇಖಿಸಿದೆ.

'₹94.73 ಕೋಟಿ ಹಣ ವರ್ಗಾವಣೆ ಪ್ರಕರಣದ ಪ್ರಮುಖ ಆರೋಪಿಗಳಾದ ನಿಗಮದ ಮಾಜಿ ವ್ಯವಸ್ಥಾಪಕ ನಿರ್ದೇಶಕ ಜೆ.ಜಿ.ಪದ್ಮನಾಭ್ ಹಾಗೂ ಲೆಕ್ಕಾಧೀಕ್ಷಕ ಪರುಶುರಾಮ ದುರ್ಗಣ್ಣನವರ್ ಅವರು ನೀಡಿದ ಕಿರುಕುಳ, ಒತ್ತಡದಿಂದಲೇ ಚಂದ್ರಶೇಖರನ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಡೀ ಪ್ರಕರಣದ ಹೊಣೆಯನ್ನು ಹೊರಿಸುವುದಾಗಿಯೂ ಬ್ಲ್ಯಾಕ್‌ಮೇಲ್ ಮಾಡಿದ್ದೇ ಅವರು ಆತ್ಮಹತ್ಯೆಯಂತಹ ನಿರ್ಧಾರ ಕೈಗೊಳ್ಳಲು ಕಾರಣ ಎಂದು ಆರೋಪ ಪಟ್ಟಿಯಲ್ಲಿ ಹೇಳಲಾಗಿದೆ. ಪದ್ಮನಾಭ್, ಪರುಶುರಾಮ್ ಅವರನ್ನು ಮಾತ್ರ ಈ ಪ್ರಕರಣದಲ್ಲಿ ಹೊಣೆ ಮಾಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

**ಪ್ರಮುಖರ ಹೆಸರಿಲ್ಲ:** ಎಂ.ಜಿ. ರಸ್ತೆಯ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಪ್ರಧಾನ ವ್ಯವಸ್ಥಾಪಕಿ ಸುಚಿಸ್ಮಿತಾ ರೌಲ್ ಅವರ ಹೆಸರು ಶಿವಮೊಗ್ಗ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಎಫ್‌ಐಆರ್‌ನಲ್ಲಿ ಇತ್ತು. ಅಲ್ಲದೇ ಎಸ್‌ಐಟಿ ಈ ಹಿಂದೆ ನ್ಯಾಯಾಲಯಕ್ಕೆ ಸಲ್ಲಿಸಿದ್ದ ರಿಮ್ಯಾಂಡ್ ಅರ್ಜಿಯಲ್ಲೂ ಸುಚಿಸ್ಮಿತಾ ಅವರನ್ನು ಆರನೇ ಆರೋಪಿ ಮಾಡಲಾಗಿತ್ತು. ಆದರೆ, ಈಗ ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಾಥಮಿಕ ಆರೋಪ ಪಟ್ಟಿಯಲ್ಲಿ ಅವರ ಹೆಸರನ್ನು ಕೈಬಿಡಲಾಗಿದೆ.

'ಮಾಜಿ ಸಚಿವ ನಾಗೇಂದ್ರ, ಅವರ ಆಪ್ತ ನೆಕ್ಕಂಟಿ ನಾಗರಾಜ್, ಅವರ ಸಂಬಂಧಿ ನಾಗೇಶ್ವರ ರಾವ್ ಹಾಗೂ ನಿಗಮದ ಅಧ್ಯಕ್ಷರೂ ಆಗಿರುವ ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕ ಬಸನಗೌಡ ದದ್ದಲ್ ಅವರ ಹೆಸರನ್ನೂ ಸಹ ಉಲ್ಲೇಖಿಸಿಲ್ಲ' ಎಂದು ಮೂಲಗಳು ಹೇಳಿವೆ.

**ಮರಣಪತ್ರದಲ್ಲಿ ಮೂವರ ಹೆಸರು:** 'ಚಂದ್ರಶೇಖರನ್ ಆತ್ಮಹತ್ಯೆಗೂ ಮುನ್ನ ಬರೆದಿದ್ದ ಮರಣಪತ್ರದಲ್ಲೂ ಪದ್ಮನಾಭ್, ಪರುಶುರಾಮ ದುರ್ಗಣ್ಣನವರ್, ಸುಚಿಸ್ಮಿತಾ ರೌಲ್ ಅವರ ಹೆಸರಿತ್ತು. ನಿಗಮದ ₹85 ಕೋಟಿಯನ್ನು ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿದ್ದಾರೆ. ಹಣ ವರ್ಗಾವಣೆ ಮಾಡಿಕೊಡುವಂತೆ ಕರ್ತವ್ಯದ ವೇಳೆ ಒತ್ತಡ ಹೇರುತ್ತಿದ್ದರು' ಎಂದು ಮರಣಪತ್ರದಲ್ಲಿ ಉಲ್ಲೇಖಿಸಿದ್ದರು.

'ಪದ್ಮನಾಭ್ ಹಾಗೂ ಪರಶುರಾಮ್ ಅವರೇ ಪ್ರಕರಣ ಸೂತ್ರಧಾರರು. ವಸಂತನಗರದಲ್ಲಿದ್ದ ನಿಗಮದ ಬ್ಯಾಂಕ್ ಖಾತೆಯನ್ನು ಎಂ.ಜಿ. ರಸ್ತೆಯಲ್ಲಿರುವ ಬ್ಯಾಂಕ್ ಶಾಖೆಗೆ ವರ್ಗಾವಣೆ ಮಾಡಿಸಿದ್ದರು. ಅಲ್ಲದೇ ನಕಲಿ ಖಾತೆಗಳನ್ನು ತೆರೆದು ಹಣ ವರ್ಗಾವಣೆ ಮಾಡಿಸಿಕೊಂಡಿದ್ದರು. ಆಗ ಪಿ.ಚಂದ್ರಶೇಖರನ್‌ಗೆ ಅಕ್ರಮ ನಡೆದಿರುವುದು ಗೊತ್ತಾಗಿತ್ತು. ಬ್ಯಾಂಕ್‌ಗೆ ಪತ್ರ ಬರೆದು ಮಾಹಿತಿ ನೀಡುವಂತೆ ಕೋರಿದ್ದರು. ಆದರೆ, ಬ್ಯಾಂಕ್ ಅಧಿಕಾರಿಗಳು ಪ್ರತಿಕ್ರಿಯಿಸಿರಲಿಲ್ಲ. ಚಂದ್ರಶೇಖರನ್ ಅವರೇ ಬ್ಯಾಂಕ್‌ಗೆ ತೆರಳಿ ದಾಖಲೆ ನೀಡುವಂತೆ ಅಧಿಕಾರಿಗಳ ಬಳಿ ಮನವಿ ಮಾಡಿದ್ದರು. ಈ ವಿಚಾರ ತಿಳಿದ ಆರೋಪಿಗಳು, ಚಂದ್ರಶೇಖರನ್ ಅವರನ್ನು ಕರೆಸಿಕೊಂಡು ಅವಾಚ್ಯ ಶಬ್ಧಗಳಿಂದ ನಿಂದಿಸಿದ್ದರು. ಇದಕ್ಕೆ ಜಗ್ಗದ ಚಂದ್ರಶೇಖರನ್ ಅವರು ಇಲಾಖೆ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಿದ್ದರು' ಎಂದು ಮೂಲಗಳು ಹೇಳಿವೆ.

### ಮುಖ್ಯಾಂಶಗಳು

- 300 ಪುಟಗಳ ಆರೋಪ ಪಟ್ಟಿ
- 35 ಮಂದಿ ಸಾಕ್ಷಿಗಳ ಹೇಳಿಕೆ
- 67 ಸಾಕ್ಷ್ಯಗಳ ಸಂಗ್ರಹ

### 'ಪತಿ ವಿರುದ್ಧ ಆರೋಪ, ಹೈಕೋರ್ಟ್‌ನಲ್ಲಿ ಪ್ರಶ್ನೆ ಮಾಡುವೆ'

**ಶಿವಮೊಗ್ಗ:** 'ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ಪತಿಯನ್ನು ತಪ್ಪಿತಸ್ಥರನ್ನಾಗಿಸಿ ವಿಶೇಷ ತನಿಖಾ ತಂಡ (ಎಸ್‌ಐಟಿ) ಆರೋಪ ಪಟ್ಟಿ ಸಿದ್ಧಪಡಿಸಿರುವ ಮಾಹಿತಿ ಇದೆ. ಅದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸುವೆ' ಎಂದು ಆತ್ಮಹತ್ಯೆ ಮಾಡಿಕೊಂಡ ನಿಗಮದ ವ್ಯವಸ್ಥಾಪಕ ಚಂದ್ರಶೇಖರ್ ಅವರ ಪತ್ನಿ ಕವಿತಾ ತಿಳಿಸಿದರು.

ಪ್ರಕರಣದ ತನಿಖೆ ನಡೆಸಿರುವ ವಿಶೇಷ ತಂಡ, 300 ಪುಟಗಳ ಆರೋಪಪಟ್ಟಿಯನ್ನು ಶಿವಮೊಗ್ಗದ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಸಲ್ಲಿಸಿರುವ ಹಿನ್ನೆಲೆಯಲ್ಲಿ ಕವಿತಾ ನಗರದಲ್ಲಿ ಗುರುವಾರ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದರು.

'ಪತಿ ಚಂದ್ರಶೇಖರ್ ನಿಗಮದ ಹಣ ತಿಂದಿಲ್ಲ. ಹಣ ತಿಂದಿದ್ದರೆ ಏಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು. ಅವರ ಸಾವಿನ ನಂತರ ಕುಟುಂಬದವರು ಜೀವನ ನಡೆಸಲು ಪರದಾಡುತ್ತಿದ್ದೇವೆ. ತಾಯಿ ಮನೆಯಲ್ಲಿ ವಾಸವಿದ್ದೇವೆ' ಎಂದು ಹೇಳಿದರು.

'ಸರ್ಕಾರ ನ್ಯಾಯಯುತವಾಗಿ ತನಿಖೆ ನಡೆಸಲಿ. ತನಿಖೆಯನ್ನು ಸಿಬಿಐಗೆ ವಹಿಸಲಿ. ನಾವೇ ಕೇಸ್ ಕೊಟ್ಟಿದ್ದೇವೆ. ಅವರು ನಮ್ಮ ಮನೆಯವರ ಮೇಲೆ (ಪತಿ) ಆರೋಪ ಹೊರಿಸುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

**ಸರ್ಕಾರ ನೆರವು ಕೊಟ್ಟಿಲ್ಲ:** 'ಪತಿ ಆತ್ಮಹತ್ಯೆ ಹಿನ್ನೆಲೆಯಲ್ಲಿ ಕುಟುಂಬಕ್ಕೆ ನೆರವು ನೀಡುವುದಾಗಿ ರಾಜ್ಯ ಸರ್ಕಾರ ಹೇಳಿತ್ತು. ಈವರೆಗೂ ಯಾವುದೇ ಪರಿಹಾರ ನೀಡಿಲ್ಲ. ಪತಿ ಸತ್ತಾಗ ಎಲ್ಲರೂ ಬಂದು ಮಾತನಾಡಿಸಿಕೊಂಡು ಹೋದರು. ಆದರೆ ಮತ್ತೆ ಯಾರು ನಮ್ಮ ಮನೆ ಕಡೆ ಬಂದು ಪರಿಹಾರ ನೀಡಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

### ಹೊರರಾಜ್ಯಕ್ಕೆ ಕರೆದೊಯ್ದಿದ್ದ ಆರೋಪಿಗಳು

'ಅಕ್ರಮಕ್ಕೆ ಸಹಕಾರ ನೀಡುವುದಕ್ಕೆ ಒಪ್ಪಿಸಲು ಚಂದ್ರಶೇಖರನ್ ಅವರನ್ನು ಇಬ್ಬರು ಆರೋಪಿಗಳು ಗೋವಾಕ್ಕೂ ಕರೆದೊಯ್ದಿದ್ದರು. ಕಮಿಷನ್‌ನ ಆಮಿಷವೊಡ್ಡಿದ್ದರು. ಈ ವಿಚಾರವನ್ನು ಯಾರೊಂದಿಗೂ ಬಾಯಿಬಿಡದಂತೆ ಎಚ್ಚರಿಕೆ ನೀಡಿದ್ದರು. ಆದರೆ, ಚಂದ್ರಶೇಖರನ್ ಒಪ್ಪಿರಲಿಲ್ಲ. ಆ ನಂತರ ಆರೋಪಿಗಳು ಮಾಜಿ ಸಚಿವ ಬಿ.ನಾಗೇಂದ್ರ ಆಪ್ತರ ಮೂಲಕ ಹಾಗೂ ಬೇರೆ ಬೇರೆ ವಿಧಾನಗಳಲ್ಲಿ ಒತ್ತಡ ಹಾಕಿದ್ದರು. ಚಂದ್ರಶೇಖರನ್ ಅವರು ತೀವ್ರ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದರು' ಎಂದು ಮೂಲಗಳು ತಿಳಿಸಿವೆ.

### ವಾಲ್ಮೀಕಿ ನಿಗಮಕ್ಕೆ ಹೆಚ್ಚುವರಿ ಅನುದಾನ: ಸಿ.ಎಂ

**ಬೆಂಗಳೂರು:** ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮಕ್ಕೆ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ನಿಗಮಕ್ಕೆ ಹೆಚ್ಚುವರಿ ಅನುದಾನ ನೀಡುವಂತೆ ಕೋರಿ, ರಾಜನಹಳ್ಳಿಯ ಮಹರ್ಷಿ ವಾಲ್ಮೀಕಿ ಗುರು ಪೀಠದ ಪ್ರಸನ್ನಾನಂದ ಸ್ವಾಮೀಜಿ ಮತ್ತು ಸಚಿವ ಸತೀಶ ಜಾರಕಿಹೊಳಿ ನೇತೃತ್ವದ ಶಾಸಕರ ಮತ್ತು ಸಮುದಾಯದ ಮುಖಂಡರ ನಿಯೋಗವು ಗುರುವಾರ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿತ್ತು.

'ನಿಗಮಕ್ಕೆ ಈ ಹಿಂದೆ ನೀಡಲಾಗಿದ್ದ ಅನುದಾನವು ಅಕ್ರಮವಾಗಿ ವರ್ಗಾವಣೆಯಾಗಿದೆ. ಈ ಪ್ರಕರಣದಲ್ಲಿ ₹50 ಕೋಟಿಯನ್ನು ವಿಶೇಷ ತನಿಖಾ ದಳವು ಬ್ಯಾಂಕ್ ಖಾತೆಗಳಲ್ಲೇ ಫ್ರೀಜ್ ಮಾಡಿ ಇಟ್ಟಿದೆ. ₹30 ಕೋಟಿಯಷ್ಟು ಹಣವನ್ನು ವಸೂಲಿ ಮಾಡಲಾಗುತ್ತಿದೆ. ಹೀಗಾಗಿ ಯಾವುದೇ ಚಟುವಟಿಕೆ ನಡೆಸಲು ನಿಗಮದಲ್ಲಿ ಅನುದಾನ ಲಭ್ಯವಿಲ್ಲ. ಹೆಚ್ಚುವರಿ ಅನುದಾನ ನೀಡಿ' ಎಂದು ನಿಯೋಗ ಕೋರಿತ್ತು.

ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿ, 'ಪ್ರಕರಣ ಪೂರ್ತಿ ಇತ್ಯರ್ಥ ಆಗುವವರೆಗೂ ನಿಗಮದ ಮತ್ತು ಸಮುದಾಯದ ಕೆಲಸಗಳಿಗೆ ತೊಂದರೆ ಆಗಬಾರದು ಎನ್ನುವುದು ನಮ್ಮ ಆದ್ಯತೆ. ಹೀಗಾಗಿ ಹಣ ಬಿಡುಗಡೆ ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ' ಎಂದು ಹೇಳಿದ್ದಾರೆ.

# ಜಿಂದಾಲ್‌ಗೆ 3,677 ಎಕರೆ ಮಾರಾಟ

ಒಂದನೇ ಪುಟದಿಂದ...

ಕೆಪಿಸಿಎಲ್‌ಗೆ 944 ಎಕರೆ ಪರ್ಯಾಯ ಭೂಮಿ ಖರೀದಿಸುವ ಉದ್ದೇಶಕ್ಕಾಗಿ ಜೆಎಸ್‌ಡಬ್ಲ್ಯು ಸ್ಟೀಲ್ಸ್ 2006ರ ಫೆಬ್ರುವರಿ 2ರಂದು ₹18.10 ಕೋಟಿ ಮತ್ತು 2007 ಫೆಬ್ರುವರಿ 5ರಂದು ₹20 ಕೋಟಿ ಪಾವತಿ ಮಾಡಿತ್ತು. ಭೂಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ ಒಂದು ವೇಳೆ ಪರ್ಯಾಯ ಭೂಮಿಯ ಭೂಸ್ವಾಧೀನ ವೆಚ್ಚವು ಜೆಎಸ್‌ಡಬ್ಲ್ಯುಗೆ ಹಂಚಿಕೆಯಾದ ವೆಚ್ಚಕ್ಕಿಂತ ಹೆಚ್ಚಾಗಿದ್ದರೆ ಈ ವ್ಯತ್ಯಾಸದ ವೆಚ್ಚವನ್ನು ಸಂಸ್ಥೆಯೇ ಭರಿಸಬೇಕು ಎಂಬ ಷರತ್ತು ವಿಧಿಸಲಾಗಿದೆ ಎಂದು ಅವರು ಹೇಳಿದರು.

2021ರ ಏಪ್ರಿಲ್‌ನಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಶುದ್ಧಕ್ರಯ ಪತ್ರ ಮಾಡಿಕೊಡಲು ತೀರ್ಮಾನಿಸಲಾಗಿತ್ತು. ಆಗ ಸರ್ಕಾರದ ಕ್ರಮ ಸಮರ್ಥಿಸಿಕೊಂಡಿದ್ದ ಅಂದಿನ ಕಾನೂನು ಸಚಿವ ಬಸವರಾಜ ಬೊಮ್ಮಾಯಿ, '2006ರಲ್ಲಿ ಜಿಂದಾಲ್ ಕಂಪನಿಗೆ ಲೀಸ್ ಕಂ ಸೇಲ್ ಆಧಾರದಲ್ಲಿ ಜಮೀನು ನೀಡಲಾಗಿತ್ತು. ಗಣಿಗಾರಿಕೆಗೆ ನೀಡಿದ್ದ ಆ ಜಾಗವನ್ನು ಬಳಕೆ ಮಾಡಿದ್ದಾರೆ ಮತ್ತು ಅಲ್ಲಿ ಕಾರ್ಖಾನೆ, ಕಟ್ಟಡಗಳನ್ನು ಸ್ಥಾಪಿಸಿದ್ದಾರೆ. ಗುತ್ತಿಗೆ ಅವಧಿ ಮುಗಿದಿರುವುದರಿಂದ ಶುದ್ಧಕ್ರಯ ಮಾಡಲು ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರದ (ಎಚ್‌.ಡಿ. ಕುಮಾರಸ್ವಾಮಿ ಅವಧಿ) ಅವಧಿಯಲ್ಲೇ ಪ್ರಸ್ತಾವನೆ ಸಲ್ಲಿಸಲಾಗಿತ್ತು' ಎಂದು ಹೇಳಿದ್ದರು.

ಬಿಜೆಪಿಯ ಕೆಲವು ಸದಸ್ಯರು ಇದನ್ನು ವಿರೋಧಿಸಿ ಅಮಿತ್ ಶಾ ಅವರಿಗೆ ಪತ್ರ ಬರೆದಿದ್ದರು. ಆ ಬಳಿಕ ಪ್ರಕ್ರಿಯೆಗೆ ತಡೆ ನೀಡಲಾಗಿತ್ತು. ಕಂಪನಿಗೆ ಶುದ್ಧಕ್ರಯ ಮಾಡುವುದನ್ನು ವಿರೋಧಿಸಿ ಸಾರ್ವಜನಿಕರೊಬ್ಬರು ಹೈಕೋರ್ಟ್ ಮೆಟ್ಟಿಲು ಹತ್ತಿದ್ದರು. ಇದಕ್ಕೆ ಸಂಬಂಧಿಸಿದ ಎಲ್ಲ ಕಡತಗಳನ್ನು ಸಲ್ಲಿಸಬೇಕು ಎಂದು ನ್ಯಾಯಾಲಯವು ಸರ್ಕಾರಕ್ಕೆ ಸೂಚಿಸಿತ್ತು.

**ಸ್ಪಷ್ಟನೆ ನೀಡದ ಸಚಿವ:** 'ಬಿಜೆಪಿ ಅವಧಿಯಲ್ಲಿ ಶುದ್ಧಕ್ರಯ ಪತ್ರ ಮಾಡಿಕೊಡುವುದನ್ನು ವಿರೋಧಿಸಿ ಹೋರಾಟ ಮಾಡಿದ್ದ ನೀವು ಈಗ ಯಾವುದೇ ಬದಲಾವಣೆ ಇಲ್ಲದೇ ಹೇಗೆ ಒಪ್ಪಿಗೆ ನೀಡಿದ್ದೀರಿ' ಎಂಬ ಪ್ರಶ್ನೆಗೆ, ಸಚಿವ ಎಚ್‌.ಕೆ. ಪಾಟೀಲ ಸ್ಪಷ್ಟ ಉತ್ತರ ನೀಡಲಿಲ್ಲ.


# ಆಸ್ತಿ ಜಗಳ: ಸೋದರನ ಕೊಂದ ಅಕ್ಕ-ತಂಗಿಯರು

ಪ್ರಜಾವಾಣಿ ವಾರ್ತೆ

**ತರೀಕೆರೆ (ಚಿಕ್ಕಮಗಳೂರು):** ಆಸ್ತಿ ವಿಷಯಕ್ಕೆ ಸಂಬಂಧಿಸಿದಂತೆ ಮೂವರು ಸಹೋದರಿಯರು ಮತ್ತು ಬಾವಂದಿರು ಸೇರಿ ಸಹೋದರನ ಕಣ್ಣಿಗೆ ಕಾರದ ಪುಡಿ ಎರಚಿ ಮಾರಾಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿರುವ ಘಟನೆ ಇಲ್ಲಿಯ ಚೌಡೇಶ್ವರಿ ಬಡಾವಣೆಯಲ್ಲಿ ಗುರುವಾರ ಬೆಳಿಗ್ಗೆ ನಡೆದಿದೆ.

ರಾಘವೇಂದ್ರ (43) ಕೊಲೆಯಾದವರು. ಅವರಿಗೆ ಇಬ್ಬರು ಅಕ್ಕ ಮತ್ತು ಒಬ್ಬ ತಂಗಿ ಇದ್ದಾರೆ. ಆಸ್ತಿ ವಿಷಯಕ್ಕೆ ಸಂಬಂಧಿಸಿ ಆಗಾಗ ಜಗಳ ನಡೆಯುತ್ತಿತ್ತು. ರಾಘವೇಂದ್ರ ಅವರು ಗುರುವಾರ ಮನೆಯಲ್ಲಿದ್ದಾಗ ಕಣ್ಣಿಗೆ ಕಾರದ ಪುಡಿ ಎರಚಿದ ಮೂವರು ಸಹೋದರಿಯರು ಮತ್ತು ಭಾವಂದಿರು ಮಾರಕಾಸ್ತ್ರಗಳಿಂದ ಕೊಚ್ಚಿದ್ದಾರೆ ಎಂದು ರಾಘವೇಂದ್ರ ಸ್ನೇಹಿತ ಟಿ.ಶಂಕರ್ ಪೊಲೀಸರಿಗೆ ದೂರು ನೀಡಿದ್ದಾರೆ.

'ಆಸ್ತಿ ಸರಿಯಾಗಿ ಹಂಚಿಕೆ ಮಾಡಿಲ್ಲ ಎಂಬ ಕಾರಣಕ್ಕೆ ತಂದೆಯನ್ನೇ ಕೊಲೆ ಮಾಡಿ ಜೈಲು ಸೇರಿದ್ದ ರಾಘವೇಂದ್ರ, ಜುಲೈನಲ್ಲಿ ಜಾಮೀನಿನ ಮೇಲೆ ಹೊರಬಂದಿದ್ದ. ನಂತರ ಆಸ್ತಿಯನ್ನು ಸಹೋದರಿಯರ ಗಮನಕ್ಕೆ ಬಾರದೆ ಮಾರಿದ್ದು, ₹4 ಲಕ್ಷ ಮುಂಗಡ ಪಡೆದಿದ್ದ ಎನ್ನಲಾಗಿದೆ. ಈ ವಿಚಾರ ತಿಳಿದ ಸಹೋದರಿಯರು, ಹಣದಲ್ಲಿ ತಮಗೂ ಪಾಲು ನೀಡಲು ಬೇಡಿಕೆಇಟ್ಟಿದ್ದರು. ನಿರಾಕರಿಸಿದ್ದಕ್ಕೆ ಸಹೋದರಿಯರು ಈ ಕೃತ್ಯ ಎಸಗಿದ್ದಾರೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.



ರಾಘವೇಂದ್ರ

ಸಹೋದರಿ ಯರಾದ ಸುಮಾ, ಸುಧಾ, ರೇಣುಕಾ, ಬಾವ ಸಿದ್ದರಾಮಪ್ಪ (ರೇಣುಕಾ ಪತಿ) ಅವರನ್ನು ತರೀಕೆರೆ ಪೊಲೀಸರು ಬಂಧಿಸಿದ್ದಾರೆ. ಇನ್ನಿಬ್ಬರು ಬಾವಂದಿರಾದ ಶಿವಣ್ಣ ಮತ್ತು ಶ್ರೀನಿವಾಸ್ ಎಂಬುವರ ಬಂಧನಕ್ಕೆ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

ಸ್ಥಳಕ್ಕೆ ಎಸ್‌ಪಿ ವಿಕ್ರಮ ಅಮಟೆ ಭೇಟಿ ನೀಡಿದ್ದರು. ಇನ್‌ಸ್ಪೆಕ್ಟರ್ ವೀರೇಂದ್ರ, ಸಬ್‌ಇನ್‌ಸ್ಪೆಕ್ಟರ್ ನಾಗೇಂದ್ರ ನಾಯ್ಕ ಹಾಜರಿದ್ದರು.

# ರಾಜೀವ್ ಗಾಂಧಿ ವಿ.ವಿ ಸೆನೆಟ್‌ಗೆ ನೇಮಕ

**ಬೆಂಗಳೂರು:** ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ಐವರು ಸದಸ್ಯರನ್ನು ನೇಮಿಸಿ ವೈದ್ಯಕೀಯ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಮೈಸೂರು ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕ ಕೆ.ಸಿ. ಶಶಿಧರ್, ಚಿಕ್ಕಮಗಳೂರು ಜಿಲ್ಲೆ ಕಡೂರಿನ ವೈದ್ಯ ಭರತ್ ಅಂಚೆ, ಕೋರಮಂಗಲದ ವೈದ್ಯ ಶ್ರೀನಿವಾಸನ್ ವೇಲು, ಬೆಂಗಳೂರು ಈಸ್ಟ್ ಪಾಯಿಂಟ್ ವೈದ್ಯಕೀಯ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಎಂ. ಮಹೇಂದ್ರ, ಕಲಬುರಗಿಯ ಮಾಲಕರಡ್ಡಿ ಹೊಮಿಯೊಪತಿ ಕಾಲೇಜಿನ ಸಹ ಪ್ರಾಧ್ಯಾಪಕ ರವೀಂದ್ರ ಕಟ್ಟಿ ನೇಮಕಗೊಂಡ ಸದಸ್ಯರು.



## ಹಬ್ಬದ ತಯಾರಿ...

ಕೃಷ್ಣ ಜನ್ಮಾಷ್ಟಮಿಗಾಗಿ ಮೈಸೂರಿನ ವಿಜಯನಗರದ ಮಳಿಗೆಯೊಂದರಲ್ಲಿ ಕಲಾವಿದರೊಬ್ಬರು ಗುರುವಾರ ಕೃಷ್ಣನ ವಿಗ್ರಹಗಳಿಗೆ ಅಂತಿಮ ಸ್ಪರ್ಶ ನೀಡಿದರು
– ಪ್ರಜಾವಾಣಿ ಚಿತ್ರ: ಅನೂಪ್ ರಾಘ್.ಟಿ.

# ಐವನ್ ಡಿಸೋಜ ಮನೆಗೆ ಕಲ್ಲು ತೂರಾಟ

ಪ್ರಜಾವಾಣಿ ವಾರ್ತೆ

**ಮಂಗಳೂರು:** ನಗರದ ವೆಲೆನ್ಸಿಯಾದಲ್ಲಿರುವ, ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ ಅವರ ಮನೆಗೆ ಕಿಡಿಗೇಡಿಗಳು ಬುಧವಾರ ರಾತ್ರಿ 11 ಗಂಟೆ ಸುಮಾರಿಗೆ ಕಲ್ಲು ತೂರಿದ್ದಾರೆ.

'ದ್ವಿಚಕ್ರ ವಾಹನದಲ್ಲಿ ಬಂದಿದ್ದ ಕಿಡಿಗೇಡಿಗಳು ಕಲ್ಲು ತೂರಿ, ಘೋಷಣೆ ಕೂಗಿ ಪರಾರಿಯಾಗಿದ್ದಾರೆ. ಮನೆಯ ಕಿಟಕಿಯ ಚೌಕಟ್ಟಿನಲ್ಲಿ ಕಲ್ಲಿನ ಅಚ್ಚುಗಳು ಮೂಡಿವೆ. ಈ ಘಟನೆ ನಡೆದಾಗ ಐವನ್ ಡಿಸೋಜ ಅವರು ಮನೆಯಲ್ಲಿರಲಿಲ್ಲ. ಬೆಂಗಳೂರಿಗೆ ತೆರಳಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಘಟನೆ ಕುರಿತು ಪ್ರತಿಕ್ರಿಯಿಸಿದ ಪೊಲೀಸ್ ಕಮಿಷನರ್ ಅನುಪಮ್ ಅಗರ್ವಾಲ್, 'ಐವನ್ ಡಿಸೋಜ ಅವರ ಮನೆಗೆ ಹೆಚ್ಚುವರಿ ಭದ್ರತೆ ಒದಗಿಸಲಾಗಿದೆ. ಕಿಡಿಗೇಡಿಗಳು ಹೆಲ್ಮೆಟ್ ಧರಿಸಿದ್ದರು. ಆರೋಪಿಗಳ ಪತ್ತೆಗೆ ಎಸಿಪಿ ಪ್ರತಾಪ್ ಸಿಂಗ್ ಥೊರಟ್ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲಾಗಿದೆ' ಎಂದು ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅನುಮತಿ ನೀಡಿದ್ದನ್ನು ಖಂಡಿಸಿ, ಕಾಂಗ್ರೆಸ್ ನೇತೃತ್ವದಲ್ಲಿ ನಗರದಲ್ಲಿ ಈಚೆಗೆ ಪ್ರತಿಭಟನೆ ನಡೆದಿತ್ತು. ಈ ವೇಳೆ ಮಾತನಾಡಿದ್ದ ಐವನ್ ಡಿಸೋಜ, 'ರಾಷ್ಟ್ರಪತಿಯವರು ರಾಜ್ಯಪಾಲರನ್ನು ಹಿಂದಕ್ಕೆ ಕರೆಸಿಕೊಳ್ಳಬೇಕು. ಇಲ್ಲದಿದ್ದರೆ ಬಾಂಗ್ಲಾದ ಪ್ರಧಾನಿಗೆ ಆದ ಸ್ಥಿತಿ ರಾಜ್ಯಪಾಲರಿಗೂ ಆಗಲಿದೆ' ಎಂದು ಹೇಳಿಕೆ ನೀಡಿದ್ದರು.

ಈ ಹೇಳಿಕೆಗೆ ವಿವಿಧ ಸಂಘಟನೆಗಳಿಂದ ಖಂಡನೆ ವ್ಯಕ್ತವಾಗಿತ್ತು. ಐವನ್ ವಿರುದ್ಧ ಬಿಜೆಪಿ ಯುವ ಮೋರ್ಚಾ ಮತ್ತಿತರ ಸಂಘಟನೆಗಳು ಪೊಲೀಸರಿಗೆ ದೂರು ನೀಡಿದ್ದವು.

## ಸಂಕ್ಷಿಪ್ತ ಸುದ್ದಿ

### ಅತ್ಯಾಚಾರದಿಂದ ಬಾಲಕಿ ಗರ್ಭಿಣಿ; ತಂದೆಯ ಬಂಧನ

**ಮೂಡುಬಿದಿರೆ (ದಕ್ಷಿಣ ಕನ್ನಡ):** ತಾಲ್ಲೂಕಿನಲ್ಲಿ ಬಾಲಕಿಯೊಬ್ಬಳು ಗರ್ಭಿಣಿಯಾಗಿದ್ದು, 55 ವರ್ಷದ ತಂದೆ ಆಕೆಯ ಮೇಲೆ ಅತ್ಯಾಚಾರ ನಡೆಸಿದ್ದೇ ಇದಕ್ಕೆ ಕಾರಣ ಎಂದು ಗೊತ್ತಾಗಿದೆ. ಈ ಕುರಿತು ಮೂಡುಬಿದಿರೆ ಠಾಣೆಯಲ್ಲಿ ಲೈಂಗಿಕ ದೌರ್ಜನ್ಯದಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆಯಡಿ ಎಫ್‌ಐಆರ್ ದಾಖಲಾಗಿದೆ. ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಆರೋಪಿಯು ಕೂಲಿ ಕಾರ್ಮಿಕ. ಆತ ಆರು ತಿಂಗಳ ಹಿಂದೆ ಮನೆಯಲ್ಲಿ ಮಗಳ ಮೇಲೆ ಅತ್ಯಾಚಾರ ಎಸಗಿದ್ದ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಸಂತ್ರಸ್ತ ಬಾಲಕಿಯು ಆರೋಗ್ಯ ಈಚೆಗೆ ಹದಗೆಟ್ಟಿತ್ತು. ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ವೈದ್ಯರು ತಪಾಸಣೆ ನಡೆಸಿದಾಗ ಆಕೆ ಆರು ತಿಂಗಳ ಗರ್ಭಿಣಿ ಎಂಬುದು ಗೊತ್ತಾಗಿತ್ತು. ತನಿಖೆಯ ದಾರಿ ತಪ್ಪಿಸಲು ಪ್ರಾರಂಭದಲ್ಲಿ ಆರೋಪಿ ಈ ಕೃತ್ಯವನ್ನು ಬೇರೆಯವರೊಬ್ಬರು ನಡೆಸಿದ್ದಾರೆ ಎಂದು ಹೇಳಿದ್ದ. ಹೆಚ್ಚಿನ ವಿಚಾರಣೆ ನಡೆಸಿದಾಗ ಕೃತ್ಯ ನಡೆಸಿದ್ದನ್ನು ಒಪ್ಪಿಕೊಂಡ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

### ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ: ಆರೋಪಿ ಬಂಧನ

**ನಿಪ್ಪಾಣಿ (ಬೆಳಗಾವಿ ಜಿಲ್ಲೆ):** ಹಣದ ಆಮಿಷವೊಡ್ಡಿ 10 ವರ್ಷದ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಆಸೀಫ್ ಇಕ್ಬಾಲ್ ಬಾಗವಾನ (52) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಚಾಕ್‌ಲೇಟ್ ಕೊಳ್ಳಲು ಹಣ ಕೊಡುವುದಾಗಿ ಹೇಳಿ ಬಾಲಕಿಯನ್ನು ಕರೆದು ದೌರ್ಜನ್ಯವೆಸಗಿದ್ದ. ಪಾಲಕರು ನೀಡಿದ್ದ ದೂರು ಆಧರಿಸಿ, ಪೋಕ್ಸೊ ಪ್ರಕರಣದಡಿ ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

### ರಿಜ್ವಾನ್ ನವಾಬ್ ಕೆಎಸ್‌ಆರ್‌ಟಿಸಿ ಉಪಾಧ್ಯಕ್ಷ

**ಬೆಂಗಳೂರು:** ಬಿಬಿಎಂಪಿ ಮಾಜಿ ಸದಸ್ಯ ಮಹಮ್ಮದ್ ರಿಜ್ವಾನ್ ನವಾಬ್ ಅವರನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಉಪಾಧ್ಯಕ್ಷರನ್ನಾಗಿ ನೇಮಿಸಲಾಗಿದೆ.



ರಿಜ್ವಾನ್ ನವಾಬ್

ರಿಜ್ವಾನ್ ಅವರು ಹಿಂದೆ ಗುರಪ್ಪನಪಾಳ್ಯ ಕ್ಷೇತ್ರದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾಗಿ ಆಯ್ಕೆಯಾಗಿದ್ದರು. ಈಗ ಅವರಿಗೆ ಕೆಎಸ್‌ಆರ್‌ಟಿಸಿ ಉಪಾಧ್ಯಕ್ಷ ಸ್ಥಾನ ನೀಡಿ ಸಾರಿಗೆ ಇಲಾಖೆ ಆದೇಶ ಹೊರಡಿಸಿದೆ.

ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಶಾಸಕಾಂಗ ಸಭೆಯಲ್ಲಿ 'ಕೈ' ಶಾಸಕರ ಆಗ್ರಹ

# ರಾಜ್ಯಪಾಲರ ವಾಪಸಿಗೆ ರಾಷ್ಟ್ರಪತಿ ಮುಂದೆ ಪರೇಡ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಅನುಮತಿ ನೀಡಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರ ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಕಾಂಗ್ರೆಸ್ ಶಾಸಕರು, ರಾಜ್ಯಪಾಲರನ್ನು ವಾಪಸ್ ಕರೆಸಿಕೊಳ್ಳುವಂತೆ ರಾಷ್ಟ್ರಪತಿ ಮುಂದೆ ಪರೇಡ್ ನಡೆಸುವಂತೆ ಶಾಸಕಾಂಗ ಪಕ್ಷದ ಸಭೆಯಲ್ಲಿ ಬೇಡಿಕೆ ಇಟ್ಟಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಗುರುವಾರ ಸಭೆ ನಡೆಯಿತು.

ಶಾಸಕರ ಬೇಡಿಕೆಗೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ, 'ಶುಕ್ರವಾರ (ಆಗಸ್ಟ್ 23) ಸಂಜೆ 4 ಗಂಟೆಗೆ ನಾನು ಮತ್ತು ಡಿ.ಕೆ. ಶಿವಕುಮಾರ್ ದೆಹಲಿಯಲ್ಲಿ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಸೇರಿದಂತೆ ಹೈಕಮಾಂಡ್ ನಾಯಕರನ್ನು ಭೇಟಿ ಮಾಡುತ್ತೇವೆ. ರಾಷ್ಟ್ರಪತಿ ಮುಂದೆ ಪರೇಡ್ ನಡೆಸುವ ಬಗ್ಗೆಯೂ ಹೈಕಮಾಂಡ್ ಜೊತೆ ಚರ್ಚಿಸುತ್ತೇವೆ' ಎಂದಿದ್ದಾರೆ.

'ಕುಮಾರಸ್ವಾಮಿ, ಎಚ್‌. ಡಿ. ದೇವೇಗೌಡರು ಮತ್ತು ಅಮಿತ್ ಶಾ ಮಾತನಾಡಿ ಇಷ್ಟೆಲ್ಲ ಬೆಳವಣಿಗೆಗಳು ನಡೆದಿದೆ. ಮುಡಾ ವಿಷಯವನ್ನು ಜನತಾ ನ್ಯಾಯಾಲಯಕ್ಕೆ ತೆಗೆದುಕೊಂಡು ಹೋಗೋಣ. ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದ ಹಗರಣಗಳನ್ನು ಪಟ್ಟಿ ಮಾಡಿ, ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಆ ಕೆಲಸವನ್ನೂ ಮಾಡೋಣ' ಎಂದೂ ಸಭೆಯಲ್ಲಿ ಚರ್ಚೆ ನಡೆದಿದೆ ಎಂದೂ ಮೂಲಗಳು ಹೇಳಿವೆ.

ಸಭೆಯ ಬಳಿಕ ಮಾತನಾಡಿದ ಡಿ.ಕೆ. ಶಿವಕುಮಾರ್, 'ರಾಜ್ಯಪಾಲರ ತೀರ್ಮಾನವನ್ನು ಖಂಡಿಸುವ ಜತೆಗೆ, ಸರ್ವಾನುಮತದಿಂದ ಸಿದ್ದರಾಮಯ್ಯ ಅವರ ಬೆಂಬಲಕ್ಕೆ ನಿಲ್ಲುವ ನಿರ್ಣಯ ತೆಗೆದುಕೊಳ್ಳಲಾಯಿತು' ಎಂದರು.

'ಸರ್ಕಾರವನ್ನು ಅಭದ್ರಗೊಳಿಸಲು ಬಿಜೆಪಿ– ಜೆಡಿಎಸ್‌ನವರು ಎಷ್ಟೇ ಪ್ರಯತ್ನಿಸಿದರೂ ಸರ್ಕಾರವನ್ನು ಜಗ್ಗಿಸಲು ಸಾಧ್ಯವಿಲ್ಲ.ಮುಖ್ಯಮಂತ್ರಿ ಮತ್ತು ಸರ್ಕಾರದ ವಿರುದ್ಧ ಸಂಚು ನಡೆಯುತ್ತಿದ್ದು, ನಾವು ಇದಕ್ಕೆ ಜಗ್ಗುವುದಿಲ್ಲ' ಎಂದರು.

'ಇಂಡಿಯಾ' ಮೈತ್ರಿಕೂಟದ ಬೆಂಬಲ ಇದೆಯೇ ಎಂದು ಕೇಳಿದಾಗ, 'ಸದ್ಯ ರಾಜ್ಯದಲ್ಲಿ ಒಗ್ಗಟ್ಟಿನಿಂದ ಹೋರಾಟ ಮಾಡುತ್ತೇವೆ. ವರಿಷ್ಠರ ಜೊತೆ ಚರ್ಚಿಸಿದ ನಂತರ ಮುಂದಿನ ತೀರ್ಮಾನ ತೆಗೆದುಕೊಳ್ಳುತ್ತೇವೆ' ಎಂದರು.

ಸಭೆಯಲ್ಲಿ, ರಾಜ್ಯಪಾಲ ತೀರ್ಮಾನದ ವಿರುದ್ಧದ ಖಂಡನಾ ನಿರ್ಣಯವನ್ನು ಆರ್‌.ವಿ. ದೇಶಪಾಂಡೆ ಮಂಡಿಸಿದರು. ತನ್ವೀರ್ ಸೇಠ್ ಅನುಮೋದಿಸಿದರು.

# ಸಂಡೂರು ಅರಣ್ಯ ರಕ್ಷಣೆ; ಕೇಂದ್ರದಿಂದ ಪತ್ರ

**ಬಳ್ಳಾರಿ:** ಸಂಡೂರು ತಾಲ್ಲೂಕಿನ ವರ್ಜಿನ್ ಅರಣ್ಯದ (ನೈಸರ್ಗಿಕ ಅರಣ್ಯ ಪ್ರದೇಶ) ರಕ್ಷಣೆಗೆ ಕ್ರಮವಹಿಸಲು ಕೇಂದ್ರದ ಪರಿಸರ, ಅರಣ್ಯ ಸಚಿವಾಲಯವು ಈಚೆಗೆ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದೆ.

ದೇವದಾರಿ, ಹದ್ದಿನಪಡೆ, ಕಮಟೂರು ಶ್ರೇಣಿ ಸೇರಿ ಸಂಡೂರಿನ ಒಟ್ಟು ವರ್ಜಿನ್ ಅರಣ್ಯ ರಕ್ಷಣೆಗೆ ವಿಜಯನಗರ ಜಿಲ್ಲೆ ಕೊಟ್ಟೂರು ತಾಲ್ಲೂಕಿನ ಡಾ ಸದಾನಂದ ಹೆಗ್ಗದಾಳ್ ಮಠ ಜುಲೈ 7ರಂದು ರಾಷ್ಟ್ರಪತಿಗೆ ಮನವಿ ಸಲ್ಲಿಸಿದ್ದರು.

ರಾಷ್ಟ್ರಪತಿ ಕಚೇರಿಯ ಸೂಚನೆಯಂತೆ ಕೇಂದ್ರ ಅರಣ್ಯ ಸಚಿವಾಲಯವು ರಾಜ್ಯದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ ಪತ್ರ ಬರೆದಿದೆ.

ಸದಾನಂದ ಅವರ ಪತ್ರವನ್ನು ಪರಿಶೀಲಿಸಿ, ಸದ್ಯ ಅಸ್ತಿತ್ವದಲ್ಲಿರುವ ನಿಯಮಗಳ ಅನ್ವಯ ಕ್ರಮವಹಿಸಬೇಕು. ಕೈಗೊಂಡ ಕ್ರಮಗಳ ಬಗ್ಗೆ ಸಚಿವಾಲಯ ಮತ್ತು ಅರ್ಜಿದಾರರಿಗೆ ಮಾಹಿತಿ ನೀಡಬೇಕು ಎಂದು ತಿಳಿಸಿದೆ.

ಸಂಡೂರಿನ ದೇವದಾರಿಯಲ್ಲಿ ಕುದುರೆಮುಖ ಕಬ್ಬಿಣದ ಅದಿರು ಕಂಪನಿ (ಕೆಐಒಸಿಎಲ್) ಗಣಿಗಾರಿಕೆಗೆ ತಾತ್ಕಾಲಿಕ ತಡೆ ನೀಡಿದೆ. ಅದೇ ಕಂಪನಿ ಹದ್ದಿನಪಡೆ ಅರಣ್ಯ ಶ್ರೇಣಿಯಲ್ಲಿ ಅದಿರು ಶೋಧನೆ ನಡೆಸುತ್ತಿದೆ.





ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ನಿರ್ಮಾಣ ಹಂತದಲ್ಲಿರುವ ಸೋಲಾರ್ ಇವಿ ಚಾರ್ಜಿಂಗ್ ಹಬ್ ಮತ್ತು ಅಳವಡಿಸಲಾಗುತ್ತಿರುವ ಸೋಲಾರ್ ಪ್ಯಾನಲ್

24 ಗಂಟೆಯೂ ಚಾರ್ಜ್ ಮಾಡಬಹುದಾದ ದೇಶದ ಮೊದಲ ಕೇಂದ್ರ • ಮುಂದಿನ ತಿಂಗಳು ಉದ್ಘಾಟನೆ

# ದೇವನಹಳ್ಳಿ: ಸೋಲಾರ್ ಚಾರ್ಜಿಂಗ್ ಹಬ್

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಬೆಸ್ಕಾಂ ವತಿಯಿಂದ ದಿನದ 24 ಗಂಟೆಯೂ ಚಾರ್ಜ್ ಮಾಡಬಹುದಾದ ದೇಶದ ಮೊದಲ ಸೌರಶಕ್ತಿ ಆಧಾರಿತ ಬ್ಯಾಟರಿ ಸ್ಟೋರೇಜ್ ಎಲೆಕ್ಟ್ರಿಕ್ ವಾಹನ ಚಾರ್ಜಿಂಗ್ ಸೆಂಟರ್ ದೇವನಹಳ್ಳಿಯಲ್ಲಿರುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ನಿರ್ಮಾಣವಾಗುತ್ತಿದ್ದು, ಸೆಪ್ಟೆಂಬರ್ ಅಂತ್ಯದ ಒಳಗೆ ಸೇವೆಗೆ ಲಭ್ಯವಾಗಲಿದೆ.

ಖಾಸಗಿ ಸಂಸ್ಥೆಗಳ ಸಹಯೋಗದಲ್ಲಿ ನಿರ್ಮಾಣಗೊಳ್ಳುತ್ತಿರುವ ಈ ಚಾರ್ಜಿಂಗ್ ಹಬ್‌ನಲ್ಲಿ ಏಕ ಕಾಲದಲ್ಲಿ 23 ವಾಹನಗಳನ್ನು ಚಾರ್ಜ್ ಮಾಡಬಹುದು. ಅದರಲ್ಲಿ ಅರ್ಧ ಗಂಟೆಯಿಂದ ಒಂದು ಗಂಟೆಯ ಒಳಗೆ ಚಾರ್ಜ್ ಮಾಡಬಹುದಾದ 20 ವೇಗದ (ಫಾಸ್ಟ್) ಚಾರ್ಜಿಂಗ್ ಪಾಯಿಂಟ್‌ಗಳಿವೆ. ಮೂರು ಸಾಮಾನ್ಯ ಚಾರ್ಜಿಂಗ್ ಪಾಯಿಂಟ್‌ಗಳೂ ಇವೆ.

ಜಿಬಿಜೆಡ್ ಮತ್ತು ನೂನಮ್ ಕಂಪನಿಗಳ ಸಹಯೋಗದಲ್ಲಿ ನಿರ್ಮಿಸಲಾಗುತ್ತಿರುವ ಈ ಹಬ್‌ನಲ್ಲಿ 50 ಕೆಡಬ್ಲ್ಯು, 30 ಕೆಡಬ್ಲ್ಯು ಸಾಮರ್ಥ್ಯ ಹೊಂದಿರುವ ವೇಗದ ಚಾರ್ಜಿಂಗ್ ಪಾಯಿಂಟ್‌ಗಳನ್ನು ಒದಗಿಸಲಾಗುತ್ತಿದೆ. 7.5 ಕೆಡಬ್ಲ್ಯು ಮತ್ತು 3.3 ಕೆಡಬ್ಲ್ಯು ಸಾಮರ್ಥ್ಯದ ಸಾಮಾನ್ಯ ಚಾರ್ಜಿಂಗ್ ಪಾಯಿಂಟ್‌ಗಳನ್ನೂ ಒದಗಿಸಲಾಗುತ್ತದೆ.

ಇಂಟಿಗ್ರೇಟೆಡ್ (ಸಂಯೋಜಿತ) ವ್ಯವಸ್ಥೆಯಡಿ ತಲಾ ಎರಡು 45 ಕೆ.ವಿ ಸಾಮರ್ಥ್ಯದ 2 ಲೈಫ್ ಬ್ಯಾಟರಿಗಳು ಹಗಲಿನಲ್ಲಿ ಸೌರಶಕ್ತಿಯನ್ನು ಸಂಗ್ರಹಿಸಿ ರಾತ್ರಿ ಬಳಕೆ ಮಾಡುವುದರಿಂದ ದಿನದ 24 ಗಂಟೆಯೂ ಚಾರ್ಜಿಂಗ್ ಸೌಲಭ್ಯ ನೀಡಲು ಸಾಧ್ಯವಾಗಲಿದೆ. ಜೊತೆಗೆ ಸೆಕೆಂಡ್ ಲೈಫ್ ಕಾರ್ ಬ್ಯಾಟರಿಗಳನ್ನು ಕೂಡ ಸೌರಶಕ್ತಿ ಸಂಗ್ರಹಕ್ಕೆ ಬಳಸಲಾಗುವುದು ಎಂದು ಬೆಸ್ಕಾಂ ಅಧಿಕಾರಿಗಳು ಮಾಹಿತಿ ನೀಡಿದರು.

ನಗರದಲ್ಲಿ ಮಾತ್ರವಲ್ಲ ರಾಜ್ಯದಲ್ಲಿಯೇ ವಿದ್ಯುತ್ ಚಾಲಿತ ವಾಹನಗಳ (ಇ.ವಿ) ಸಂಖ್ಯೆ ದಿನೇ ದಿನೇ ಏರಿಕೆಯಾಗುತ್ತಿದೆ. ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಇ.ವಿ.ಗಳೇ ಜಾಸ್ತಿ ಬರುತ್ತಿವೆ. ವಿಮಾನ ನಿಲ್ದಾಣದ ಆವರಣದಲ್ಲಿ ಇ.ವಿ ಚಾರ್ಜಿಂಗ್ ಪಾಯಿಂಟ್‌ಗಳಿವೆ ಯಾದರೂ ಅವು ವಿಮಾನ ನಿಲ್ದಾಣದ ವಾಹನಗಳಿಗೆ ಮಾತ್ರ ಬಳಕೆಗೆ ಸಿಗುತ್ತಿವೆ. ಖಾಸಗಿ ಏಜೆನ್ಸಿಗಳು ತಮ್ಮ ವಾಹನಗಳಿಗೆ ಎರಡು ಚಾರ್ಜಿಂಗ್ ಪಾಯಿಂಟ್‌ಗಳನ್ನು ನಿರ್ಮಿಸಿವೆ. ಇದು ಕೂಡ ಸಾರ್ವಜನಿಕರ ಬಳಕೆಗೆ ಸಿಗುತ್ತಿಲ್ಲ.

ವಿಮಾನ ನಿಲ್ದಾಣಕ್ಕೆ ಪ್ರತಿ ದಿನ ಸಾವಿರಾರು ವಾಹನಗಳು ಬರುತ್ತಿವೆ. ಅವುಗಳಲ್ಲಿ ಇ.ವಿಗಳನ್ನು ಚಾರ್ಜ್ ಮಾಡಲು ಬೇರೆಡೆಗೆ ಹುಡುಕೊಂಡು ಹೋಗಬೇಕಿತ್ತು. ಈ ಸಮಸ್ಯೆ ತಪ್ಪಿಸಲು ವಿಮಾನ ನಿಲ್ದಾಣದ ವಾಹನ ನಿಲುಗಡೆ ಪ್ರದೇಶದಿಂದ ಕೇವಲ 1.5 ಕಿ.ಮೀ. ದೂರದಲ್ಲಿರುವ ಬೆಸ್ಕಾಂನ 224 ಕೆ.ವಿ. ಪವರ್ ಸ್ಟೇಷನ್ ಜಾಗದಲ್ಲಿ ಸೋಲಾರ್ ಚಾರ್ಜಿಂಗ್ ಸೆಂಟರ್ ನಿರ್ಮಾಣಗೊಳ್ಳುತ್ತಿದೆ ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದರು.

### ಅಂಕಿ ಅಂಶ

**400** ಕಿಲೋವಾಟ್ — ಸೋಲಾರ್ ಚಾರ್ಜಿಂಗ್ ಸ್ಟೇಷನ್‌ನ ಒಟ್ಟು ಸಾಮರ್ಥ್ಯ

**24x7** — ಚಾರ್ಜಿಂಗ್ ಮಾಡಬಹುದಾದ ಅವಧಿ

**81** — ಅಳವಡಿಸಲಾಗುತ್ತಿರುವ ಸೋಲಾರ್ ಪ್ಯಾನಲ್‌ಗಳು

**560** ಚದರ ಮೀಟರ್ — ಇ.ವಿ ಚಾರ್ಜಿಂಗ್ ಹಬ್ ಇರುವ ಪ್ರದೇಶ

ಸೋಲಾರ್ ಇವಿ ಚಾರ್ಜಿಂಗ್ ಹಬ್ ನಿರ್ಮಾಣಗೊಂಡ ಬಳಿಕ ಈ ರೀತಿ ಕಾಣಬಹುದು ಎಂಬ ಗ್ರಾಫಿಕ್ ಚಿತ್ರ




### 2500 ಇ.ವಿ ಚಾರ್ಜಿಂಗ್ ಸೆಂಟರ್ ಶೀಘ್ರ ಸ್ಥಾಪನೆ

ಮುಂಬರುವ ದಿನಗಳಲ್ಲಿ ಎಲೆಕ್ಟ್ರಿಕ್ ವಾಹನಗಳ ಸಂಖ್ಯೆ ಗಣನೀಯವಾಗಿ ಜಾಸ್ತಿಯಾಗಲಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಇಂಧನ ಸಚಿವರು ರಾಜ್ಯಾದ್ಯಂತ ಇ.ವಿ ಚಾರ್ಜಿಂಗ್ ಸೆಂಟರ್‌ಗಳನ್ನು ಆರಂಭಿಸಲು ಮುತುವರ್ಜಿ ವಹಿಸಿದ್ದಾರೆ. ದೇವನಹಳ್ಳಿಯಲ್ಲಿ ದೊಡ್ಡಮಟ್ಟದಲ್ಲಿ ಇ.ವಿ ಚಾರ್ಜಿಂಗ್ ಹಬ್ ನಿರ್ಮಾಣಗೊಳ್ಳುತ್ತಿದೆ. ಇನ್ನು ಒಂದು ತಿಂಗಳೊಳಗೆ ಉದ್ಘಾಟನೆಗೊಳ್ಳಲಿದೆ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ 'ಪ್ರಜಾವಾಣಿ'ಗೆ ತಿಳಿಸಿದರು.

ದೇಶದಲ್ಲಿಯೇ ಅತಿ ಹೆಚ್ಚು ಅಂದರೆ 4.80 ಲಕ್ಷ ವಿದ್ಯುತ್‌ಚಾಲಿತ ವಾಹನಗಳು ಕರ್ನಾಟಕದಲ್ಲಿಯೇ ಇವೆ. ಅದಕ್ಕೆ ಸರಿಯಾಗಿ 5,765 ಇವಿ ಚಾರ್ಜಿಂಗ್ ಕೇಂದ್ರಗಳೂ ಇವೆ. ಅದರಲ್ಲಿ 4,462 ಕೇಂದ್ರಗಳು ಬೆಂಗಳೂರು ನಗರ ವ್ಯಾಪ್ತಿಯಲ್ಲಿಯಲ್ಲಿವೆ ಎಂದು ಮಾಹಿತಿ ನೀಡಿದರು.

ಬೆಂಗಳೂರು ಸೇರಿದಂತೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ 2,500 ಇವಿ ಚಾರ್ಜಿಂಗ್ ಕೇಂದ್ರಗಳನ್ನು ತೆರೆಯಲು ಟೆಂಡರ್ ಪ್ರಕ್ರಿಯೆ ಆರಂಭಿಸಲಾಗಿದೆ ಎಂದು ವಿವರ ನೀಡಿದರು.

## ಸುಳ್ಳು ಸಂದೇಶ: ಇಲಾಖೆ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾತ್ರಿಪಾಳಿಯಲ್ಲಿ ಕೆಲಸ ಮಾಡುವ ಉದ್ಯೋಗಸ್ಥ ಮಹಿಳೆಯರನ್ನು ಮನೆಗೆ ಕರೆದೊಯ್ದು ಸುರಕ್ಷಿತವಾಗಿ ತಲುಪಿಸುವ ಯೋಜನೆಯೊಂದನ್ನು ನಗರ ಪೊಲೀಸರು ಜಾರಿಗೆ ತಂದಿದ್ದಾರೆ' ಎಂದು ಸಾಮಾಜಿಕ ಮಾಧ್ಯಮದಲ್ಲಿ ಸಂದೇಶವೊಂದು ಹರಿದಾಡುತ್ತಿದ್ದು, 'ಅದು ಸುಳ್ಳು ಸುದ್ದಿ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಸ್ಪಷ್ಟನೆ ನೀಡಿದ್ದಾರೆ.

ರಾತ್ರಿ 10ರಿಂದ ಬೆಳಿಗ್ಗೆ 6 ಗಂಟೆ ವೇಳೆಯಲ್ಲಿ ಮನೆಗೆ ತೆರಳಬೇಕಾದ ಮಹಿಳೆಯರು ಸಹಾಯವಾಣಿ(1091 ಹಾಗೂ 7837018555) ಕರೆ ಮಾಡಿ ವಾಹನಕ್ಕೆ ಕೋರಿಕೆ ಸಲ್ಲಿಸಿದರೆ ಅಲ್ಲಿಗೆ ಹತ್ತಿರದ ಠಾಣೆ ಪೊಲೀಸರು ಬಂದು ಮನೆಗೆ ಕರೆದೊಯ್ದು ಬಿಡುತ್ತಾರೆ. ಪ್ರಯಾಣ ಉಚಿತವಾಗಿರುತ್ತದೆ. ಈ ಸಂದೇಶವನ್ನು ಎಲ್ಲರಿಗೂ ಕಳುಹಿಸಿ ಎಂಬ ಸಂದೇಶ ಹರಿದಾಡುತ್ತಿದೆ.

ಎಲ್ಲ ಮಹಿಳೆಯರಿಗೂ ಅನ್ವಯ ಆಗುವಂತೆ ಈ ರೀತಿಯ ಉಚಿತ ಪ್ರಯಾಣ ಯೋಜನೆ ಜಾರಿ ಆಗಿಲ್ಲ. ಯಾವುದಾದರೂ ತುರ್ತು ಅಥವಾ ಅಪಾಯದ ಸಂದರ್ಭದಲ್ಲಿ ಮಹಿಳೆಯರು ಕರೆ ಮಾಡಿದರೆ ಅವರು ತಲುಪಬೇಕಾದ ಸ್ಥಳಕ್ಕೆ ಬಿಡಲಾಗುತ್ತಿದೆ. 2019ರಲ್ಲೂ ಇದೇ ಸಂದೇಶವನ್ನು ಸಾಮಾಜಿಕ ಮಾಧ್ಯಮದಲ್ಲಿ ಹಾಕಿದ್ದರು ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

## ಕೈಗಾರಿಕಾ ನೀತಿ ಬದಲಾವಣೆಗೆ ಚಿತ್ತ: ಎಚ್.ಡಿ. ಕುಮಾರಸ್ವಾಮಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರೋಗಗ್ರಸ್ತ ಸಾರ್ವಜನಿಕ ವಲಯದ ಉದ್ಯಮಗಳನ್ನು (ಪಿಎಸ್‌ಯು) ಶಾಶ್ವತವಾಗಿ ಸ್ಥಗಿತಗೊಳಿಸುವ ನೀತಿಯನ್ನು ಕೇಂದ್ರ ಸರ್ಕಾರ ಅನುಸರಿಸುತ್ತಿದ್ದರೆ, ಭಾರಿ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಅವುಗಳನ್ನು ಪುನಶ್ಚೇತನಗೊಳಿಸುವ ಆಶಯ ವ್ಯಕ್ತಪಡಿಸಿದ್ದಾರೆ.

ಕೇಂದ್ರ ಸರ್ಕಾರದ ಹೊಸ ನೀತಿಯ ಅನ್ವಯ ರೋಗಗ್ರಸ್ತ ಕೈಗಾರಿಕೆಗಳಿಗೆ ಶಾಶ್ವತವಾಗಿ ಬೀಗ ಜಡಿಯುವ ಹಾಗೂ ಅಂತಹ ಉದ್ದಿಮೆಗಳ ಬಂಡವಾಳವನ್ನು ಸಂಪೂರ್ಣ ಹಿಂತೆಗೆಯಲಾಗುತ್ತಿದೆ. ಕುಮಾರಸ್ವಾಮಿ ಕೈಗಾರಿಕಾ ಸಚಿವರಾಗಿ ಅಧಿಕಾರ ವಹಿಸಿಕೊಂಡ ನಂತರ ಹಿಂದೂಸ್ಥಾನ್ ಮಿಷನ್ ಟೂಲ್ಸ್ (ಎಚ್‌ಎಂಟಿ), ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ (ವಿಐಎಸ್‌ಎಲ್) ಸೇರಿದಂತೆ ಒಂದು ಕಾಲದಲ್ಲಿ ಭಾರತದ ಕೈಗಾರಿಕಾ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದ ಹಲವು ಕೈಗಾರಿಕೆಗಳಿಗೆ ಅಗತ್ಯವಾದ ಮರು ಬಂಡವಾಳ ಹೂಡಿಕೆ ಮಾಡಲು ಚಿಂತನೆ ನಡೆಸಿದ್ದಾರೆ.

'ಭಾರತದ ಜಿಡಿಪಿಗೆ ಹಿಂದೆಲ್ಲ ಗಣನೀಯ ಕೊಡುಗೆ ನೀಡುತ್ತಿದ್ದ ಹಲವು ಸಾರ್ವಜನಿಕ ವಲಯದ ಉದ್ದಿಮೆಗಳ ಪುನಶ್ಚೇತನಕ್ಕೆ ಅಧಿಕಾರಿಗಳ ಜೊತೆ 50ಕ್ಕೂ ಹೆಚ್ಚು ಸಭೆ ನಡೆಸಿದ್ದೇನೆ. ಎಲ್ಲ ಮಾತುಕತೆ, ಅಂತಿಮ ರೂಪುರೇಷೆ ಸಿದ್ಧವಾದ ನಂತರ ಪ್ರಧಾನಿ ಅವರ ಜೊತೆಗೆ ಚರ್ಚಿಸಲಾಗುವುದು. ಮಹತ್ವದ ಕೈಗಾರಿಕೆಗಳನ್ನು ಆಧುನೀಕರಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ಸಚಿವ ಕುಮಾರಸ್ವಾಮಿ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

## ಮಹಿಳಾ ಆರೋಗ್ಯ ಸಿಬ್ಬಂದಿ ಮೇಲೆ ಹಲ್ಲೆ ತಡೆಗೆ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ವೈದ್ಯಾಧಿಕಾರಿಗಳು ಮತ್ತು ಮಹಿಳಾ ವೈದ್ಯಕೀಯ ಸಿಬ್ಬಂದಿ ಮೇಲೆ ಹಲ್ಲೆ ತಡೆಗೆ ಕೈಗೊಳ್ಳಬೇಕಿರುವ ಮುಂಜಾಗ್ರತಾ ಕ್ರಮಗಳ ಕುರಿತು ಶಿಫಾರಸುಗಳನ್ನು ನೀಡಲು ಆರೋಗ್ಯ ಇಲಾಖೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ.

ಈ ಬಗ್ಗೆ ಇಲಾಖೆ ಆಯುಕ್ತ ಡಿ. ರಂದೀಪ್ ಆದೇಶ ಹೊರಡಿಸಿದ್ದಾರೆ. ಇಲಾಖೆಯ ವೈದ್ಯಕೀಯ ಜಂಟಿ ನಿರ್ದೇಶಕರು, ಆರೋಗ್ಯ ಮತ್ತು ಯೋಜನೆ-1ರ ಉಪ ನಿರ್ದೇಶಕರು, ಮಾನಸಿಕ ಆರೋಗ್ಯ ವಿಭಾಗದ ಉಪ ನಿರ್ದೇಶಕರು, ವೈದ್ಯಕೀಯ ವಿಭಾಗದ ಉಪ ನಿರ್ದೇಶಕರು, ಬಳ್ಳಾರಿ ಜಿಲ್ಲಾ ಶಸ್ತ್ರ-ಚಿಕಿತ್ಸಕರು, ಆನೇಕಲ್ ವೈದ್ಯಾಧಿಕಾರಿಯವರನ್ನು (ಆಡಳಿತ) ಸದಸ್ಯರನ್ನಾಗಿ ನಿಯೋಜಿಸಲಾಗಿದೆ.

ಇಲ್ಲಿನ ಕೆ.ಸಿ. ಜನರಲ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರನ್ನು ಸದಸ್ಯ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿದೆ. ಓರ್ವ ವಕೀಲ, ಮಹಿಳಾ ಪೊಲೀಸ್ ಅಧಿಕಾರಿ ಸಮಿತಿ ಸಭೆಯಲ್ಲಿ ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳಲಿದ್ದಾರೆ.

ಮಿದುಳಿನಲ್ಲಿ ರಕ್ತಸ್ರಾವ: ಸತತ 77 ದಿನಗಳ ಚಿಕಿತ್ಸೆ ಒದಗಿಸಿದ ವಾಣಿವಿಲಾಸ ಆಸ್ಪತ್ರೆ ವೈದ್ಯರು

# ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಗರ್ಭಿಣಿಗೆ ಯಶಸ್ವಿ ಹೆರಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಿದುಳಿನಲ್ಲಿ ರಕ್ತಸ್ರಾವವಾಗಿ, ಪ್ರಜ್ಞಾಹೀನ ಸ್ಥಿತಿಯಲ್ಲಿ ದಾಖಲಾಗಿದ್ದ ಗರ್ಭಿಣಿಗೆ ಇಲ್ಲಿನ ವಾಣಿವಿಲಾಸ ಆಸ್ಪತ್ರೆಯ ವೈದ್ಯರು ಯಶಸ್ವಿಯಾಗಿ ಹೆರಿಗೆ ಮಾಡಿಸಿ, ತೀವ್ರ ನಿಗಾ ಘಟಕದಲ್ಲಿ (ಐಸಿಯು) ಸತತ 77 ದಿನಗಳವರೆಗೆ ಚಿಕಿತ್ಸೆ ಒದಗಿಸಿದ್ದಾರೆ. ಇದರಿಂದಾಗಿ ಮಹಿಳೆ ಚೇತರಿಸಿಕೊಂಡಿದ್ದಾರೆ.

ತುಮಕೂರಿನ ಮಂಚಲಕುಪ್ಪೆಯ ಒಂಬತ್ತು ತಿಂಗಳ ಗರ್ಭಿಣಿಗೆ ರಕ್ತದೊತ್ತಡ ಹೆಚ್ಚಾಗಿ, ಮಿದುಳಿನಲ್ಲಿ ರಕ್ತಸ್ರಾವವಾಗಿತ್ತು. ಸ್ಥಳೀಯ ಆಸ್ಪತ್ರೆಗೆ ತೆರಳಿದ್ದ ಅವರು, ಶಿಫಾರಸು ಆಧಾರದಲ್ಲಿ ಕಳೆದ ಜೂನ್ 5ರಂದು ವಾಣಿವಿಲಾಸ ಆಸ್ಪತ್ರೆಗೆ ಬಂದಿದ್ದರು. ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ 30 ವರ್ಷದ ಮಹಿಳೆಗೆ ವೈದ್ಯರು ಅದೇ ದಿನ ಸಿಸೇರಿಯನ್ ಮಾಡಿ, ಗಂಡು ಮಗುವನ್ನು ಹೊರತೆಗೆದಿದ್ದರು. ಬಳಿಕ ಮಹಿಳೆಯನ್ನು ತೀವ್ರ ನಿಗಾ ಘಟಕಕ್ಕೆ ವರ್ಗಾಯಿಸಿ, ಅಲ್ಲಿ ಚಿಕಿತ್ಸೆ ನೀಡಿದ್ದರು. ಈಗ ಮಹಿಳೆ ಸಂಪೂರ್ಣ ಚೇತರಿಸಿಕೊಂಡಿದ್ದು, ಮಗುವೂ ಆರೋಗ್ಯದಿಂದ ಇದೆ.



ವಾಣಿವಿಲಾಸ ಆಸ್ಪತ್ರೆ

'ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಮಹಿಳೆಗೆ ಹನ್ನೊಂದು ದಿನ ವೆಂಟಿಲೇಟರ್ ಸಂಪರ್ಕ ಕಲ್ಪಿಸಲಾಗಿತ್ತು. ಬಳಿಕ 'ಟ್ರಾಕಿಯೊಸ್ಟೊಮಿ' ಸಹಾಯದಿಂದ ಕೃತಕ ಗಾಳಿ ನೀಡಲಾಯಿತು. ಇದರಿಂದಾಗಿ ನಿಧಾನವಾಗಿ ಅವರಿಗೆ ಪ್ರಜ್ಞೆ ಮರಳಿತು. ಆಸ್ಪತ್ರೆಗೆ ದಾಖಲಾದಾಗ ಅವರ ಕೈ-ಕಾಲುಗಳಿಗೆ ಸ್ವಾಧೀನ ಇರಲಿಲ್ಲ. ಫಿಸಿಯೊಥೆರಪಿ ಸಹಾಯದಿಂದ ಅವರು ಚೇತರಿಸಿಕೊಂಡರು. ಈಗ ಯಾರ ಸಹಾಯವಿಲ್ಲದೆ ಅವರು ಎದ್ದು ಓಡಾಡುತ್ತಾರೆ. ಇದನ್ನು ವೈದ್ಯಕೀಯ ಕ್ಷೇತ್ರದ ಚಮತ್ಕಾರವೆಂದೇ ಭಾವಿಸಿದ್ದೇವೆ' ಎಂದು ಚಿಕಿತ್ಸೆ ನೀಡಿದ ವೈದ್ಯಕೀಯ ತಂಡದ ಡಾ. ಇಂದುಮತಿ ತಿಳಿಸಿದರು.

ಆಸ್ಪತ್ರೆಯ ವೈದ್ಯಕೀಯ ಅಧೀಕ್ಷರಾದ ಡಾ. ಸವಿತಾ, ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗದ ಮುಖ್ಯಸ್ಥರಾದ ಡಾ. ಶ್ರೀನಿವಾಸ್, ಘಟಕದ ಮುಖ್ಯಸ್ಥರಾದ ಡಾ. ಅಶೋಕ್ ಕುಮಾರ್ ದೇವೂರ್, ವೈದ್ಯಕೀಯ ವಿಭಾಗದ ಡಾ. ರವಿಶಂಕರ್ ಹಾಗೂ ಅರಿವಳಿಕೆ ಸೇರಿ ವಿವಿಧ ವಿಭಾಗಗಳ ವೈದ್ಯರನ್ನು ಒಳಗೊಂಡ ತಂಡವು ಮಹಿಳೆಗೆ ಚಿಕಿತ್ಸೆ ನೀಡಿದೆ. ಈ ಅವಧಿಯಲ್ಲಿ ಮಗುವಿಗೆ ಆಸ್ಪತ್ರೆಯ 'ಅಮೃತಧಾರೆ' ಎದೆಹಾಲು ಬ್ಯಾಂಕಿನ ಮೂಲಕ ಅಗತ್ಯ ಹಾಲನ್ನು ಒದಗಿಸಿ, ಆರೈಕೆ ಮಾಡಲಾಗಿದೆ.

'ವೈದ್ಯರು ಸಕಾಲಕ್ಕೆ ಅಗತ್ಯ ಚಿಕಿತ್ಸೆ ಒದಗಿಸಿ, ತಾಯಿ-ಮಗುವನ್ನು ರಕ್ಷಿಸಿದ್ದಾರೆ. ಸರ್ಕಾರಿ ಆಸ್ಪತ್ರೆಗಳು ಬಡವರ ಪಾಲಿಗೆ ಸಂಜೀವಿನಿ ಎಂಬುದು ನಮ್ಮ ಪ್ರಕರಣದಲ್ಲಿ ಸಾಬೀತಾಗಿದೆ' ಎಂದು ಕುಟುಂಬಸ್ಥರು ಹೇಳಿದರು.

## ಹೃದಯ ಸಮಸ್ಯೆ: ಮಂಜುನಾಥ್ ನೇತೃತ್ವದಲ್ಲಿ ಶಸ್ತ್ರ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂತ್ರಪಿಂಡ ವೈಫಲ್ಯದ ಜತೆಗೆ ಹೃದಯ ಸಮಸ್ಯೆ ಹೊಂದಿದ್ದ 54 ವರ್ಷದ ವ್ಯಕ್ತಿಯೊಬ್ಬರಿಗೆ ಸಂಸದರೂ ಆಗಿರುವ ಹೃದ್ರೋಗ ತಜ್ಞ ಡಾ.ಸಿ.ಎನ್. ಮಂಜುನಾಥ್ ನೇತೃತ್ವದ ವೈದ್ಯರ ತಂಡವು ಸಂಕೀರ್ಣ ಆಂಜಿಯೋಪ್ಲಾಸ್ಟಿ ಚಿಕಿತ್ಸೆ ನಡೆಸಿ, ಸ್ಟೆಂಟ್ ಅಳವಡಿಸುವಲ್ಲಿ ಯಶಸ್ವಿಯಾಗಿದೆ.

ಜಯನಗರದ ಬೆಂಗಳೂರು ಆಸ್ಪತ್ರೆಗೆ ದಾಖಲಾಗಿದ್ದ ರೋಗಿಗೆ ಹೃದಯದ ರಕ್ತನಾಳದಲ್ಲಿ ರಕ್ತ ಪರಿಚಲನೆ ಶೇ 90 ರಷ್ಟು ಸ್ಥಗಿತವಾಗಿತ್ತು. ಪರೀಕ್ಷೆ ನಡೆಸಿದ ಬಳಿಕ ಹೊಸ 'ಆರ್ಬಿಟಲ್ ಅಥೆರೆಕ್ಟಮಿ' ಸಾಧನ ಬಳಸಿ ಚಿಕಿತ್ಸೆ ಒದಗಿಸಲಾಗಿದೆ ಎಂದು ಸಿ.ಎನ್. ಮಂಜುನಾಥ್ ಅವರು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ಆರ್ಬಿಟಲ್ ಅಥೆರೆಕ್ಟಮಿ' ಸಾಧನಕ್ಕೆ ₹3 ಲಕ್ಷವಿದ್ದು, ಸಂಸದರ ವಿನಂತಿ ಮೇರೆಗೆ ಕಂಪನಿಯೊಂದು ಈ ಸಾಧನವನ್ನು ಉಚಿತವಾಗಿ ಒದಗಿಸಿದೆ ಎಂದು ಆಸ್ಪತ್ರೆ ತಿಳಿಸಿದೆ.

ರಾಜಕೀಯಕ್ಕೆ ಪ್ರವೇಶಿಸಿದ ಬಳಿಕವೂ ಸಿ.ಎನ್. ಮಂಜುನಾಥ್ ಅವರು ವೈದ್ಯಕೀಯ ವೃತ್ತಿ ಮುಂದುವರಿಸಿರುವುದಕ್ಕೆ ಸಾಮಾಜಿಕ ಜಾಲತಾಣದಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ.



ಡಾ.ಸಿ.ಎನ್.ಮಂಜುನಾಥ್ ನೇತೃತ್ವದ ವೈದ್ಯರ ತಂಡವು ವ್ಯಕ್ತಿಯೊಬ್ಬರಿಗೆ ಶಸ್ತ್ರಚಿಕಿತ್ಸೆ ನಡೆಸಿತು

## 'ಕರ್ಮಯೋಗಿ' ಪ್ರಶಸ್ತಿಗೆ ಐವರು ಆಯ್ಕೆ

ಕಲಬುರಗಿ: ಉದ್ಯಮಿ ಎಸ್.ಎಸ್. ಪಾಟೀಲರ ದ್ವಿತೀಯ ಪುಣ್ಯಸ್ಮರಣೆ ಅಂಗವಾಗಿ ಎಸ್.ಆರ್.ಪಾಟೀಲ್ ಫೌಂಡೇಷನ್ ಹಾಗೂ ಪಾಟೀಲ ಗ್ರೂಪ್ ಆಫ್ ಇಂಡಸ್ಟ್ರೀಸ್ ನೀಡುವ 'ಕರ್ಮಯೋಗಿ' ಪ್ರಶಸ್ತಿಗೆ ಬೀದರ್ ಜಿಲ್ಲೆ ಭಾಲ್ಕಿ ಹಿರೇಮಠ ಸಂಸ್ಥಾನದ ಬಸವಲಿಂಗ ಪಟ್ಟದ್ದೇವರು ಸೇರಿದಂತೆ ಐವರು ಸಾಧಕರನ್ನು ಆಯ್ಕೆ ಮಾಡಲಾಗಿದೆ.

ಬಸವಲಿಂಗ ಪಟ್ಟದ್ದೇವರು (ಶಿಕ್ಷಣ) ಬೆಂಗಳೂರಿನಲ್ಲಿ ನೆಲೆಸಿರುವ ಮೂಲತಃ ಕಲಬುರಗಿ ಉದ್ಯಮಿ ಎನ್.ಕೆ.ಮಾಲು (ವಾಣಿಜ್ಯ) ಹಿರಿಯ ಚಿತ್ರಕಲಾವಿದ ವಿ.ಜಿ. ಅಂದಾನಿ (ಕಲಾಕ್ಷೇತ್ರ) ಕೊಪ್ಪಳದ ಸಾಹಿತಿ ಅಲ್ಲಮಪ್ರಭು ಬೆಟದೂರ (ಸಾಹಿತ್ಯ) ಹಾಗೂ ಕ್ಯಾನ್ಸರ್ ತಜ್ಞೆ ವಿಜಯಲಕ್ಷ್ಮಿ ದೇಶಮಾನೆ (ಸಮಾಜ ಸೇವೆ) ಅವರು ಈ ಸಾಲಿನ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ ಎಂದು ಫೌಂಡೇಷನ್ ಅಧ್ಯಕ್ಷ ಮನು ಬಳಿಗಾರ್ ತಿಳಿಸಿದರು

ಪ್ರಶಸ್ತಿ ತಲಾ ₹ 51 ಸಾವಿರ, ಫಲಕ ಒಳಗೊಂಡಿರುತ್ತದೆ. ಶುಕ್ರವಾರ ಕಲಬುರಗಿಯ ಎಸ್.ಎಂ.ಪಂಡಿತ ರಂಗ ಮಂದಿರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದರು.

# ರಾಜ್ಯದ 10 ನದಿಗಳು ಮಲಿನ

ಎನ್‌ಜಿಟಿಗೆ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಮಾಣಪತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ನಗರ ಮತ್ತು ಪಟ್ಟಣ ಪ್ರದೇಶಗಳ ಒಳಚರಂಡಿ ನೀರು ಹಾಗೂ ಆಯಾ ಜಲಾನಯನ ಪ್ರದೇಶಗಳಲ್ಲಿನ ಕೈಗಾರಿಕೆಗಳ ತ್ಯಾಜ್ಯ ಸೇರುತ್ತಿರುವುದರಿಂದ ರಾಜ್ಯದ 10 ನದಿಗಳು ಕಲುಷಿತಗೊಂಡಿವೆ ಎಂದು ಕರ್ನಾಟಕ ಸರ್ಕಾರವೇ ಒಪ್ಪಿಕೊಂಡಿದೆ.

ರಾಜ್ಯದ ನದಿಗಳು ಮಲಿನಗೊಂಡಿರುವ ಕುರಿತು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿರುವ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ (ಎನ್‌ಜಿಟಿ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು (ಕೆಎಸ್‌ಪಿಸಿಬಿ) ಈ ಸಂಬಂಧ ಪ್ರಮಾಣಪತ್ರ ಸಲ್ಲಿಸಿದೆ.

ರಾಜ್ಯದ 17 ನದಿಗಳು ಕಲುಷಿತಗೊಂಡಿವೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು (ಸಿಪಿಸಿಬಿ) 2022ರಲ್ಲಿ ಜಲಶಕ್ತಿ ಸಚಿವಾಲಯಕ್ಕೆ ವರದಿ ಸಲ್ಲಿಸಿತ್ತು. 'ಶರಾವತಿ, ಗಂಗಾವಳಿ, ಅಘನಾಶಿನಿ, ಕೃಷ್ಣಾ, ಕಾಗಿನ ಹಾಗೂ ನೇತ್ರಾವತಿ ನದಿಗಳಲ್ಲಿ ಕರಗಿದ ಆಮ್ಲಜನಕದ (ಬಿಒಡಿ) ಪ್ರಮಾಣ 3 ಮಿಲಿಗ್ರಾಂ/ಲೀಟರ್ ದಾಟಿಲ್ಲ. ಹೀಗಾಗಿ, ಈ ನದಿಗಳನ್ನು ಕಲುಷಿತ ನದಿಗಳ ಪಟ್ಟಿಯಿಂದ ಕೈಬಿಡಬೇಕು ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಗೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದೆ.

2019ರಿಂದ 2021ರ ನಡುವೆ ನದಿಗಳ ನೀರಿನ ಗುಣಮಟ್ಟ ಪರಿಶೀಲಿಸಿ ಸಿಪಿಸಿಬಿ 2022ರಲ್ಲಿ ವರದಿ ಬಿಡುಗಡೆ ಮಾಡಿತ್ತು. 'ದೇಶದ 311 ನದಿಗಳು ಮಲಿನಗೊಂಡಿವೆ. ಅದರಲ್ಲಿ ಕರ್ನಾಟಕದ 17 ನದಿಗಳು ಸೇರಿವೆ' ಎಂದು ತಿಳಿಸಿತ್ತು. 'ಕಾಳಿ, ಯಗಚಿ, ಮಲಪ್ರಭಾ, ಕುಮಾರಧಾರ ಸೇರಿ ಐದು ನದಿಗಳ ನೀರಿನ ಮಟ್ಟ ಸುಧಾರಣೆ ಆಗಿರುವುದರಿಂದ ಮಲಿನ ನದಿಗಳ ಪಟ್ಟಿಯಿಂದ ಕೈಬಿಡಲಾಗಿದೆ. ದಕ್ಷಿಣ ಪಿನಾಕಿನಿ, ತೆಂಪೆನ್ನೈ, ಶರಾವತಿ, ಗಂಗಾವಳಿ ಹಾಗೂ ಅಘನಾಶಿನಿ ನದಿಗಳನ್ನು ಕಲುಷಿತ ನದಿಗಳ ಪಟ್ಟಿಗೆ ಸೇರಿಸಲಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಿತ್ತು. ತೆಂಪೆನ್ನೈ ನದಿಯು ರಾಜ್ಯದಲ್ಲಿ ಹರಿಯುತ್ತಿಲ್ಲ ಎಂದು ಕರ್ನಾಟಕ ಸರ್ಕಾರ ಸ್ಪಷ್ಟನೆ ನೀಡಿತ್ತು. ಹೀಗಾಗಿ, ರಾಜ್ಯದ ಕಲುಷಿತ ನದಿಗಳ ಸಂಖ್ಯೆ 16ಕ್ಕೆ ಇಳಿದಿತ್ತು. ಇದೀಗ ಐದು ನದಿಗಳನ್ನು ಪಟ್ಟಿಯಿಂದ ಕೈಬಿಡುವಂತೆ ರಾಜ್ಯ ಸರ್ಕಾರ ಕೋರಿದೆ.

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಉಸ್ತುವಾರಿ ಕೇಂದ್ರ ಜಾಲವು, ಆಯಾ ರಾಜ್ಯಗಳ ಮಾಲಿನ್ಯ ನಿಯಂತ್ರಣ ಮಂಡಳಿಗಳ ಸಹಯೋಗದೊಂದಿಗೆ ನಿಯಮಿತವಾಗಿ ನದಿಗಳು ಹಾಗೂ ಇತರ ಜಲಮೂಲಗಳ ಗುಣಮಟ್ಟದ ಮೇಲ್ವಿಚಾರಣೆ ನಡೆಸುತ್ತಿದೆ. ಕೃಷಿ ತ್ಯಾಜ್ಯ, ಬಯಲು ಬಹಿರ್ದೆಸೆ, ಪಟ್ಟಣ ಮತ್ತು ನಗರ ಪ್ರದೇಶಗಳ ಘನತ್ಯಾಜ್ಯ ಮುಂತಾದವು ನದಿಗಳ ಮಾಲಿನ್ಯದ ಮೂಲಗಳಾಗಿವೆ.

### ಕಲುಷಿತ ನದಿಗಳು

| ನದಿ | ಕಲುಷಿತ ಎಲ್ಲಿ | ಗರಿಷ್ಠ ಬಿಒಡಿ (ಮಿಗ್ರಾಂ/ಲೀ) |
|---|---|---|
| ಅರ್ಕಾವತಿ | ಹೆಸರಘಟ್ಟದಿಂದ ಕನಕಪುರ | 39 |
| ಭದ್ರಾ | ಭದ್ರಾವತಿಯಿಂದ ಹೊಳೆಹೊನ್ನೂರು | 7 |
| ಭೀಮಾ | ಗಂಗಾಪುರದಿಂದ ಯಾದಗಿರಿ | 4 |
| ಕಾವೇರಿ | ಶ್ರೀರಂಗಪಟ್ಟಣ ಸೇರಿ | 6 |
| ದಕ್ಷಿಣ ಪಿನಾಕಿನಿ | ಆನೇಕಲ್ ಮುಗಳೂರಿನ ಉದ್ದಕ್ಕೂ | 111 |
| ಕಬಿನಿ | ನಂಜನಗೂಡಿನ ಉದ್ದಕ್ಕೂ | 3.8 |
| ಲಕ್ಷ್ಮಣತೀರ್ಥ | ಹುಣಸೂರು ಸೇರಿ | 5.6 |
| ಶಿಂಷಾ | ಯಡಿಯೂರಿನಿಂದ ಮದ್ದೂರು | 9.5 |
| ತುಂಗಾ | ಶಿವಮೊಗ್ಗ ಸೇರಿ | 6 |
| ತುಂಗಭದ್ರಾ | ಕೂಡ್ಲಿಯಿಂದ ಮೈಲಾರ | 6.2 |

### ಡಿಸೆಂಬರ್ ಅಂತ್ಯದೊಳಗೆ ಎಸ್‌ಟಿಪಿ

ಕಲುಷಿತ ನದಿಗಳ ದಡದಲ್ಲಿರುವ ಎಲ್ಲ ಪಟ್ಟಣ ಹಾಗೂ ನಗರಗಳಲ್ಲಿ ತ್ಯಾಜ್ಯ ನೀರು ಸಂಸ್ಕರಣ ಘಟಕಗಳನ್ನು ನಿರ್ಮಿಸಲು ಕ್ರಿಯಾಯೋಜನೆ ಸಿದ್ಧಪಡಿಸಲಾಗಿದೆ. ಈ ಘಟಕಗಳು ನಿರ್ಮಾಣ ಹಂತದಲ್ಲಿದ್ದು, ಡಿಸೆಂಬರ್ ಅಂತ್ಯದೊಳಗೆ ಕಾರ್ಯಾರಂಭ ಮಾಡಲಿವೆ ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ತಿಳಿಸಿದೆ.

ನದಿಗಳ ನೀರಿನ ಗುಣಮಟ್ಟ ಪರಿಶೀಲಿಸಲು 68 ಮೇಲ್ವಿಚಾರಣಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ನೀರಿನ ಗುಣಮಟ್ಟವನ್ನು ಪ್ರತಿ ತಿಂಗಳು ವಿಶ್ಲೇಷಿಸಲಾಗುತ್ತದೆ. ನೈಜ ಸಮಯದ ಆಧಾರದಲ್ಲಿ ನೀರಿನ ಗುಣಮಟ್ಟದ ನಿರಂತರ ಮೇಲ್ವಿಚಾರಣೆಗಾಗಿ 17 ಕಲುಷಿತ ನದಿಗಳ ಉದ್ದಕ್ಕೂ 77 ಮೇಲ್ವಿಚಾರಣಾ ಘಟಕಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ ಎಂದು ಮಾಹಿತಿ ನೀಡಿದೆ.

## 2ನೇ ಅತಿ ದೊಡ್ಡ ವಜ್ರ ಪತ್ತೆ

ಗಬರೋನೆ (ಬೋಟ್ಸ್‌ವಾನ) (ಎಪಿ): ಪ್ರಪಂಚದಲ್ಲಿ ಹೆಚ್ಚು ವಜ್ರವನ್ನು ಉತ್ಪಾದಿಸುವ 2ನೇ ದೇಶವಾಗಿರುವ ಬೋಟ್ಸ್‌ವಾನದ ಗಣಿಯೊಂದರಲ್ಲಿ ಬೃಹತ್ ವಜ್ರವೊಂದು ಪತ್ತೆಯಾಗಿದೆ. ಇದು ಬೋಟ್ಸ್‌ವಾನದಲ್ಲಿ ಈವರೆಗೆ ದೊರೆತ ಅತಿ ಹೆಚ್ಚು ತೂಕದ ವಜ್ರವಾಗಿದೆ. ಅಲ್ಲದೇ ಪ್ರಪಂಚದಲ್ಲೇ ಇದು ಈವರೆಗೆ ದೊರೆತಿರುವ 2ನೇ ದೊಡ್ಡ ವಜ್ರ ಎನ್ನಲಾಗಿದೆ.

2,492 ಕ್ಯಾರಟ್ ಇರುವ ಈ ವಜ್ರವನ್ನು ಪ್ರದರ್ಶನಕ್ಕೆ ಇಡಲಾಗುವುದೆಂದು ಬೋಟ್ಸ್‌ವಾನ ತಿಳಿಸಿದೆ. ಕಳೆದ ನೂರು ವರ್ಷಗಳ ಅವಧಿಯಲ್ಲಿ ದೇಶದಲ್ಲಿ ಇಷ್ಟು ತೂಕದ ವಜ್ರ ಪತ್ತೆಯಾಗಿರಲಿಲ್ಲ. ಈ ಹಿಂದೆ 1905ರಲ್ಲಿ ದೊರೆತಿದ್ದ, 3,106 ಕ್ಯಾರಟ್ ವಜ್ರವನ್ನು ಹಲವಾರು ರತ್ನಗಳನ್ನಾಗಿ ಕತ್ತರಿಸಲಾಗಿತ್ತು.



## 'ರಾಜ್ಯಪಾಲರ ನಡೆ ಖಂಡನೀಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯಪಾಲರು ಪ್ರಜಾಪ್ರಭುತ್ವದ ಆಶಯವನ್ನು ಭಗ್ನಗೊಳಿಸಿ ಸಂವಿಧಾನ ವಿರೋಧಿಗಳಂತೆ ನಡೆದುಕೊಂಡಿರುವುದು ಖಂಡನೀಯ' ಎಂದು ಎದ್ದೇಳು ಕರ್ನಾಟಕ ಸಂಘಟನೆ ಹೇಳಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘಟನೆಯ ಬಿ.ಟಿ. ಲಲಿತಾ ನಾಯಕ್, ಶ್ರೀಪಾದ್ ಭಟ್, ಎನ್. ವೆಂಕಟೇಶ್, 'ರಾಜ್ಯದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ರಾಜ್ಯ ವಿರೋಧಿ ಹಾಗೂ ಜನ ವಿರೋಧಿ ನಡೆಯನ್ನು ಖಂಡಿಸಬೇಕು. ದೇಶ ಒಡೆಯುವ ಶಕ್ತಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು. ಜನಪರ ಆಡಳಿತ ನೀಡುವ ಮೂಲಕ ವಿರೋಧ ಪಕ್ಷಗಳ ಸಂಚುಗಳನ್ನು ವಿಫಲಗೊಳಿಸಬೇಕು' ಎಂದು ಆಗ್ರಹಿಸಿದರು.

'ನ್ಯಾಯಾಲಯವು ರಾಜ್ಯಪಾಲರ ಕೀಳುಮಟ್ಟದ ರಾಜಕೀಯ ನಡೆಯನ್ನು ತಿರಸ್ಕರಿಸುವ ಮೂಲಕ ದೇಶದ ಸಂವಿಧಾನಿಕ ಮೌಲ್ಯಗಳ ಘನತೆಯನ್ನು ಎತ್ತಿ ಹಿಡಿಯಬೇಕು. ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಕಳೆದ 15 ತಿಂಗಳಲ್ಲಿ ಜನರಿಗೆ ಸಂಬಂಧಿಸಿದ ಒಂದೇ ಒಂದು ಸಮಸ್ಯೆಯನ್ನು ಕೈಗೆತ್ತಿಕೊಂಡು ವಿಧಾನ ಸಭೆಯಲ್ಲಿ ಮಾತನಾಡಲಿಲ್ಲ. ಆದರೆ, ಸಾಂವಿಧಾನಿಕವಾಗಿ ಜನರು ಆಯ್ಕೆ ಮಾಡಿರುವ ಸರ್ಕಾರವನ್ನು ಬುಡಮೇಲು ಮಾಡಲು ಯತ್ನಿಸುತ್ತಿವೆ' ಎಂದು ಆರೋಪಿಸಿದರು.

ಜಮಾತೆ ಇಸ್ಲಾಮಿ ಹಿಂದ್‌ನ ಯೂಸೂಫ್ ಕನ್ನಿ, ಕರ್ನಾಟಕ ಜನಶಕ್ತಿ ರಾಜ್ಯ ಕಾರ್ಯದರ್ಶಿ ಕೆ.ಎಲ್. ಅಶೋಕ್ ಭಾಗವಹಿಸಿದ್ದರು.

## ಬನ್ನೇರುಘಟ್ಟ: ಜನವನ ಉತ್ಸವಕ್ಕೆ ಚಾಲನೆ

ಆನೇಕಲ್ : ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಗುರುವಾರ ಐದು ದಿನಗಳ ಜನವನ ಉತ್ಸವಕ್ಕೆ ಚಾಲನೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ಪ್ರಕೃತಿ ಮತ್ತು ವನ್ಯಜೀವಿಗಳ ಸಂರಕ್ಷಣೆಗಾಗಿ ತಮ್ಮ ಕರ್ತವ್ಯ ಪಾಲಿಸುವುದಾಗಿ ಪ್ರತಿಜ್ಞೆ ಸ್ವೀಕರಿಸಿದರು. ಉತ್ಸವದಲ್ಲಿ ಪರಿಸರ ಕುರಿತ ಚಲನಚಿತ್ರ ಪ್ರದರ್ಶನ, ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಕಾರ್ಯಾಗಾರ, ವಸ್ತುಪ್ರದರ್ಶನ ಆಯೋಜಿಸಲಾಗಿದೆ.

ಬನ್ನೇರುಘಟ್ಟ ಜೈವಿಕ ಉದ್ಯಾನ ಮತ್ತು ಅಜೀಂ ಪ್ರೇಮ್‌ಜೀ ವಿ.ವಿ ಸಹಯೋಗದಲ್ಲಿ ನಡೆದ ಕಾರ್ಯಕ್ರಮವನ್ನು ಉದ್ಯಾನದ ಕಾರ್ಯನಿರ್ವಾಹಕನಿರ್ದೇಶಕ ಸೂರ್ಯಸೇನ್ ಉದ್ಘಾಟಿಸಿದರು. ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ರಿಜಿಸ್ಟರ್ ಶರತ್ ಸುರೆ, ಹವಾಮಾನ ಬದಲಾವಣೆ ಮತ್ತು ಸುಸ್ಥಿರತೆ ಕೇಂದ್ರದ ನಿರ್ದೇಶಕಿ ಹರಿಣಿ ನಾಗೇಂದ್ರ ಇದ್ದರು.

ಅಕ್ಟೋಬರ್‌ನಿಂದ ನಿತ್ಯ 2.5 ಲಕ್ಷ ಲೀಟರ್ ಪೂರೈಕೆಗೆ ಸಿದ್ಧತೆ

# ರಾಷ್ಟ್ರ ರಾಜಧಾನಿಗೆ ನಂದಿನಿ ಹಾಲು

ಪ್ರಜಾವಾಣಿ ವಾರ್ತೆ

ನವದೆಹಲಿ: 'ಮದರ್ ಡೇರಿ' ಹಾಗೂ 'ಅಮೂಲ್'ನ ಮಾರುಕಟ್ಟೆಗೆ ಲಗ್ಗೆ ಹಾಕಲು ಕರ್ನಾಟಕ ಹಾಲು ಮಹಾಮಂಡಲ (ಕೆಎಂಎಫ್) ಸಜ್ಜಾಗಿದೆ. ರಾಷ್ಟ್ರ ರಾಜಧಾನಿಗೆ ಅಕ್ಟೋಬರ್‌ನಿಂದ ಪ್ರತಿದಿನ 2.5 ಲಕ್ಷ ಲೀಟರ್ ನಂದಿನಿ ಹಾಲು ಪೂರೈಕೆ ಮಾಡಲು ಸಿದ್ಧತೆ ನಡೆಸಿದೆ.

ಈ ಸಂಬಂಧ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಎಂ.ಕೆ. ಜಗದೀಶ್ ನೇತೃತ್ವದ ಅಧಿಕಾರಿಗಳ ತಂಡವು ನವದೆಹಲಿಯಲ್ಲಿ ಬುಧವಾರ ಹಾಗೂ ಗುರುವಾರ ಸುಮಾರು 70 ವಿತರಕರ ಜತೆಗೆ ಸಭೆಗಳನ್ನು ನಡೆಸಿ ಸಮಾಲೋಚಿಸಿದೆ.

'ಕರ್ನಾಟಕದಲ್ಲಿ ಈಗ ಅಂದಾಜು 1 ಕೋಟಿ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಸದ್ಯ ನಾವು ಆಂಧ್ರ ಪ್ರದೇಶ (ನಿತ್ಯ 2.5 ಲಕ್ಷ ಲೀಟರ್), ಮಹಾರಾಷ್ಟ್ರ (ನಿತ್ಯ 2.5 ಲಕ್ಷ ಲೀಟರ್) ಹಾಗೂ ತಮಿಳುನಾಡಿಗೆ (40 ಸಾವಿರ ಲೀಟರ್) ಹಾಲು ಪೂರೈಕೆ ಮಾಡುತ್ತಿದ್ದೇವೆ. ಇದೀಗ ಉತ್ತರ ಭಾರತದ ಮಾರುಕಟ್ಟೆಗೆ ನಂದಿನಿ ಹಾಲು ಪೂರೈಕೆ ಮಾಡಲು ತೀರ್ಮಾನಿಸಿದ್ದೇವೆ' ಎಂದು ಎಂ.ಕೆ. ಜಗದೀಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ಆರಂಭಿಕ ಹಂತದಲ್ಲಿ ನವದೆಹಲಿಗೆ ಪ್ರತಿದಿನ 2.5 ಲಕ್ಷ ಲೀಟರ್ ಹಾಕಲು ಪೂರೈಸಲು ಯೋಜನೆ ರೂಪಿಸಿದ್ದೇವೆ. ಆರು ತಿಂಗಳೊಳಗೆ 5 ಲಕ್ಷ ಲೀಟರ್‌ಗೆ ಏರಿಸುವ ಗುರಿ ಇಟ್ಟುಕೊಂಡಿದ್ದೇವೆ' ಎಂದು ಅವರು ತಿಳಿಸಿದರು.

'ನಾವು ನಂದಿನಿ ಹಾಲನ್ನು ರೈತರಿಂದ ಲೀಟರ್‌ಗೆ ₹32ಕ್ಕೆ ಖರೀದಿಸುತ್ತಿದ್ದೇವೆ. ನವದೆಹಲಿಯಲ್ಲಿ ಹಾಲಿನ ಬೆಲೆ ಕನಿಷ್ಠ ₹54 ಇದೆ. ಕರ್ನಾಟಕದಿಂದ ಇಲ್ಲಿಗೆ ಹಾಲು ಸಾಗಣೆ ಮಾಡುವುದು ದೊಡ್ಡ ಸವಾಲು. ಸಾಗಣೆಗೆ ಕನಿಷ್ಠ 53 ಗಂಟೆಗಳು ಬೇಕು. ಇದರ ನಡುವೆಯೂ, ದೆಹಲಿಗೆ ಹಾಲು ಪೂರೈಕೆ ಮಾಡಿದರೆ ಕೆಎಂಎಫ್‌ಗೆ ಹೆಚ್ಚಿನ ಲಾಭ ಉಂಟಾಗಲಿದೆ. ರಾಜ್ಯದ ರೈತರಿಗೂ ಅನುಕೂಲವಾಗಲಿದೆ' ಎಂದು ಅವರು ತಿಳಿಸಿದರು.

'ಹಾಸನ ಜಿಲ್ಲಾ ಹಾಲು ಒಕ್ಕೂಟದ ಮೂಲಕ ಇಲ್ಲಿ ಸಮೀಕ್ಷೆ ನಡೆಸಿ ಮಾರುಕಟ್ಟೆಯ ಮಾಹಿತಿ ಕಲೆ ಹಾಕಿದ್ದೇವೆ. ಹಾಸನ ಒಕ್ಕೂಟವು ಇಲ್ಲಿಗೆ ಹಾಲು ಪೂರೈಕೆ ಮಾಡಲಿದೆ. ಮುಂದಿನ ದಿನಗಳಲ್ಲಿ ಭೋಪಾಲ್, ಇಂದೋರ್ ಹಾಗೂ ಉಜ್ಜೈನಿಯಲ್ಲಿ ನಂದಿನಿ ಹಾಲು ಪೂರೈಸಲು ಯೋಜಿಸಲಾಗಿದೆ. ಇದಕ್ಕಾಗಿ ಶಿವಮೊಗ್ಗ ಜಿಲ್ಲಾ ಹಾಲು ಒಕ್ಕೂಟದ ಮೂಲಕ ಸಮೀಕ್ಷೆ ನಡೆಸಲಾಗುತ್ತಿದೆ' ಎಂದು ಅವರು ಮಾಹಿತಿ ನೀಡಿದರು.

'ನಂದಿನಿಯ ಉತ್ಪನ್ನಗಳನ್ನು ಮಾರಾಟ ಮಾಡಲು ಕರ್ನಾಟಕ ಭವನದಲ್ಲಿ ಮಳಿಗೆ ಆರಂಭಿಸಲು ಪ್ರಸ್ತಾವ ಸಲ್ಲಿಸಲಾಗಿದೆ. ರಾಜಧಾನಿಯ ಪ್ರಮುಖ ಸ್ಥಳವೊಂದರಲ್ಲಿ ನಂದಿನಿ ಮಳಿಗೆ ತೆರೆಯಲು ಜಾಗ ನೀಡುವಂತೆ ದೆಹಲಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಜತೆಗೆ, ಇಲ್ಲಿನ ಸ್ಥಳೀಯ ಅಂಗಡಿಗಳಲ್ಲಿ ನಂದಿನಿ ತುಪ್ಪ ಮಾರಾಟಕ್ಕೆ ಯೋಜಿಸಿದ್ದೇವೆ' ಎಂದರು.




ವಿತರಕರ ಸಭೆಯಲ್ಲಿ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಎಂ.ಕೆ.ಜಗದೀಶ್ ಮಾತನಾಡಿದರು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

# ಅಭಿಮತ



**ಸುಭಾಷಿತ**

ಯಾವ ಜಾಗಕ್ಕೆ ಹೋದರೂ ಯಾರ ಜೊತೆ ಇದ್ದರೂ ನಾವು ನಾವಾಗಿರಬೇಕು, ಕೊಳಕಾಗಬಾರದು.

-ಸಿದ್ಧೇಶ್ವರ ಸ್ವಾಮೀಜಿ

## ತುಂಗಭದ್ರಾ ಅಣೆಕಟ್ಟೆಗೆ ಸ್ಟಾಪ್‌ಲಾಗ್ ಅಳವಡಿಕೆ: ತಜ್ಞರ ಕಾರ್ಯ ಶ್ಲಾಘನೀಯ

**ತುಂಗಭದ್ರಾ** ಅಣೆಕಟ್ಟಿನ ಕೊಚ್ಚಿಹೋದ ಕ್ರಸ್ಟ್‌ಗೇಟ್ ಜಾಗದಲ್ಲಿ ಸ್ಟಾಪ್‌ಲಾಗ್ ವ್ಯವಸ್ಥೆ ಅಳವಡಿಕೆ ಕಾರ್ಯವು ನಿರೀಕ್ಷೆಗೂ ಮೀರಿದ ವೇಗದಲ್ಲಿ ಪೂರ್ಣಗೊಂಡಿರುವುದು ಅಚ್ಚುಕಟ್ಟು ಪ್ರದೇಶದ ರೈತ ಸಮೂಹದಲ್ಲಿ ಸಂತಸ ಮೂಡಿಸಿದೆ. ಇದಕ್ಕಾಗಿ ಶ್ರಮಿಸಿದ ತಜ್ಞರು, ಅಧಿಕಾರಿಗಳು, ಶ್ರಮಿಕರ ಕೆಲಸ ಶ್ಲಾಘನೀಯ. ಕೊಂಡಿ ಕಳಚಿ ಗೇಟ್ ಕೊಚ್ಚಿಹೋಗುವುದನ್ನು ತಡೆಗಟ್ಟಲು ಮುನ್ನೆಚ್ಚರಿಕೆ ವಹಿಸಬೇಕಿತ್ತು; ಕಾಲಕಾಲಕ್ಕೆ ನಿರ್ವಹಣೆಯನ್ನು ಮಾಡಬೇಕಿತ್ತು. ಈ ಕೆಲಸದಲ್ಲಿ ಎಚ್ಚರ ತಪ್ಪಿದ್ದರಿಂದ ಬಂದೊದಗಿದ ಅಪಾಯವನ್ನು ಎದುರಿಸಲು ತಕ್ಷಣವೇ ಕಾರ್ಯತತ್ಪರರಾಗಿ, ಸಂಬಂಧಪಟ್ಟ ಎಲ್ಲರನ್ನೂ ಅಣಿಗೊಳಿಸಿ ಸ್ಟಾಪ್‌ಲಾಗ್ ವ್ಯವಸ್ಥೆ ಅಳವಡಿಸಿದ್ದರಿಂದ 30 ಟಿಎಂಸಿ ಅಡಿಗಳಷ್ಟು ನೀರನ್ನು ಉಳಿಸಿಕೊಳ್ಳಲು ಸಾಧ್ಯವಾಗಿದೆ. ಜಡ್ಡುಗಟ್ಟಿದ ಆಡಳಿತ, ಸಮನ್ವಯದ ಕೊರತೆ, ಭ್ರಷ್ಟಾಚಾರ ಇವೆಲ್ಲವೂ ಯಾವುದೇ ಪಕ್ಷದ ನೇತೃತ್ವದ ಸರ್ಕಾರ ಇದ್ದಾಗಲೂ ಜಾಡ್ಯದಂತೆಯೇ ಇವೆ. ಹೀಗಿರುವಾಗ ಇಂತಹದೊಂದು ಸಾಧನೆಯೂ ಸಾಧ್ಯವಾಗುತ್ತದೆ ಎಂದಾದರೆ, ಸಾರ್ವಜನಿಕರ ಸಣ್ಣ ಮೆಚ್ಚುಗೆಯೂ ಕರ್ತವ್ಯಪರರಲ್ಲಿ ಕೆಲಸ ಮಾಡುವ ಆಸಕ್ತಿಯನ್ನು ಹೆಚ್ಚಿಸುತ್ತದೆ. ತುಂಗಭದ್ರಾ ಜಲಾಶಯವನ್ನು ಕರ್ನಾಟಕ, ಅವಿಭಜಿತ ಆಂಧ್ರಪ್ರದೇಶ ಹಾಗೂ ಕೇಂದ್ರ ಸರ್ಕಾರದ ಸಹಯೋಗದಲ್ಲಿ 70 ವರ್ಷಗಳ ಹಿಂದೆ ನಿರ್ಮಿಸಲಾಗಿದೆ. ಕರ್ನಾಟಕದ ವಿಜಯನಗರ, ಕೊಪ್ಪಳ, ಬಳ್ಳಾರಿ, ರಾಯಚೂರು ಜಿಲ್ಲೆಗಳ 12 ಲಕ್ಷ ಎಕರೆ ಹಾಗೂ ಆಂಧ್ರಪ್ರದೇಶ, ತೆಲಂಗಾಣ ರಾಜ್ಯಗಳ ಐದು ಲಕ್ಷ ಎಕರೆ ಕೃಷಿ ಜಮೀನುಗಳಿಗೆ ಇದು ನೀರಾವರಿ ಒದಗಿಸುತ್ತದೆ. ಕೈಗಾರಿಕೆಗಳೂ ಇದೇ ನೀರನ್ನು ಆಶ್ರಯಿಸಿವೆ. ಜಲಾಶಯದ 19ನೇ ಕ್ರಸ್ಟ್‌ಗೇಟ್ ಈ ತಿಂಗಳ 10ರ ರಾತ್ರಿ ಕೊಚ್ಚಿ ಹೋಗಿ, ಭಾರಿ ಪ್ರಮಾಣದಲ್ಲಿ ನೀರು ಹರಿದುಹೋಗಲು ಆರಂಭಿಸಿತು. ತ್ವರಿತ ಕ್ರಮ ಮತ್ತು ಯುದ್ಧೋಪಾದಿಯಲ್ಲಿ ಕಾರ್ಯಾಚರಣೆ ನಡೆಸಿದ್ದರಿಂದ ನೀರಿನ ಪೋಲು ನಿಯಂತ್ರಿಸಲು ಸಾಧ್ಯವಾಯಿತು.



ಈ ವಿಷಯದಲ್ಲಿ ಕರ್ನಾಟಕ ಹಾಗೂ ಆಂಧ್ರಪ್ರದೇಶ ಸರ್ಕಾರಗಳು ತಕ್ಷಣ ಸ್ಪಂದಿಸಿದವು. ಅಧಿಕಾರಿಗಳು, ಎಂಜಿನಿಯರ್‌ಗಳು, ತಜ್ಞರು ಸೇರಿ ಸ್ಟಾಪ್‌ಲಾಗ್ ವ್ಯವಸ್ಥೆ ಅಳವಡಿಕೆಗೆ ಬೇಕಾದ ಸಿದ್ಧತೆಯನ್ನು ಆರಂಭಿಸಿದರು. ಅನುಭವಿ ಎಂಜಿನಿಯರ್ ಕನ್ನಯ್ಯ ನಾಯ್ಡು ತಮ್ಮ ಪರಿಣತಿ ಹಾಗೂ ಶ್ರಮವನ್ನು ಧಾರೆ ಎರೆದರು. ಆಗಸ್ಟ್ 17ಕ್ಕೆ ಅಂದರೆ ಏಳೇ ದಿನಕ್ಕೆ ಸ್ಟಾಪ್‌ಲಾಗ್ ವ್ಯವಸ್ಥೆ ಅಳವಡಿಸುವ ಕೆಲಸ ಪೂರ್ಣಗೊಂಡಿತು. ಇದರಿಂದಾಗಿ 70 ಟಿಎಂಸಿ ಅಡಿ ನೀರು ಅಣೆಕಟ್ಟೆಯಲ್ಲೇ ಉಳಿಯಿತು. ಕರ್ನಾಟಕದ ಮಟ್ಟಿಗೆ ಇದೊಂದು ಹೆಮ್ಮೆಯ ಸಾಧನೆ ಹಾಗೂ ಪಾಠವೂ ಹೌದು. ರಾಜ್ಯದ ಅನೇಕ ಜಲಾಶಯಗಳು 70 ವರ್ಷದ ಆಸುಪಾಸಿನ ಇತಿಹಾಸ ಹೊಂದಿವೆ. ಇಷ್ಟು ಸುದೀರ್ಘ ವರ್ಷ ನೀರನ್ನು ತನ್ನ ಒಡಲೊಳಗಿಟ್ಟುಕೊಂಡ ಅಣೆಕಟ್ಟುಗಳು ಹಾಗೂ ನೀರಿನ ಹೊಡೆತವನ್ನು ತಾಳಿಕೊಂಡೇ ಇರುವ ಕ್ರಸ್ಟ್‌ಗೇಟ್‌ಗಳು ಸ್ವಾಭಾವಿಕವಾಗಿಯೇ ದುರ್ಬಲಗೊಂಡಿರುತ್ತವೆ. ಎಲ್ಲ ಅಣೆಕಟ್ಟುಗಳ ಸಾಮರ್ಥ್ಯದ ಪರಿಶೀಲನೆ, ಕ್ಷಮತೆಯ ಮೌಲ್ಯಮಾಪನವನ್ನು ತುರ್ತಾಗಿ ಕೈಗೆತ್ತಿಕೊಳ್ಳಬೇಕಾಗಿದೆ. ರಾಜ್ಯದಲ್ಲಿ ಹಿಂದೆಲ್ಲ, ಜಲಸಂಪನ್ಮೂಲ ಖಾತೆ ಹೊಂದಿರುವವರಿಗೆ ಅದೊಂದೇ ಖಾತೆಯ ಉಸ್ತುವಾರಿ ಇರುತ್ತಿತ್ತು. ಈಗ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರೂ ಆಗಿದ್ದಾರೆ. ಅದರೊಂದಿಗೆ ಬೆಂಗಳೂರಿನ ಅಭಿವೃದ್ಧಿಯ ಹೊಣೆಯೂ ಇದೆ. ರಾಜಧಾನಿಯ ನಿಭಾವಣೆ ಹೊತ್ತವರಿಗೆ, ಜಲಸಂಪನ್ಮೂಲದಂತಹ ಜವಾಬ್ದಾರಿಯುತ ಖಾತೆಯನ್ನು ನಿಭಾಯಿಸುವುದು ಕಷ್ಟಸಾಧ್ಯ. ಹೆಚ್ಚಿನ ಸಮಯವನ್ನು ಈ ಇಲಾಖೆಯ ಉಸ್ತುವಾರಿಗೆ ನೀಡಲಾಗದು. ಈ ಅಂಶ ಕೂಡ ಇಲಾಖೆಯ ಕಾರ್ಯವೈಖರಿಯ ಮೇಲೆ ಪರಿಣಾಮ ಬೀರಬಹುದು. ಇದನ್ನು ಸರಿಪಡಿಸುವ ದಿಸೆಯಲ್ಲೂ ಸರ್ಕಾರ ಯೋಚಿಸಬೇಕು. ಅಂತೆಯೇ ಎಲ್ಲ ಅಣೆಕಟ್ಟೆಗಳನ್ನು ಪರಿಶೀಲಿಸಿ, ಅವುಗಳ ಸುರಕ್ಷತೆಗೆ ತಕ್ಷಣದ ಹಾಗೂ ದೀರ್ಘಕಾಲೀನ ಯೋಜನೆಗಳನ್ನು ರೂಪಿಸಲು ಸಲಹೆ ನೀಡುವ ಕಾರ್ಯಪಡೆಯನ್ನು ತಜ್ಞರ ನೇತೃತ್ವದಲ್ಲಿ ರಚಿಸಿ, ಕಾಲಮಿತಿಯಲ್ಲಿ ವರದಿ ಪಡೆಯಬೇಕು. ಮುಂದಿನ ಮಳೆಗಾಲದೊಳಗಾದರೂ ಎಲ್ಲ ಅಣೆಕಟ್ಟುಗಳ ಸುರಕ್ಷತೆಯನ್ನು ಖಾತರಿಪಡಿಸಿಕೊಳ್ಳಲು ತುಂಗಭದ್ರಾ ಕ್ರಸ್ಟ್‌ಗೇಟ್ ಕೊಚ್ಚಿ ಹೋದ ಪ್ರಕರಣ ದಾರಿ ಮಾಡಿಕೊಡಲಿ. ಸರ್ಕಾರ ಈ ಬಗ್ಗೆ ಕಾರ್ಯಪ್ರವೃತ್ತವಾಗಲಿ.

> ರಾಜ್ಯದ ಎಲ್ಲ ಅಣೆಕಟ್ಟುಗಳ ಸುರಕ್ಷತೆಯನ್ನು ಖಾತರಿಪಡಿಸಿಕೊಳ್ಳಲು ತುಂಗಭದ್ರಾ ಕ್ರಸ್ಟ್‌ಗೇಟ್ ಕೊಚ್ಚಿ ಹೋದ ಪ್ರಕರಣ ದಾರಿ ಮಾಡಿಕೊಡಲಿ

### ದಿನದ ಟ್ವೀಟ್

**ಅನುಕರಣೀಯ ಸೇವೆ**



**ಇದು ನಿಜಕ್ಕೂ ಒಂದು ಅದ್ಭುತವಾದ ಉಪಕ್ರಮ! ಸಂಚಾರಿ ಪಶುಚಿಕಿತ್ಸಾ ವಾಹನಗಳು ಅತ್ಯಗತ್ಯ ಸೇವೆಯನ್ನು ಒದಗಿಸುವ ಮೂಲಕ, ಪ್ರಾಣಿಗಳಿಗೆ ಸಕಾಲದಲ್ಲಿ ಚಿಕಿತ್ಸೆ ದೊರೆಯುವುದನ್ನು ಖಾತರಿಪಡಿಸುತ್ತವೆ. ಪ್ರಾಣಿಗಳ ಕಲ್ಯಾಣಕ್ಕೆ ಆದ್ಯತೆ ನೀಡಿದ ತಮಿಳುನಾಡಿಗೆ ವಂದನೆ! ಇತರ ರಾಜ್ಯಗಳೂ ಇದನ್ನು ಅನುಸರಿಸುತ್ತವೆ ಎಂಬ ಆಶಾಭಾವ ಹೊಂದೋಣ.**

(ತಮಿಳುನಾಡಿನಲ್ಲಿ 200 ಸಂಚಾರಿ ಪಶುಚಿಕಿತ್ಸಾ ವಾಹನಗಳು ಗ್ರಾಮೀಣ ಸೇವೆಗೆ ಸಜ್ಜುಗೊಂಡಿರುವುದಕ್ಕೆ ಪ್ರತಿಕ್ರಿಯೆ)

**ಗಾಯತ್ರಿ ಶ್ರೀಕಾಂತ್,** ಡಿಎಂಕೆ ಮಹಿಳಾ ಘಟಕದ ಸಂಚಾಲಕಿ, ಪುದುಚೇರಿ

### ಕಿಡಿನುಡಿ



**ಧಾರವಾಡದ ರೈಲು ನಿಲ್ದಾಣವು 19 ಕೋಟಿ ರೂಪಾಯಿ ವೆಚ್ಚದಲ್ಲಿ ನವೀಕರಣಗೊಂಡ ಎರಡು ವರ್ಷದೊಳಗೇ ಸೋರುತ್ತಿದೆ ಮತ್ತು ಮೇಲ್ಛಾವಣಿ ಬಿರುಕು ಬಿಟ್ಟಿದೆ. ಈ ಮೊದಲು ಹಳೆಯ ಕಟ್ಟಡಗಳು ನವೀಕರಣಕ್ಕಾಗಿ ಕೆಡವುವ ದಿನ ಕೂಡ ಗಟ್ಟಿಯಾಗಿಯೇ ಇರುತ್ತಿದ್ದವು. ಜನ ಹೇಗೆ ಮತ ಹಾಕುತ್ತಾರೆ?**

**ಸತ್ಯನಾರಾಯಣ ಸಿರಿಗೇರಿ,** ಫಿಸಿಯೊಥೆರಪಿಸ್ಟ್

### 25 ವರ್ಷಗಳ ಹಿಂದೆ

ಸೋಮವಾರ, 23-8-1999

• **ಜಾಗತಿಕ ನಿಶ್ಶಸ್ತ್ರೀಕರಣಕ್ಕೆ ಯತ್ನ- ಅಟಲ್**

**ನವದೆಹಲಿ, ಆ. 22 (ಪಿಟಿಐ)-** ಜಾಗತಿಕ ಅಣ್ವಸ್ತ್ರ ನಿಶ್ಶಸ್ತ್ರೀಕರಣದ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ತನ್ನ ಯತ್ನಗಳನ್ನು ಭಾರತ ಮುಂದುವರಿಸುವುದಾಗಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ದೃಢಪಡಿಸಿದರು.

ಇಲ್ಲಿ ಜೈನ ಮುನಿ ಶ್ರೀ ಆನಂದ ಋಷಿ ಮಹಾರಾಜ್ ಅವರ ಜನ್ಮಶತಮಾನೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜೀವ್ ಗಾಂಧಿ ಅವರು ಪ್ರಧಾನಿಯಾಗಿದ್ದಾಗಲೇ ಭಾರತ, ಸಂಪೂರ್ಣ ನಿಶ್ಶಸ್ತ್ರೀಕರಣ ಮತ್ತು ಎಲ್ಲ ಅಣ್ವಸ್ತ್ರಗಳನ್ನು ನಾಶಗೊಳಿಸುವುದನ್ನು ಕೋರಿ ವಿಶ್ವಸಂಸ್ಥೆಗೆ ಪ್ರಸ್ತಾವ ಸಲ್ಲಿಸಿತ್ತು ಎಂದು ಪ್ರಧಾನಿ ತಿಳಿಸಿದರು.

ಈ ರೀತಿಯ ಯತ್ನಗಳಿಗೆ ಯಶಸ್ಸು ಏಕಾಏಕಿ ಲಭಿಸುವುದಿಲ್ಲ. ಅಹಿಂಸೆಯೇ ಶ್ರೇಷ್ಠ ಧರ್ಮವಾಗಿರುವುದರಿಂದ ನಿಶ್ಶಸ್ತ್ರೀಕರಣವನ್ನು ಪೂರ್ಣಗೊಳಿಸುವ ಯತ್ನಗಳು ಇನ್ನೂ ನಡೆದಿವೆ ಎಂದು ಅವರು ಹೇಳಿದರು.

• **2ನೇ ಹಂತದ ಕಾಂಗ್ರೆಸ್ ಪಟ್ಟಿ ಸಿದ್ಧ**

**ನವದೆಹಲಿ, ಆ. 22-** ಕರ್ನಾಟಕದಲ್ಲಿ ನಡೆಯಲಿರುವ ಎರಡನೇ ಹಂತದ ವಿಧಾನಸಭೆ ಚುನಾವಣೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಎಸ್.ಎಂ. ಕೃಷ್ಣ, ಹಿರಿಯ ನಾಯಕರಾದ ಡಿ.ಬಿ.ಚಂದ್ರೇಗೌಡ, ಎಸ್.ಬಿ.ಸಿದ್ನಾಳ್, ಕಾಗೋಡು ತಿಮ್ಮಪ್ಪ, ಎಚ್.ವಿಶ್ವನಾಥ್ ಮತ್ತು ಆರ್.ವಿ.ದೇಶಪಾಂಡೆ ಅವರು ಕಾಂಗ್ರೆಸ್ ಅಭ್ಯರ್ಥಿಗಳಾಗಿ ಕಣಕ್ಕಿಳಿಯುವ ಪ್ರಮುಖರು.

ಹಾಸನದಲ್ಲಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ವಿರುದ್ಧ ಬಲಿಷ್ಠ ಅಭ್ಯರ್ಥಿ ಹಾಕಬೇಕೆನ್ನುವ ಕಾರಣಕ್ಕಾಗಿ ಜಿಲ್ಲೆಯಲ್ಲಿ ಎರಡು ಗುಂಪಾಗಿದ್ದ ಶ್ರೀಕಂಠಯ್ಯ ಮತ್ತು ಜಿ.ಪುಟ್ಟಸ್ವಾಮಿಗೌಡ ಅವರ ನಡುವೆ ಸಾಮರಸ್ಯ ಉಂಟು ಮಾಡಿ ರಾಜಿ ಮಾಡಿಸಲಾಗಿದೆ.

ಇದರ ಪ್ರಯತ್ನವಾಗಿ, ದೇವೇಗೌಡರ ರಾಜಕೀಯ ಕಟ್ಟಾ ವಿರೋಧಿ ಎಂದೇ ಖ್ಯಾತಿಯಾಗಿರುವ ಪುಟ್ಟಸ್ವಾಮಿಗೌಡ ಅವರನ್ನು ಸ್ಪರ್ಧೆಗೆ ಇಳಿಸಲಾಗಿದೆ.

### 50 ವರ್ಷಗಳ ಹಿಂದೆ

ಶುಕ್ರವಾರ, 23-8-1974

• **ಕೃಷ್ಣಾ ಪಂಚಾಯಿತಿ ಪಕ್ಷಪಾತ; ರಾಜ್ಯದ ಕ್ರಮಕ್ಕೆ ಸಂಪೂರ್ಣ ಬೆಂಬಲ**

**ಬೆಂಗಳೂರು, ಆ. 22-** ಕೃಷ್ಣಾ ಜಲವಿವಾದ ಪಂಚಾಯಿತಿಯ ಪ್ರವೃತ್ತಿಯು ಪಕ್ಷಪಾತತನವನ್ನು ಸ್ಪಷ್ಟಪಡಿಸುತ್ತಿದೆ ಎಂದು ವಾದಿಸಿ, ಅದರ ಕಾರ್ಯಕಲಾಪಗಳಿಂದ ಹೊರಬಂದ ಕರ್ನಾಟಕದ ಅಡ್ವೊಕೇಟ್ ಜನರಲ್ ಅವರ ಕ್ರಮವನ್ನು ವಿಧಾನಸಭೆ ಇಂದು ಸರ್ವಾನುಮತದ ನಿರ್ಣಯ ಅಂಗೀಕರಿಸಿ ಬೆಂಬಲಿಸಿತು.

‘ಏನಾಗುತ್ತೋ ಆಗಲಿ, ಪರಿಣಾಮ ಯೋಚಿಸುವ ಕಾಲ ಇದಲ್ಲ’ ಎಂದು ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಸಭೆಗೆ ತಿಳಿಸಿದರು. ರಾಜ್ಯದ ನ್ಯಾಯ ಸಮರವನ್ನು ನೇರವಾಗಿ ಕೇಂದ್ರದ ಬಾಗಿಲಿಗೆ ತಲುಪಿಸೋಣ. ಇಷ್ಟೆಲ್ಲ ಬೆಳವಣಿಗೆಗಳ ನಂತರ ರಾಜ್ಯಕ್ಕೆ ಆದ ಅನ್ಯಾಯವನ್ನು ಕೇಳದೇ ಕೇಂದ್ರಕ್ಕೆ ಗತ್ಯಂತರವಿಲ್ಲ ಎಂದು ತಿಳಿಸಿದರು.

• **ರಾಜ್ಯದ ವಿಚಾರದಲ್ಲಿ ಕೇಂದ್ರದ ತಾರತಮ್ಯ ನೀತಿ: ಹೆಗಡೆ ಟೀಕೆ**

**ಬೆಂಗಳೂರು, ಆ. 22-** ಕರ್ನಾಟಕದ ವಿಚಾರದಲ್ಲಿ ಕೇಂದ್ರ ಸರ್ಕಾರ ತಾರತಮ್ಯ ಭಾವನೆ ತೋರುತ್ತಿದೆ ಎಂದು ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕ ರಾಮಕೃಷ್ಣ ಹೆಗಡೆ ಆಪಾದಿಸಿದರು.

ಕೇಂದ್ರ ಸರ್ಕಾರವು ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ವಿಚಾರದಲ್ಲಿ ಆಂಧ್ರ ಪ್ರದೇಶದ ಬಗ್ಗೆ ವಿಶೇಷ ಒಲವು ತೋರಿ ಕರ್ನಾಟಕವನ್ನು ಕಡೆಗಣಿಸಿದೆ ಎಂದು ಹೇಳಿದರು.

ಪ್ರತಿಭಾವಂತರಿಗೆ ಗಂಟೆಗಟ್ಟಲೆ ಓದಿಸುವುದು ಪ್ರತಿಭೆಯ ದಮನವೇ ವಿನಾ ವಿಕಾಸ ಅಲ್ಲ

# ಪ್ರತಿಭಾವಂತ ವಿದ್ಯಾರ್ಥಿಗೆ ಸವಾಲು!



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

**ಪ್ರತಿಭಾವಂತರು** ಎಂದರೆ ಯಾರು ಎಂಬುದು ಬಹುಕಾಲದಿಂದ ಚಾಲ್ತಿಯಲ್ಲಿರುವ ಪ್ರಶ್ನೆ. ಅದರ ಜೊತೆಯಲ್ಲೇ ಅತಿ ಹೆಚ್ಚು ಅಂಕ ಗಳಿಸುವವರು, ಶೈಕ್ಷಣಿಕ ಚಟುವಟಿಕೆಗಳಲ್ಲಿ ತೀವ್ರವಾಗಿ ತೊಡಗಿಕೊಳ್ಳುವವರು, ಅಧ್ಯಯನದಲ್ಲಿ ಬಹಳ ಆಸಕ್ತರಾಗಿರುವವರನ್ನೆಲ್ಲ ಪ್ರತಿಭಾವಂತರು ಎನ್ನುವ ಪರಿಕಲ್ಪನೆಯ ಮೂಲಕ ಗುರುತಿಸುವ ಪರಿಪಾಟವೂ ಶಿಕ್ಷಣ ವ್ಯವಸ್ಥೆಯಲ್ಲಿ ಇದೆ.

ಅವರವರ ಆಸಕ್ತಿಯ ವಿಷಯ ಸಿಕ್ಕಾಗ ಎಲ್ಲರೂ ಪ್ರತಿಭಾವಂತರೇ ಆಗಿರುತ್ತಾರೆ ಎನ್ನುವುದು ವಿಶಾಲ ವ್ಯಾಪ್ತಿಯ ಶೈಕ್ಷಣಿಕ ತತ್ವಶಾಸ್ತ್ರೀಯ ದೃಷ್ಟಿಕೋನವಾಗಿದೆ. ನಿಗದಿತ ಪಠ್ಯಪುಸ್ತಕಗಳನ್ನು ಆಧರಿಸಿದ ಕಲಿಕೆಯಲ್ಲಿ ದಕ್ಷತೆಯನ್ನು ತೋರಿಸುವವರು ಪ್ರತಿಭಾವಂತರು ಎನ್ನುವುದು ಸಂಕುಚಿತ ವ್ಯಾಪ್ತಿಯ, ಆದರೆ ವಾಸ್ತವದಲ್ಲಿ ಬಹುಮಟ್ಟಿಗೆ ಸಾರ್ವತ್ರಿಕವಾಗಿ ಒಪ್ಪಿತವಾಗಿರುವ ದೃಷ್ಟಿಕೋನ. ಇಲ್ಲಿನ ಚರ್ಚೆಯು ಸಂಕುಚಿತ ವ್ಯಾಪ್ತಿಯಲ್ಲಿ ಪ್ರತಿಭಾವಂತರೆಂದು ಗುರುತಿಸಲಾದ ವಿದ್ಯಾರ್ಥಿಗಳಿಗೆ ಸಂಬಂಧಿಸಿದೆ.


ಸಮಾಜದಲ್ಲಿ ಬಹಳ ಪ್ರತಿಭಾವಂತರಾದವರು ಮತ್ತು ಕಲಿಕೆಯಲ್ಲಿ ತೀರಾ ಹಿಂದುಳಿದವರ ಸಂಖ್ಯೆ ಕಡಿಮೆಯೇ ಇರುತ್ತದೆ. ಮಧ್ಯಮ ಮಟ್ಟದ ಕಲಿಕಾ ಸಾಮರ್ಥ್ಯ ಹೊಂದಿರುವವರ ಸಂಖ್ಯೆ ಜಾಸ್ತಿ ಇರುತ್ತದೆ. ಪಠ್ಯ ರಚನೆ, ಪಾಠ ಬೋಧನೆ, ಪರೀಕ್ಷಾ ವ್ಯವಸ್ಥೆಯೆಲ್ಲವೂ ಸಾಮಾನ್ಯವಾಗಿ ಬೌದ್ಧಿಕವಾಗಿ ಮಧ್ಯಮ ಮಟ್ಟದ ಸಾಮರ್ಥ್ಯ ಹೊಂದಿರುವವರನ್ನು ದೃಷ್ಟಿಯಲ್ಲಿ ಇರಿಸಿಕೊಂಡು ನಡೆಯುತ್ತವೆ. ಪ್ರತಿಭಾವಂತರಿಗಾಗಿ ಅವುಗಳನ್ನು ಹಿಗ್ಗಿಸುವ, ಕಲಿಕಾ ಹಿಂದುಳಿದವರಿಗಾಗಿ ಕುಗ್ಗಿಸುವ ಶೈಕ್ಷಣಿಕ ವಿಧಾನಗಳನ್ನು ಅಲ್ಲಲ್ಲಿಗೆ ಹೊಂದಿಸಿಕೊಂಡು ಹೊಂದಾಣಿಕೆ ಮಾಡಲಾಗುತ್ತದೆ. ಹೀಗಿರುವ ಸನ್ನಿವೇಶದಲ್ಲಿ ಪ್ರತಿಭೆಯು ರಾಷ್ಟ್ರದ ಆಸ್ತಿ, ಅದನ್ನು ಉತ್ತೇಜಿಸಬೇಕು ಎಂಬ ಕಲ್ಪನೆ ಇರಿಸಿಕೊಂಡು ರಾಜೀವ್ ಗಾಂಧಿ ನೇತೃತ್ವದ ಸರ್ಕಾರವು ಜವಾಹರ್ ನವೋದಯ ಶಾಲೆಗಳನ್ನು ತೆರೆಯಿತು. ಕಾಲಾನುಕ್ರಮದಲ್ಲಿ ಆ ಮಾದರಿಯ ಹಲವು ಖಾಸಗಿ ಶಾಲೆಗಳು ತೆರೆಯಲ್ಪಟ್ಟವು. ಇಂದು ಅಸ್ತಿತ್ವದಲ್ಲಿರುವ ಖಾಸಗಿ ಶಾಲೆಗಳು, ಮುಖ್ಯವಾಗಿ ಖಾಸಗಿ ಪಿ.ಯು. ಕಾಲೇಜುಗಳೆಲ್ಲವೂ ತಮ್ಮಲ್ಲಿ ಇರುವವರೆಲ್ಲರೂ ಪ್ರತಿಭಾವಂತರು ಎಂದು ಬಿಂಬಿಸಿಕೊಳ್ಳುತ್ತಿವೆ. ಏಕೆಂದರೆ ‘ಆರ್ಟ್ಸ್ ಪಿ.ಯು. ಕಾಲೇಜು’ಗಳು ತೀರಾ ವಿರಳ. ಎಲ್ಲವೂ ‘ಸೈನ್ಸ್ ಪಿ.ಯು. ಕಾಲೇಜು’ಗಳು ಮತ್ತು ನೀಟ್, ಸಿಇಟಿ ಕೋಚಿಂಗ್ ಪ್ರಧಾನ ಕಾಲೇಜುಗಳು. ಹಾಗಿದ್ದರೆ ಆರ್ಟ್ಸ್, ಕಾಮರ್ಸ್‌ನಂತಹ ಕ್ಷೇತ್ರಗಳಲ್ಲಿ ಪ್ರತಿಭಾವಂತರಿಲ್ಲವೇ ಅಥವಾ ಪ್ರತಿಭಾವಂತರಿಗಾಗಿ ಇಂತಹ ಕಾಲೇಜುಗಳೇ ಅಗತ್ಯವಿಲ್ಲವೆ?

ಅಂದರೆ ವರ್ತಮಾನದ ಶಿಕ್ಷಣೋದ್ಯಮವು ‘ಪ್ರತಿಭೆ’ ಎಂಬ ಪರಿಕಲ್ಪನೆಯನ್ನು ‘ಮಾರುಕಟ್ಟೆಯಲ್ಲಿ ಅತ್ಯಧಿಕ ಬೆಲೆಯ ಸರಕು’ ಎಂಬರ್ಥದಲ್ಲಿ ಪರಿವರ್ತಿಸಿ ಅದನ್ನು ಇನ್ನಷ್ಟು ಸಂಕುಚಿತಗೊಳಿಸಿದೆ. ಹೀಗೆ ಪರಿವರ್ತಿಸುವ ಪ್ರಕ್ರಿಯೆಯಲ್ಲಿಯೂ ಕಾಲೇಜುಗಳಿಗೆ ಪ್ರವೇಶಾತಿಯನ್ನು ಹೆಚ್ಚಿಸುವ ಉದ್ದೇಶದಿಂದ, ವಿಜ್ಞಾನದಲ್ಲಿ ನಿರಾಸಕ್ತರಾದವರನ್ನು, ಕಲಿಕೆಯಲ್ಲಿ ಮಧ್ಯಮ ಮಟ್ಟದ ಬೌದ್ಧಿಕ ಸಾಮರ್ಥ್ಯ ಹೊಂದಿದವರನ್ನು, ಕಲಿಕೆಯಲ್ಲಿ ಹಿಂದುಳಿದವರನ್ನು ತಮ್ಮಲ್ಲಿ ತಂದುಬಿಟ್ಟರೆ ಅತ್ಯಂತ ಪ್ರತಿಭಾವಂತರನ್ನಾಗಿ ರೂಪಿಸಲಾಗುತ್ತದೆ ಎಂಬ ನಂಬಿಕೆಯನ್ನು ಸೃಷ್ಟಿಸಿವೆ.

ಈ ನಂಬಿಕೆಯನ್ನು ಬಲಪಡಿಸುವುದು ವಾರ್ಷಿಕ ಪರೀಕ್ಷಾ ಫಲಿತಾಂಶಗಳು. ಕಲಿಕಾ ದಕ್ಷತೆಯನ್ನು ಕಲಿಕೆಯನ್ನು ನಿರ್ವಹಿಸುವ ರೀತಿಯ ಆಧಾರದಲ್ಲಿ ಮೌಲ್ಯಮಾಪನ ಮಾಡಿದರೆ ಶೇ 98ರಷ್ಟು ಅಂಕಗಳನ್ನೇ ಪಡೆದ ವಿದ್ಯಾರ್ಥಿಗಳಲ್ಲಿ ಪ್ರತಿಭಾವಂತರಾದವರು, ಕಲಿಕಾ ಮಧ್ಯಮ ಮಟ್ಟದವರು ಮತ್ತು ಕಲಿಕಾ ಹಿಂದುಳಿದವರ ನಡುವಿನ ವ್ಯತ್ಯಾಸ ಗೊತ್ತಾಗುತ್ತದೆ. ಆದರೆ ವಿದ್ಯಾರ್ಥಿಗಳ ಶ್ರಮ, ಕಾರ್ಯವನ್ನು ನಿರ್ವಹಿಸುವ ರೀತಿಯ ಆಧಾರದಲ್ಲಿ ಮೌಲ್ಯಮಾಪನ ಮಾಡುವುದಿಲ್ಲ ಅಷ್ಟೆ. ಕಲಿಕೆಯಲ್ಲಿ ಬಹಳ ಮುಂದಿರುವ ವಿದ್ಯಾರ್ಥಿಗಳಿಗೆ ಸೀಮಿತ ಪಠ್ಯಪುಸ್ತಕದಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆಯಲು ಅತಿಹೆಚ್ಚು ಸಮಯ ಓದಬೇಕಾದ ಅಗತ್ಯ ಇರುವುದಿಲ್ಲ. ಅದರ ಅಗತ್ಯ ಇರುವುದು ಕಲಿಕಾ ಹಿಂದುಳಿದವರಿಗೆ. ಅಂತಹವರಿಗಾಗಿ ಇರುವ ಕಲಿಕಾ ತಂತ್ರವನ್ನೇ ಪ್ರತಿಭಾವಂತರಿಗೂ ಅನ್ವಯಿಸಲಾಗುತ್ತದೆ!

ಪ್ರತಿಭಾವಂತರಿಗೆ ಒಂದು ಸಲ ಓದಿದಾಗಲೇ ಅರ್ಥವಾಗಿರುತ್ತದೆ. ಆದರೂ ಅಂತಹವರನ್ನು ಒಂದೇ ಸಲಕ್ಕೆ ಅರ್ಥ ಆಗದವರೊಂದಿಗೆ ಕೂರಿಸಿ, ದಿನದಲ್ಲಿ ಸುಮಾರು 8-10 ಗಂಟೆ ಕಟ್ಟಿಹಾಕಿಟ್ಟುಕೊಂಡಂತೆ ಓದಿಸುವುದು ಅವರಿಗೆ ಯಾತನೆಯ ಅನುಭವವೇ ವಿನಾ ಬೇರೇನಲ್ಲ. ಒಂದೇ ಸಲದ ಓದಿನಲ್ಲಿ ಪಠ್ಯವನ್ನು ಅರ್ಥ ಮಾಡಿಕೊಂಡವರು ಆಮೇಲೆ ಕಾದಂಬರಿಯನ್ನೊ, ಕಥೆಯನ್ನೊ ಅಥವಾ ಬೇರೇನನ್ನಾದರೂ ಓದಬಹುದು. ಆದರೆ ಪಾಠ ಬಿಟ್ಟು ಬೇರೆ ಓದಲು ಅವಕಾಶವಿಲ್ಲ! ಇದು ಪ್ರತಿಭಾವಂತರ ಪ್ರತಿಭೆಯ ದಮನವೇ ವಿನಾ ವಿಕಾಸ ಅಲ್ಲ.

ನನ್ನ ತಿಳಿವಳಿಕೆಗೆ ಬಂದ ಒಂದು ಸಂಗತಿ ಹೀಗಿದೆ. ನಿರ್ದಿಷ್ಟ ಕಾಲೇಜಿಗೆ ಒಳ್ಳೆಯ ಹೆಸರಿದೆ ಎಂದು ಬಹುದೂರದಿಂದ ಒಬ್ಬ ವಿದ್ಯಾರ್ಥಿನಿ ಹೋಗಿ ಸೇರಿದಳು. ಪಾಲಕರು ಸಾಲ ಮಾಡಿ ಹಣ ತಂದು ಆಕೆ ಸುರಕ್ಷಿತವಾಗಿ ಉಳಿದುಕೊಳ್ಳುವಂತಹ ಪ್ರತ್ಯೇಕ ವ್ಯವಸ್ಥೆಯನ್ನೆಲ್ಲ ಮಾಡಿದರು. ಕೊನೆಗೆ ಆಕೆ ಭ್ರಮನಿರಸನಕ್ಕೆ ಒಳಗಾದಳು. ಏಕೆಂದರೆ ಆಕೆಯ ಇಂಗ್ಲಿಷ್ ಭಾಷಾ ತಜ್ಞತೆಯು ಆಕೆಗೆ ಒದಗಿಸಲಾದ ಉಪನ್ಯಾಸಕರ ಇಂಗ್ಲಿಷ್ ಭಾಷಾ ತಜ್ಞತೆಗಿಂತ ಉನ್ನತ ಮಟ್ಟದಲ್ಲಿತ್ತು. ವಿದ್ಯಾರ್ಥಿಗಳು ಸವಾಲಿನ ರೂಪದ ಪ್ರಶ್ನೆಗಳನ್ನು ಕೇಳಿದಾಗ ಉತ್ತರಿಸಲು ಸಾಧ್ಯವಾಗದೆ, ಯೂಟ್ಯೂಬ್ ಲಿಂಕ್ ಕೊಟ್ಟು ‘ನೋಡಿ ತಿಳಿದುಕೊಳ್ಳಿ’ ಎಂದು ಮಾರ್ಗದರ್ಶನ ಮಾಡುವ ಅಧ್ಯಾಪಕರಿದ್ದಾರೆ. ಕೊಡಬೇಕಾದ ವಿವರಣೆ ಕೊಟ್ಟು ನಂತರ ಯೂಟ್ಯೂಬ್ ಲಿಂಕ್ ಕೊಡುವುದು ಸರಿಯಾದ ವಿಧಾನ.




ಅಧ್ಯಾಪಕರ ಪರಿಸ್ಥಿತಿ ಏಕೆ ಹೀಗಾಗುತ್ತಿದೆ ಎಂದರೆ, ಶಾಲಾ ಕಾಲೇಜಿಗೆ ಅತ್ಯುನ್ನತ ಅಂಕಗಳು ಬರುವಂತೆ ಮಾಡಬೇಕು ಎಂಬುದು ಸರ್ಕಾರಿ ಮತ್ತು ಖಾಸಗಿ ವ್ಯವಸ್ಥೆಯ ಸಾಮಾನ್ಯ ಧೋರಣೆಯಾಗಿದೆ. ಉಳಿದಂತೆ ಸರ್ಕಾರಿ ವ್ಯವಸ್ಥೆಯಲ್ಲಿ ಅಧ್ಯಾಪಕರಿಗೆ ಒಳ್ಳೆಯ ವೇತನವೇ ಇದೆ. ಆದರೆ ಒಂದು ತರಗತಿಯಲ್ಲಿ ಪಾಠ ಬೋಧಿಸಬೇಕಾದರೆ ಅದರ ಎರಡು ಪಟ್ಟು ಸಮಯವನ್ನು ಪಾಠ ಬೋಧನೆಯ ಸಿದ್ಧತೆಗೆ ಕೊಡಬೇಕಾಗುತ್ತದೆ ಎಂಬ ಪರಿಕಲ್ಪನೆಯು ವ್ಯವಸ್ಥೆಯಿಂದಲೇ ಹೊರಟುಹೋಗಿದೆ. ಅಧ್ಯಾಪಕರು, ಉಪನ್ಯಾಸಕರನ್ನು ಆಡಳಿತಾತ್ಮಕ ಕಾರ್ಯಗಳು, ಅನಗತ್ಯ ದೀರ್ಘ ಮೀಟಿಂಗುಗಳು, ಆನ್‌ಲೈನ್ ಮೀಟಿಂಗುಗಳಿಗೆಲ್ಲ ತೊಡಗಿಸಲಾಗುತ್ತಿದೆ. ಅದರ ಪರಿಣಾಮ ‘ಓದಿಸುವ’ ಪ್ರಕ್ರಿಯೆ ಚಾಲ್ತಿಯಲ್ಲಿದೆಯೇ ವಿನಾ ‘ಬೋಧನಾ ಸಿದ್ಧತೆ’ಯ ಪರಿಕಲ್ಪನೆ ಚಾಲ್ತಿಯಲ್ಲಿ ಉಳಿದಿಲ್ಲ.

ಖಾಸಗಿ ವ್ಯವಸ್ಥೆಗೆ ಬಂದರೆ, ಪೋಷಕರು ಆಕರ್ಷಣೆಗೆ ಒಳಗಾಗುವುದು ಶಾಲಾ ಕಾಲೇಜುಗಳ ಕಟ್ಟಡ, ಹವಾನಿಯಂತ್ರಿತ ಕೊಠಡಿಗಳು, ಅಲ್ಲಿನ ವಾರ್ಷಿಕ ಫಲಿತಾಂಶ, ಇಂಗ್ಲಿಷ್‌ನಲ್ಲಿ ಮಾತನಾಡುವುದು, ಕಂಪ್ಯೂಟರ್‌ಗಳು, ಮಕ್ಕಳನ್ನು ಕಟ್ಟಿ ಕೂರಿಸಿ ಓದಿಸುವಂತಹ ಗೋಚರಿತ ಸಂಗತಿಗಳಿಗೇ ವಿನಾ ಪ್ರತಿಭಾವಂತ ಅಧ್ಯಾಪಕರು ಬೇಕು ಎಂದು ಯೋಚಿಸುವುದಿಲ್ಲ. ಅಧ್ಯಾಪಕರಿಗೆ ಅವರ ಶ್ರಮಕ್ಕಿಂತ ಕಡಿಮೆ ವೇತನ ಇರುತ್ತದೆ. ಆಗ, ರೂಪಕಾತ್ಮಕವಾಗಿ ಹೇಳುವುದಾದರೆ, ಇಂಗ್ಲಿಷ್‌ನಲ್ಲಿ ನಿರರ್ಗಳವಾಗಿ ಮಾತನಾಡುವ ಅಧ್ಯಾಪಕರು ಸಿಗುತ್ತಾರೆ, ಆದರೆ ಶೇಕ್ಸ್‌ಪಿಯರ್ ನಾಟಕವನ್ನು ವಿಮರ್ಶೆಗೆ ಒಡ್ಡಬಲ್ಲ ಅಧ್ಯಾಪಕರು ಸಿಗುವುದಿಲ್ಲ. ಆಡಳಿತ ಮಂಡಳಿಗಾಗಲಿ, ಪಾಲಕರಿಗಾಗಲಿ ಅಂತಹ ಅಧ್ಯಾಪಕರ ಅಗತ್ಯ ಹೊಳೆಯುವುದಿಲ್ಲ. ಪ್ರತಿಭಾವಂತ ವಿದ್ಯಾರ್ಥಿಗಳ ವಿಕಾಸಕ್ಕೆ ಆ ಬಗೆಯ ಅಧ್ಯಾಪಕರ ಅಗತ್ಯ ಇರುತ್ತದೆ. ಆಡಳಿತ ಮಂಡಳಿಗಳಿಗೆ ಸಾಮಾನ್ಯವಾಗಿ ತಾವು ಹೇಳಿದಂತೆ ಕೇಳುವ ಅಧ್ಯಾಪಕರು ಬೇಕು. ಆದರೆ ಪ್ರತಿಭಾವಂತರು ಶೈಕ್ಷಣಿಕ ಸಂಗತಿ ಬಂದಾಗ ಪ್ರಶ್ನಿಸುತ್ತಾರೆ, ವಾಗ್ವಾದಕ್ಕಿಳಿಯುತ್ತಾರೆ. ಅಂತಹ ಅಧ್ಯಾಪಕರನ್ನು ನಿರ್ವಹಿಸಬೇಕಾದರೆ ಅವರನ್ನು ಬೌದ್ಧಿಕವಾಗಿಯೇ ಮುಖಾಮುಖಿಯಾಗಬಲ್ಲಷ್ಟು ದಕ್ಷತೆ ಇರುವ ಆಡಳಿತ ಮಂಡಳಿ ಅಥವಾ ಆಡಳಿತಗಾರರು ಬೇಕಾಗುತ್ತಾರೆ.

ಆಡಳಿತಾತ್ಮಕ ವ್ಯವಸ್ಥೆಯಲ್ಲೇ ಪ್ರತಿಭೆಯ ಸಮಸ್ಯೆ ಇದ್ದಾಗ, ಅದು ಬಯಸುವುದು ಪ್ರತಿಭಾವಂತರನ್ನಲ್ಲ, ಹೇಳಿದ ಹಾಗೆ ಕೇಳುವ ಸಿಬ್ಬಂದಿಯನ್ನು. ಪ್ರತಿಭಾವಂತ ಸಿಬ್ಬಂದಿಯ ಪ್ರತಿಭೆಗೆ ತಕ್ಕ ವೇತನವನ್ನು ಕೊಡುವ ಪರಿಕಲ್ಪನೆ ಬಹುತೇಕ ಆಡಳಿತ ಮಂಡಳಿಗಳ ಬಳಿ ಇಲ್ಲ. ಇವೆಲ್ಲದರ ಪರಿಣಾಮವಾಗಿ, ನಿಜವಾದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭೆಯ ವಿಕಾಸಕ್ಕೆ ಪೂರಕವಾದ ಶೈಕ್ಷಣಿಕ ಸನ್ನಿವೇಶ ಇಲ್ಲವಾಗುತ್ತದೆ. ಪಾಲಕರು ಸರಿಯಾದ ಶೈಕ್ಷಣಿಕ ಪರಿಕಲ್ಪನೆಗಳು, ತಮ್ಮ ಮಕ್ಕಳ ಅಗತ್ಯಗಳನ್ನು ಅರ್ಥ ಮಾಡಿಕೊಂಡು ತಮ್ಮ ಬೇಡಿಕೆಯನ್ನು ಸಾಮೂಹಿಕ ಗಟ್ಟಿ ಧ್ವನಿಯಾಗಿ ಹೇಳಲು ತೊಡಗುವುದೇ ಈ ಸಮಸ್ಯೆಯನ್ನು ನಿವಾರಿಸುವ ಪ್ರಾರಂಭಿಕ ಹೆಜ್ಜೆಯಾಗಲಿದೆ.

### ಚುರುಮುರಿ



## ಅರೆಸ್ಟ್ ಆಟ!

• ಬಿ.ಎನ್. ಮಲ್ಲೇಶ್

**ಮಾನಸಿಕ** ಚಿಕಿತ್ಸಾ ಕೇಂದ್ರದಲ್ಲಿ ರೋಗಿಗಳು ಜೋರು ಗಲಾಟೆ ಮಾಡುತ್ತ ಕುಸ್ತಿಗೇ ಬಿದ್ದಿದ್ದರು. ‘ಅವರಿವರನ್ನು ಕೊಂದ ಮಾತ್ರಕ್ಕೆ ನೀನು ಅಜೇಯನಲ್ಲ... ನಾನು ಪಾರ್ಥ, ನನ್ನ ಎದುರಿಸು’ ಅಂತ ಒಬ್ಬ, ‘ಏನು ಪಾರ್ಥ? ಕೆಂಗಣ್ಣಿನಿಂದ ಕೆಕ್ಕರಿಸಿ ಈ ಬಬ್ರುವಾಹನನನ್ನು ಗೆಲ್ಲಲಾರೆ... ಎತ್ತು ನಿನ್ನ ಗಾಂಡೀವ...’ ಅಂತ ಇನ್ನೊಬ್ಬ. ಡಾಕ್ಟರಿಗೆ ತಲೆ ಕೆಟ್ಟು ಹೋಯಿತು.

ಇನ್ನೊಂದು ಕಡೆ ‘ಟೀವಿ ಹಾಕ್ರಿ, ಅದೂ ರಾಜಕೀಯದ್ದೇ ಚಾನೆಲ್ ಬೇಕು’ ಅಂತ ಇನ್ನೊಂದು ಗುಂಪು ಗಲಾಟೆ. ‘ರಾಜಕೀಯ ಬ್ಯಾಡ ಕಣ್ರಲೆ, ಕಾಮಿಡಿ ಹಾಕ್ಲಾ?’ ಡಾಕ್ಟರು ನೈಸ್ ಮಾಡಲು ನೋಡಿದರು.

‘ಈ ರಾಜಕೀಯನೇ ದೊಡ್ಡ ಕಾಮಿಡಿ ಸಾ... ಅದ್ನೇ ಹಾಕಿ’ ಎಂದ ಮತ್ತೊಬ್ಬ ಭೂಪ!

‘ಅಲ್ಲ, ಎಲ್ಲ ಕರೆಕ್ಟಾಗಿ ಮಾತಾಡ್ತೀರ, ನಿಮಗೆ ತಲೆ ಸರಿ ಇಲ್ಲ ಅಂತ ಯಾರಯ್ಯ ಹೇಳಿದ್ದು?’

‘ನೀವೇ ಸಾ, ತಲೆ ಕೆಟ್ಟೋರ್ನ ಹೊರಗೆ ಬಿಟ್ಟದೀರಿ, ತಲೆ ಸರಿ ಇರೋ ನಮ್ಮನ್ನ ಒಳಗೆ ಇಟ್ಕಂಡಿದೀರಿ. ನಿಮಗೇ ತಲೆ ಸರಿ ಇಲ್ಲ’.

‘ಕರೆಕ್ಟ್ ಕಣ್ರಯ್ಯ. ಅದಿರ್ಲಿ, ಈ ತೆಪರೇಸಿ, ಗುಡ್ಡೆ ಎಲ್ಲಿ?’ ಡಾಕ್ಟರು ಸುತ್ತಮುತ್ತ ಹುಡುಕಿದರು.

‘ಅವರು ಅರೆಸ್ಟ್ ಆಟ ಆಡ್ತದಾರೆ ಸಾ. ತೆಪರೇಸಿ ಗುಡ್ಡೇನ ಅರೆಸ್ಟ್ ಮಾಡಿಸ್ತಾನಂತೆ, ಗುಡ್ಡೆ ತೆಪರೇಸಿನ ಒಳಗೆ ಹಾಕಿಸ್ತಾನಂತೆ, ಹೊಸ ಆಟ’.

‘ಹೌದಾ? ಎಲ್ಲದಾರೆ ಅವ್ರು?’ ಡಾಕ್ಟರು ಹುಡುಕುತ್ತ ಹೋದರು. ಅಷ್ಟರಲ್ಲಿ ದುಬ್ಬೀರ, ಕೊಟ್ರೇಶಿ ಕಿತ್ತಾಡಿಕೊಂಡು, ಒಬ್ಬರಿಗೊಬ್ಬರು ಬಟ್ಟೆ ಹರ್ಕಂಡು ಅಲ್ಲಿಗೆ ಬಂದರು. ಇಬ್ಬರ ಮೈಮೇಲೂ ಚೆಡ್ಡಿ ಬಿಟ್ಟರೆ ಬೇರೇನೂ ಇರಲಿಲ್ಲ.

‘ಏನ್ರೋ ಇದು ನಿಮ್ ಅವತಾರ?’ ಡಾಕ್ಟರಿಗೆ ಸಿಟ್ಟು ಬಂತು.

‘ಇದು ಬಿಚ್ಚೋ ಆಟ ಸಾ... ದುಬ್ಬೀರ ನಂದೆಲ್ಲ ಬಿಚ್ಚಿಡ್ತೀನಿ ಅಂದ, ನಾನು ಬಿಡ್ತೀನಾ? ನಾನೂ ಅವನದೆಲ್ಲ ಬಿಚ್ಚಿಟ್ಟೆ...’ ಎಂದ ಕೊಟ್ರೇಶಿ. ಡಾಕ್ಟರಿಗೆ ನಿಂತಲ್ಲೇ ತಲೆ ಗಿರ್ ಅಂತ ತಿರುಗಿತು.

### ಸಂಗತ

## ಇಮೋಜಿ ಕೈಗೆ ಜುಟ್ಟು ಕೊಟ್ಟೇರಿ

**ಇಮೋಜಿ ಭಾಷೆಯು ನಮ್ಮೆಲ್ಲ ಭಾವನೆಗಳು ಅಥವಾ ಸಂದೇಶಗಳನ್ನು ಸಮಗ್ರವಾಗಿ ಪ್ರತಿನಿಧಿಸುತ್ತದೆ ಎಂಬ ಹೆಗ್ಗಳಿಕೆಯ ಜೊತೆಗೆ ಕೆಲವು ಸಮಸ್ಯೆಗಳನ್ನೂ ಅದು ನಮ್ಮ ಕಣ್ಣ ಮುಂದೆ ತರುತ್ತದೆ**


• ಶಿವಲಿಂಗಸ್ವಾಮಿ ಎಚ್.ಕೆ.

**ನವನವೀನ** ಆವಿಷ್ಕಾರಗಳ ಫಲವಾಗಿ ಇಂದು ಜನಸಂಪರ್ಕ ಹಿಂದಿಗಿಂತಲೂ ಸುಲಭವಾಗಿದೆ ಮತ್ತು ಆರ್ಥಿಕವಾಗಿಯೂ ಹೆಚ್ಚು ದುಂದು ಎನ್ನಿಸುವುದಿಲ್ಲ. ಹೀಗಾಗಿ, ಸಂವಹನಕ್ಕಾಗಿ ಜನ ಈಗ ಹಿಂದಿನಂತೆ ಇನ್‌ಲ್ಯಾಂಡ್ ಲೆಟರ್, ಟೆಲಿಗ್ರಾಮ್‌ನಂತಹವುಗಳಿಗೆ ಮೊರೆ ಹೋಗಬೇಕಾದ ಅವಶ್ಯಕತೆ ಇಲ್ಲ. ಬದಲಾಗಿ, ಸಮಕಾಲೀನ ಜಗತ್ತಿನಲ್ಲಿ ಹೆಚ್ಚು ಪ್ರಸ್ತುತವಾಗುತ್ತಿರುವುದು ಡಿಜಿಟಲ್ ಸಂವಹನ. ಅಂದರೆ ಪೇಪರ್ ಮತ್ತು ಪೆನ್ ಬಳಕೆಯ ಬದಲಾಗಿ ಇ-ಮೇಲ್, ಎಸ್‌ಎಂಎಸ್, ವಾಟ್ಸ್‌ಆ್ಯಪ್‌ನಂತಹ ಮಾಧ್ಯಮಗಳ ಮುಖೇನ ಕ್ಷಣಾರ್ಧದಲ್ಲಿ ನಾವು ಯಾರೊಂದಿಗೆ ಬೇಕಾದರೂ ಸಂಪರ್ಕ ಸಾಧಿಸಬಹುದು. ಮುಖ್ಯವಾಗಿ, ಡಿಜಿಟಲ್ ಸಂವಹನದಲ್ಲಿ ಭಾಷಾ ಪ್ರೌಢಿಮೆಗಿಂತ ವಿಭಿನ್ನವಾದ ಸಂವಹನ ಮಾದರಿಗಳ ಬಳಕೆ ಕುರಿತು ತಿಳಿವಳಿಕೆ ಇರಬೇಕು. ತಂತ್ರಜ್ಞಾನದ ಈ ಭಾಷೆಗೆ ಇಮೋಜಿ ಭಾಷೆ ಎಂದು ಕರೆಯಬಹುದು.

ಮೊಬೈಲ್ ಫೋನ್ ಬಳಕೆಗೆ ಬಂದಾಗ ಅದರೊಂದಿಗೆ ಇದ್ದ ಪ್ರಮುಖವಾದ ಸೌಕರ್ಯವೆಂದರೆ ಎಸ್‌ಎಂಎಸ್ (ಶಾರ್ಟ್ ಮೆಸೇಜ್ ಸರ್ವಿಸ್). ಇದು ಕೆಲವೊಮ್ಮೆ ಫೋನ್ ಮಾಡುವುದು ಅನವಶ್ಯಕ ಅನ್ನಿಸಿದಾಗ ತುರ್ತು ಸಂದೇಶಗಳನ್ನು ಕಳಿಸಲು ಲಭ್ಯವಿದ್ದ ಮತ್ತು ಹೆಚ್ಚು ಖರ್ಚಿಲ್ಲದ ಅತ್ಯಂತ ಸುಲಭವಾದ ಪರ್ಯಾಯ ಮಾರ್ಗವಾಗಿತ್ತು. ಈ ಸೌಕರ್ಯವು ಬಳಕೆದಾರರಿಗೆ ಸಂವಹನ ಸುಲಭವಾಗುವಂತೆ ಮಾಡಿದ್ದರ ಜೊತೆಗೇ ಅವರನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿತು. ಅಂದರೆ, ಇದರ ಹೆಸರೇ ಎಸ್‌ಎಂಎಸ್ ಎಂದಿರುವಾಗ, ಪೂರ್ಣ ಪ್ರಮಾಣದ ವಾಕ್ಯ ರಚನೆಗೆ ವಿರಾಮ ಹೇಳುವ ಅನಿವಾರ್ಯವನ್ನು ಅದು ಹುಟ್ಟಿಸುತ್ತದೆ. ಇದರಿಂದಾಗಿ ವಾಕ್ಯಗಳನ್ನು ಕೆಲವು ಪದಗಳಿಗೆ ಸೀಮಿತಗೊಳಿಸುವ ಅಭ್ಯಾಸ ಶುರುವಾಯಿತು. ನಂತರ ಪದಗಳನ್ನು ಸಂಕ್ಷೇಪಗೊಳಿಸುವುದು ಆರಂಭವಾಗಿ, ಕ್ರಮೇಣ ವಾಕ್ಯಗಳು ಮತ್ತು ಪದಗಳಿಗೆ ಬದಲಿ ವ್ಯವಸ್ಥೆಯಾಗಿ ಇಮೋಜಿಗಳು ಬಳಕೆಗೆ ಬಂದವು. ಆನಂತರ ಎಸ್‌ಎಂಎಸ್ ಸೌಕರ್ಯವು ತನ್ನದೇ ವ್ಯಾಕರಣವನ್ನು ಸೃಷ್ಟಿಸಿಕೊಂಡಿತು. ಅದನ್ನು ಅನಿವಾರ್ಯಗೊಳಿಸಿತು. ಇದೇ ಇಂದಿನ ಡಿಜಿಟಲ್ ಸಾಕ್ಷರತೆ.

ಈ ಇಮೋಜಿ ಭಾಷೆ ನಮ್ಮೆಲ್ಲ ಭಾವನೆಗಳು ಅಥವಾ ಸಂದೇಶಗಳನ್ನು ಸಮಗ್ರವಾಗಿ ಪ್ರತಿನಿಧಿಸುತ್ತದೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಸಮಾಧಾನದ ಬೆನ್ನಲ್ಲಿಯೇ ಕೆಲವು ಸಮಸ್ಯೆಗಳನ್ನೂ ಅದು ನಮ್ಮ ಕಣ್ಣ ಮುಂದೆ ತರುತ್ತದೆ. ನವಯುಗದಲ್ಲಿ ನಮ್ಮ ಅಸ್ತಿತ್ವ ಕಾಪಾಡಿಕೊಳ್ಳುವ ಸಲುವಾಗಿ ಹಳೆಯ ರೂಢಿಗಳನ್ನು ಒಂದೊಂದಾಗಿಯೇ ಬದಿಗೊತ್ತಿ, ಹೊಸ ಬದಲಿ ವ್ಯವಸ್ಥೆಗಳನ್ನು ಒಪ್ಪಿಕೊಂಡು ಕಲಿಯತೊಡಗುತ್ತೇವೆ. ಈ ಕಾರಣದಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಡಿಜಿಟಲ್ ಉಪಕರಣಗಳ ಪ್ಲಾಟ್‌ಫಾರ್ಮ್‌ಗಳನ್ನು ಬಳಸುವಲ್ಲಿ ಪ್ರವೀಣರಾಗುತ್ತಿದ್ದಾರೆ ಮತ್ತು ಇದು ಅನಿವಾರ್ಯ ಎಂದೂ ಅರಿತಿದ್ದಾರೆ. ಹೀಗೆ ನಮ್ಮ ನಾಗರಿಕ ಸಮಾಜದ ಸಂವಹನ ಮಾರ್ಗಗಳು ನವೀನ ರೀತಿಯಲ್ಲಿ ವಿಕಸನಗೊಂಡಂತೆಲ್ಲ, ಡಿಜಿಟಲ್ ಸಾಕ್ಷರತೆ ನಮ್ಮನ್ನು ಸಬಲೀಕರಿಸಿದೆ ಎಂಬ ಭ್ರಮೆ ನಮ್ಮನ್ನು ಆವರಿಸುತ್ತದೆ.

ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳಲ್ಲಿ ಬಳಕೆದಾರರ ಸಾಕ್ಷರತೆಯು ಪರೀಕ್ಷೆಗೆ ಒಳಪಡುವುದು, ಯಾವ ಯಾವ ಐಕಾನ್‌ಗಳು ಅತ್ಯಂತ ಸಂಕೀರ್ಣವಾದ ಭಾವನೆಗಳು ಮತ್ತು ಆಲೋಚನೆಗಳನ್ನು ಪ್ರತಿನಿಧಿಸುತ್ತವೆ ಎಂಬುದನ್ನು ಆಯ್ಕೆ ಮಾಡಿಕೊಳ್ಳುವಾಗ. ಇಂತಹ ಪರಿಕರಗಳು ದೈನಂದಿನ ನಮ್ಮ ವೈಯಕ್ತಿಕ ಸಂವಹನಗಳ ಜೊತೆಗೆ ವೃತ್ತಿಪರವಾಗಿ ಅದರಲ್ಲೂ ಅಕಡೆಮಿಕ್ ವಲಯದಲ್ಲಿ ವ್ಯಾಪಿಸಿದರೆ ಅದರಿಂದ ಉಂಟಾಗುವ ಪರಿಣಾಮಗಳ ಬಗ್ಗೆ ಯೋಚಿಸಬೇಕಾಗುತ್ತದೆ. ಏಕೆಂದರೆ ನಾವು ಸಂವಹನ ಮಾಡುವ ವಿಧಾನವು ಸಾಂಪ್ರದಾಯಿಕ ಪಠ್ಯದಿಂದ ಹೆಚ್ಚು ದೃಶ್ಯ ರೂಪದ ಅಥವಾ ಇಮೋಜಿಯ ಅಭಿವ್ಯಕ್ತಿಗೆ ತೀವ್ರವಾಗಿ ಬದಲಾದರೆ, ವಿದ್ಯಾರ್ಥಿಗಳು ಅದನ್ನೇ ಸಾರ್ವತ್ರಿಕವಾಗಿ ಸ್ವೀಕಾರಾರ್ಹ ಭಾಷೆ ಎಂದು ಪರಿಭಾವಿಸುವ ಸಾಧ್ಯತೆ ಇರುತ್ತದೆ. ಹಾಗಾಗಿ, ನಮ್ಮ ಸಂವಹನ, ಸಂಸ್ಕೃತಿ ಮತ್ತು ಭಾಷೆಗಳು ಸಂಪೂರ್ಣವಾಗಿ ಇಮೋಜಿಗಳಾಗುವುದು ಆತಂಕಕಾರಿ ವಿಷಯ.



ಡಿಜಿಟಲ್ ಸಂವಹನದ ವ್ಯಾಪಕ ಬಳಕೆಯು ವಿದ್ಯಾರ್ಥಿಗಳ ಭಾಷಾ ಅಭಿವೃದ್ಧಿಗೆ ಹಾನಿ ಉಂಟು ಮಾಡುವುದು ಖಂಡಿತ. ಸೂಕ್ಷ್ಮ ಸಂವಹನಕಾರರು ಮತ್ತು ಚಿಂತಕರ ಪೀಳಿಗೆಯನ್ನು ಬೆಳೆಸಲು ಸಮತೋಲನದ ದೃಷ್ಟಿಕೋನವನ್ನು ಉತ್ತೇಜಿಸುವುದು ಅತ್ಯಂತ ಮುಖ್ಯ. ಅಂದರೆ, ಪಾರಂಪರಿಕ ಭಾಷಾ ಕೌಶಲಗಳ ಮಹತ್ವವನ್ನು ಇಮೋಜಿಗಳು ಮತ್ತು ಎಸ್‌ಎಂಎಸ್‌ಗಳ ಮಟ್ಟಕ್ಕೆ ಇಳಿಸದೆ, ವಿದ್ಯಾರ್ಥಿಗಳು ಪರಿಪೂರ್ಣ ಭಾಷಾ ಪ್ರಭುತ್ವ ಹೊಂದಲು ಬೇಕಿರುವ ಪರಿಸ್ಥಿತಿಯನ್ನು ಡಿಜಿಟಲ್ ಸಂವಹನದ ಜೊತೆಗೇ ನಿರ್ಮಿಸಬೇಕಿರುವುದು ಇಂದಿನ ಬಹುದೊಡ್ಡ ಸವಾಲು.

ನಮ್ಮೆಲ್ಲ ಆಲೋಚನೆಗಳು ಹಾಗೂ ಭಾವನೆಗಳು ಪ್ರತಿ ಹಂತದಲ್ಲಿಯೂ ಬರೀ ಇಮೋಜಿಗಳಾಗಿ ಅಥವಾ ದೃಶ್ಯರೂಪಕಗಳಾಗಿ ಮಾರ್ಪಾಡಾಗುವುದೇ ರೂಢಿಯಾಗಿಬಿಟ್ಟರೆ, ಭಾಷೆಯ ಸಮೃದ್ಧಿ, ಪದಸಂಪತ್ತು ಮತ್ತು ಸುದೀರ್ಘ ವಾಕ್ಯರಚನೆಯನ್ನು ವಿದ್ಯಾರ್ಥಿಗಳು ಕಲಿಯುವುದೇ ದುಸ್ತರವಾಗುತ್ತದೆ. ಪದಗಳನ್ನು ಡಿಕೋಡ್ ಮಾಡುವುದು, ಸಂದರ್ಭವನ್ನು ಅರ್ಥ ಮಾಡಿಕೊಳ್ಳುವುದು, ಉಪಪಠ್ಯವನ್ನು ವ್ಯಾಖ್ಯಾನಿಸುವುದು, ಸಂಕೀರ್ಣ ಪಠ್ಯಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ವಿಶ್ಲೇಷಿಸುವ ಸಾಮರ್ಥ್ಯವನ್ನು ಇಮೋಜಿ ಭಾಷೆ ಖಂಡಿತ ಕಡಿಮೆ ಮಾಡುತ್ತದೆ. ಈ ಕುರಿತು ಎಚ್ಚರ ವಹಿಸಬೇಕಿದೆ.

### ವಾಚಕರ ವಾಣಿ

## ಬ್ಯಾಂಕ್‌ನಲ್ಲಿ ಠೇವಣಿ ಇಳಿಕೆ: ಕಾರಣ ಅರಿಯಬೇಕಿದೆ

ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳಲ್ಲಿ ಸಾಲದ ಪ್ರಮಾಣ ಏರುತ್ತಿದೆ, ಆದರೆ ಠೇವಣಿ ಸಂಗ್ರಹದಲ್ಲಿ ಏರಿಕೆ ಕಾಣುತ್ತಿಲ್ಲ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಕಳವಳ ವ್ಯಕ್ತಪಡಿಸಿದ್ದಾರೆ. ಅಂತೆಯೇ ಠೇವಣಿ ಸಂಗ್ರಹವನ್ನು ಚುರುಕುಗೊಳಿಸುವಂತೆ ಬ್ಯಾಂಕ್‌ಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸೂಚಿಸಿದ್ದಾರೆ. ಆದರೆ ಇಂತಹ ಬೆಳವಣಿಗೆಗೆ ಕಾರಣ ಏನೆಂದು ವಿಶ್ಲೇಷಿಸುವ ಪ್ರಯತ್ನವನ್ನು ಅವರು ಮಾಡಿಲ್ಲ.

ಷೇರು ಮಾರುಕಟ್ಟೆ ನಾಗಾಲೋಟದಲ್ಲಿ ಏರುತ್ತಿದ್ದು, ಹೂಡಿಕೆದಾರರು ಬ್ಯಾಂಕ್ ಬಿಟ್ಟು ದಲಾಲ್ ಸ್ಟ್ರೀಟ್‌ಗೆ ನುಗ್ಗುತ್ತಿದ್ದಾರೆ. ಗರಿಷ್ಠ ಶೇ 9ರಷ್ಟು ರಿಟರ್ನ್ಸ್ ನೀಡುವ ಬ್ಯಾಂಕ್ ಠೇವಣಿ ತನ್ನ ಆಕರ್ಷಣೆಯನ್ನು ಕಳೆದುಕೊಂಡಿದೆ. ಇದು ಸಾಲದು ಎನ್ನುವಂತೆ, ಇದರಿಂದ ಬರುವ ಬಡ್ಡಿಗೂ ತೆರಿಗೆ ಬೇರೆ. ಜನತೆ ತಮ್ಮ ಆದಾಯದ ಶೇ 47ರಷ್ಟನ್ನು ವಿವಿಧ ರೀತಿಯ ತೆರಿಗೆಗಳ ಹೆಸರಿನಲ್ಲಿ ಸರ್ಕಾರಕ್ಕೆ ನೀಡುತ್ತಿದ್ದಾರೆ. ಹಣದುಬ್ಬರದ ದಿನಗಳಲ್ಲಿ ಬಹುತೇಕರಿಗೆ ತಿಂಗಳನ್ನು ದೂಡುವುದೇ ದುಸ್ತರವಾಗಿರುವಾಗ, ಬ್ಯಾಂಕ್‌ನಲ್ಲಿ ಠೇವಣಿ ಇಡಲು ಏನಾದರೂ ಉಳಿಯಬೇಕಲ್ಲವೇ?

**ರಮಾನಂದ ಶರ್ಮಾ,** ಬೆಂಗಳೂರು

## ತ್ಯಾಜ್ಯ ವಿಲೇವಾರಿ: ನ್ಯಾಯಸಮ್ಮತವಾಗಿರಲಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಸಂಗ್ರಹವಾಗುವ ಕಸ ವಿಲೇವಾರಿಗೆ ಕೋಲಾರ ಜಿಲ್ಲೆಯ ಕೆಜಿಎಫ್ ತಾಲ್ಲೂಕಿನಲ್ಲಿ 300 ಎಕರೆ ಜಾಗವನ್ನು ಗುರುತಿಸಿರುವುದಾಗಿ ವರದಿಯಾಗಿದೆ. ಈ ಸ್ಥಳ ಇರುವ ಪ್ರದೇಶವು ಕೃಷ್ಣಮೃಗಗಳ ಆವಾಸಸ್ಥಾನವೂ ಆಗಿದೆ. ಕೆಲವು ವರ್ಷಗಳ ಹಿಂದೆ ಸರ್ಕಾರ ಇದೇ ಬಗೆಯ ಪ್ರಸ್ತಾಪವನ್ನು ಮಾಡಿತ್ತು. ಅದಕ್ಕೆ ಮುಂಚೆ, ಪರಮಾಣು ತ್ಯಾಜ್ಯವನ್ನು ಗಣಿ ಸುರಂಗಗಳಲ್ಲಿ ಸುರಿಯುವ ಮಾತುಗಳು ಕೇಳಿಬಂದಿದ್ದವು.

ಪ್ರಸ್ತುತ ಸುಮಾರು 3.5 ಕೋಟಿ ಟನ್ನುಗಳಷ್ಟು ಗಣಿತ್ಯಾಜ್ಯದ ಗುಡ್ಡಗಳು ಇನ್ನೂ ಕೆಜಿಎಫ್‌ನಲ್ಲಿ ಉಳಿದುಕೊಂಡಿವೆ. ಕೆಜಿಎಫ್ ನಗರವನ್ನು ‘ಗೋಸ್ಟ್ ಸಿಟಿ’ ಎಂದು ಕರೆಯಲಾಗುತ್ತದೆ. ಸಾಲದ್ದಕ್ಕೆ ಕೋಲಾರ- ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಬೆಂಗಳೂರಿನ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಹರಿಸಿ ಅಂತರ್ಜಲಕ್ಕೆ ಮಾಲಿನ್ಯವನ್ನು ಸೇರಿಸಲಾಗುತ್ತಿದೆ. ಬೆಂಗಳೂರಿಗೆ ರಾಜ್ಯದ ಎಲ್ಲಾ ನದಿಗಳ ನೀರು ಬೇಕು. ಆದರೆ ಬೆಂಗಳೂರು ಜನರು ಉತ್ಪಾದಿಸುವ ಘನತ್ಯಾಜ್ಯ, ತ್ಯಾಜ್ಯನೀರು ಮಾತ್ರ ಯಾಕೆ ಬೇಡ? ರಾಜ್ಯ ಸರ್ಕಾರವು ಬೆಂಗಳೂರಿನ ಆಯಾ ವಾರ್ಡ್‌ಗಳಲ್ಲಿ ಉತ್ಪಾದನೆಯಾಗುವ ತ್ಯಾಜ್ಯವನ್ನು ಅಲ್ಲೇ ವೈಜ್ಞಾನಿಕವಾಗಿ ಸಂಸ್ಕರಿಸುವುದು ನ್ಯಾಯಸಮ್ಮತ. ಒಬ್ಬರು ಸೃಷ್ಟಿಸುವ ವಿಷ ತ್ಯಾಜ್ಯವನ್ನು ಇನ್ನೊಬ್ಬರಿಗೆ ಉಣಿಸುವುದು ಯಾವ ನ್ಯಾಯ?

**ಎಂ.ವೆಂಕಟಸ್ವಾಮಿ,** ಬೆಂಗಳೂರು

## ನೇತಾರರಿಂದ ದೌರ್ಜನ್ಯ: ಕಠಿಣ ಶಿಕ್ಷೆಯಾಗಲಿ

ಮಹಿಳೆಯರ ಮೇಲಿನ ದೌರ್ಜನ್ಯದ ಪ್ರಕರಣಗಳಲ್ಲಿ ಜನನಾಯಕರ ಸಂಖ್ಯೆಯೇ ಹೆಚ್ಚಾಗಿರುವ ವರದಿಯನ್ನು ಓದಿ ಬೇಸರವಾಯಿತು. ಇದರಲ್ಲಿ ಬಿಜೆಪಿಗೆ ಸೇರಿದ ನೇತಾರರ ಸಂಖ್ಯೆ ಹೆಚ್ಚಾಗಿರುವುದು ಆಶ್ಚರ್ಯಕರ. ಇದರಿಂದ ಬೇಲಿಯೇ ಎದ್ದು ಹೊಲ ಮೇಯ್ದಂತೆ ಆಗುವುದಿಲ್ಲವೇ? ಯಾವುದೇ ಪಕ್ಷವಿರಲಿ, ಈ ರೀತಿಯ ಆಪಾದನೆ ಹೊತ್ತ ರಾಜಕಾರಣಿಗಳನ್ನು ಅವರು ಆರೋಪಮುಕ್ತರಾಗುವವರೆಗೂ ಪಕ್ಷದಿಂದ ಅಮಾನತು ಮಾಡಬೇಕು. ಇಲ್ಲವಾದಲ್ಲಿ ರಾಜಕೀಯ ಮುಖಂಡರು ಮಹಿಳೆಯರ ಬಗ್ಗೆ ಮಾತನಾಡುವ ಹಕ್ಕನ್ನೇ ಕಳೆದುಕೊಳ್ಳುತ್ತಾರೆ. ಮಾತನಾಡಿದರೂ ಅದು ಬೂಟಾಟಿಕೆಯಂತೆ ಕಾಣುತ್ತದೆ.

ಮಹಿಳೆಯೊಬ್ಬಳು ಒಬ್ಬಂಟಿಯಾಗಿ ನಿರ್ಭಯದಿಂದ ಮಧ್ಯರಾತ್ರಿಯಲ್ಲಿ ಓಡಾಡುವಂತೆ ಆಗುವುದೇ ರಾಮರಾಜ್ಯದ ಕನಸು ಎಂದು ಗಾಂಧೀಜಿ ಹೇಳಿದ್ದರು. ಆದರೆ ರಾಜಕೀಯ ಪಕ್ಷಗಳು ಇದರ ಬಗ್ಗೆ ಚಿಂತನೆ ಮಾಡಿದಂತೆ ಕಾಣುವುದಿಲ್ಲ. ಲೈಂಗಿಕ ದೌರ್ಜನ್ಯವೆಸಗಿದ ಆರೋಪದ ಮೇಲೆ ಸಂಸದರೊಬ್ಬರ ವಿರುದ್ಧ ಗಣನೀಯ ಸಂಖ್ಯೆಯ ಮಹಿಳಾ ಕುಸ್ತಿಪಟುಗಳು ಬೀದಿಗಿಳಿದು ಹೋರಾಟ ಮಾಡಿದಾಗಲೇ ಏನನ್ನೂ ಮಾಡದ ರಾಜಕೀಯ ಪಕ್ಷಗಳಿಂದ ಮಹಿಳೆಯರು ಯಾವುದೇ ರೀತಿಯ ನ್ಯಾಯವನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಕುಸ್ತಿಪಟುಗಳ ಆತ್ಮಸ್ಥೈರ್ಯವನ್ನೇ ಕುಗ್ಗಿಸಿದಂತಹ ಪ್ರಕರಣ ಅದು. ಇಲ್ಲದಿದ್ದರೆ ಭಾರತೀಯ ಕುಸ್ತಿಪಟುಗಳು ಒಲಿಂಪಿಕ್ಸ್‌ನಲ್ಲಿ ಒಂದೆರಡು ಪದಕಗಳನ್ನು ಪಡೆಯುತ್ತಿದ್ದರೇನೊ.

**ಕೆ.ಎಸ್.ಗಂಗಾಧರ,** ಬೆಂಗಳೂರು

**ಮು(ಬೆ)ನ್ನುಡಿ!**

ಕಾಡಿನಿಂದ ನಾಡಿಗೆ
ಹೊರಟ ದಸರಾ
ಆನೆಗಳು ಬರೆದವು
ದಸರಾ ಸಂಭ್ರಮಕ್ಕೆ ಮುನ್ನುಡಿ,
ಒಬ್ಬರ ಹಿಂದೆ ಒಬ್ಬರು
ಕಿಡಿನುಡಿಗಳನ್ನಾಡುತ್ತಿರುವ
ನಾಡಿನ ‘ಬಿಳಿಯಾನೆಗಳು’
ನಿತ್ಯ ಕಾಲುಕೆರೆಯುತ್ತ
ಬರೆದುಕೊಳ್ಳುತ್ತಿವೆ ಬೆನ್ನುಡಿ!

**ಮ.ಗು.ಬಸವಣ್ಣ,** ಮೈಸೂರು

## ಸಮುದ್ರದ ನೀರು ತರಬಾರದೇಕೆ?

ಶರಾವತಿ ನೀರನ್ನು ಬೆಂಗಳೂರಿಗೆ ತಿರುಗಿಸಲು ಪ್ರಯತ್ನ ನಡೆದಿರುವುದು ನ್ಯಾಯೋಚಿತವಲ್ಲ. ಮಲೆನಾಡು ಹಾಗೂ ಕರಾವಳಿ ಭಾಗದ ಜನರಿಗೆ ಇದರಿಂದ ಅನ್ಯಾಯವಾಗುತ್ತದೆ. ನದಿಯ ಮೂಲವನ್ನೇ ತಿರುಗಿಸಲು ಪ್ರಯತ್ನಪಟ್ಟರೆ ಅದು ವಿಫಲವಾಗುವ ಸಂಭವವೇ ಹೆಚ್ಚು. ಇದಕ್ಕೆ ಒಳ್ಳೆಯ ಉದಾಹರಣೆ ಅಂದರೆ ಎತ್ತಿನಹೊಳೆ ಯೋಜನೆ. ಬೆಂಗಳೂರು ಇಂದು ಜಾಗತಿಕ ಮಟ್ಟದ ನಗರವಾಗಿ ಬೆಳೆಯುತ್ತಿದೆ ನಿಜ. ನೀರಿನ ಬೇಡಿಕೆಯೂ ದಿನೇ ದಿನೇ ಹೆಚ್ಚುತ್ತಿದೆ. ಆದರೆ ಇದಕ್ಕಾಗಿ ಶರಾವತಿ ನದಿ ತಿರುವು ಯೋಜನೆಯ ಅವಶ್ಯಕತೆ ಇದೆಯೇ ಎನ್ನುವ ಜಿಜ್ಞಾಸೆ ಮೂಡುತ್ತದೆ.

ಬೇಕಾದರೆ ಉತ್ತರ ಕನ್ನಡ ಇಲ್ಲವೇ ದಕ್ಷಿಣ ಕನ್ನಡ ಜಿಲ್ಲೆಯ ಸಮುದ್ರದ ಉಪ್ಪು ನೀರನ್ನು ಸಿಹಿ ನೀರನ್ನಾಗಿ ಪರಿವರ್ತಿಸಿ, ಅದನ್ನು ಪೈಪ್ ಮೂಲಕ ಬೆಂಗಳೂರಿಗೆ ತೆಗೆದುಕೊಂಡು ಹೋಗುವ ಪ್ರಯತ್ನ ಮಾಡಲಿ. ಈಗಾಗಲೇ ತಮಿಳುನಾಡಿನ ತೂತ್ತುಕುಡಿಯಲ್ಲಿ ಇಂತಹ ಒಂದು ಕಾರ್ಖಾನೆ ಇದೆ. ಬಹಳಷ್ಟು ಅರಬ್ ದೇಶಗಳಲ್ಲೂ ಇಂತಹ ಕೈಗಾರಿಕೆಗಳಿವೆ. ಇವು ಸ್ವಲ್ಪ ದುಬಾರಿ ವೆಚ್ಚದವು ಆಗಿರಬಹುದು. ಆದರೆ ಶರಾವತಿ ನದಿ ನೀರಿನ ಬದಲಿಗೆ ಸಮುದ್ರದ ನೀರನ್ನು ಸಿಹಿಯಾಗಿ ಪರಿವರ್ತಿಸಿ ಅದನ್ನು ಬೆಂಗಳೂರಿಗೆ ಕೊಂಡೊಯ್ಯುವುದು ಪರಿಣಾಮಕಾರಿ ಆಗಬಹುದು.

**ಚಂದ್ರಕಾಂತ ನಾಮಧಾರಿ,** ಅಂಕೋಲಾ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.  To know more about The Printers (Mysore) Private Ltd, visit www.printersmysore.com.

ವೈದ್ಯಕೀಯ ಸಿಬ್ಬಂದಿಯ ಸುರಕ್ಷೆಗೆ ಕಾಯ್ದೆ ರೂಪಿಸುವಂತೆ ಕೇಂದ್ರ ಸರ್ಕಾರದ ಮೇಲೆ ಹೆಚ್ಚಿದ ಒತ್ತಡ

# ರಕ್ಷಣೆಗೆ ಆರೋಗ್ಯ 'ರಕ್ಷಕ'ರ ಮೊರೆ

**ಕೋಲ್ಕತ್ತದಲ್ಲಿ ಟ್ರೈನಿ ವೈದ್ಯೆಯ ಮೇಲಿನ ಅತ್ಯಾಚಾರ ಮತ್ತು ಕೊಲೆಯ ನಂತರ ವೈದ್ಯಕೀಯ ಸಮುದಾಯವು ತಮ್ಮ ಜೀವ ರಕ್ಷಣೆಗಾಗಿ ದೇಶದಲ್ಲಿ ಬಿಗಿ ಕಾನೂನು ಬೇಕು ಎಂದು ಆಗ್ರಹಿಸುತ್ತಿದೆ. ಬಹುತೇಕ ರಾಜ್ಯಗಳಲ್ಲಿ ಕಾನೂನುಗಳಿದ್ದರೂ ರಾಷ್ಟ್ರಕ್ಕೆ ಅನ್ವಯವಾಗುವ ಕಾಯ್ದೆ ರೂಪಿಸಬೇಕು ಎಂಬುದು ವೈದ್ಯ ಸಮೂಹದ ಒತ್ತಾಯ. 2019ರಲ್ಲಿ ಕೇಂದ್ರ ಸರ್ಕಾರ ಕರಡು ಮಸೂದೆ ಸಿದ್ಧಪಡಿಸಿದ್ದರೂ ಅದು ಇನ್ನೂ ಕಾನೂನು ರೂಪ ಪಡೆದಿಲ್ಲ**

ಪ್ರಜಾವಾಣಿ ವಾರ್ತೆ

**ಕೋಲ್ಕತ್ತದಲ್ಲಿ** ಟ್ರೈನಿ ವೈದ್ಯೆ ಮೇಲಿನ ಅತ್ಯಾಚಾರ ಮತ್ತು ಕೊಲೆಯ ನಂತರ ದೇಶದ ವೈದ್ಯರು ಪ್ರತಿಭಟನೆಗಿಳಿದಿದ್ದಾರೆ. ತಮಗೆ ರಕ್ಷಣೆ ನೀಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ. ವೈದ್ಯರು, ದಾದಿಯರು, ಅರೆವೈದ್ಯಕೀಯ ವೃತ್ತಿನಿರತರು, ಪ್ರಯೋಗಾಲಯಗಳ ಪರೀಕ್ಷಕರು ಮುಂತಾದ ವೈದ್ಯಕೀಯ ಸಿಬ್ಬಂದಿಯ ರಕ್ಷಣೆಗಾಗಿ ರಾಷ್ಟ್ರವ್ಯಾಪಿ ಅನ್ವಯವಾಗುವಂಥ ಒಂದು ಕಾನೂನು ರೂಪಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೆಚ್ಚಾಗಿದೆ. ಆದರೆ, ಆರೋಗ್ಯ ಮತ್ತು ಕಾನೂನು ಸುವ್ಯವಸ್ಥೆ ರಾಜ್ಯಗಳಿಗೆ ಸಂಬಂಧಿಸಿದ ವಿಚಾರ ಎಂದು ಕೇಂದ್ರ ಸರ್ಕಾರ ವಾದಿಸುತ್ತಿದ್ದರೆ, ರಾಜ್ಯಗಳಲ್ಲಿ ಇರುವ ಕಾಯ್ದೆಗಳು ವೈದ್ಯಕೀಯ ಸಿಬ್ಬಂದಿಯ ರಕ್ಷಣೆಗೆ ಸಮರ್ಥವಾಗಿಲ್ಲ ಎನ್ನುವುದು ವೈದ್ಯ ಸಮೂಹದ ವಾದ.

ಕರ್ನಾಟಕವೂ ಸೇರಿದಂತೆ 25 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ವೈದ್ಯಕೀಯ ಸಿಬ್ಬಂದಿಯ ಮೇಲೆ ನಡೆಯುವ ದಾಳಿಗಳನ್ನು ತಡೆಗಟ್ಟುವ ದಿಸೆಯಲ್ಲಿ ತಮ್ಮದೇ ಪ್ರತ್ಯೇಕ ಕಾಯ್ದೆಗಳನ್ನು ರೂಪಿಸಿವೆ. ವೈದ್ಯಕೀಯ ಸಿಬ್ಬಂದಿ ಮೇಲೆ ಹಲ್ಲೆ, ದೌರ್ಜನ್ಯ ನಡೆಸುವುದು, ಅವರ ಜೀವಕ್ಕೆ ಅಪಾಯ ಉಂಟುಮಾಡುವುದು, ಕೆಲಸಕ್ಕೆ ಅಡ್ಡಿಪಡಿಸುವುದು, ಆಸ್ಪತ್ರೆಯ ಆಸ್ತಿಗೆ ಹಾನಿ ಮಾಡುವುದನ್ನು ಶಿಕ್ಷಾರ್ಹ ಅಪರಾಧ ಎಂದು 25 ರಾಜ್ಯಗಳ ಕಾಯ್ದೆಗಳಲ್ಲಿ ಹೇಳಲಾಗಿದೆ.

ಆದರೆ, ರಾಜ್ಯಗಳು ತಂದಿರುವ ಕಾಯ್ದೆಗಳಲ್ಲಿ ಹಲವು ಲೋಪಗಳಿವೆ ಎನ್ನುವುದು ವೈದ್ಯರ ವಾದ. ಹೀಗಾಗಿ, ಕೆಲವು ರಾಜ್ಯಗಳಲ್ಲಿ ಕಾನೂನು ತಿದ್ದುಪಡಿಗೆ ಪ್ರಯತ್ನಗಳು ಕೂಡ ನಡೆದಿವೆ.

2020ರ ಸೆಪ್ಟೆಂಬರ್‌ನಲ್ಲಿ ಮಹಾರಾಷ್ಟ್ರದ ಹೈಕೋರ್ಟ್‌ನಲ್ಲಿ ಕಾನೂನು ತಿದ್ದುಪಡಿಯ ಸಂಬಂಧ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯೊಂದು ಸಲ್ಲಿಕೆಯಾಗಿತ್ತು. ಅದರ ವಿಚಾರಣೆಯ ವೇಳೆ, ಅಸ್ತಿತ್ವದಲ್ಲಿರುವ ಮಹಾರಾಷ್ಟ್ರ ಆರೋಗ್ಯ ಸೇವೆ ಸಿಬ್ಬಂದಿ ಮತ್ತು ವೈದ್ಯಸೇವಾ ಸಂಸ್ಥೆಗಳು (ದಾಳಿ ಮತ್ತು ಹಾನಿ ಅಥವಾ ಆಸ್ತಿ ಹಾನಿ ತಡೆ) ಕಾಯ್ದೆ–2010ಕ್ಕೆ ತಿದ್ದುಪಡಿಗೆ ಸರ್ಕಾರ ಪ್ರಯತ್ನ ನಡೆಸುತ್ತಿರುವುದಾಗಿಯೂ, ಕರಡು ಸಿದ್ಧಪಡಿಸುತ್ತಿರುವುದಾಗಿಯೂ ಸರ್ಕಾರದ ಪರವಾಗಿ ಅಡ್ವೊಕೇಟ್ ಜನರಲ್ 2021ರಲ್ಲಿ ಕೋರ್ಟ್‌ಗೆ ತಿಳಿಸಿದ್ದರು. ಅದಾಗಿ ಮೂರು ವರ್ಷವಾಗಿದ್ದರೂ ಈ ದಿಸೆಯಲ್ಲಿ ಯಾವುದೇ ಬೆಳವಣಿಗೆ ಆಗಿಲ್ಲ.

ಕೇರಳದಲ್ಲಿ ಕಿರಿಯ ವೈದ್ಯೆ ವಂದನಾ ದಾಸ್ ಅವರನ್ನು ಮಾದಕದ್ರವ್ಯ ವ್ಯಸನಿ ಶಿಕ್ಷಕನೊಬ್ಬ ಹತ್ಯೆ ಮಾಡಿದ್ದ. ಅದರ ನಂತರ ರಾಜ್ಯವು ಕಾಯ್ದೆಗೆ ತಿದ್ದುಪಡಿ ತಂದು, ಕೇರಳ ಆರೋಗ್ಯ ಸೇವೆ ಸಿಬ್ಬಂದಿ ಮತ್ತು ವೈದ್ಯಸೇವಾ ಸಂಸ್ಥೆಗಳು (ದಾಳಿ ಮತ್ತು ಹಾನಿ ಅಥವಾ ಆಸ್ತಿಹಾನಿ ತಡೆ) ಕಾಯ್ದೆ–2023 ರೂಪಿಸಿ, ಕ್ಲರ್ಕ್‌ಗಳು, ಭದ್ರತಾ ಸಿಬ್ಬಂದಿ ಮತ್ತು ಆಸ್ಪತ್ರೆಯ ಇತರ ಕೆಲಸಗಾರರನ್ನೂ ವೈದ್ಯಕೀಯ ಸಿಬ್ಬಂದಿಯ ಪಟ್ಟಿಯಲ್ಲಿ ಸೇರಿಸಿತು. ದಾಳಿ ನಡೆದರೆ, ಒಂದು ಗಂಟೆಯಲ್ಲಿ ಎಫ್‌ಐಆರ್ ದಾಖಲಿಸುವಂತೆ ಕೇರಳ ಹೈಕೋರ್ಟ್ ನಿರ್ದೇಶಿಸಿತು. ರೋಗಿಗಳ ಪ್ರಾಣ ರಕ್ಷಣೆಗೆ 'ಗೋಲ್ಡನ್ ಅವರ್' ಇರುವಂತೆಯೇ ವೈದ್ಯಕೀಯ ಸಿಬ್ಬಂದಿ ರಕ್ಷಣೆಯ ವಿಚಾರದಲ್ಲಿ ಅದನ್ನು 'ಗೋಲ್ಡನ್ ಅವರ್' ಎಂದು ಕರೆಯಲಾಯಿತು. ಪ್ರಕರಣದ ತ್ವರಿತ ವಿಚಾರಣೆಯ ಬಗ್ಗೆಯೂ ಕಾಯ್ದೆಯಲ್ಲಿ ವಿವರಿಸಲಾಯಿತು. ವೈದ್ಯಕೀಯ ಸಿಬ್ಬಂದಿಯ ರಕ್ಷಣೆಗಾಗಿ ಕೇರಳ ಸರ್ಕಾರವು ಇತ್ತೀಚೆಗೆ ಆಸ್ಪತ್ರೆಗಳಲ್ಲಿ 'ಕೋಡ್ ಗ್ರೇ ಶಿಷ್ಟಾಚಾರ'ವನ್ನು ಜಾರಿಗೊಳಿಸಿದೆ. ಚಿಕಿತ್ಸೆಗೆ ಬಂದ ರೋಗಿಗಳು ಹಾಗೂ ಸಾರ್ವಜನಿಕರೂ ಈ ಶಿಷ್ಟಾಚಾರದ ಪ್ರಯೋಜನ ಪಡೆಯಬಹುದು.

ವೈದ್ಯಕೀಯ ಸಿಬ್ಬಂದಿ ರಕ್ಷಣೆಗೆ ಸಂಬಂಧಿಸಿದಂತೆ, ಕರ್ನಾಟಕ ಮತ್ತು ಕೇರಳ ರಾಜ್ಯಗಳ ಕಾಯ್ದೆಗಳು ಸಮರ್ಥವಾಗಿವೆ ಎನ್ನುವ ವಿಶ್ಲೇಷಣೆಯಿದೆ. ಇಷ್ಟಾದರೂ ಎಲ್ಲ ರಾಜ್ಯಗಳಿಗೂ ಅನ್ವಯವಾಗುವಂತಹ ಕಾಯ್ದೆಯೊಂದು ಬೇಕು ಎಂದು ಒತ್ತಾಯಿಸಿ ಭಾರತೀಯ ವೈದ್ಯಕೀಯ ಸಂಘವು ಕೇಂದ್ರಕ್ಕೆ ಪತ್ರ ಬರೆದಿದೆ. ಕೇಂದ್ರ ಸರ್ಕಾರವು ವೈದ್ಯಕೀಯ ಸಂಸ್ಥೆಗಳು (ನೋಂದಣಿ ಮತ್ತು ನಿಯಂತ್ರಣ) ಕಾಯ್ದೆ– 2010 ರೂಪಿಸಿತ್ತು. ನಂತರ ಕೋವಿಡ್ ಸಂಕಷ್ಟದ ಸಂದರ್ಭದಲ್ಲಿ ವೈದ್ಯರು ಮತ್ತು ಇತರ ವೈದ್ಯಕೀಯ ಸಿಬ್ಬಂದಿಯ ರಕ್ಷಣೆಗಾಗಿ ಸಾಂಕ್ರಾಮಿಕ ರೋಗಗಳ ಕಾಯ್ದೆ–1897ಕ್ಕೆ ತಿದ್ದುಪಡಿ ಮಾಡಿ, 2020ರ ಏಪ್ರಿಲ್ 22ರಂದು ಸುಗ್ರೀವಾಜ್ಞೆ ಹೊರಡಿಸಿತು (ಇದರ ನಿಯಮಗಳು ಕೋವಿಡ್ ಅವಧಿಗೆ ಮಾತ್ರ ಅನ್ವಯವಾಗಿದ್ದವು). ಅದೇ ರೀತಿ, ವೈದ್ಯಕೀಯ ಸಿಬ್ಬಂದಿಯ ರಕ್ಷಣೆಗೆ ಈಗ ರಾಷ್ಟ್ರಮಟ್ಟದಲ್ಲಿ ಕಾಯ್ದೆ ರೂಪಿಸಬೇಕು ಎನ್ನುವುದು ವೈದ್ಯ ಸಮೂಹದ ಬೇಡಿಕೆ.

ಕೋಲ್ಕತ್ತದ ಘಟನೆಯ ನಂತರ ಕೇಂದ್ರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಆದೇಶವೊಂದನ್ನು ಹೊರಡಿಸಿದ್ದು, ಕೆಲಸದ ಸ್ಥಳದಲ್ಲಿ ವೈದ್ಯಕೀಯ ಸಿಬ್ಬಂದಿಯ ಮೇಲೆ ದಾಳಿ ನಡೆದರೆ, ಆರು ಗಂಟೆಗಳ ಒಳಗೆ ಸಾಂಸ್ಥಿಕ ಎಫ್‌ಐಆರ್ ದಾಖಲಿಸಬೇಕು. ಅದಕ್ಕೆ ಆ ಸಂಸ್ಥೆಯ ಮುಖ್ಯಸ್ಥರೇ ಹೊಣೆಗಾರರಾಗಿರುತ್ತಾರೆ ಎಂದು ಹೇಳಿದೆ. ಜತೆಗೆ, ವೈದ್ಯಕೀಯ ಕಾಲೇಜುಗಳಲ್ಲಿ ಮತ್ತು ಆಸ್ಪತ್ರೆಗಳಲ್ಲಿ ಸುರಕ್ಷಿತ ಕೆಲಸದ ವಾತಾವರಣ ರೂಪಿಸಲು ಎಲ್ಲ ವೈದ್ಯಕೀಯ ಕಾಲೇಜುಗಳಿಗೆ ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ಸೂಚಿಸಿದೆ. ವೈದ್ಯ ವಿದ್ಯಾರ್ಥಿಗಳ ಮೇಲೆ ದಾಳಿ ನಡೆದರೆ, ಕಾಲೇಜು ಆಡಳಿತ ಮಂಡಳಿಯೇ ಆ ಬಗ್ಗೆ ತನಿಖೆ ನಡೆಸಬೇಕು ಮತ್ತು ಎಫ್‌ಐಆರ್ ದಾಖಲಿಸಬೇಕು ಎಂದೂ ಸೂಚಿಸಲಾಗಿದೆ. ಪ್ರಕರಣದ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ಎಂಬ ಬಗ್ಗೆ ಎನ್‌ಎಂಸಿಗೆ ಘಟನೆ ನಡೆದ 48 ಗಂಟೆಗಳ ಒಳಗೆ ವರದಿ ಸಲ್ಲಿಸಬೇಕು ಎಂದು ತಿಳಿಸಲಾಗಿದೆ.

ಆಧಾರ: 2019ರ ಕರಡು ಮಸೂದೆ, ಲ್ಯಾನ್ಸೆಟ್‌ನಲ್ಲಿ ಪ್ರಕಟವಾದ 'ಎಂಡಿಂಗ್ ವಯಲೆನ್ಸ್ ಅಗೆನೆಸ್ಟ್ ಹೆಲ್ತ್‌ಕೇರ್ ವರ್ಕರ್ಸ್ ಇನ್ ಇಂಡಿಯಾ: ಎ ಬಿಲ್ ಫಾರ್ ಎ ಬಿಲಿಯನ್', ಐಎಂಎ ಕೇಂದ್ರಕ್ಕೆ ಬರೆದ ಪತ್ರ, ಪಿಐಬಿ



ಕೋಲ್ಕತ್ತದಲ್ಲಿ ನಡೆದ ಟ್ರೈನಿ ವೈದ್ಯೆಯ ಅತ್ಯಾಚಾರ ಮತ್ತು ಕೊಲೆ ಖಂಡಿಸಿ ಪಂಜಾಬ್‌ನ ಅಮೃತಸರದ ಆಸ್ಪತ್ರೆಯೊಂದರಲ್ಲಿ ವೈದ್ಯಕೀಯ ಸಿಬ್ಬಂದಿಯೊಬ್ಬರು, 'ಹಿಂಸಾಚಾರ ನಿಲ್ಲಿಸಿ' ಎಂಬ ಪೋಸ್ಟರ್ ಹಿಡಿದು ಗುರುವಾರ ಪ್ರತಿಭಟಿಸಿದರು –ಎಎಫ್‌ಪಿ ಚಿತ್ರ

## ಕಾಯ್ದೆ ತಿದ್ದುಪಡಿ ಮಾಡಿದ ಕರ್ನಾಟಕ

'ಕರ್ನಾಟಕ ವೈದ್ಯಕೀಯ ನೋಂದಣಿ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ಕಾಯ್ದೆ–2024' ಅನ್ನು ರಾಜ್ಯ ಸರ್ಕಾರ ಕಾನೂನು ಆಯೋಗದ ಸಲಹೆಯ ಮೇರೆಗೆ ರೂಪಿಸಿದೆ. ಕರ್ನಾಟಕ ವೈದ್ಯಕೀಯ ನೋಂದಣಿ ಕಾಯ್ದೆ -1961 ಮತ್ತು ಕರ್ನಾಟಕ ಆರೋಗ್ಯ ಸೇವಾ ಸಿಬ್ಬಂದಿ ಮೇಲಿನ ಹಿಂಸಾಚಾರ ಮತ್ತು ವೈದ್ಯಕೀಯ ಸಂಸ್ಥೆಗಳ ಆಸ್ತಿಗೆ ಹಾನಿ ಮಾಡುವುದನ್ನು ನಿಷೇಧಿಸುವ ಕಾಯ್ದೆ -2009ಕ್ಕೆ ತಿದ್ದುಪಡಿ ಮಾಡಿ ಈ ಕಾಯ್ದೆ ರೂಪಿಸಲಾಗಿದೆ.

ಕೇರಳ ಕಾಯ್ದೆಯಲ್ಲಿರುವ ಬಹುತೇಕ ಎಲ್ಲ ಅಂಶಗಳನ್ನೂ ಒಳಗೊಂಡಿರುವ ಕರ್ನಾಟಕದ ಈ ಕಾಯ್ದೆಯಲ್ಲಿ, ತಪ್ಪಿತಸ್ಥರು ಶಿಕ್ಷೆಯಿಂದ ತಪ್ಪಿಸಿಕೊಳ್ಳದಂತೆ ಇನ್ನೂ ಕೆಲವು ಹೊಸ ಅಂಶಗಳನ್ನು ಸೇರಿಸಲಾಗಿದೆ.

## 2019ರ ಕರಡು ಮಸೂದೆ ನನೆಗುದಿಗೆ...

2019ರಲ್ಲಿ ಸ್ವತಃ ವೈದ್ಯರಾಗಿರುವ ಡಾ.ಹರ್ಷವರ್ಧನ್ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾಗಿದ್ದಾಗ, ಆರೋಗ್ಯ ಸೇವಾ ಸಿಬ್ಬಂದಿಯ ರಕ್ಷಣೆಗಾಗಿ ಆರೋಗ್ಯ ಸೇವೆ ಸಿಬ್ಬಂದಿ ಮತ್ತು ವೈದ್ಯಕೀಯ ಸಂಸ್ಥೆಗಳು (ಹಿಂಸಾಚಾರ ಮತ್ತು ಆಸ್ತಿ ಹಾನಿ ತಡೆ) ಕರಡು ಮಸೂದೆಯನ್ನು ಸಚಿವಾಲಯ ಸಿದ್ಧಪಡಿಸಿತ್ತು. ಸಾರ್ವಜನಿಕರಿಂದ ಅಭಿಪ್ರಾಯಗಳನ್ನೂ ಸಂಗ್ರಹಿಸಿತ್ತು. ವೈದ್ಯಕೀಯ ಸಿಬ್ಬಂದಿಯ ರಕ್ಷಣೆಯ ವ್ಯಾಪ್ತಿ ರಾಜ್ಯಗಳಿಗೆ ಬರುವುದರಿಂದ ಕೇಂದ್ರ ಸರ್ಕಾರ ಕಾನೂನು ರೂಪಿಸಲು ಆಗುವುದಿಲ್ಲ ಎಂದು ಗೃಹ ಸಚಿವಾಲಯ ಅಭಿಪ್ರಾಯಪಟ್ಟಿದ್ದರಿಂದ ಈ ಮಸೂದೆ ಐದು ವರ್ಷಗಳಿಂದ ನನೆಗುದಿಗೆ ಬಿದ್ದಿತ್ತು. ಕೋಲ್ಕತ್ತದ ಘಟನೆಯ ಬಳಿಕ ಈ ಕರಡು ಮಸೂದೆ ಮತ್ತೆ ಚರ್ಚೆಗೆ ಬಂದಿದ್ದು, ಇದನ್ನು ಇನ್ನಷ್ಟು ಪರಿಷ್ಕರಿಸಿ ಕಾನೂನು ರೂಪಿಸುವಂತೆ ಕೇಂದ್ರ ಸರ್ಕಾರದ ಮೇಲೆ ಭಾರತೀಯ ವೈದ್ಯಕೀಯ ಸಂಘ ಒತ್ತಡ ಹಾಕುತ್ತಿದೆ.

## ಕರಡು ಮಸೂದೆಯಲ್ಲೇನಿದೆ?

- ಆರೋಗ್ಯ ಸೇವೆ ಒದಗಿಸುವ ಯಾವುದೇ ವ್ಯಕ್ತಿ /ಸಿಬ್ಬಂದಿ ಮೇಲೆ ದಾಳಿ ಅಥವಾ ಹಾನಿ ಅಥವಾ ವೈದ್ಯಕೀಯ ಸಂಸ್ಥೆಗಳ ಆಸ್ತಿಗಳಿಗೆ ಯಾರೊಬ್ಬರೂ ನಷ್ಟ ಮಾಡುವಂತಿಲ್ಲ
- ವೈದ್ಯಕೀಯ ಸಿಬ್ಬಂದಿ ವಿರುದ್ಧ ಯಾರಾದರೂ ದಾಳಿ ಮಾಡಿದರೆ ಅಥವಾ ಹಿಂಸೆಗೆ ಕುಮ್ಮಕ್ಕು ಕೊಟ್ಟರೆ, ಅಂತಹವರು ಶಿಕ್ಷೆಗೆ ಅರ್ಹರಾಗಿದ್ದು, ಕನಿಷ್ಠ ಆರು ತಿಂಗಳಿಂದ ಗರಿಷ್ಠ ಐದು ವರ್ಷದವರೆಗೆ ಶಿಕ್ಷೆ ವಿಧಿಸಬಹುದು. ಕನಿಷ್ಠ ₹50 ಸಾವಿರದಿಂದ ಗರಿಷ್ಠ ₹5 ಲಕ್ಷದವರೆಗೆ ದಂಡ ವಿಧಿಸಬಹುದು
- ದಾಳಿಯಲ್ಲಿ ವೈದ್ಯಕೀಯ ಸಿಬ್ಬಂದಿಯ ಜೀವಕ್ಕೆ ಅಪಾಯವಾದರೆ, ತೀವ್ರವಾಗಿ ಗಾಯಗೊಂಡಿದ್ದರೆ ಮತ್ತು ಆಸ್ತಿಗೆ ಭಾರಿ ಪ್ರಮಾಣದಲ್ಲಿ ಹಾನಿಯಾಗಿದ್ದರೆ (ಐಪಿಸಿ ಸೆಕ್ಷನ್ 320ರಲ್ಲಿ ವ್ಯಾಖ್ಯಾನಿಸಿದಂತೆ), ದಾಳಿ ನಡೆಸಿದವರಿಗೆ ಕನಿಷ್ಠ ಮೂರು ವರ್ಷಗಳಿಂದ ಗರಿಷ್ಠ 10 ವರ್ಷಗಳವರೆಗೆ ಶಿಕ್ಷೆ ವಿಧಿಸಬಹುದು. ಅಲ್ಲದೇ, ಕನಿಷ್ಠ ₹2 ಲಕ್ಷದಿಂದ ಗರಿಷ್ಠ ₹10 ಲಕ್ಷದವರೆಗೆ ದಂಡ ವಿಧಿಸಬಹುದು
- ಕಾಯ್ದೆಯ ಅಡಿಯಲ್ಲಿ ಬರುವ ಅಪರಾಧ ಕೃತ್ಯಗಳು ಗಂಭೀರ ಸ್ವರೂಪದವು ಮತ್ತು ಜಾಮೀನು ರಹಿತವಾದವು
- ಕಾಯ್ದೆಯಡಿ ದಾಖಲಾದ ಪ್ರಕರಣವನ್ನು ಡಿವೈಎಸ್‌ಪಿ ಹಾಗೂ ಆ ಶ್ರೇಣಿಗಿಂತ ಮೇಲ್ಮಟ್ಟದ ಅಧಿಕಾರಿಗಳು ತನಿಖೆ ನಡೆಸಬೇಕು
- ದಾಳಿ ನಡೆಸಿದವರು ಉಂಟು ಮಾಡಿರುವ ಹಾನಿಗೆ ಪರಿಹಾರವನ್ನೂ ಪಾವತಿಸಬೇಕಾಗುತ್ತದೆ
  (i) ಹಾನಿಗೀಡಾದ ಆಸ್ತಿಯ ಮಾರುಕಟ್ಟೆ ಮೌಲ್ಯದ ಎರಡು ಪಟ್ಟು ಅಥವಾ ಕೋರ್ಟ್ ನಿಗದಿಪಡಿಸಿದ ನಷ್ಟದ ಆಧಾರದಲ್ಲಿ ಪರಿಹಾರ ಮೊತ್ತವನ್ನು ಪಾವತಿಸಬೇಕು
  (ii) ವೈದ್ಯಕೀಯ ಸಿಬ್ಬಂದಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದರೆ ₹1 ಲಕ್ಷ ಮತ್ತು ಗಂಭೀರ ಗಾಯಗಳಾಗಿದ್ದರೆ ₹5 ಲಕ್ಷ ಪಾವತಿಸಬೇಕು

## ವೈದ್ಯಕೀಯ ಸಿಬ್ಬಂದಿ ಮೇಲೆ ದಾಳಿ

**153** – 2007ರಿಂದ 2019ರ ನಡುವಿನ ಅವಧಿಯಲ್ಲಿ ವೈದ್ಯಕೀಯ ಸಿಬ್ಬಂದಿ/ಆರೋಗ್ಯ ಕಾರ್ಯಕರ್ತರ ಮೇಲೆ ದೇಶದಲ್ಲಿ ನಡೆದ ದಾಳಿ ಪ್ರಕರಣಗಳು

**220** – 2016ರಿಂದ 2022ರ ನಡುವಿನ ಅವಧಿಯಲ್ಲಿ ವರದಿಯಾದ ಪ್ರಕರಣಗಳು

**3** – ಭಾರತದಲ್ಲಿ ಪ್ರತಿ ಒಂದು ಲಕ್ಷ ವೈದ್ಯಕೀಯ ಸಿಬ್ಬಂದಿ/ಆರೋಗ್ಯ ಕಾರ್ಯಕರ್ತರಲ್ಲಿ ದಾಳಿಗೆ ಒಳಗಾಗುವ ಸಿಬ್ಬಂದಿ

### 41 ವರ್ಷ ನರಳಿದ್ದ ಅರುಣಾ



ಮುಂಬೈನ ಎಡ್ವರ್ಡ್ ಮೆಮೋರಿಯಲ್ ಆಸ್ಪತ್ರೆಯಲ್ಲಿ ಕಿರಿಯ ನರ್ಸ್ ಆಗಿದ್ದ, ಕರ್ನಾಟಕದವರೇ ಆದ ಅರುಣಾ ರಾಮಚಂದ್ರ ಶಾನಭಾಗ್ ಅವರ ಮೇಲೆ ಆಸ್ಪತ್ರೆಯ ಸ್ವಚ್ಛತಾ ಕಾರ್ಮಿಕನೊಬ್ಬ ಘೋರ ಹಲ್ಲೆ ಮತ್ತು ಲೈಂಗಿಕ ದೌರ್ಜನ್ಯ ಎಸಗಿದ್ದ. ಅವರು 41 ವರ್ಷ ಪ್ರಜ್ಞಾಶೂನ್ಯ ಸ್ಥಿತಿಯಲ್ಲಿದ್ದರು. 2015ರಲ್ಲಿ ಅರುಣಾ ಮೃತಪಟ್ಟರು.

### ಕರ್ತವ್ಯ ನಿರತರಾಗಿದ್ದಾಗ ದಾಳಿಯಲ್ಲಿ ಮೃತಪಟ್ಟ ವೈದ್ಯರು

- **2012 ಜನವರಿ 1**: ಡಾ.ಟಿ ಸೇತುಲಕ್ಷ್ಮಿ, ತೂತ್ತುಕುಡಿ, ತಮಿಳುನಾಡು– 'ಗಂಭೀರ ಸ್ಥಿತಿ'ಯಲ್ಲಿ ಆಸ್ಪತ್ರೆಗೆ ದಾಖಲಾಗಿದ್ದ ಗರ್ಭಿಣಿ ಪತ್ನಿಯು ಮೃತಪಟ್ಟಿದ್ದಕ್ಕೆ ಆಕ್ರೋಶಗೊಂಡು ಆಟೊ ಚಾಲಕನೊಬ್ಬ ಅರವಳಿಕೆ ತಜ್ಞೆಯಾಗಿದ್ದ ಸೇತುಲಕ್ಷ್ಮಿ ಅವರನ್ನು ಹತ್ಯೆ ಮಾಡಿದ್ದ
- **2019 ಜುಲೈ 31**: ಡಾ.ದೇವನ್ ದತ್ತಾ, ಜೊರ್‌ಹಾಟ್, ಅಸ್ಸಾಂ – ಕಾರ್ಮಿಕರೊಬ್ಬರಿಗೆ ಚಿಕಿತ್ಸೆ ನೀಡಲು ವಿಳಂಬ ಮಾಡಿದರು ಎಂದು ಆರೋಪಿಸಿ ಟಿಯಾಕ್ ಟೀ ಎಸ್ಟೇಟ್‌ನ ವೈದ್ಯಕೀಯ ಅಧಿಕಾರಿಯಾಗಿದ್ದ ದತ್ತಾ ಅವರ ಮೇಲೆ ಉದ್ರಿಕ್ತ ಗುಂಪು ಮಾರಕಾಸ್ತ್ರಗಳಿಂದ ದಾಳಿಮಾಡಿ ಹತ್ಯೆ ಮಾಡಿತ್ತು
- **2023 ಮೇ 10**: ಡಾ.ವಂದನಾ ದಾಸ್, ಕೊಟ್ಟಾರಕ್ಕರ, ಕೇರಳ– ಕೊಟ್ಟಾರಕ್ಕರ ತಾಲ್ಲೂಕು ಆಸ್ಪತ್ರೆಗೆ ಪೊಲೀಸರು ಚಿಕಿತ್ಸೆಗಾಗಿ ಕರೆತಂದ ಬಂಧಿತ ಮಾದಕ ದ್ರವ್ಯ ವ್ಯಸನಿಯೊಬ್ಬ, ಅಲ್ಲಿ ಇಂಟರ್ನಿಯಾಗಿ ಕೆಲಸ ಮಾಡುತ್ತಿದ್ದ ವಂದನಾ ಮೇಲೆ ದಾಳಿ ಮಾಡಿದ್ದ. ತೀವ್ರವಾಗಿ ಗಾಯಗೊಂಡಿದ್ದ ಆಕೆ, ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದರು



ಚಿತ್ರ: ಪೋಸ್ಟರ್

## ಯಕ್ಷಗಾನವೇ ಸಿನಿಮಾವಾಗಿ...

**ಆಯಾ** ಕಾಲಕ್ಕೆ ಹಿಟ್ ಆದ ಸಿನಿಮಾ ಕಥೆಗಳು, ಹಾಡುಗಳು, ಹಾಸ್ಯದ ತುಣುಕುಗಳು ಯಕ್ಷಗಾನದ ರಂಗಸ್ಥಳಕ್ಕೆ ಬಂದು ಬಹಳ ಕಾಲವಾಗಿದೆ. ಅದರಂತೆ ಒಂದಷ್ಟು ಯಕ್ಷಗಾನದ ಸನ್ನಿವೇಶಗಳೂ ಸಿನಿಮಾದಲ್ಲಿ ನುಸುಳಿದ್ದಿದೆ. ಆದರೆ ಸಂಗೀತ ನಿರ್ದೇಶಕ ರವಿ ಬಸ್ರೂರು ಪೂರ್ಣ ಯಕ್ಷಗಾನವನ್ನೇ ಸಿನಿಮಾವಾಗಿಸುವ ವಿಶಿಷ್ಟ ಪ್ರಯೋಗಕ್ಕೆ ಕೈ ಹಾಕಿದ್ದಾರೆ.

'ವೀರ ಚಂದ್ರಹಾಸ' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಓಂಕಾರ್ ಮೂವೀಸ್, ರವಿ ಬಸ್ರೂರ್ ಮೂವೀಸ್ ಸಹಯೋಗದೊಂದಿಗೆ ಈ ಚಿತ್ರ ನಿರ್ಮಾಣಗೊಂಡಿದೆ. ಯಕ್ಷಗಾನ ಕಲಾವಿದರೇ ಪ್ರಮುಖ ಪಾತ್ರದಲ್ಲಿರುವ ಈ ಚಿತ್ರಕ್ಕೆ ನಿರ್ದೇಶಕರಿಲ್ಲ. ಬದಲಿಗೆ ಬಸ್ರೂರು ತಂಡದ ಪರಿಶ್ರಮ ಎಂದು ಪೋಸ್ಟರ್‌ನಲ್ಲಿ ಹಾಕಲಾಗಿದೆ.

ಯಕ್ಷಗಾನದ ಪೌರಾಣಿಕ ಕಥೆಯೊಂದನ್ನು ಸಿನಿಮೀಯವಾಗಿ ಚಿತ್ರಿಸಲಾಗಿದೆ ಎಂಬುದು ಟೀಸರ್‌ನಿಂದ ಮೇಲ್ನೋಟಕ್ಕೆ ತಿಳಿಯುತ್ತಿದೆ. ದೃಶ್ಯಗಳು 'ಕಾಂತಾರ' ಸಿನಿಮಾವನ್ನು ನೆನಪಿಸುತ್ತಿದೆ. ರವಿ ಬಸ್ರೂರು ಅವರ ಸಂಗೀತ, ಕಿರಣ್‌ಕುಮಾರ್ ಆರ್ ಛಾಯಾಚಿತ್ರಗ್ರಹಣವಿದೆ. ಹಟ್ಟಿಯಂಗಡಿ ಮೇಳದ ಯಕ್ಷ ಕಲಾವಿದ ಶಿಥಿಲ್ ಶೆಟ್ಟಿ ಚಿತ್ರದ ನಾಯಕ. ಯಕ್ಷತಾರೆ, ಕಿರುತೆರೆ ನಟಿ ನಾಗಶ್ರೀ ಜಿ ಎಸ್ ಪ್ರಮುಖ ಪಾತ್ರದಲ್ಲಿದ್ದಾರೆ. ಪ್ರಸನ್ನ ಶೆಟ್ಟಿಗಾರ್ ಮಂದಾರ್ತಿ, ಉದಯ್ ಕಡಬಾಳ್, ರವೀಂದ್ರ ದೇವಾಡಿಗ, ನಾಗರಾಜ್ ಸರ್ವೆಗಾರ್, ಗುಣಶ್ರೀ ಎಂ ನಾಯಕ್, ಶ್ರೀಧರ್ ಕಾಸರಕೋಡು ಮೊದಲಾದವರು ತಾರಾಗಣದಲ್ಲಿದ್ದಾರೆ.

## ರಕ್ಷಿತ್‌ಗೆ ಜೋಡಿಯಾದ ಅಮೃತಾ

**'ಟಗರುಪಲ್ಯ'** ಸಿನಿಮಾ ಮೂಲಕ ಚಂದನವನಕ್ಕೆ ಹೆಜ್ಜೆ ಇಟ್ಟಿದ್ದ 'ಲವ್ಲಿಸ್ಟಾರ್' ಪ್ರೇಮ್ ಪುತ್ರಿ ನಟಿ ಅಮೃತಾ ಪ್ರೇಮ್ ಇದೀಗ ಹೊಸ ಪ್ರಾಜೆಕ್ಟ್ ಒಪ್ಪಿಕೊಂಡಿದ್ದಾರೆ.

ಮಹೇಶ್ ಬಾಬು ಆ್ಯಕ್ಷನ್ ಕಟ್ ಹೇಳುತ್ತಿರುವ ಹೊಸ ಸಿನಿಮಾದಲ್ಲಿ ಸ್ಮೈಲ್ ಗುರು ರಕ್ಷಿತ್‌ಗೆ ಜೋಡಿಯಾಗಿ ಅಮೃತ ನಟಿಸಲಿದ್ದಾರೆ. ಮಹೇಶ್ ಬಾಬು ಸಾರಥ್ಯದಲ್ಲಿ ನಡೆದ 15 ದಿನಗಳ ಕಾರ್ಯಾಗಾರದಲ್ಲಿ ನಾಯಕ ರಕ್ಷಿತ್, ನಾಯಕಿ ಅಮೃತಾ ಪ್ರೇಮ್ ಸೇರಿದಂತೆ ಇಡೀ ತಂಡ ಭಾಗಿಯಾಗಿದ್ದು, ಚಿತ್ರದ ಚಿತ್ರೀಕರಣವೂ ಆರಂಭಗೊಂಡಿದೆ.

ಕಿರುಚಿತ್ರ, ಧಾರಾವಾಹಿ, ರಿಯಾಲಿಟಿ ಶೋಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಸ್ಮೈಲ್ ಗುರು ರಕ್ಷಿತ್ ನಾಯಕನಾಗಿ ಚಂದನವನಕ್ಕೆ ಈ ಸಿನಿಮಾ ಮೂಲಕ ಹೆಜ್ಜೆ ಇಡುತ್ತಿದ್ದಾರೆ. 'ಆಕಾಶ್', 'ಅರಸು' ಮುಂತಾದ ಹಿಟ್ ಚಿತ್ರಗಳನ್ನು ನೀಡಿರುವ ನಿರ್ದೇಶಕ ಮಹೇಶ್ ಬಾಬು ಮತ್ತೊಂದು ಯೂತ್‌ಫುಲ್ ಎಂಟರ್‌ಟೈನರ್ ಕಥಾಹಂದರದ ಸಿನಿಮಾದೊಂದಿಗೆ ಬರುತ್ತಿದ್ದಾರೆ. ಚಿತ್ರದಲ್ಲಿ 'ವೀರ ಮದಕರಿ' ಸಿನಿಮಾದಲ್ಲಿ ಬಾಲನಟಿಯಾಗಿ ನಟಿಸಿದ್ದ ಜೆರುಶಾ ಪ್ರಮುಖಪಾತ್ರದಲ್ಲಿ ನಟಿಸಿದ್ದಾರೆ. ಈ ಚಿತ್ರಕ್ಕೆ ಶೀರ್ಷಿಕೆ ಇನ್ನಷ್ಟೇ ಅಂತಿಮಗೊಳ್ಳಬೇಕಾಗಿದೆ. ಎಂಎಂಎಂ ಪಿಕ್ಚರ್ಸ್ ಹಾಗೂ ಎ ಕ್ಲಾಸ್ ಸಿನಿ ಫಿಲಂಸ್ ಜಂಟಿಯಾಗಿ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದೆ. ಅನೂಪ್ ಸೀಳಿನ್ ಸಂಗೀತ ನಿರ್ದೇಶನ, ಸತ್ಯ ಅವರ ಛಾಯಾಚಿತ್ರಗ್ರಹಣ, ಸತೀಶ್ ಚಂದ್ರಯ್ಯ ಅವರ ಸಂಕಲನ ಚಿತ್ರಕ್ಕಿದೆ. ನಾಯಕ ರಕ್ಷಿತ್ ಚಿತ್ರಕ್ಕೆ ಕಥೆ ಬರೆದಿದ್ದು, ವಿಜಯ್ ಈಶ್ವರ್ ಸಂಭಾಷಣೆ ಇದೆ.


ಅಮೃತಾ ಪ್ರೇಮ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

## ಗುಂಡಣ್ಣ




## ದೇವರು ಮೆಚ್ಚುವ ನೈವೇದ್ಯ!



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

7

ನೀವು ಮಂದಿಗೆ ಮೋಸ ಮಾಡಿ ಹೋಳಿಗೆ ನೈವೇದ್ಯ ಮಾಡಿದರೂ ಅದು ದೇವರಿಗೆ ಪ್ರಿಯವಾಗುವುದಿಲ್ಲ. ಕಷ್ಟಪಟ್ಟು ಹೊಲದಾಗೆ ದುಡಿದು ಹುಲ್ಲು ತಂದಿಟ್ಟರೂ ದೇವರಿಗೆ ಪ್ರಿಯವಾಗುತ್ತದೆ ಎನ್ನುತ್ತಾನೆ ಶರಣ ನುಲಿಯ ಚಂದಯ್ಯ. ಕಾಯಕ ಸತ್ಯವಾಗಿರಬೇಕು. ಶುದ್ಧವಾಗಿರಬೇಕು. ಕಾಯಕ ಮುಕ್ತಿಗೆ ಸಾಧನ ಎನ್ನುವ ರೀತಿಯಲ್ಲಿ ಮಾಡುತ್ತಿರಬೇಕು. ಹಾಗಿದ್ದರೆ ಅದು ಚಂದೇಶ್ವರ ಲಿಂಗಕ್ಕೆ ನೈವೇದ್ಯ. ಇನ್ನೊಬ್ಬರಿಗೆ ಮೋಸಮಾಡಿ ಉಣ್ಣೋದಲ್ಲ. ಕಾಯಕದಿಂದ ಗಳಿಸಿದ್ದನ್ನು ಉಣ್ಣೋದು.

ನಮ್ಮಲ್ಲಿ ಮೂರು ರೀತಿಯ ಜನರಿದ್ದಾರೆ. 'ನಮ್ಮಪ್ಪ ಜಗ್ಗಿ ಮಾಡಿಟ್ಟಾನ, ನಾನು ದುಡಿಯೋದೇ ಬೇಡ' ಎಂದು ಹೇಳೋವ್ರದ್ದು ಒಂದು ಗುಂಪು. ಬೆಳಿಗ್ಗೆ ಎದ್ದು ತಕ್ಷಣ ಯಾರಿಗೆ ಮೋಸ ಮಾಡಿಗಳಿಸಬೇಕು ಅಂತ ಯೋಚನೆ ಮಾಡೋರದ್ದು ಒಂದು ಗುಂಪು. ಇನ್ನು ಕೆಲವರು ಕಾಯಕ ಮಾಡಿ ಉಣ್ಣುತ್ತಾರ. ನಮ್ಮ ಅಪ್ಪ, ಅಜ್ಜ ಮಾಡಿಟ್ಟಿದ್ದನ್ನು ನಾವು ಉಣ್ಣುತೀವಿ ಅಂದರ ಅದು ತಾಜಾ ಅಡುಗೆ ಅಲ್ಲ. ಹಳಸಿದ ಅಡುಗೆ. ನಾ ದುಡಿದಿದ್ದಲ್ಲ ಎಂಬ ಅರಿವಿರಬೇಕು. ಇನ್ನೊಬ್ಬರಿಗೆ ಮೋಸ ಮಾಡಿ ನಾ ಉಣತೀನಿ ಅಂದರ ಅದು ಇನ್ನೊಬ್ಬರ ಎಂಜಲು ಉಂಡಂಗ. ಕಾಯಕದಿಂದ ಬಂದಿದ್ದನ್ನು ಉಣ್ಣುತ್ತೀರಿ ಎಂದರೆ ಅದು ದೇವರು ನಮಗೆ ಕೊಟ್ಟ ಪ್ರಸಾದ.

ಮನುಷ್ಯ ದುಡಿದು ತಿನ್ನಬೇಕು. ಬೇಡಿ ತಿನ್ನೋದಲ್ಲ. ನಾವು ಎಲ್ಲಿ ಹೋದರೂ ಬೇಡೋದನ್ನ ಬಿಡೋದಿಲ್ಲ. ಹುಡುಗ ಎಂಎ ಮಾಡ್ಯಾನ, ಪಿಎಚ್ ಡಿ ಮಾಡ್ಯಾನ. ಆದರೂ, ಕನ್ಯಾ ನೋಡೋಕೆ ಹೋದಾಗ ಎಷ್ಟು ಕೊಡ್ತೀರಿ ಎಂದು ಬೇಡುತ್ತಾನ. ಪಾಪ ಆಕಿ ತನ್ನ ಮನಿ ಬಿಟ್ಟು ಇವನ ಮನೀಗೆ ಬರಾಕ ಹತ್ತೈತಿ. ಒಂದು ಹೆಣ್ಣು ಮಗಳನ್ನು ತನ್ನ ಮನೀಗೆ ಕರಕೊಂಡು ಬಂದು ಜ್ವಾಪಾನ ಮಾಡೋ ಯೋಗ್ಯತೆ ಇಲ್ಲ ಅಂದ್ರ ಹ್ಯಾಂಗ? ಓದ್ಯಾನ, ಎಲ್ಲಾ ಮಾಡ್ಯಾನ, ಆದರೂ ಬೇಡತಾನ. ತನ್ನ ತೋಳು ಬಲದ ಮ್ಯಾಲೆ ಅವಗ ನಂಬಿಕೆ ಇಲ್ಲ, ಮಾವ ಕೊಡೋ ವರದಕ್ಷಿಣೆ ಮೇಲೆ ನಂಬಿಕೆ ಇವಗ. ಮಾವ ಕೊಟ್ಟಿದ್ದು ಮನೆ ತನಕ, ಮಹದೇವ ಕೊಟ್ಟಿದ್ದು ಕೊನೆತನಕ ಎಂಬುದನ್ನು ತಿಳಕೋಬೇಕು ಮನುಷ್ಯ.

ದೇವರ ಗುಡಿಗೆ ಹೋದರೂ ಅಲ್ಲೂ ಬೇಡೋದು. ಒಂದು ರೂಪಾಯಿ ಹುಂಡಿಗೆ ದಕ್ಷಿಣೆ ಹಾಕಿ ಲಕ್ಷ ಲಕ್ಷ ಕೋಟಿ ಕೋಟಿ ಬೇಡ್ತಾರ. ಗುಡಿ ಹೊರಗೂ ಭಿಕ್ಷುಕರು ಇರ್ತಾರ. ಅವರು ಒಂದು, ಎರಡು ರೂಪಾಯಿ ಕೇಳ್ತಾರ. ಇವನೂ ಭಿಕ್ಷುಕನೆ ಅವರೂ ಭೀಕ್ಷುಕರೆ. ಇವ ಒಳಕ್ಕೆ ಲಕ್ಷ ಕೇಳ್ತಾನ. ಹೊರಗಡೆ ಇರುವ ಅವರು ಲೋಕಲ್ ಭಿಕ್ಷುಕರು, ಇವ ಇಂಟರ್ ನ್ಯಾಷನಲ್ ಭಿಕ್ಷುಕ. ಕಾರ್ಪೊರೇಟ್ ಭಿಕ್ಷುಕ ಅಂತನೂ ಕರೀಬಹುದು. ಎಲ್ಲರೂ ಭಿಕ್ಷುಕರೆ. ದೇವರು ಕೈ ಎದಕ್ಕ ಕೊಟ್ಟಾನ ದುಡುದು ಬದುಕು ಅಂತ ಕೊಟ್ಟಾನ. ಮನುಷ್ಯ ದುಡಿದ ಅಂದರ ಸಮೃದ್ಧಿ ಬರತೈತಿ. ದುಡಿಮೆಯಿಂದ ಚಿಂತೆಗಳು ದೂರವಾಗುತ್ತವೆ. ಮೈಮುರಿದು ದುಡಿಯೋ ಕೆಲಸಿಲ್ಲ ಅದಕ್ಕ ನಿದ್ದಿ ಬರಲಾಗದಷ್ಟು ಚಿಂತಿ ಕಾಡ್ತಾವ. ಹೊಲದಾಗ ವ್ಯವಸಾಯ ಮಾಡದಿದ್ದರ ಕಸ ಬೆಳೀತಾವ. ಹಾಗೇನೆ ಯಾವ ಮನಸ್ಸು, ಮೈ ದುಡಿಯೋದಿಲ್ಲ ಅಲ್ಲಿ ಚಿಂತಿ ಬರ್ತಾವ. ಅದಕ್ಕ ದುಡಕೋತ ಇರಬೇಕು. ಮಕ್ಕಳಿಗೆ ದುಡಿಯೋದ ಕಲಸಬೇಕು.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಶುಕ್ರವಾರ ಆಗಸ್ಟ್ 23, 2024

**ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ:** ಶ್ರಾವಣ ಕೃಷ್ಣ ಚತುರ್ಥಿ ಗಂ. 10-39 ನಕ್ಷತ್ರ: ರೇವತಿ ಗಂ. 19-54 ಯೋಗ: ಶೂಲ ಗಂ. 9-31 ಕರಣ: ಬಾಲವ ಗಂ. 10-39, ಸಿಂಹ ಮಾಸದ 07 ನೇ ದಿನ, ಮಳೆನಕ್ಷತ್ರ: ಮಘಾ 2.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-22 ಸೂರ್ಯಾಸ್ತ : 06-44
ಮುಸ್ಲಿಂ ದಿನಾಂಕ : 18 ಸಫರ್
ಅದೃಷ್ಟ ಸಂಖ್ಯೆ : 6, 1

**ಮೇಷ:** ಯಾರಿಗೂ ಶಕ್ತಿಯಿಂದ ಗೆಲ್ಲಲಾಗದ ಕೆಲವು ಸವಾಲುಗಳನ್ನು ಯುಕ್ತಿಯಿಂದ ಸರಳವಾಗಿ ಗೆದ್ದು ಬೀಗುವಿರಿ. ಹೋಟೆಲ್ ಉದ್ಯಮದವರಿಗೆ ಅತ್ಯಧಿಕ ಲಾಭ ಪ್ರಾಪ್ತಿಯಾಗುವುದು. ನೀಲಿ ಬಣ್ಣ ಶುಭ ತರಲಿದೆ.

**ವೃಷಭ:** ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ದೊರೆತು ವಿದ್ಯಾಭ್ಯಾಸಕ್ಕೆ ಅವಕಾಶಗಳು ದೊರೆಯುತ್ತವೆ. ಸಹೋದ್ಯೋಗಿಗಳಿಂದ ಕಾರ್ಯಾನುಕೂಲ ಆಗುತ್ತದೆ. ವ್ಯಾಪಾರಿಗಳು ವ್ಯಾಪಾರದಲ್ಲಿ ಪ್ರಬುದ್ಧತೆಯಿಂದ ವ್ಯವಹರಿಸಿ.

**ಮಿಥುನ:** ನಿರುದ್ಯೋಗಿಗಳಿಗೆ ಜೀವನ ನಿರ್ವಹಿಸಲು ಸಾಕಾಗುವಂಥ ವರಮಾನವಿರುವ ಸಣ್ಣಮಟ್ಟದ ಕೆಲಸ ದೊರೆತು ಸಂತಸವಾಗಲಿದೆ. ಔದಾರ್ಯ ಬುದ್ಧಿಯನ್ನು ತೋರಿದಲ್ಲಿ ವಂಚನೆಗೆ ಒಳಗಾಗುವ ಸನ್ನಿವೇಶಗಳಿವೆ.

**ಕರ್ಕಾಟಕ:** ಹಿರಿಯರಿಂದ ಅಪೂರ್ಣವಾದಂಥ ಕೆಲಸವನ್ನು ಪೂರ್ಣಗೊಳಿಸುವಂಥ ಅವಕಾಶ ನಿಮಗೆ ಒದಗಿಬರಲಿದೆ. ಸಹೋದರನ ಮೂಲಕ ಜಮೀನಿನ ಖರೀದಿ ವಿಚಾರದ ಮಾತುಕತೆಗಳು ಜರುಗುವುದು.

**ಸಿಂಹ:** ಅನಾರೋಗ್ಯ ಅಥವಾ ಇನ್ನಿತರ ಕಾರಣಗಳಿಂದಾಗಿ ಏರುಪೇರಾಗಿದ್ದ ಮಕ್ಕಳ ವೇಳಾಪಟ್ಟಿಯು ನಿಧಾನವಾಗಿ ಸರಿಯಾಗುತ್ತದೆ. ಅನಿವಾರ್ಯದ ಪ್ರಯಾಣ ಹೆಚ್ಚಲಿದೆ. ಬೆಲೆಬಾಳುವ ವಸ್ತುವನ್ನು ಕಳೆದುಕೊಳ್ಳುವ ಸಾಧ್ಯತೆಗಳಿದೆ.

**ಕನ್ಯಾ:** ಸುಖಕರವಾಗಿರುವ ದಾಂಪತ್ಯದಲ್ಲಿ ಬೇರೆಯವರ ಮಾತಿಗೆ ಆಸ್ಪದ ಕೊಟ್ಟು ಮೋಸ ಹೋಗಬೇಡಿ. ಅಪರೂಪದ ವ್ಯಕ್ತಿಯೊಬ್ಬರನ್ನು ಭೇಟಿಯಾಗುವ ಸಂದರ್ಭವು ಒದಗಿ ಬರಲಿದೆ. ದ್ವಿಚಕ್ರ ವಾಹನ ಖರೀದಿ ಯೋಗವಿದೆ.

**ತುಲಾ:** ತಾಂತ್ರಿಕ ವಿದ್ಯೆಯಲ್ಲಿ ಯಶಸ್ಸನ್ನು ಹೊಂದುವ ಎಲ್ಲಾ ಲಕ್ಷಣಗಳೂ ಕಂಡರೂ ವಿದ್ಯಾಭ್ಯಾಸಕ್ಕೆ ತೊಂದರೆಯಾಗುವ ಪರಿಸ್ಥಿತಿ ಎದುರಾಗಬಹುದು. ಯುವ ಕಲಾವಿದರಿಗೆ ಹೆಚ್ಚು ಅವಕಾಶಗಳು ಲಭಿಸುವುದು.

**ವೃಶ್ಚಿಕ:** ಕೆಲಸ ಕಾರ್ಯಗಳಲ್ಲಿ ಉತ್ಸಾಹವನ್ನು ಕಾಣುವಿರಿ. ಪ್ರತಿಭೆ ಬೆಳಕಿಗೆ ಬರಲಿದೆ. ಗುಂಪು ಚಟುವಟಿಕೆಗಳಿಗೆ ನಿಮ್ಮ ಮುಂದಾಳತ್ವವು ಅನಗತ್ಯವಾಗಿರುವುದು. ಖಾದಿ ಉದ್ಯಮದವರಿಗೆ ಸಹಾಯ ಸೌಲಭ್ಯಗಳು ದೊರೆಯಲಿವೆ.

**ಧನು:** ಸಂತೋಷದ ಸುದ್ದಿಯನ್ನು ಮಾತ್ರ ತಿಳಿಸಿ ದುಃಖದ ವಿಷಯವನ್ನು ತಿಳಿಸದಿರುವುದು ಸರಿ ಎನ್ನಿಸುವುದಿಲ್ಲ. ನೈತಿಕ ಶಕ್ತಿ ಹೆಚ್ಚುವುದರಿಂದ ಕೆಲಸದಲ್ಲಿ ಉತ್ತಮ ಅಭಿವೃದ್ಧಿಯನ್ನು ಕಾಣುವಿರಿ.

**ಮಕರ:** ನೌಕರರ ಜತೆಗಿನ ವಿಶ್ವಾಸವು ಅತಿಯಾಗಿ ನಿ ಸಂಸ್ಥೆಗೆ ನಷ್ಟವಾಗಬಹುದು. ಸಂಸಾರದ ವಿಷಯಗಳತ್ತ ಗಮನ ಹರಿಸುವಿರಿ. ಸಣ್ಣಪುಟ್ಟ ಭಿನ್ನಾಭಿಪ್ರಾಯ ದೂರಾಗುವುದು.

**ಕುಂಭ:** ಖಾಸಗಿ ಸಂಸ್ಥೆಯಿಂದ ಅಥವಾ ಒಬ್ಬ ವ್ಯಕ್ತಿಯಿಂದ ಸಾಲದ ರೂಪದಲ್ಲಿ ಹಣ ಪಡೆದುಕೊಂಡು ಸ್ವಂತ ಉದ್ಯಮವನ್ನು ಆರಂಭಿಸುವ ಸಂಭವವಿದೆ. ಮನೆ ನಿರ್ಮಾಣ ಕಾರ್ಯವನ್ನು ಅನಿವಾರ್ಯ ಪರಿಸ್ಥಿತಿಯಿಂದ ನಿಲ್ಲಿಸಬೇಕಾಗುತ್ತದೆ.


**ಮೀನ:** ಒಪ್ಪಂದದಲ್ಲಿ ವ್ಯವಹಾರಗಳನ್ನು ಮಾಡುತ್ತಿರುವವರ ಸಂಘದಲ್ಲಿ ಹಣಕಾಸಿನ ಬಗ್ಗೆ ಸಣ್ಣಪುಟ್ಟ ಮಾನಸಿಕ ಭಿನ್ನಾಭಿಪ್ರಾಯಗಳು ಉದ್ಭವಗೊಳ್ಳಲಿವೆ. ಆರೋಗ್ಯದಲ್ಲಿ ಸ್ವಲ್ಪ ಮಟ್ಟಿನ ಏರುಪೇರಾಗಲಿದೆ.

## ಪದಬಂಧ 5781

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಪಾತ್ರೆಗಳಿಗೆ ಕಲಾಯಿ ಮಾಡುವಾಗ ಬಳಸುವ ಕ್ಷಾರ (5)
3.ದೇವಾಲಯದ ಗೋಪುರದ ತುದಿ (3)
5.ರಸವುಳ್ಳ ವೈಮನಸ್ಯ! (3)
7.ಯುದ್ಧ ಇಲ್ಲಿ ನಡೆಯುತ್ತಿದೆ (3)
8.ತಪ್ಪಾಗಿ ಭಾವಿಸುವಿಕೆ (5)
11.ಭಾರವಲ್ಲದ್ದು ಇದು! (3)
12.ಪತ್ರಿಕೆಯಲ್ಲಿನ ಕಾಲಂ ತಿರುವುಮುರುವಾಗಿದೆಯಲ್ಲಾ! (3)
14.ಈತ ಜಿಪುಣನೇ ಬಿಡಿ! (3)
15.ನೈಜವಾದ ಮೈಗುಣ (5)

**ಮೇಲಿಂದ ಕೆಳಕ್ಕೆ**
1.ಮನುಷ್ಯನನ್ನು ಕೊಲ್ಲುವುದು (4)
2.ಗರ ಬಡಿದವನು ಇರುವ ಕಾಡು (3)
4.ಸಭೆ ನಡೆಯುತ್ತಿರುವ ಜಾಗ (4)
6.ಗಣಿತದಲ್ಲಿ ಎರಡು ರಾಶಿಗಳು ಸಮವೆಂದು ದೃಢೀಕರಿಸುವುದು (5)
7.ಕಾಮನಿಂದ ಮೂಡಿದ ಬಯಕೆ (3)
8.ಕಳ್ಳ ಈ ತರ ಕಾಣುತ್ತಿದ್ದಾನೆ (3)
9.ಕಂದಾಯವನ್ನು ವಸೂಲು ಮಾಡುವುದು (4)
10.ಪತಿಯಲ್ಲಿರುವ ನೈಪುಣ್ಯಗೊತ್ತಾಯಿತೇ? (4)
13.ಜಗಳಕ್ಕೊಂದು ಪರ್ಯಾಯ ಪದ (3)



### 5780ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಬದ್ಧದ್ವೇಷ 3.ಅನುಭಾವಿ 5.ಕೆಣಕು 7.ಕಾಯ 9.ರೂಪಪರಾವರ್ತನೆ 11.ಹೋರಿ 12.ಮುನ್ನುಡಿ 16.ಗೆಳೆತನ 17.ಸರಪಂಚ

**ಮೇಲಿಂದ ಕೆಳಕ್ಕೆ**
1.ಬಯಕೆ 2.ಷಷ್ಠಿ 3.ಅಗ್ಗ 4.ವಿಷಯ 6.ಕುರೂಪ 7.ಕಾಮನೆ 8.ಪುರಾವೆ 9.ರೂವಾರಿ 10.ರ್ತಹೂಮು 11.ಹೋಳಿಗೆ 13.ಡಿರಂಚ 14.ಸ್ನಾನ 15.ಶ್ವಾಸ

## ಸುಡೊಕು 6166

| | | | | | | | | |
|---|---|---|---|---|---|---|---|---|
| | | | | 6 | 7 | 4 | | |
| 3 | | | | | | | | |
| | 7 | 1 | | 4 | 8 | | 6 | |
| | 4 | | | | | | 8 | |
| 8 | | 9 | | 7 | 1 | | | 6 |
| | 5 | | 8 | | 4 | | 9 | |
| 2 | | | | 9 | | | 3 | |
| 4 | | 3 | | | 2 | | | 8 |
| | 1 | | 4 | | | 5 | 2 | |

**ಆಡುವುದು ಹೇಗೆ?**
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 6165 ಸುಡೊಕು

| | | | | | | | | |
|---|---|---|---|---|---|---|---|---|
| 9 | 6 | 5 | 8 | 7 | 3 | 4 | 1 | 2 |
| 2 | 8 | 3 | 1 | 4 | 6 | 9 | 7 | 5 |
| 7 | 1 | 4 | 9 | 5 | 2 | 8 | 3 | 6 |
| 3 | 4 | 6 | 7 | 1 | 8 | 5 | 2 | 9 |
| 5 | 7 | 9 | 3 | 2 | 4 | 6 | 8 | 1 |
| 8 | 2 | 1 | 5 | 6 | 9 | 3 | 4 | 7 |
| 4 | 5 | 7 | 6 | 8 | 1 | 2 | 9 | 3 |
| 1 | 3 | 2 | 4 | 9 | 5 | 7 | 6 | 8 |
| 6 | 9 | 8 | 2 | 3 | 7 | 1 | 5 | 4 |



ಭೀಮ
ಪ್ರಿಯಾ

# ‘ಗಿರಿಜಾ’ಳಿಗೆ ಜೀವ ತುಂಬಿದ ಪ್ರಿಯಾ

**ಅಭಿಲಾಷ್ ಪಿ.ಎಸ್.**

ರಂಗಭೂಮಿ ಶಿಕ್ಷಕಿ, ಕಿರುತೆರೆ ನಟಿ ಪ್ರಿಯಾ ಶಠಮರ್ಷಣ ‘ಭೀಮ’ ಸಿನಿಮಾ ಬಿಡುಗಡೆಗೊಂಡ ಬಳಿಕ ಖಡಕ್ ಪೊಲೀಸ್ ಅಧಿಕಾರಿ ‘ಗಿರಿಜಾ’ಳಾಗಿ ಬಹುತೇಕರಿಗೆ ಪರಿಚಿತ. ಪ್ರಸ್ತುತ ಸಮಾಜಕ್ಕೆ ಇಂತಹ ದಕ್ಷ ಮಹಿಳಾ ಅಧಿಕಾರಿಯ ಅವಶ್ಯಕತೆ ಇದೆ ಎನ್ನುವ ಪ್ರಿಯಾ ‘ಭೀಮ’ ಬಳಿಕ ಎರಡು ಕನ್ನಡ, ಒಂದು ತಮಿಳು ಸಿನಿಮಾ ಕಥೆ ಕೇಳಿದ್ದಾರೆ. ಅವರೊಂದಿಗೆ ಒಂದು ಮಾತುಕತೆ...

- **ಪ್ರಿಯಾ ಹಿನ್ನೆಲೆ ಏನು?**

ನಾನು ಮೈಸೂರು ಹುಡುಗಿ. ಮಧ್ಯಮ ವರ್ಗದಲ್ಲಿ ಹುಟ್ಟಿ ಬೆಳೆದಾಕೆ. ತಾಯಿ ಶಿಕ್ಷಕಿ, ತಂದೆ ಕಂಪನಿಯೊಂದರಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದರು. ಬಣ್ಣದ ಲೋಕ ನಮ್ಮ ಕುಟುಂಬಕ್ಕೆ ಹೊಸದು. ನನ್ನನ್ನೂ ಶಿಕ್ಷಕಿಯನ್ನಾಗಿ ಮಾಡುವ ಯೋಚನೆ ಪೋಷಕರಿಗೆ ಇತ್ತು. ನಾನು ಟಿಸಿಎಚ್ ಮಾಡಿದ್ದೇನೆ. ಆದರೆ ಶಾಲಾ ಶಿಕ್ಷಕಿಯಾಗದೆ ರಂಗಭೂಮಿ ಶಿಕ್ಷಕಿಯಾದೆ. ರಂಗಭೂಮಿ ನಂಟು ನನ್ನನ್ನು ನಟನೆಯತ್ತ ಸೆಳೆಯಿತು. 2008ರಿಂದ ರಂಗಭೂಮಿ ಪಯಣ ಆರಂಭ. ಮೈಸೂರಿನಲ್ಲಿ ಮಂಡ್ಯ ರಮೇಶ್ ಅವರ ಗರಡಿಯಲ್ಲಿ ‘ನಟನ’ದಲ್ಲಿ ರಂಗತರಬೇತಿ ಪಡೆದೆ. 2015ರಲ್ಲಿ ನಟ ಅವಿನಾಶ್ ಶಠಮರ್ಷಣ ಅವರನ್ನು ಮದುವೆಯಾದ ಬಳಿಕ ಬೆಂಗಳೂರಿಗೆ ಬಂದೆ. ನಾವಿಬ್ಬರೂ ಸೇರಿ ‘SARK’–Silence, Action, Reaction and Talk ಎಂಬ ತಂಡ ಸ್ಥಾಪಿಸಿ ನಟನೆಯ ಕಾರ್ಯಾಗಾರಗಳನ್ನು, ತರಗತಿಗಳನ್ನು, ಬೇಸಿಗೆ ಶಿಬಿರಗಳನ್ನು ಸರ್ಕಾರಿ ರಂಗಮಂದಿರಗಳು, ಸ್ಥಳಗಳಲ್ಲಿ ಹೇಳಿಕೊಡುತ್ತಿದ್ದೇವೆ. ಜೊತೆಜೊತೆಯಲ್ಲೇ ರಂಗಾಭ್ಯಾಸ, ನಾಟಕಗಳ ಪ್ರದರ್ಶನಗಳನ್ನೂ ನೀಡುತ್ತಿದ್ದೇವೆ. ‘ಲಕ್ಷಣ’ ಧಾರಾವಾಹಿ ಮೂಲಕ ನಾನು ಕಿರುತೆರೆ ಪಯಣ ಆರಂಭಿಸಿದೆ.

- **ರಂಗಭೂಮಿಯ ಆಕರ್ಷಣೆಗೆ ಕಾರಣವೇನು?**

ನನಗೆ ಚಿತ್ರಕಲೆ, ನೃತ್ಯ, ಕಥೆ ಹೇಳುವುದರಲ್ಲಿ ಆಸಕ್ತಿಯಿತ್ತು. ‘ನಟನ’ದಲ್ಲಿ ನಡೆಯುವ ‘ರಜಾಮಜಾ’ಗೆ ನನ್ನನ್ನು ತಾಯಿ ಸೇರಿಸಿದ್ದರು. ಅಲ್ಲಿ ಸ್ವಯಂಸೇವಕಿಯಾಗಿ ನಾನು ಸೇರಿಕೊಂಡೆ. ಅಲ್ಲಿ ನಾಟಕಗಳನ್ನು ನೋಡಿ ನನಗೆ ಸ್ಫೂರ್ತಿಯಾಯಿತು, ಪರಿಣಾಮ ಬೀರಿತು. ನನ್ನೊಳಗಿನ ನಟನೆಯ ಸಾಮರ್ಥ್ಯವನ್ನು ಇನ್ನಷ್ಟು ಪಾಲಿಶ್ ಮಾಡಬೇಕು, ತರಬೇತಿ ಪಡೆದುಕೊಳ್ಳಬೇಕು ಎಂದು ಆಗ ಅನಿಸಿತು. ಇದನ್ನು ಮಂಡ್ಯ ರಮೇಶ್ ಅವರ ಜೊತೆ ಹಂಚಿಕೊಂಡೆ. ಸ್ವಯಂಸೇವಕಿಯಾಗಿ ಹೋದವಳು ‘ನಟನ’ದಿಂದ ಕಲಾವಿದೆಯಾಗಿ ಹೊರಬಂದೆ.

- **‘ಭೀಮ’ ಸಿನಿಮಾದಲ್ಲಿ ಅವಕಾಶ ದೊರಕಿದ್ದು ಹೇಗೆ?**

ಕೋವಿಡ್ ಬಳಿಕ ‘ಸಲಗ’ ಸಿನಿಮಾ ಬಿಡುಗಡೆಗೆ ದುನಿಯಾ ವಿಜಯ್ ಅವರು ಸಜ್ಜಾಗುತ್ತಿದ್ದರು. ಜೊತೆಗೆ ಹೊಸ ಸಿನಿಮಾವೊಂದಕ್ಕೆ ವಿಜಯ್ ಅವರು ಸಿದ್ಧತೆ ಆರಂಭಿಸಿದ್ದರು. ಅದೇ ಸಂದರ್ಭದಲ್ಲಿ ಪಾತ್ರವೊಂದಕ್ಕೆ ಅವಿನಾಶ್ ಅವರನ್ನು ವಿಜಯ್ ಕರೆದಿದ್ದರು. ಅವಿನಾಶ್ ಮೂಲಕ ನಾನೂ ರಂಗಭೂಮಿ ಕಲಾವಿದೆ ಎನ್ನುವುದು ವಿಜಯ್ ಅವರಿಗೆ ತಿಳಿಯಿತು. ಆ ಸಿನಿಮಾದಲ್ಲಿ ನಾನು ಬೇರೊಂದು ಪಾತ್ರಕ್ಕೆ ಆಯ್ಕೆಯಾಗಿದ್ದೆ. ಆದರೆ ಕಾರಣಾಂತರಗಳಿಂದ ಆ ಸಿನಿಮಾ ಆಗಲಿಲ್ಲ. ವಿಜಯ್ ಅವರು ಬಳಿಕ ‘ಭೀಮ’ ಸಿನಿಮಾ ಕೈಗೆತ್ತಿಕೊಂಡರು. ‘ಭೀಮ’ದಲ್ಲಿ ‘ಗಿರಿಜಾ’ ಪಾತ್ರಕ್ಕೆ ಹೊಸ ಮುಖವನ್ನೇ ಅವರು ಹುಡುಕುತ್ತಿದ್ದರಂತೆ. ಒಂದು ದಿನ ನನಗೆ ಫೋನ್ ಮಾಡಿ, ‘ಪ್ರಿಯಾ ಬೇರೆ ಸ್ಕ್ರಿಪ್ಟ್ ತೆಗೆದುಕೊಂಡಿದ್ದೇನೆ. ಇದೊಂದು ಪವರ್‌ಫುಲ್ ಪಾತ್ರ ಮಾಡುತ್ತೀಯಾ’ ಎಂದು ಆಫರ್ ನೀಡಿದರು. ಹೀಗೆ ನಾನು ‘ಗಿರಿಜಾ’ಳಾದೆ.

ಐಪಿಎಸ್ ಅಧಿಕಾರಿ ಆಗಬೇಕು ಅಥವಾ ಭಾರತೀಯ ಸೇನೆ ಸೇರಬೇಕು ಎನ್ನುವ ಆಸೆ ಇತ್ತು. ಅದು ನಿಜಜೀವನದಲ್ಲಿ ನನಸು ಮಾಡಲು ಆಗಲಿಲ್ಲ. ಸಿನಿಮಾದಲ್ಲಿ ನನಸಾಗಿದೆ. ಇದು ಕಲಾವಿದರಿಗೆ ಸಿಗುವ ವರ. ಪ್ರತಿಯೊಂದು ಪಾತ್ರವನ್ನು ಅವರು ಜೀವಿಸಬಹುದು. ಸಿನಿಮಾ ನೋಡಿ ಹೊರಬಂದ ಪ್ರೇಕ್ಷಕರು ‘ಮಾಲಾಶ್ರೀ ಅವರ ಜಾಗದಲ್ಲಿ ನಿಮ್ಮನ್ನು ಕಣ್ಮುಚ್ಚಿ ಒಪ್ಪಿಕೊಳ್ಳಬಹುದು’ ಎಂದಾಗ ಪ್ರಶಸ್ತಿ ಪಡೆದಷ್ಟೇ ಸಂತೋಷವಾಯಿತು. ಮೊದಲನೇ ಕಮರ್ಷಿಯಲ್ ಬ್ರೇಕ್ ‘ಭೀಮ’ದಿಂದ ಸಿಕ್ಕಿದೆ.

- **ಈ ಪಾತ್ರವನ್ನು ವಿಜಯ್ ಹಾಗೂ ಮಾಸ್ತಿ ಕೆತ್ತಿದ ಬಗೆ...**

ವಿಜಯ್ ಹಾಗೂ ಮಾಸ್ತಿ ಅವರ ಡೆಡ್ಲಿ ಕಾಂಬಿನೇಷನ್‌ನ ಬಗ್ಗೆ ಎಲ್ಲರಿಗೂ ತಿಳಿದಿದೆ. ಅದೊಂದು ಮ್ಯಾಜಿಕ್ ಕಾಂಬಿನೇಷನ್. ವಿಜಯ್ ಅವರು ಯೋಚಿಸುವ ಕಥೆಗೆ ತಲೆಮೇಲೆ ಹೊಡೆದ ರೀತಿ ಸಂಭಾಷಣೆ ಬರೆಯುವ ಕಲೆ ಮಾಸ್ತಿ ಅವರಿಗಿದೆ. ವಿಷಯಗಳ ಗುಚ್ಛ ವಿಜಯ್ ಅವರದ್ದಾದರೆ ಪದಗಳ ಗುಚ್ಛ ಮಾಸ್ತಿ ಅವರದ್ದು. ಕಲಾವಿದರ ನಟನೆಯ ಸಾಮರ್ಥ್ಯವನ್ನು ಗಮನಿಸಿಕೊಂಡು ವಿಜಯ್ ಅವರು ಸಂಭಾಷಣೆಗೆ ಮತ್ತಷ್ಟು ಒತ್ತು ನೀಡುತ್ತಾರೆ. ಹಲವೆಡೆ ಸಂಭಾಷಣೆಗಳಲ್ಲಿನ ಬದಲಾವಣೆಗಳನ್ನೂ ಆಯಾ ಕ್ಷಣದಲ್ಲೇ ಹೇಳುತ್ತಾರೆ. ಹೆಚ್ಚಿನ ನಟನೆಯ ಜವಾಬ್ದಾರಿಯನ್ನೂ ಹಂಚುತ್ತಾರೆ. ನಿರ್ದೇಶಕನ ಸ್ಥಾನದಲ್ಲಿದ್ದಾಗ ವಿಜಯ್ ಅವರ ಯೋಚನೆಯೇ ಬದಲಾಗುತ್ತದೆ. ವಾಸ್ತವದಲ್ಲಿ ನಡೆಯುವ ಸ್ಥಿತಿಗತಿಗಳನ್ನು ನೋಡಿಕೊಂಡು ಆ ಕ್ಷಣದಲ್ಲೇ ಅವುಗಳನ್ನು ಸಿನಿಮಾದೊಳಗೆ ಅಳವಡಿಸುತ್ತಾರೆ. ನಾನು ಮೊದಲ ದೃಶ್ಯಕ್ಕೆ ಸಿದ್ಧವಾಗಿ ಹೋದ ಸಂದರ್ಭದಲ್ಲಿ ನನ್ನನ್ನು ಪೊಲೀಸ್ ಯುನಿಫಾರಂನಲ್ಲಿ ನೋಡಿ ‘ಪಾತ್ರವು ಅರ್ಧದಷ್ಟು ಇಲ್ಲೇ ಗೆದ್ದಿತು’ ಎಂದಿದ್ದರು ವಿಜಯ್.

- **ಮುಂದೆ ಬರಲಿರುವ ಒಂದೇ ರೀತಿಯ ಪಾತ್ರಗಳ ಆಫರ್‌ಗೆ ನಿಮ್ಮ ಉತ್ತರವೇನಿರಲಿದೆ?**

ಹೌದು, ‘ಗಿರಿಜಾ’ ಪಾತ್ರವನ್ನು ನೋಡಿ ಈಗಾಗಲೇ ಹಲವರು ಎಸಿಪಿ, ಸಬ್ ಇನ್‌ಸ್ಪೆಕ್ಟರ್ ಪಾತ್ರಗಳ ಆಫರ್‌ಗಳನ್ನು ನೀಡಿದ್ದಾರೆ. ಇಂತಹ ಪಾತ್ರಗಳನ್ನು ಒಪ್ಪುವ ಮೊದಲು ಸಿನಿಮಾದ ಕಥೆ, ನನ್ನ ಪಾತ್ರದ ಪ್ರಾಮುಖ್ಯತೆಯನ್ನು ಖಂಡಿತಾ ನೋಡುತ್ತೇನೆ. ಒಬ್ಬ ಕಲಾವಿದೆಯಾಗಿ ಎಲ್ಲವನ್ನೂ ಮರೆತು ಆ ಪಾತ್ರವನ್ನು ಜೀವಿಸುವ ಅವಕಾಶ ಸಿಗಬೇಕು. ಅಧ್ಯಯನಕ್ಕೆ, ಪ್ರಯೋಗಕ್ಕೆ ಅವಕಾಶವಿದ್ದರೆ ಖಂಡಿತಾ ಒಪ್ಪಿಕೊಳ್ಳುತ್ತೇನೆ. ಈ ಪಾತ್ರವನ್ನು ಪ್ರಿಯಾ ಬಿಟ್ಟರೆ ಬೇರೆ ಯಾರು ಮಾಡಲು ಸಾಧ್ಯವಿರಲಿಲ್ಲ ಎನ್ನುವ ಮಾತು ಪ್ರೇಕ್ಷಕರಿಂದ ಬರಬೇಕು. ಇಂತಹ ಪಾತ್ರಗಳ ಹುಡುಕಾಟದಲ್ಲಿದ್ದೇನೆ. ಹೊರತುಪಡಿಸಿ ನನ್ನ ಪಾತ್ರದ ಮೇಲೆಯೇ ಸಿನಿಮಾ ನಡೆಯಬೇಕು, ಮಹಿಳಾ ಪ್ರಧಾನ ಚಿತ್ರವಾಗಿರಬೇಕು ಎಂಬ ನಿಯಮಗಳೇನೂ ಹಾಕಿಕೊಂಡಿಲ್ಲ.

- **ಹೊಸ ಪ್ರಾಜೆಕ್ಟ್‌ಗಳು ಯಾವುವು?**

ಅನೂಪ್ ಕಶ್ಯಪ್ ಅವರ ‘ಗಾಂಧಿ ಸ್ಕ್ವೇರ್’ ಎನ್ನುವ ಸಿನಿಮಾ ಮಾಡುತ್ತಿದ್ದೇನೆ. ಇದು ಸಸ್ಪೆನ್ಸ್, ಥ್ರಿಲ್ಲರ್ ಜಾನರ್‌ನಲ್ಲಿದೆ. ಜೊತೆಗೆ ಮತ್ತೊಂದು ಬಿಗ್‌ಬಜೆಟ್ ಕನ್ನಡ ಸಿನಿಮಾವೊಂದರ ಮಾತುಕತೆ ನಡೆಯುತ್ತಿದೆ. ‘ಭೀಮ’ ಬಿಡುಗಡೆ ಬಳಿಕ ತಮಿಳು ಸಿನಿಮಾವೊಂದರ ಆಫರ್ ಬಂದಿದೆ. ಇದರ ಕಥೆ ಕೇಳುತ್ತಿದ್ದೇನೆ. ಮತ್ತೊಂದು ಕನ್ನಡ ಸಿನಿಮಾವೊಂದರ ಮಾತುಕತೆಯೂ ನಡೆಯುತ್ತಿದೆ. ❖

## ‘ಇವತ್ತಿನ ಪರಿಸ್ಥಿತಿಗೆ ‘ಗಿರಿಜಾ’ ರೀತಿಯ ಅಧಿಕಾರಿ ಬೇಕು’

‘ಇವತ್ತಿನ ಸನ್ನಿವೇಶದಲ್ಲಿ ದೇಶದ ಹಲವೆಡೆ ನಡೆಯುತ್ತಿರುವ ಅತ್ಯಾಚಾರ, ಕೊಲೆ ಪ್ರಕರಣಗಳನ್ನು ನೋಡುವಾಗ ‘ಗಿರಿಜಾ’ ರೀತಿಯ ದಕ್ಷ ಅಧಿಕಾರಿ ಬೇಕು ಎನ್ನುವ ಮಾತು ಸಾಮಾಜಿಕ ಮಾಧ್ಯಮಗಳಲ್ಲಿ ಕೇಳಿಬರುತ್ತಿದೆ. ವೈಯಕ್ತಿಕವಾಗಿ ಈ ಪಾತ್ರದಿಂದ ಆಚೆ ನಿಂತು ಸಾಮಾನ್ಯಪ್ರಜೆಯಾಗಿಯೂ ನಾನು ಇದನ್ನೇ ಆಗ್ರಹಿಸುತ್ತೇನೆ. ‘ಗಿರಿಜಾ’ ರೀತಿಯ ದಕ್ಷ ಅಧಿಕಾರಿ ಅವಶ್ಯವಾಗಿದೆ. ಯಾವುದಕ್ಕೂ ಅಂಜದೆ ಧ್ವನಿ ಎತ್ತಿ ನ್ಯಾಯದ ಪರ ಹೋರಾಟ ಮಾಡುವ ಹೆಣ್ಣುಮಕ್ಕಳು ಬರಬೇಕಾಗಿದೆ. ಇವತ್ತು ಈ ರೀತಿಯ ಜಾಗೃತಿ ಮೂಡಬೇಕಾಗಿದೆ. ಊಹೆಗೂ ಮೀರಿದ ದುರಂತಗಳು ನಡೆಯುತ್ತಿವೆ. ಈ ವರ್ಷದ ಸ್ವಾತಂತ್ರ್ಯ ದಿನವನ್ನು ನಾವು ಬಹಳ ನೋವಿನಿಂದ ಕಳೆದೆವು. ‘ಭೀಮ’ ಸಿನಿಮಾ ಗೆದ್ದಿದೆ, ಪಾತ್ರಗಳು ಗೆದ್ದಿವೆ. ಆದರೆ ಸಿನಿಮಾದಲ್ಲಿರುವ ಸಂದೇಶವನ್ನು ಗೆಲ್ಲಿಸುವ ಸಮಯ ಇದಾಗಿದೆ’ ಎನ್ನುತ್ತಾರೆ ಪ್ರಿಯಾ.



ಪೌಡರ್
ದಿಗಂತ್

# ಪೌಡರ್ ಮಾರಲು ಹೊರಟ ದಿಗಂತ್

**ಚಂದನವನದ** ತೆರೆಗಳಲ್ಲಿ ‘ಭೀಮ’, ‘ಕೃಷ್ಣಂ ಪ್ರಣಯ ಸಖಿ’ ಸಿನಿಮಾಗಳ ಓಟದ ನಡುವೆ ಇಂದು(ಆ.23) ನಾಲ್ಕು ಸಿನಿಮಾಗಳು ತೆರಕಾಣುತ್ತಿವೆ.

**‘ಪೌಡರ್’:** ಜನಾರ್ದನ್ ಚಿಕ್ಕಣ್ಣ ನಿರ್ದೇಶಿಸಿರುವ ದಿಗಂತ್ ಮುಖ್ಯಭೂಮಿಕೆಯಲ್ಲಿ ನಟಿಸಿರುವ ಈ ಸಿನಿಮಾ ಹಾಸ್ಯಪ್ರಧಾನ ಚಿತ್ರವಾಗಿದೆ. ‘ಗುಲ್ಟು’ ಸಿನಿಮಾ ನಿರ್ದೇಶಿಸಿದ್ದ ಜನಾರ್ದನ್ ಚಿಕ್ಕಣ್ಣ ಇದೇ ಮೊದಲ ಬಾರಿಗೆ ಹಾಸ್ಯಪ್ರಧಾನ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಚಿತ್ರದ ಮೂಲಕಥೆ ಮುಂಬೈನ ದೀಪಕ್ ವೆಂಕಟೇಶನ್ ಅವರದ್ದು. ಇಬ್ಬರು ಯುವಕರು ಒಂದು ನಿಗೂಢವಾದ ‘ಪೌಡರ್’ ಪ್ರಭಾವದಿಂದಾಗಿ ದಿಢೀರನೆ ಸಿರಿವಂತರಾಗಲು ಮಾಡುವ ಪ್ರಯತ್ನಗಳು, ಅವರಿಗೆ ಎದುರಾಗುವ ಸಮಸ್ಯೆಗಳು ಈ ಚಿತ್ರದ ಕಥಾಹಂದರ. ದಿಗಂತ್ ಮಂಚಾಲೆ, ಧನ್ಯ ರಾಮ್‌ಕುಮಾರ್, ಶರ್ಮಿಳಾ ಮಾಂಡ್ರೆ, ಅನಿರುದ್ಧ್ ಆಚಾರ್ಯ, ರಂಗಾಯಣ ರಘು, ಗೋಪಾಲಕೃಷ್ಣ ದೇಶಪಾಂಡೆ, ರವಿಶಂಕರ್ ಗೌಡ ಮುಂತಾದವರು ತಾರಾಬಳಗದಲ್ಲಿದ್ದಾರೆ.

**ಇಂದು ತೆರೆಗೆ**

ಕೆ.ಆರ್.ಜಿ. ಸ್ಟುಡಿಯೊಸ್ ಮತ್ತು ಟಿ.ವಿ.ಎಫ್ ಮೋಷನ್ ಪಿಕ್ಚರ್ಸ್ ಸಹಯೋಗದಲ್ಲಿ ಈ ಸಿನಿಮಾ ನಿರ್ಮಾಣವಾಗಿದೆ. 100ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಸಿನಿಮಾ ಬಿಡುಗಡೆಯಾಗಲಿದ್ದು, ಮಲ್ಟಿಪ್ಲೆಕ್ಸ್‌ಗಳಲ್ಲಿ ಸಿನಿಮಾದ ಟಿಕೆಟ್ ದರವನ್ನು ಇಳಿಸಲಾಗಿದೆ. ಎಲ್ಲಾ ಮಲ್ಟಿಪ್ಲೆಕ್ಸ್‌ಗಳಲ್ಲಿ ₹150ರಿಂದ ಟಿಕೆಟ್ ಬೆಲೆ ಪ್ರಾರಂಭವಾಗಲಿದೆ ಎಂದು ಚಿತ್ರತಂಡ ತಿಳಿಸಿದೆ.

**‘ಸಿ’:** ಇದು ಬಹುತೇಕ ಹೊಸಬರಿಂದಲೇ ಕೂಡಿರುವ ಸಿನಿಮಾ. ಕಿರಣ್ ಸುಬ್ರಮಣಿ ನಿರ್ದೇಶನದ ಜೊತೆಗೆ ನಾಯಕನಾಗಿಯೂ ಈ ಸಿನಿಮಾದಲ್ಲಿ ನಟಿಸಿದ್ದಾರೆ. ಎಜಿಎಸ್ ಪ್ರೊಡಕ್ಷನ್ ಸಿನಿಮಾಗೆ ಬಂಡವಾಳ ಹೂಡಿದೆ. ಕಣ್ಣು ಕಾಣದ ಮಗಳಿಗೆ ಶಸ್ತ್ರಚಿಕಿತ್ಸೆ ಮಾಡಿಸಲು ಒದ್ದಾಡುವ ತಂದೆಯ ಪಾತ್ರದಲ್ಲಿ ಕಿರಣ್ ನಟಿಸಿದ್ದು, ಮಗಳ ಶಸ್ತ್ರಚಿಕಿತ್ಸೆಗಾಗಿ ಏನು ಬೇಕಾದರೂ ಮಾಡಲು ಹತಕ್ಕೆ ಬೀಳುವ ಅಪ್ಪ, ಹೇಗೆ ಮೆಡಿಕಲ್ ಮಾಫಿಯಾದ ಬುಡ ಅಲುಗಾಡಿಸುತ್ತಾನೆ ಎಂಬುವುದೇ ಸಿನಿಮಾದ ಎಳೆ. ಈ ಸಿನಿಮಾ ಸಸ್ಪೆನ್ಸ್ ಕಂ ಕ್ರೈಂ ಥ್ರಿಲ್ಲರ್ ಶೈಲಿಯಲ್ಲಿದೆ. ಈ ಸಿನಿಮಾ ಜೊತೆಗೆ ‘ದಿ ಜರ್ನಲಿಸ್ಟ್’ ಹಾಗೂ ‘ತಾಜ್’ ಎಂಬ ಸಿನಿಮಾಗಳೂ ಬಿಡುಗಡೆಯಾಗಿವೆ. ❖

ವಾಯುಭಾರ ಕುಸಿತ • ಅರಬ್ಬಿ ಸಮುದ್ರದಲ್ಲಿ ಪ್ರಕ್ಷುಬ್ಧ ಸ್ಥಿತಿ

# ಅಲೆಯಬ್ಬರ, ಮನೆಗಳಿಗೆ ಹಾನಿ

ಪ್ರಜಾವಾಣಿ ವಾರ್ತೆ

**ಅಂಕೋಲಾ/ಗೋಕರ್ಣ (ಉತ್ತರ ಕನ್ನಡ ಜಿಲ್ಲೆ):** ತಾಲ್ಲೂಕಿನ ಹಾರವಾಡ ತರಂಗಮೇಟದಲ್ಲಿ ಸಮುದ್ರದಲೆಗಳ ಅಬ್ಬರಕ್ಕೆ ಕಡಲತೀರದಲ್ಲಿದ್ದ ಮನೆ ಕೊಚ್ಚಿ ಹೋಗಿದೆ. ಅಕ್ಕಪಕ್ಕದ ಮನೆಗಳು ಅಪಾಯದ ಅಂಚಿನಲ್ಲಿವೆ.

ವಾಯುಭಾರ ಕುಸಿತದಿಂದ ಅರಬ್ಬಿ ಸಮುದ್ರ ಪ್ರಕ್ಷುಬ್ಧಗೊಂಡು ಬುಧವಾರ ತಡರಾತ್ರಿ ಭಾರಿ ಗಾತ್ರದ ಅಲೆಗಳು ಅಪ್ಪಳಿಸಿದೆ. ಅಶೋಕ ಹರಿಕಂತ್ರ ಎಂಬುವರಿಗೆ ಸೇರಿದ ಮನೆ, ತೆಂಗಿನ ಮರಗಳು ಕೊಚ್ಚಿಹೋಗಿವೆ.

ಗೋಕರ್ಣದ ಮುಖ್ಯ ಕಡಲತೀರದ ಕರಿಯಪ್ಪನ ಕಟ್ಟೆ ಬಳಿ ಗುರುವಾರ ಸಂಜೆ ದಿಢೀರ್ ಉಕ್ಕೇರಿ ಬಂದ ಸಮುದ್ರದ ಅಲೆಗಳಿಗೆ ನಾಲ್ಕು ಅಂಗಡಿ, ರೆಸಾರ್ಟ್‌ಗಳಿಗೆ ತೀವ್ರ ಹಾನಿಯಾಗಿದೆ.

ಅರಬ್ಬಿ ಸಮುದ್ರದ ಅಬ್ಬರಕ್ಕೆ ಎರಡು ಅಂಗಡಿ ಸಂಪೂರ್ಣ ಕೊಚ್ಚಿ ಹೋಗಿದ್ದು, 10ಕ್ಕೂ ಹೆಚ್ಚು ಕೊಠಡಿಗಳು ಭಾಗಶಃ ನಾಶವಾಗಿದೆ. ಕೆಲ ಅಂಗಡಿಗಳ ತಡೆಗೋಡೆ ಕುಸಿದುಬಿದ್ದಿದೆ.

‘ಪ್ರವಾಸಿಗರ ಅನುಕೂಲಕ್ಕೆ ಲಕ್ಷಾಂತರ ರೂಪಾಯಿ ವ್ಯಯಿಸಿ ತೆರೆದಿದ್ದ ಕೆಫೆ ನೀರಿನಲ್ಲಿ ಕೊಚ್ಚಿಹೋಗಿದೆ. ಹೀಗೆಯೇ ಮುಂದುವರಿದರೆ ಇನ್ನೂ ಹೆಚ್ಚಿನ ಹಾನಿ ಸಂಭವಿಸಬಹುದು. ದುರ್ಘಟನೆಯಿಂದ ಭಯಭೀತರಾಗಿದ್ದೇವೆ’ ಎಂದು ಕೆಫೆ ಓಶನ್ ವ್ಯೂ ಮಾಲೀಕ ಗಣಪು ಜಟ್ಟಯ್ಯ ಗೌಡ ತಿಳಿಸಿದರು.

**ಲಂಗರು ಹಾಕಿದ ಬೋಟ್‌ಗಳು:** ಅರಬ್ಬಿ ಸಮುದ್ರ ಪ್ರಕ್ಷುಬ್ಧಗೊಂಡಿದ್ದರಿಂದ ಆಳ ಸಮುದ್ರಕ್ಕೆ ಮೀನುಗಾರಿಕೆಗೆ ತೆರಳಿದ್ದ ನೆರೆಯ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರಿಕೆ ಬೋಟ್‌ಗಳು, ಹೊರರಾಜ್ಯದ ಬೋಟ್‌ಗಳು ಕಾರವಾರದ ಬೈತಕೋಲದ ಮೀನುಗಾರಿಕೆ ಮತ್ತು ವಾಣಿಜ್ಯ ಬಂದರುಗಳ ಸಮೀಪ ಗುರುವಾರ ಲಂಗರು ಹಾಕಿದವು.



ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದ ಮಿಡ್ಲ್ ಬೀಚಿನ ಕರಿಯಪ್ಪನ ಕಟ್ಟೆ ಬಳಿ ಸಮುದ್ರದ ಅಲೆಗಳ ಅಬ್ಬರಕ್ಕೆ ಅಂಗಡಿ, ರೆಸಾರ್ಟ್‌ಗೆ ಹಾನಿಯಾಗಿದೆ

## ‘ಕಲ್ಯಾಣ’ದಲ್ಲಿ ಸಾಧಾರಣ ಮಳೆ

**ಕಲಬುರಗಿ:** ಕಲ್ಯಾಣ ಕರ್ನಾಟಕದ ರಾಯಚೂರು, ಕಲಬುರಗಿ, ಕೊಪ್ಪಳ, ಯಾದಗಿರಿ ಜಿಲ್ಲೆಗಳಲ್ಲಿ ಗುರುವಾರ ಸಾಧಾರಣ ಮಳೆಯಾಗಿದೆ.

ರಾಯಚೂರು ಜಿಲ್ಲೆಯ ವಿವಿಧೆಡೆ ಬುಧವಾರ ರಾತ್ರಿ ಹಾಗೂ ಗುರುವಾರ ಉತ್ತಮವಾಗಿ ಮಳೆಯಾಗಿದೆ. ರಾಯಚೂರು ತಾಲ್ಲೂಕಿನ ಬಿಚ್ಚಾಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಿ.ಯದ್ಲಾಪುರು ಗ್ರಾಮದಲ್ಲಿ ಮಳೆಯ ಆರ್ಭಟಕ್ಕೆ ರಸ್ತೆ ಕೊಚ್ಚಿಹೋಗಿದೆ. ದೇವದುರ್ಗ, ಕವಿತಾಳ, ಮಾನ್ವಿ, ಹಟ್ಟಿ ಚಿನ್ನದಗಣಿ ಪ್ರದೇಶದಲ್ಲಿ ಮಳೆಯಾಗಿದೆ.

ಯಾದಗಿರಿ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಸಾಧಾರಣ ಮಳೆಯಾಗಿದೆ. ನಾರಾಯಣಪುರ, ಹುಣಸಗಿ, ಕೆಂಭಾವಿಯಲ್ಲಿ ತುಂತುರು ಮಳೆಯಾಗಿದ್ದರೆ, ಶಹಾಪುರ, ಸುರಪುರದಲ್ಲಿ ಉತ್ತಮ ಮಳೆಯಾಗಿದೆ.

ಕೊಪ್ಪಳ, ಕುಷ್ಟಗಿ ಹಾಗೂ ಮುನಿರಾಬಾದ್‌ನಲ್ಲಿ ಉತ್ತಮ ಮಳೆಯಾಗಿದೆ. ಬುಧವಾರ ತಡರಾತ್ರಿ ಕುಷ್ಟಗಿ ತಾಲ್ಲೂಕಿನ ತಾವರಗೇರಾ ಹಾಗೂ ಹನುಮಸಾಗರದಲ್ಲಿ ಮಳೆ ಸುರಿದಿದೆ.

### ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯುಸೆಕ್‌ಗಳಲ್ಲಿ) | ಹೊರಹರಿವು (ಕ್ಯುಸೆಕ್‌ಗಳಲ್ಲಿ) |
|---|---|---|---|---|
| ಕೆ ಆರ್ ಎಸ್ * | 124.80 | 123.70 | 7,966 | 7,309 |
| ಹಾರಂಗಿ | 2,859 | 2,857.66 | 1,272 | 1,200 |
| ಕಬಿನಿ | 2,284.00 | 2,282.28 | 2,966 | 2,850 |
| ಹೇಮಾವತಿ | 2,922 | 2,920.90 | 5,550 | 5,505 |
| ಲಿಂಗನಮಕ್ಕಿ | 1,819 | 1,816.75 | 6,548 | 7,627 |
| ಸೂಪಾ (ಮೀ) | 564 | 558.42 | 2,468 | 4,288.10- |
| ಮಾಣಿ | 595 | 589.20 | 1,198 | - |
| ತುಂಗಭದ್ರಾ | 1,633 | 1,626.31 | 33,443 | 9,413 |
| ಮಲಪ್ರಭಾ | 2,079.5 | 2,077.10 | 1,444 | 1,444 |
| ಘಟಪ್ರಭಾ | 2175 | 2,174.55 | 3,526 | 5,623 |
| ಭದ್ರಾ * | 186 | 180.01 | 6,130 | 5,841 |
| ಆಲಮಟ್ಟಿ (ಮೀ) | 519.6 | 519.60 | 31,987 | 31,987 |
| ನಾರಾಯಣಪುರ (ಮೀ) | 492.25 | 492.10 | 50,000 | 63,420 |

* ನೆಲಮಟ್ಟದಿಂದ

# ಇಸ್ಲಾಂಗೆ ಮತಾಂತರ ಯತ್ನ: ಜಾಮೀನು ನಿರಾಕರಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಉದ್ಯೋಗ ಕೊಡಿಸುವ ನೆಪದಲ್ಲಿ ವಿವಾಹಿತ ದಲಿತ ಮಹಿಳೆಯೊಬ್ಬರನ್ನು ಪುಸಲಾಯಿಸಿ ಜಿಲ್ಲಾ ಕೇಂದ್ರವೊಂದಕ್ಕೆ ಕರೆದುಕೊಂಡು ಹೋಗಿ, ಆಕೆಯನ್ನು ಬಾಡಿಗೆ ಮನೆಯಲ್ಲಿ ಕೂಡಿ ಹಾಕಿ ಇಸ್ಲಾಂ ಧರ್ಮಕ್ಕೆ ಮತಾಂತರಗೊಳಿಸಲು ಯತ್ನಿಸಿದ್ದಲ್ಲದೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ’ ಎಂಬ ಆರೋಪ ಎದುರಿಸುತ್ತಿರುವ ವ್ಯಕ್ತಿಯೊಬ್ಬರಿಗೆ ಜಾಮೀನು ಮಂಜೂರು ಮಾಡಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ಜಾಮೀನು ಕೋರಿ 33 ವರ್ಷದ ಆರೋಪಿ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಯನ್ನು, ಧಾರವಾಡ ಪೀಠದಲ್ಲಿನ ನ್ಯಾಯಮೂರ್ತಿ ಎಸ್.ರಾಚಯ್ಯ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿ ಆದೇಶಿಸಿದೆ.

‘ಈ ಪ್ರಕರಣದಲ್ಲಿ ಆರೋಪಿಯು, ಅಮಾಯಕ ಮತ್ತು ಬಡ ದಲಿತ ಮಹಿಳೆಗೆ ಉದ್ಯೋಗ ಕೊಡಿಸುವ ನೆಪದಲ್ಲಿ ಜಿಲ್ಲಾ ಕೇಂದ್ರದ ನಗರವೊಂದಕ್ಕೆ ಕರೆದುಕೊಂಡು ಹೋಗಿದ್ದಾರೆ. ಅಲ್ಲಿ ಮನೆಯೊಂದರಲ್ಲಿ ಆಕೆಯನ್ನು ಕಣ್ಗಾವಲಿನಲ್ಲಿ ಇರಿಸಿ ಬಲವಂತದ ಮತಾಂತರಕ್ಕೆ ಪ್ರಯತ್ನಿಸಿದ್ದಾರೆ. ಅಂತೆಯೇ, ಆಕೆಯ ಮೇಲೆ ಅತ್ಯಾಚಾರ ಎಸಗಿರುವ ಆರೋಪವೂ ಇರುವ ಕಾರಣ ಇದು ಗಂಭೀರವಾದ ಪ್ರಕರಣ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

‘ಇಂತಹ ಕೆಟ್ಟ ಬೆಳವಣಿಗೆ ಹಾಗೂ ಚಟುವಟಿಕೆಗಳನ್ನು ತಪ್ಪಿಸುವ ನಿಟ್ಟಿನಲ್ಲಿ ಮತ್ತು ನಿಯಂತ್ರಿಸುವಲ್ಲಿ ನ್ಯಾಯಾಲಯಗಳು ಸೂಕ್ಷ್ಮವಾಗಿರಬೇಕು. ಆರೋಪಿಗಳ ಜಾಮೀನು ಅರ್ಜಿಗಳನ್ನು ಪರಿಗಣಿಸುವಾಗ, ಅಪರಾಧದ ಸ್ವರೂಪ, ಪ್ರಕರಣದ ಗಂಭೀರತೆ ಮತ್ತು ಆರೋಪಿಗೆ ಜಾಮೀನು ನೀಡಿದರೆ ಉಂಟಾಗಬಹುದಾದ ಸಾಮಾಜಿಕ ಪರಿಣಾಮಗಳನ್ನು ಎಚ್ಚರದಿಂದ ಗಮನಿಸಬೇಕು’ ಎಂದಿದೆ.

‘ಇಂತಹ ಚಟುವಟಿಕೆಗಳನ್ನು ತಡೆಗಟ್ಟುವ ಮತ್ತು ಸಮಾಜದ ಮುಗ್ಧ, ಹಿಂದುಳಿದ ಮಹಿಳೆಯರು ಮತ್ತು ಮಕ್ಕಳನ್ನು ರಕ್ಷಿಸಲು ನ್ಯಾಯಾಲಯಗಳು ಜಾಗೃತವಾಗಿವೆ ಎಂಬ ಸಂದೇಶವನ್ನು ಸಮಾಜಕ್ಕೆ ನೀಡುವುದು ಅಗತ್ಯವಾಗಿದೆ’ ಎಂದು ಆದೇಶದಲ್ಲಿ ವಿವರಿಸಿರುವ ನ್ಯಾಯಮೂರ್ತಿಗಳು ಆರೋಪಿಯ ಜಾಮೀನು ಅರ್ಜಿ ತಿರಸ್ಕರಿಸಿದ್ದಾರೆ.

## ಯತ್ನಾಳ್ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದು

**ಬೆಂಗಳೂರು:** ‘ಎಲ್ಲ ಹಿಂದೂಗಳು ಕಾಂಗ್ರೆಸ್ ಪಕ್ಷವನ್ನು ಬಹಿಷ್ಕರಿಸುತ್ತಾರೆ ಎಂದು ಮಾಧ್ಯಮಗಳ ಮುಂದೆ ಸಾರ್ವಜನಿಕ ಹೇಳಿಕೆ ನೀಡುವ ಮೂಲಕ ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ’ ಎಂಬ ಆರೋಪದಡಿ ವಿಜಯಪುರ ಕ್ಷೇತ್ರದ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ವಿರುದ್ಧ ಗದಗ ಜಿಲ್ಲೆಯ 1ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿನ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

‘ಪ್ರಕರಣಕ್ಕೆ ಸಂಬಂಧಿಸಿದ ಖಾಸಗಿ ದೂರು ಮತ್ತು ವಿಚಾರಣಾ ನ್ಯಾಯಾಲಯದ ಪ್ರಕ್ರಿಯೆ ರದ್ದುಪಡಿಸಬೇಕು’ ಎಂದು ಕೋರಿ ಯತ್ನಾಳ್ ಸಲ್ಲಿಸಿದ್ದ ಅರ್ಜಿಯನ್ನು, ‘ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ’ದ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಯತ್ನಾಳ್ ಪರ ವಕೀಲ ವೆಂಕಟೇಶ್ ಪಿ.ದಳವಾಯಿ, ‘ವಿಚಾರಣಾ ನ್ಯಾಯಾಲಯ ಅರ್ಜಿದಾರರಿಗೆ ಸಮನ್ಸ್ ಜಾರಿಗೊಳಿಸಿದೆ. ಆದರೆ, ಈ ಪ್ರಕರಣದಲ್ಲಿ ಭಾರತೀಯ ದಂಡ ಸಂಹಿತೆ-1860ರ ಕಲಂ 188 ಅನ್ವಯ ಆಗುವುದಿಲ್ಲ. ಹಾಗಾಗಿ, ವಿಚಾರಣಾ ನ್ಯಾಯಾಲಯದ ಆದೇಶ ರದ್ದುಪಡಿಸಬೇಕು’ ಎಂದು ಕೋರಿದರು.

# ಕೂಡಲಿ ಮಠ: ₹60 ಲಕ್ಷ ಮೌಲ್ಯದ ಚಿನ್ನದ ಪಾದುಕೆ ಕಳವು

ಪ್ರಜಾವಾಣಿ ವಾರ್ತೆ

**ಶಿವಮೊಗ್ಗ:** ತಾಲ್ಲೂಕಿನ ತುಂಗಾ-ಭದ್ರಾ ನದಿಗಳ ಸಂಗಮ ಸ್ಥಳವಾದ ಕೂಡಲಿಯಲ್ಲಿರುವ ಮಠದಲ್ಲಿದ್ದ ಶಾರದಾಂಬೆ ದೇವಿಯ ಎರಡು ಚಿನ್ನದ ಪಾದುಕೆಗಳನ್ನು ಕಳವು ಮಾಡಲಾಗಿದೆ.

ಪಾದುಕೆಗಳು ಒಂದು ಕೆ.ಜಿ ತೂಕದ್ದಾಗಿದ್ದು, ಒಟ್ಟು ₹60 ಲಕ್ಷ ಮೌಲ್ಯ ಹೊಂದಿವೆ.

ಕೂಡಲಿ ಮಠದಲ್ಲಿ ಪರಂಪರಾಗತವಾಗಿ ಇರುವ ಈ ಪಾದುಕೆಗಳು ಹಾಗೂ ಬೆಳ್ಳಿಯ ಮುದ್ರೆಯನ್ನು ಮಠದ ಬೀರುವಿನಲ್ಲಿ ಇರಿಸಲಾಗಿತ್ತು. ಅವು ಕಳುವಾಗಿದೆ ಎಂದು ಮಠದ ಪ್ರಮುಖ ರಮೇಶ ಹಲ್ಮನಿ ಹೊಳೆಹೊನ್ನೂರು ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

‘ಮಠದ ಪೀಠಾಧಿಪತಿ ವಿದ್ಯಾಭಿನವ ವಿದ್ಯಾರಣ್ಯ ಭಾರತಿ ಶ್ರೀಗಳು ಹಿಂದಿನ ಚಾತುರ್ಮಾಸ್ಯ ಹಾಗೂ ಅನಾರೋಗ್ಯದ ನಿಮಿತ್ತ ಎಂಟು ತಿಂಗಳ ಕಾಲ ದಾವಣಗೆರೆ ಹಾಗೂ ಬೆಂಗಳೂರಿನಲ್ಲಿ ವಾಸವಿದ್ದರು. ಈ ಬಾರಿಯ ಚಾತುರ್ಮಾಸ್ಯದ ಕಾರಣ ಶ್ರೀಗಳು ಜುಲೈನಲ್ಲಿ ಕೂಡಲಿ ಮಠಕ್ಕೆ ಬಂದು ವಾಸ್ತವ್ಯ ಹೂಡಿದ್ದರು.

ಈಚೆಗೆ ದೇವಸ್ಥಾನದ ಹುಂಡಿಯನ್ನು ತೆಗೆದು ಕಾಣಿಕೆ ಹಣವನ್ನು ಬ್ಯಾಂಕ್‌ಗೆ ಜಮೆ ಮಾಡುವ ಮುನ್ನ ಶ್ರೀಗಳ ಸೂಚನೆಯಂತೆ ಬೀರುವಿನಲ್ಲಿ ಇಡಲು ಮುಂದಾಗಿದ್ದೆವು. ಆಗ ಬೀಗದ ಕೈನಲ್ಲಿ ವ್ಯತ್ಯಾಸ ಆಗಿದ್ದು ಗಮನಕ್ಕೆ ಬಂತು. ಪರಿಶೀಲಿಸಿದಾಗ ಪಾದುಕೆಗಳು ಕಳವು ಆಗಿದ್ದು ಗೊತ್ತಾಗಿದೆ’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

# ಕನ್ನಡಕ್ಕೆ ಮಲಯಾಳಿ ಶಿಕ್ಷಕಿ ನೇಮಕ

**ಬದಿಯಡ್ಕ (ಕಾಸರಗೋಡು):** ದೇಲಂಪಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಡೂರು ಗ್ರಾಮದ ಗೋರಿಗದ್ದೆ ಅಂಗನವಾಡಿಗೆ ಕನ್ನಡ ಮಾತೃಭಾಷೆಯ ಮಕ್ಕಳಿಗೆ ಶಿಕ್ಷಣ ನೀಡಲು ಮಲಯಾಳಿ ಶಿಕ್ಷಕಿಯನ್ನು ನೇಮಿಸಿದ್ದು, ಆಕ್ಷೇಪ ವ್ಯಕ್ತವಾಗಿದೆ.

ಗಡಿ ಪ್ರದೇಶದ ಅಂಗನವಾಡಿಯಲ್ಲಿ ಪ್ರಾದೇಶಿಕವಾದ ಎರಡು ಭಾಷೆ ತಿಳಿದವರನ್ನೇ ಶಿಕ್ಷಕಿಯಾಗಿ ನೇಮಿಸಬೇಕು ಎಂಬ ನಿಯಮವಿದೆ. ಗೋರಿಗದ್ದೆ ಅಂಗನವಾಡಿಯಲ್ಲಿ 16 ಮಕ್ಕಳಲ್ಲಿ 14 ಮಂದಿ ಕನ್ನಡಿಗರು. ಆದರೂ ಕನ್ನಡ ತಿಳಿಯದ ಶಿಕ್ಷಕಿಯನ್ನು ನೇಮಕ ಮಾಡಲಾಗಿದೆ.

ಸರ್ಕಾರದ ಆದೇಶ ಉಲ್ಲಂಘಿಸಿ ಹಂಚಿಕೆ: ಮುಡಾ ಅಧ್ಯಕ್ಷ ಕೆ. ಮರೀಗೌಡ ಮೇಲೂ ತೂಗುಗತ್ತಿ

# 4 ತಿಂಗಳಲ್ಲಿ 79 ಎಕರೆಗೆ ಬದಲಿ ನಿವೇಶನ

• ಆರ್. ಜಿತೇಂದ್ರ

ಮುಡಾ ಹಗರಣ

**ಮೈಸೂರು:** ಮುಡಾದಲ್ಲಿ ನಿಯಮ ಉಲ್ಲಂಘನೆಯ ಪ್ರಕರಣಗಳು ಮೊಗೆದಷ್ಟೂ ಹೊರಬರುತ್ತಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ಕೆ.ಮರೀಗೌಡ ಮುಡಾ ಅಧ್ಯಕ್ಷರಾದ ನಂತರ, ನಾಲ್ಕು ತಿಂಗಳಲ್ಲೇ 79 ಎಕರೆಯಷ್ಟು ಜಮೀನಿಗೆ 50:50 ಅನುಪಾತದಡಿ ಬದಲಿ ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಲಾಗಿದೆ.

'ಈ ಅನುಪಾತದಡಿ ಒಂದು ಬದಲಿ ನಿವೇಶನ ಹಂಚಿಕೆ ಮಾಡಬಾರದು' ಎಂದು ರಾಜ್ಯ ಸರ್ಕಾರ 2023ರ ಅಕ್ಟೋಬರ್‌ನಲ್ಲೇ ಆದೇಶಿಸಿತ್ತು.

2024ರ ಮಾರ್ಚ್‌ನಿಂದ ಜೂನ್ ಅಂತ್ಯದವರೆಗೆ 8.87 ಲಕ್ಷ ಚದರ ಅಡಿ ವಿಸ್ತೀರ್ಣದ ಬದಲಿ ನಿವೇಶನಗಳನ್ನು ಪ್ರತಿಷ್ಠಿತ ಬಡಾವಣೆಗಳಲ್ಲಿ ಹಂಚಲಾಗಿದೆ. ಅದರ ದಾಖಲೆಗಳು 'ಪ್ರಜಾವಾಣಿ'ಗೆ ಲಭ್ಯವಾಗಿವೆ.

**ಅಧ್ಯಕ್ಷರಿಂದ ಪತ್ರ:** '50:50 ಅನುಪಾತದಡಿ ನಿವೇಶನಗಳ ಹಂಚಿಕೆಯಲ್ಲಿ ಲೋಪವಾಗಿದ್ದು, ಅದನ್ನು ತಡೆಹಿಡಿಯಿರಿ' ಎಂದು ಮುಡಾ ಆಯುಕ್ತರಿಗೆ ಪತ್ರ ಬರೆದಿದ್ದ ಮರೀಗೌಡರು, ಇನ್ನೂ ಕೆಲವು ಪ್ರಕರಣಗಳಲ್ಲಿ ನಿವೇಶನ ಹಂಚಿಕೆ ಮಾಡುವಂತೆ ಸೂಚಿಸಿದ್ದಾರೆ.

ಅಕ್ರಮ ಎಸಗಿದ ಸಂದರ್ಭ ಆಯುಕ್ತರನ್ನು ಎಚ್ಚರಿಸುವ ಪ್ರಯತ್ನವನ್ನು ಅಧ್ಯಕ್ಷರು ಮಾಡಬೇಕಿತ್ತು. ಆದರೆ ಅವರೇ ನಾಲ್ಕಾರು ಪ್ರಕರಣಗಳಲ್ಲಿ ನಿವೇಶನ ವಿತರಣೆಗೆ ಸೂಚಿಸಿದ್ದಾರೆ. ಇದು ಅಕ್ರಮಕ್ಕೆ ಪುರಾವೆಯಾಗಿದೆ. ಹಂಚಿಕೆ ವ್ಯವಹಾರ ಕುದುರದ ಪ್ರಕರಣಗಳಲ್ಲಿ ಒಬ್ಬರಿಗೊಬ್ಬರು ಪತ್ರ ಬರೆದು ಮಂಜೂರಾತಿಯನ್ನು ತಡೆ ಹಿಡಿಯುವುದು ಸಾಮಾನ್ಯವಾಗಿದೆ ಎಂಬ ಆರೋಪವೂ ಇದೆ.

**ಶಾಸಕರಿಂದ ಪತ್ರ:** ಚಾಮರಾಜ ಕ್ಷೇತ್ರದ ಶಾಸಕ ಕೆ. ಹರೀಶ್ ಗೌಡ ಜೂನ್ 17ರಂದು ಆಯುಕ್ತರಿಗೆ ಪತ್ರ ಬರೆದಿದ್ದು, 9 ಪ್ರಕರಣಗಳಲ್ಲಿ ಬದಲಿ ನಿವೇಶನ ಹಂಚಿಕೆಯನ್ನು ತಡೆಹಿಡಿಯುವಂತೆ ಕೋರಿದ್ದಾರೆ.

'ರೈತರಲ್ಲದವರು 50:50 ಅನುಪಾತದಲ್ಲಿ ನಿವೇಶನ ಕೋರಿ ಅರ್ಜಿ ಸಲ್ಲಿಸುತ್ತಿದ್ದು, ಅಧಿಕಾರಿಗಳು ದಾಖಲೆ ಪರಿಶೀಲಿಸದೆಯೇ ನಿವೇಶನ ಹಂಚಿಕೆ ಮಾಡುತ್ತಿದ್ದಾರೆ. ಇಂತಹ ಪ್ರಕರಣಗಳಲ್ಲಿ ಬದಲಿ ನಿವೇಶನಗಳ ಹಂಚಿಕೆ ತಡೆ ಹಿಡಿಯಬೇಕು' ಎಂದು ಒತ್ತಾಯಿಸಿದ್ದರು.



ಮುಡಾ ಆವರಣದಲ್ಲಿ ಕಂಡುಬಂದ ಫಲಕ – ಪ್ರಜಾವಾಣಿ ಚಿತ್ರ

## ಎಲ್ಲೆಲ್ಲಿ ಹಂಚಿಕೆ?

ಮೈಸೂರು ನಗರ ವ್ಯಾಪ್ತಿಯ ಹಿನಕಲ್, ಬಸವನಹಳ್ಳಿ, ಬೆಲವತ್ತ, ಬೋಗಾದಿ, ಹೆಬ್ಬಾಳ, ಕೆಸರೆ, ದೇವನೂರು, ಸಾತಗಳ್ಳಿ, ಕ್ಯಾತಮಾರನಹಳ್ಳಿ, ಕುರುಬಾರಹಳ್ಳಿ, ಮಳಲವಾಡಿ ಸೇರಿ ವಿವಿಧ ಬಡಾವಣೆಗಳಲ್ಲಿ ದಶಕಗಳ ಹಿಂದೆ ವಶಪಡಿಸಿಕೊಂಡಿದ್ದ ಜಮೀನಿಗೆ ಪ್ರತಿಯಾಗಿ ಈಗ ಬದಲಿ ನಿವೇಶನಗಳನ್ನು ಹಂಚಲಾಗಿದೆ.

ವಿಜಯನಗರ, ದಟ್ಟಗಳ್ಳಿಯಂತಹ ಪ್ರತಿಷ್ಠಿತ ಬಡಾವಣೆಗಳಲ್ಲೇ ಬದಲಿ ನಿವೇಶನಗಳು ಹಂಚಿಕೆಯಾಗಿವೆ. 'ಕೆಲ ಪ್ರಕರಣಗಳಲ್ಲಿ ಅಧಿಕಾರಿಗಳು, ಮುಡಾ ಸಮಿತಿ ಸದಸ್ಯರೇ ಭೂಸಂತ್ರಸ್ತರನ್ನು ಹುಡುಕಿ ನಿವೇಶನ ನೀಡಿದ್ದಾರೆ' ಎಂಬ ಆರೋಪವೂ ಇದೆ.

## 'ಆಯುಕ್ತರ ಅಮಾನತು ಕ್ರಮವೂ ಇಲ್ಲ'

ಮುಡಾ ನಿವೇಶನ ಹಂಚಿಕೆಯಲ್ಲಿ ಅಕ್ರಮದ ದಾಖಲೆಗಳು ಬಹಿರಂಗಗೊಂಡಿದ್ದರೂ, ಅದಕ್ಕೆ ಕಾರಣರಾದ ಆಯುಕ್ತರು, ಅಧಿಕಾರಿಗಳನ್ನು ಇನ್ನೂ ಅಮಾನತುಗೊಳಿಸದೇ ಇರುವುದು ಕೂಡ ಅನುಮಾನಗಳಿಗೆ ಕಾರಣವಾಗಿದೆ.

ಮತ್ತೊಂದೆಡೆ, ಮುಡಾ ಅಧ್ಯಕ್ಷ ಮರೀಗೌಡ ಮೇಲೆ ಸಿಟ್ಟು ಇದ್ದರೂ ಸಿ.ಎಂ ಸಿದ್ದರಾಮಯ್ಯ ಕ್ರಮಕೈಗೊಳ್ಳದೇ ಸುಮ್ಮನಿದ್ದಾರೆ. ಸ್ವಪಕ್ಷೀಯರಿಂದಲೇ ಪ್ರತಿರೋಧವಿದ್ದರೂ ಸುಮ್ಮನಾಗಿರುವುದು ಕೂಡ ಸಂದೇಹ ಮೂಡಿಸಿದೆ.

## 'ಮುಡಾ ಪ್ರಕರಣ: ದೇಸಾಯಿ ಆಯೋಗಕ್ಕೆ ಮಾಹಿತಿ ನೀಡಲಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಮುಡಾ ನಿವೇಶನ ಅಕ್ರಮ ಹಂಚಿಕೆ ಬಗ್ಗೆ ಸಾರ್ವಜನಿಕವಾಗಿ ಹೇಳಿಕೆ ನೀಡಿ ಗೊಂದಲ ಸೃಷ್ಟಿಸುವ ಬದಲು, ಈ ಪ್ರಕರಣದ ವಿಚಾರಣೆಗೆ ರಾಜ್ಯ ಸರ್ಕಾರ ನಿವೃತ್ತ ನ್ಯಾಯಮೂರ್ತಿ ಪಿ.ಎಸ್. ದೇಸಾಯಿ ನೇತೃತ್ವದಲ್ಲಿ ರಚಿಸಿರುವ ಏಕ ಸದಸ್ಯ ವಿಚಾರಣಾ ಆಯೋಗಕ್ಕೆ ಮಾಹಿತಿ ನೀಡಲಿ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವಿರೋಧ ಪಕ್ಷದವರು ಪದೇ ಪದೇ ಹೇಳಿಕೆ ನೀಡುತ್ತಿದ್ದಾರೆ. ಅದರ ಬದಲು ಆಯೋಗಕ್ಕೆ ನೀಡಲಿ. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸುವುದಿಲ್ಲ' ಎಂದರು.

'ಕೋವಿಡ್ ವೇಳೆ ನಡೆದ ಹಗರಣಕ್ಕೆ ಸಂಬಂಧಿಸಿ ನ್ಯಾಯಮೂರ್ತಿ ಮೈಕಲ್ ಡಿಕುನ್ಹಾ ತಮ್ಮ ವರದಿಯಲ್ಲಿ ಏನು ಶಿಫಾರಸು ಮಾಡುತ್ತಾರೆ ಎಂಬುದನ್ನು ಗಮನಿಸಿ ಮುಂದಿನ ಕ್ರಮ ಕೈಗೊಳ್ಳುತ್ತೇವೆ. ಅಪರಾಧ ಪ್ರಕರಣ ದಾಖಲಿಸಬೇಕು ಎಂದು ವರದಿಯಲ್ಲಿ ಬಂದರೆ, ಅದರಂತೆ ಕ್ರಮ ಕೈಗೊಳ್ಳಲಾಗುವುದು' ಎಂದರು. 'ರಾಜ್ಯಪಾಲರು ರಕ್ಷಣೆ ಕೇಳಿದ ಹಿನ್ನೆಲೆಯಲ್ಲಿ ಅವರಿಗೆ ಭದ್ರತೆ ಒದಗಿಸಲಾಗಿದೆ. ಅವರಿಗೆ ಯಾವ ರೀತಿಯ ಬೆದರಿಕೆ ಇದೆ ಎಂಬುದು ನನ್ನ ಗಮನಕ್ಕೆ ಬಂದಿಲ್ಲ. ರಾಜ್ಯಪಾಲರಿಗೆ ಬೆದರಿಕೆ ಇದೆ ಎಂಬ ಸನ್ನಿವೇಶವನ್ನು ಬಿಜೆಪಿಯವರು ಸೃಷ್ಟಿಸಿದ್ದಾರೆ. ಬಿಜೆಪಿಯವರ ಇತ್ತೀಚಿನ ನಡವಳಿಕೆಗಳೇ ಇದಕ್ಕೆ ಕಾರಣ' ಎಂದರು.

## ಹಣ ಅಕ್ರಮ ವರ್ಗಾವಣೆ: ತನಿಖೆ ಸಿಐಡಿಗೆ ಹಸ್ತಾಂತರ

**ಬಾಗಲಕೋಟೆ:** ಇಲ್ಲಿನ ಐಡಿಬಿಐ ಬ್ಯಾಂಕ್‌ನಲ್ಲಿ ಪ್ರವಾಸೋದ್ಯಮ ಇಲಾಖೆ ಸೇರಿ ವಿವಿಧ ಐದು ಇಲಾಖೆಗಳ ಖಾತೆಯಿಂದ ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲು ನಿರ್ಧರಿಸಲಾಗಿದೆ.

'ಸಿಐಡಿಗೆ ಎಲ್ಲ ದಾಖಲೆ ಕೊಡಲಾಗುವುದು' ಎಂದು ಎಸ್‌ಪಿ ಅಮರನಾಥ ರೆಡ್ಡಿ ತಿಳಿಸಿದ್ದಾರೆ. ಪ್ರವಾಸೋದ್ಯಮ ಇಲಾಖೆಯ ₹2.47 ಕೋಟಿ ಅನ್ನು ಬ್ಯಾಂಕ್ ಸಿಬ್ಬಂದಿ ತಮ್ಮ ಸಂಬಂಧಿಕರು, ಸ್ನೇಹಿತರ ಖಾತೆಗೆ ವರ್ಗಾವಣೆ ಮಾಡಿದ್ದು ಪತ್ತೆಯಾಗಿತ್ತು. ಐಡಿಬಿಐ ಬ್ಯಾಂಕಿನಲ್ಲಿ ಖಾತೆ ಹೊಂದಿದ್ದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ₹79.75 ಲಕ್ಷ, ಪಂಚಾಯತ್‌ರಾಜ್ ಇಲಾಖೆಯ ₹86.40 ಲಕ್ಷ, ಕೈಮಗ್ಗ ಮತ್ತು ಜವಳಿ ಇಲಾಖೆ ₹17.81 ಲಕ್ಷ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ₹1.76 ಲಕ್ಷ ಸೇರಿ ಒಟ್ಟು ₹6.08 ಕೋಟಿ ಅಕ್ರಮ ವಾಗಿ ವರ್ಗಾವಣೆ ಮಾಡಿರುವುದು ಪತ್ತೆಯಾಗಿತ್ತು.

## ಸಿ.ಎಂ ಪತ್ನಿಯ ಪತ್ರದ 'ವೈಟ್ನರ್' ಹಿಂದೆ ಏನಿದೆ?

ಪ್ರಜಾವಾಣಿ ವಾರ್ತೆ

**ಮೈಸೂರು:** 'ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಮುಡಾಕ್ಕೆ ಬರೆದಿದ್ದ ಪತ್ರಕ್ಕೆ ವೈಟ್ನರ್ ಹಚ್ಚಿ ತಿರುಚಲಾಗಿದೆ ಎಂಬ ಎಚ್.ಡಿ. ಕುಮಾರಸ್ವಾಮಿ ಅವರ ಆರೋಪದಲ್ಲಿ ಹುರುಳಿಲ್ಲ. ವಿಜಯನಗರದಲ್ಲೇ ನಿವೇಶನ ಕೊಡುವಂತೆ ಅವರು ಕೇಳಿಲ್ಲ' ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಪ್ರತಿಪಾದಿಸಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ದಾಖಲೆಗಳನ್ನು ಬಿಡುಗಡೆ ಮಾಡಿದ ಅವರು, 'ಮುಖ್ಯಮಂತ್ರಿ ಪತ್ನಿಗೆ ನಿವೇಶನ ನೀಡುವಾಗ ಮುಡಾದಿಂದ ಪರಿಗಣಿಸಲಾಗಿರುವ ಪತ್ರವೇ ಬೇರೆ. ಕುಮಾರಸ್ವಾಮಿ ಆರೋಪಿಸುತ್ತಿರುವ ಪತ್ರವೇ ಬೇರೆ. ವೈಟ್ನರ್ ಹಚ್ಚಿರುವ ಜಾಗದಲ್ಲಿರುವುದು 'ದೇವನೂರು 3ನೇ ಹಂತದ ಬಡಾವಣೆಯಲ್ಲಿ ಅಥವಾ ನಂತರ ರಚಿಸಿದ ಸಮಾನಾಂತರ ಬಡಾವಣೆಯಲ್ಲಿ ಕೊಡಿ' ಎಂದಷ್ಟೆ. ಅದನ್ನೇ ಏನೇನೋ ಊಹೆ ಮಾಡಿಕೊಂಡು ಆರೋಪಿಸಲಾಗುತ್ತಿದೆ' ಎಂದು ತಿಳಿಸಿದರು.

'ವೈಟ್ನರ್ ಹಚ್ಚಿರುವ ಹಾಳೆ ಹಿಂಭಾಗ ಟಾರ್ಚ್ ಬೆಳಕು ಬಿಟ್ಟು ನೋಡಿದರೆ ಅಲ್ಲಿರುವುದು ಗೊತ್ತಾಗುತ್ತದೆ' ಎಂದು ಪ್ರದರ್ಶಿಸಿದರು. 'ಪಾರ್ವತಿ ಅವರು ಮುಡಾಕ್ಕೆ 2014ರಲ್ಲಿ ಪತ್ರ ಬರೆದಿದ್ದರು. ಆಗ ಭೂಪರಿಹಾರ ನೀಡಿಲ್ಲ. ಅವರು 2021ರಲ್ಲಿ ಬರೆದಿದ್ದ ಪತ್ರ ಆಧರಿಸಿ ನಿವೇಶನ ಹಂಚಿಕೆಯಾಗಿದೆ. ಅದನ್ನೇ ಸಿಎಂ ಕೋರ್ಟ್‌ಗೆ ನೀಡಿದ್ದಾರೆ. ಅದರಲ್ಲಿ ತಿರುಚುವ ಪ್ರಮೇಯವೇ ಬರುವುದಿಲ್ಲ'ಎಂದು ಪ್ರತಿಪಾದಿಸಿದರು.

# ವೈಟ್ನರ್ ಕಪ್ಪುಚುಕ್ಕೆ ಅಳಿಸಿತೇ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಸಿದ್ದರಾಮಯ್ಯ ಅವರು ತಮ್ಮ 40 ವರ್ಷಗಳ ರಾಜಕೀಯ ಜೀವನದಲ್ಲಿ ಒಂದೇ ಒಂದು ಕಪ್ಪುಚುಕ್ಕೆ ಇಲ್ಲ ಎನ್ನುತ್ತಾರೆ. ಹಾಗಿದ್ದರೆ ಅವರು ವೈಟ್ನರ್ ಹಾಕಿ, ಕಪ್ಪುಚುಕ್ಕೆ ತೆಗೆಯುವ ಪ್ರಯತ್ನ ಮಾಡಿದ್ದೇಕೆ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್‌ಗೆ 550 ಎಕರೆ ಜಮೀನು ಮಂಜೂರು ಮಾಡಿದ್ದ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಾಮಾಜಿಕ ಜಾಲತಾಣಗಳಲ್ಲಿ ಮಾಡಿದ್ದ ಪೋಸ್ಟ್‌ಗಳಿಗೆ ಕುಮಾರಸ್ವಾಮಿ ಹೀಗೆ ಪ್ರತಿಕ್ರಿಯಿಸಿದ್ದಾರೆ. ಈ ಸಂಬಂಧ 'ಎಕ್ಸ್'ನಲ್ಲಿ ದೀರ್ಘ ಪೋಸ್ಟ್ ಮಾಡಿರುವ ಅವರು, 'ಸಾಯಿ ವೆಂಕಟೇಶ್ವರಕ್ಕೆ 550 ಎಕರೆ ಮಂಜೂರು ಮಾಡಿದ್ದೇನೆ ಎಂದು ಬೊಗಳೆ ಬಿಟ್ಟಿದ್ದೀರಿ. ನನ್ನ ಬರವಣಿಗೆ ಪೋರ್ಜರಿ ಆಗಿದೆ. ಪತ್ರಿಕೆಗಳ ವರದಿಗೆ ನಾನು ಉತ್ತರ ಕೊಡುತ್ತೇನೆ. ಪಲಾಯನ ನನ್ನ ಜಾಯಮಾನವಲ್ಲ. ಆದರೆ, ಆ ವರದಿಯನ್ನೇ ನೆತ್ತಿ ಮೇಲಿಟ್ಟುಕೊಂಡು ಉಪ್ಪಿನಕಾಯಿ ಚಪ್ಪರಿಸುವ ದೈನೇಸಿ ಸ್ಥಿತಿ ನಿಮಗೇಕೆ' ಎಂದು ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದ್ದಾರೆ.

'ಮುಡಾದಲ್ಲಿ ನೀವು ಮತ್ತು ನಿಮ್ಮ ಕುಟುಂಬದವರು ಹೇಗೆಲ್ಲಾ ಸರ್ಕಾರಿ ಭೂಮಿ ಕಬಳಿಸಿದ್ದೀರಿ ಎಂಬುದಕ್ಕೆ ದಂಡಿದಂಡಿ ದಾಖಲೆಗಳೇ ಇವೆ. ನನ್ನ ಪುರಾಣಗಳು ಕಂತುಗಳಲ್ಲಿ ಬರುತ್ತದೆ ಎಂದಿದ್ದೀರಿ. ನಿಮ್ಮ ಪುರಾಣಗಳನ್ನು ಪ್ಯಾನ್ ಇಂಡಿಯಾ ಸಿನಿಮಾ ಮಾಡಬಹುದು' ಎಂದು ಸಿ.ಎಂ ವಿರುದ್ಧ ಹರಿಹಾಯ್ದರು. 'ಬೇಲಿಕೇರಿಯಲ್ಲಿ ಅದಿರು ಕದ್ದವರ ಜತೆಗಿನ ನಿಮ್ಮ 'ಸಿದ್ಧಹಸ್ತ' ಶಾಮೀಲಾಗಿರುವ ಗಣಿ ಪುರಾಣ ಬಿಚ್ಚಿಟ್ಟರೆ, ನಿಮ್ಮ ಬಂಧನಕ್ಕೆ ಮನೆಯ ಮುಂದೆ ಕಾನ್‌ಸ್ಟೆಬಲ್‌ಗಳು ಸಾಲುಗಟ್ಟಿ ನಿಲ್ಲುತ್ತಾರೆ' ಎಂದಿದ್ದಾರೆ.



ಮುಡಾ ಹೊಲಸಿನಿಂದ ಗಮನ ಬೇರೆಡೆ ಸೆಳೆಯಲು ಯತ್ನಿಸುತ್ತಿದ್ದೀರಿ. ಕಳ್ಳನ ಜಾಗದಲ್ಲಿ ನಿಂತು ಊರಿಗೆಲ್ಲ ಗೀತೆ ಬೋಧಿಸುವ ನಿಮ್ಮ ಪ್ರಾರಬ್ಧ ಕೀಳುಮಟ್ಟದ್ದು

**ಎಚ್.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವ

## 'ಎಚ್‌ಡಿಕೆ ಭ್ರಷ್ಟಾಚಾರದ ಮೊದಲ ಅಧ್ಯಾಯ'

'ಎಚ್.ಡಿ.ಕುಮಾರಸ್ವಾಮಿಯವರೇ, ನೋಂದಣಿಯೇ ಆಗದ ಕಂಪನಿಗೆ 550 ಎಕರೆ ಅರಣ್ಯ ಭೂಮಿಯನ್ನು ಅಕ್ರಮವಾಗಿ ಮಂಜೂರು ಮಾಡಿದ್ದೀರಿ. ಈಗ 'ಸಹಿ ನನ್ನದಲ್ಲ, ಯಾರೋ ಪೋರ್ಜರಿ ಮಾಡಿದ್ದಾರೆ' ಎಂದು ಕಣ್ಣೀರು ಸುರಿಸುತ್ತಿದ್ದೀರಿ. ನಿಮ್ಮ ಬ್ರಹ್ಮಾಂಡ ಭ್ರಷ್ಟಾಚಾರದ ಪುರಾಣದ ಮೊದಲ ಅಧ್ಯಾಯ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಮುಂದೆ ಇನ್ನೇನೆಲ್ಲಾ ಬಹಿರಂಗವಾಗಲಿವೆಯೋ' ಎಂದು ಸಿದ್ದರಾಮಯ್ಯ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ನೋಂದಣಿಯೇ ಆಗದ ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್‌ಗೆ ಕುಮಾರಸ್ವಾಮಿ 550 ಎಕರೆ ಮಂಜೂರು ಮಾಡಿದ್ದರು ಎಂದು 'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿದ್ದ ವರದಿಯನ್ನು ಸಿದ್ದರಾಮಯ್ಯ ತಮ್ಮ ಪೋಸ್ಟ್‌ನಲ್ಲಿ ಲಗತ್ತಿಸಿದ್ದಾರೆ. 'ಲೋಕಾಯುಕ್ತವೇ ತನಿಖೆ ನಡೆಸಿ ಆರೋಪಪಟ್ಟಿ ಸಲ್ಲಿಸಿದೆ. ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಡುವುದೊಂದೇ ಬಾಕಿ. ನರೇಂದ್ರ ಮೋದಿ ಬಂದು ನಿಮ್ಮನ್ನು ರಕ್ಷಿಸುತ್ತಾರೆಂದು ಕಾದು ಕೂತಿದ್ದೀರಾ? ತಮ್ಮ ಮುಖ್ಯಮಂತ್ರಿಯನ್ನೇ ಜೈಲಿಗೆ ಕಳಿಸಿದ್ದ ಬಿಜೆಪಿ ನಿಮ್ಮ ರಕ್ಷಣೆಗೆ ಬರುತ್ತದೆಯೇ' ಎಂದು ಲೇವಡಿ ಮಾಡಿದ್ದಾರೆ.

## 'ಅನುಮತಿ ನೀಡಬೇಕಿರುವುದು ರಾಷ್ಟ್ರಪತಿ'

**ಚಿಕ್ಕಮಗಳೂರು:** 'ಎಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ಸಚಿವರು, ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರುವುದು ರಾಜ್ಯಪಾಲರನ್ನಲ್ಲ, ರಾಷ್ಟ್ರಪತಿ ಅವರನ್ನು ಎಂಬುದೇ ಕಾಂಗ್ರೆಸ್‌ನವರಿಗೆ ಗೊತ್ತಿಲ್ಲ' ಎಂದು ವಿಧಾನ ಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡ ಲೇವಡಿ ಮಾಡಿದರು.

'ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾಗಿ ರಾಷ್ಟ್ರಪತಿ ಅವರಿಂದ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ರಾಜ್ಯಪಾಲರ ವ್ಯಾಪ್ತಿಯಲ್ಲಿ ಕುಮಾರಸ್ವಾಮಿ ಅವರು ಇಲ್ಲ. ಹೀಗಿರುವಾಗ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಅನುಮತಿ ನೀಡಲು ಸಾಧ್ಯವೇ' ಎಂದು ಪ್ರಶ್ನಿಸಿದರು.

'ಜತೆಗೆ ಈ ಪ್ರಕರಣದ ವಿಚಾರಣೆ ಹೈಕೋರ್ಟ್‌ನಲ್ಲಿ ಬಾಕಿ ಇದೆ. ಆದ್ದರಿಂದ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಲು ಕಾನೂನಿನಲ್ಲಿ ಅವಕಾಶ ಇಲ್ಲ ಎಂಬುದನ್ನು ಕಾಂಗ್ರೆಸ್‌ನವರು ಅರಿಯಬೇಕು' ಎಂದು ಹೇಳಿದರು.







**ಫಲಾಪೇಕ್ಷೆ...** ಕೊಪ್ಪಳದ ರಾಘವೇಂದ್ರಸ್ವಾಮಿಗಳ ಮಠದಲ್ಲಿ ಗುರುವಾರ ಆರಾಧನಾ ಮಹೋತ್ಸವದ ರಥೋತ್ಸವದ ವೇಳೆ ಭಕ್ತರೆಡೆಗೆ ಎಸೆದ ಫಲ ಹಿಡಿಯಲು ಮುಂದಾದ ಕೈಗಳು – ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

## ಮಂತ್ರಾಲಯ: ಅದ್ದೂರಿ ಮಹಾರಥೋತ್ಸವ

**ಮಂತ್ರಾಲಯ (ರಾಯಚೂರು):** ಶ್ರೀರಾಘವೇಂದ್ರ ಸ್ವಾಮಿಗಳ 353ನೇ ಆರಾಧಾನಾ ಮಹೋತ್ಸವ ಪ್ರಯುಕ್ತ ರಾಯರ ಉತ್ತರಾರಾಧನೆ ಹಾಗೂ ಮಹಾರಥೋತ್ಸವ ಗುರುವಾರ ಇಲ್ಲಿ ವಿಜೃಂಭಣೆಯಿಂದ ನಡೆಯಿತು.

ಶ್ರೀ ಮಠದ ಆವರಣದಿಂದ ಶ್ರೀ ಗುರುಸಾರ್ವಭೌಮ ವಿದ್ಯಾಪೀಠದ ಆವರಣದವರೆಗೆ ಶ್ರೀರಾಘವೇಂದ್ರ ಸ್ವಾಮಿಗಳ ಉತ್ಸವಮೂರ್ತಿಯ ಮೆರವಣಿಗೆ ಕಲಾ ತಂಡಗಳೊಂದಿಗೆ ನಡೆಯಿತು. ಪಂಡಿತರ ಅಷ್ಟೋತ್ತರ ಪಠಣದ ನಂತರ ಮಠಕ್ಕೆ ತಂದು ಮೂಲ ಬೃಂದಾವನಕ್ಕೆ ಪೂಜೆ ಸಲ್ಲಿಸಲಾಯಿತು. ನಂತರ ಮಹಾರಥೋತ್ಸವ ಜರುಗಿತು.

ರಥದ ಮೇಲೆಯೇ ನಿಂತು ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ಆಶೀರ್ವಚನ ನೀಡಿದರು ರಾಘವೇಂದ್ರ ಸ್ವಾಮಿಗಳ ಉತ್ತರಾರಾಧನೆ ಪ್ರಯುಕ್ತ ರಾಯರ ಮೂಲ ಬೃಂದಾವನಕ್ಕೆ ವಿಶೇಷ ನವರತ್ನ ಗಳನ್ನು ಒಳಗೊಂಡ ಚಿನ್ನಾಭರಣಗಳಿಂದ ಅಲಂಕಾರ ಮಾಡಲಾಗಿತ್ತು.

ಮೈಸೂರು ರಾಜಮನೆತನದ ವಂಶಸ್ಥ ಹಾಗೂ ಸಂಸದರೂ ಆದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಶ್ರೀಮಠದ ವತಿಯಿಂದ 'ಶ್ರೀರಾಘವೇಂದ್ರ ಅನುಗ್ರಹ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಪ್ರಶಸ್ತಿಯು ಸಮ್ಮಾನಪತ್ರ, ಸ್ಮರಣಿಕೆ, ನಗದು, ಶ್ರೀಫಲ ಹಾಗೂ ಮಂತ್ರಾಕ್ಷತೆ ಒಳಗೊಂಡಿದೆ.

ಮಂಗಳೂರಿನಲ್ಲಿ ಕರುನಾಡ ಸವಿಯೂಟ ಅಡುಗೆ ಸ್ಪರ್ಧೆ

# ಉಡುಪಿಯ ಪ್ರಿಯಾ ಪ್ರಥಮ

ಪ್ರಜಾವಾಣಿ ವಾರ್ತೆ

**ಮಂಗಳೂರು:** 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ಮತ್ತು 'ಫ್ರೀಡಂ ಕುಕ್ಕಿಂಗ್ ಆಯಿಲ್' ಸಹಯೋಗದಲ್ಲಿ ಗುರುವಾರ ಇಲ್ಲಿ ನಡೆದ 'ಕರುನಾಡ ಸವಿಯೂಟ' ಅಡುಗೆ ಸ್ಪರ್ಧೆಯಲ್ಲಿ ಉಡುಪಿಯ ಪ್ರಿಯಾ ನಾಯಕ್ ಪ್ರಥಮ ಸ್ಥಾನದೊಂದಿಗೆ ₹10 ಸಾವಿರ ನಗದು ಬಹುಮಾನವನ್ನು ತಮ್ಮದಾಗಿಸಿಕೊಂಡರು.

ಮಂಗಳೂರಿನ ಪ್ರವೀಣಾ ಹರೀಶ್ ದ್ವಿತೀಯ ಬಹುಮಾನ ₹7,000 ಹಾಗೂ ನಿಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಹಾಸ್ಪಿಟಾಲಿಟಿ ಸರ್ವಿಸಸ್‌ನ ವಿದ್ಯಾರ್ಥಿ ವಿನ್ಯಾಸ್ ತೃತೀಯ ಬಹುಮಾನ ₹5,000 ಗೆದ್ದುಕೊಂಡರು.

ಕಾವೂರು ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ವಿದ್ಯಾರ್ಥಿನಿ ಸೌಜನ್ಯಾ ಶೆಟ್ಟಿ, ಧನಲಕ್ಷ್ಮಿ ಜ್ಞಾನಶೇಖರ್, ವಿಮಲಾ ರಾಜು ಹಾಗೂ ಅತ್ಯಂತ ಹಿರಿಯ ಸ್ಪರ್ಧಿ, 87 ವರ್ಷದ ರಾಧಾ ಪ್ರಭು ಸಮಾಧಾನಕರ ಬಹುಮಾನಕ್ಕೆ ಪಾತ್ರರಾದರು.

ಮೀನು ಖಾದ್ಯಗಳು, ಕೆಸುವಿನ ಎಲೆಯ ಪತ್ರೊಡೆ ಸೇರಿದಂತೆ ಕರಾವಳಿಯ ಸೊಗಡಿನ ಅಡುಗೆಗಳು ಎಲ್ಲರ ಮೆಚ್ಚುಗೆ ಪಡೆದವು.

ಸ್ಪರ್ಧಿಗಳು ಸಸ್ಯಾಹಾರಿ ಮತ್ತು ಮಾಂಸಾಹಾರಿ ಅಡುಗೆಗಳನ್ನು ಮನೆಯಲ್ಲೇ ತಯಾರಿಸಿ ತಂದಿದ್ದರು. 'ಒಗ್ಗರಣೆ ಡಬ್ಬಿ' ಖ್ಯಾತಿಯ ಮುರಳಿ ಮತ್ತು ಸುಚಿತ್ರಾ ಅವರು ಎಲ್ಲ ಸ್ಪರ್ಧಿಗಳು ತಂದಿದ್ದ ತಿನಿಸಿನ ರುಚಿ ಸವಿದು, ಬಹುಮಾನ ಪ್ರಕಟಿಸಿದರು.

ಸ್ಪರ್ಧೆಗೆ ಶ್ರೀಕೃಷ್ಣ ಶುದ್ಧ ಹಳ್ಳಿತುಪ್ಪ, ಇಂಡೇನ್ ಗ್ಯಾಸ್, ಎಕ್ಸೊ ಸಂಸ್ಥೆ, ಕರ್ನಾಟಕ ರಾಜ್ಯ ಕೃಷಿ ಇಲಾಖೆ, ಫಿಲಿಪ್ಸ್ ಅಪ್ಲೈಯನ್ಸಸ್, ಪ್ರೀತಿ ಕಿಚನ್ ಅಪ್ಲೈಯನ್ಸಸ್, ಎಸ್‌ಎಸ್‌ಪಿ ಹಿಂಗ್, ವೆಂಕೋಬ್ ಚಿಕನ್, ಇಂಡಿಯಾ ಗೇಟ್ ಬಾಸುಮತಿ ರೈಸ್ , ಸುಜಯ್ ಇರಿಗೇಷನ್ ಪ್ರೈವೇಟ್ ಲಿಮಿಟೆಡ್ ಸಹಯೋಗ ನೀಡಿದ್ದವು.





ಮಂಗಳೂರಿನಲ್ಲಿ ಗುರುವಾರ ನಡೆದ 'ಕರುನಾಡು ಸವಿಯೂಟ' 3ನೇ ಆವೃತ್ತಿಯ ಸ್ಪರ್ಧೆಯಲ್ಲಿ ವಿಜೇತರಾದ ಪ್ರಿಯಾ ನಾಯಕ್ (ಪ್ರಥಮ), ಪ್ರವೀಣಾ ಹರೀಶ್ (ದ್ವಿತೀಯ), ವಿನ್ಯಾಸ್ (ತೃತೀಯ) ಅವರಿಗೆ ಮುರಳಿ, ನಟಿ ಅದ್ವಿತಿ ಶೆಟ್ಟಿ ಹಾಗೂ ಸುಚಿತ್ರಾ ಬಹುಮಾನ ವಿತರಿಸಿದರು – ಪ್ರಜಾವಾಣಿ ಚಿತ್ರ

## ಜಯದೇವದಲ್ಲಿ ನೌಕರಿ ಆಮಿಷ 110 ಜನರಿಗೆ ₹ 70 ಲಕ್ಷ ವಂಚನೆ

• ಮಲ್ಲಿಕಾರ್ಜುನ ನಾಲವಾರ

**ಕಲಬುರಗಿ:** ಇಲ್ಲಿನ ಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆಯಲ್ಲಿ 'ಡಿ', 'ಸಿ' ದರ್ಜೆಯ ಕೆಲಸ ಕೊಡಿಸುವ ಆಮಿಷವೊಡ್ಡಿ 110ಕ್ಕೂ ಹೆಚ್ಚು ಜನರಿಂದ ಸುಮಾರು ₹70 ಲಕ್ಷ ಪಡೆದು ವಂಚಿಸಿರುವುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ವಂಚನೆ ಆರೋಪದಲ್ಲಿ ಕಿರಾಣಿ ಅಂಗಡಿ ವ್ಯಾಪಾರಿ ಸಂತೋಷ ಕುಮಾರ, ರಾಜಶೇಖರ್ ಶಿವಪ್ಪ ವಿರುದ್ಧ ಸೈಬರ್, ಆರ್ಥಿಕ ಮತ್ತು ಮಾದಕವಸ್ತು ತಡೆ (ಸೆನ್) ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಇಬ್ಬರನ್ನು ಬಂಧಿಸಿ ವಿಚಾರಣೆ ನಡೆಸಿದ್ದು, ಲಭ್ಯ ಮಾಹಿತಿ ಆಧರಿಸಿ, ಮತ್ತೆ ಮೂವರನ್ನು ಬಂಧಿಸಲಾಗಿತ್ತು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಆಸ್ಪತ್ರೆಯ ನಿರ್ಮಾಣ ಕಾಮಗಾರಿ ಕೊನೆ ಹಂತ ತಲುಪಿದೆ. ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ ಎಂದು ಆರೋಪಿಗಳು, ಉದ್ಯೋಗಾಕಾಂಕ್ಷಿಗಳನ್ನು ನಂಬಿಸಿದ್ದರು. ಕಂಪ್ಯೂಟರ್ ಆಪರೇಟರ್, ಸೂಪರ್‌ವೈಸರ್, ಡಾಟಾ ಎಂಟ್ರಿ ಆಪರೇಟರ್, ನರ್ಸಿಂಗ್ ಹುದ್ದೆಗಳ ಆಮಿಷವೊಡ್ಡಿದ್ದರು. ಪ್ರತಿಯೊಬ್ಬರಿಂದ ಸುಮಾರು ₹ 60 ಸಾವಿರ ಕಮಿಷನ್ ಪಡೆದಿದ್ದರು ಎಂದು ಅವರು ಮಾಹಿತಿ ನೀಡಿದರು.

ಆಮಿಷಕ್ಕೆ ಒಳಗಾಗಿ, 110ಕ್ಕೂ ಹೆಚ್ಚು ಜನರು ಆರೋಪಿಗಳಿಗೆ ಹಣ ಕೊಟ್ಟಿದ್ದಾರೆ. ಅದರ ಮೊತ್ತ ₹70 ಲಕ್ಷದಷ್ಟಿದೆ. ಪ್ರಕರಣದಲ್ಲಿ ಇನ್ನಷ್ಟು ಮಂದಿ ಭಾಗಿಯಾಗಿರುವ ಶಂಕೆಯಿದ್ದು, ತನಿಖೆ ನಡೆದಿದೆ ಎಂದರು. ಬಂಧಿತರಾಗಿದ್ದ ಐವರೂ ಜಾಮೀನು ಪಡೆದು ಹೊರಬಂದಿದ್ದಾರೆ ಎಂದರು.

**ಪ್ರಕರಣ ಬೆಳಕಿಗೆ ಬಂದಿದ್ದು ಹೇಗೆ?:** ವಂಚನೆಗೆ ಒಳಗಾಗಿದ್ದ ಸಂದೀಪ್, ಮಲ್ಲಿಕಾರ್ಜುನ ಲಕ್ಷ್ಮಿಕಾಂತ್ ಹಾಗೂ ಅಶೋಕ ರಾಠೋಡ್ ಅವರು ಆರೋಪಿಗಳು ನೀಡಿದ್ದ 'ದಿಕ್ಷಾ ಪ್ಲೇಸ್‌ಮೆಂಟ್ ಆ್ಯಂಡ್ ಕನ್ಸಲ್ಟಂಟ್ ದಿ ಕ್ವಿಕರ್ ಜಾಬ್ ಎವರ್' ಶೀರ್ಷಿಕೆಯ ಲೆಟರ್ ಹೆಡ್ ಹಿಡಿದು 2024ರ ಮಾ.16ರಂದು ಆಸ್ಪತ್ರೆಗೆ ಬಂದಿದ್ದರು. ಆಗ ವಂಚನೆ ಗೊತ್ತಾಗಿದ್ದು, 'ಸೆನ್' ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.




ಕಲಬುರಗಿಯಲ್ಲಿ ನಿರ್ಮಾಣ ಹಂತದ ಜಯದೇವ ಆಸ್ಪತ್ರೆ ಕಟ್ಟಡ

ಬ್ಯಾಂಕ್ ಖಾತೆಗೆ ₹1.25 ಕೋಟಿ ಜಮೆ: ಐಐಎಸ್‌ಸಿ ಉದ್ಯೋಗಿ ಆರ್‌.ಮಂಜುಳಾ

# ಭೋವಿ ನಿಗಮ: ಮಾಜಿ ಎಂ.ಡಿಯ ತಂಗಿ ಸೆರೆ

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ₹87 ಕೋಟಿ ಅಕ್ರಮ ಪ್ರಕರಣದಲ್ಲಿ ಮತ್ತೊಬ್ಬ ಆರೋಪಿಯನ್ನು ಸಿಐಡಿ ಪೊಲೀಸರು ಬಂಧಿಸಿದ್ದು, ಬಂಧಿತರ ಸಂಖ್ಯೆ ಎರಡಕ್ಕೇರಿದೆ.

ನಿಗಮದ ಮಾಜಿ ವ್ಯವಸ್ಥಾಪಕ ನಿರ್ದೇಶಕಿ ಆರ್. ಲೀಲಾವತಿ ಅವರ ತಂಗಿ, ಭಾರತೀಯ ವಿಜ್ಞಾನ ಸಂಸ್ಥೆಯ(ಐಐಎಸ್‌ಸಿ) ಉದ್ಯೋಗಿ ಆರ್. ಮಂಜುಳಾ ಬಂಧಿತರು.

ಕಳೆದ ವಾರ ಕಾರ್ಯಾಚರಣೆ ನಡೆಸಿದ ತನಿಖಾಧಿಕಾರಿಗಳು ಆರೋಪಿಯನ್ನು ಬಂಧಿಸಿದ್ದರು. ಮಂಜುಳಾ ಅವರು ಸದ್ಯ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿ ಇದ್ದಾರೆ. ಮಹಾಲಕ್ಷ್ಮೀಪುರದ ಭೋವಿಪಾಳ್ಯದ ಕಚೇರಿ ಅಧೀಕ್ಷಕ ಸುಬ್ಬಪ್ಪ ಅವರನ್ನು ಈ ಪ್ರಕರಣದಲ್ಲಿ ಹಿಂದೆ ಬಂಧಿಸಲಾಗಿತ್ತು.

'ನಿಗಮದಲ್ಲಿ ನಡೆದ ಅಕ್ರಮದಲ್ಲಿ ಬಂದ ಹಣದ ಪೈಕಿ 1.25 ಕೋಟಿಯನ್ನು ಮಂಜುಳಾ ಅವರು ಸಹೋದರಿಯ ಪರವಾಗಿ ಪಡೆದುಕೊಂಡಿದ್ದರು. ಬ್ಯಾಂಕ್ ಖಾತೆಗೆ ಹಣ ವರ್ಗಾವಣೆಗೊಂಡಿತ್ತು. ಆರೋಪಿಗಳ ಬ್ಯಾಂಕ್‌ಗಳನ್ನು ಪರಿಶೀಲಿಸಿದಾಗ ಅಕ್ರಮ ಪತ್ತೆ ಆಯಿತು' ಎಂದು ಪೊಲೀಸರು ಹೇಳಿದರು.

'ಐಐಎಸ್‌ಸಿಯಲ್ಲಿ ಆರ್. ಮಂಜುಳಾ ಉನ್ನತ ಹುದ್ದೆಯಲ್ಲಿದ್ದಾರೆ. ಲೀಲಾವತಿ ಅವರು ಮಂಜುಳಾ ಅವರಿಗೆ ಹಿರಿಯ ಅಕ್ಕ. 2021–22ನೇ ಸಾಲಿನಲ್ಲಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಹುದ್ದೆಯಲ್ಲಿದ್ದ ಲೀಲಾವತಿ ಅವರು ಅಕ್ರಮದ ಹಣದಲ್ಲಿ ಬಂದ ಸ್ವಲ್ಪ ಪಾಲನ್ನು ಇವರ ಖಾತೆಗೂ ಹಾಕಿಸಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಸಾಲ ಮಂಜೂರಾತಿ ನೆಪದಲ್ಲಿ ನಕಲಿ ದಾಖಲೆ ಸೃಷ್ಟಿಸಿ ಹನ್ಸಿಕಾ ಎಂಟರ್‌ಪ್ರೈಸಸ್, ನ್ಯೂ ಡ್ರೀಮ್ಸ್ ಎಂಟರ್‌ಪ್ರೈಸಸ್, ಹರ್ನಿತಾ ಕ್ರಿಯೇಷನ್ಸ್ ಹಾಗೂ ಸೋಮನಾಥೇಶ್ವರ ಎಂಟರ್‌ಪ್ರೈಸಸ್‌ಗಳಿಗೆ ನಿಗಮದ ಹಣ ವರ್ಗಾವಣೆ ಮಾಡಲಾಗಿತ್ತು. ಈ ಕಂಪನಿಗಳ ಖಾತೆಯಿಂದ ಮಂಜುಳಾ ಅವರ ಖಾತೆಗೆ ಹಂತ ಹಂತವಾಗಿ ಹಣ ವರ್ಗಾವಣೆ ಆಗಿದೆ. ಕಂಪನಿಗಳ ಜೊತೆಗೆ ಬಂಧಿತ ಆರೋಪಿಗೆ ಯಾವುದೇ ಆರ್ಥಿಕ ವ್ಯವಹಾರ ಇರುವುದು ಪತ್ತೆಯಾಗಿಲ್ಲ. ಲೀಲಾವತಿ ಸೂಚನೆ ಮೇರೆಗೆ ಮಂಜುಳಾ ಖಾತೆಗೂ ಹಣ ಹಾಕಲಾಗಿದೆ ಎಂಬುದು ತನಿಖೆಯಿಂದ ಗೊತ್ತಾಗಿದೆ. ಬಂಧನದ ಭೀತಿಯಿಂದ ಆರೋಪಿನ್ಯಾಯಾಲಯದ ಮೊರೆ ಹೋಗಿದ್ದರು. ನಿರೀಕ್ಷಣಾ ಜಾಮೀನು ಕೋರಿದ್ದ ಅರ್ಜಿ ನ್ಯಾಯಾಲಯದಲ್ಲಿ ವಜಾಗೊಂಡ ಬಳಿಕ ಬಂಧಿಸಲಾಯಿತು' ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ಲೀಲಾವತಿ ಮತ್ತು ನಿಗಮದ ಮಾಜಿ ಪ್ರಧಾನ ವ್ಯವಸ್ಥಾಪಕ ಬಿ.ಕೆ. ನಾಗರಾಜಪ್ಪ ತಲೆಮರೆಸಿಕೊಂಡಿದ್ದು, ಪತ್ತೆಗೆ ಶೋಧ ಮುಂದುವರೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಅತ್ಯಾಚಾರ, ಹತ್ಯೆ ಪ್ರಕರಣ: ಎಫ್‌ಐಆರ್ ದಾಖಲು ವಿಳಂಬವಾಗಿದ್ದಕ್ಕೆ ಕಾರಣ ಕೇಳಿದ ಸುಪ್ರೀಂ ಕೋರ್ಟ್

# ಕೋಲ್ಕತ್ತ ಪೊಲೀಸರಿಗೆ ಕೋರ್ಟ್ ಛೀಮಾರಿ

ನವದೆಹಲಿ (ಪಿಟಿಐ): ಕೋಲ್ಕತ್ತದ ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ನಡೆದ ವೈದ್ಯ ವಿದ್ಯಾರ್ಥಿನಿಯ ಮೇಲಿನ ಅತ್ಯಾಚಾರ ಹಾಗೂ ಹತ್ಯೆಯ ವಿಚಾರ ತಿಳಿದ ನಂತರ ಎಫ್‌ಐಆರ್ ದಾಖಲಿಸಿಕೊಳ್ಳುವಲ್ಲಿ ವಿಳಂಬ ಮಾಡಿದ್ದಕ್ಕಾಗಿ ಕೋಲ್ಕತ್ತ ಪೊಲೀಸರಿಗೆ ಸುಪ್ರೀಂ ಕೋರ್ಟ್ ಗುರುವಾರ ಛೀಮಾರಿ ಹಾಕಿದೆ.

ಈ ಘಟನೆಯು ತೀರಾ ತಲ್ಲಣಗೊಳಿಸುವಂಥದ್ದು ಎಂದು ಕೋರ್ಟ್ ಹೇಳಿದೆ. ಪೊಲೀಸರು ನಡೆಸಿದ ತನಿಖೆಯಲ್ಲಿ ಲೋಪಗಳು ಇದ್ದವು ಎಂಬ ಮಾತನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ಹೇಳಿದೆ. ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರೂ ಈ ಪೀಠದಲ್ಲಿದ್ದಾರೆ.

ಈ ಅತ್ಯಾಚಾರ ಮತ್ತು ಹತ್ಯೆ ಕುರಿತು ಸ್ವಯಂಪ್ರೇರಿತವಾಗಿ ದಾಖಲು ಮಾಡಿಕೊಂಡಿರುವ ಪ್ರಕರಣದ ವಿಚಾರಣೆ ನಡೆಸಿದ ಪೀಠವು, ಎಫ್‌ಐಆರ್ ದಾಖಲು ಮಾಡಿಕೊಳ್ಳುವಲ್ಲಿ 14 ತಾಸುಗಳ ವಿಳಂಬ ಆಗಿದ್ದಕ್ಕೆ, ಆ ವಿಳಂಬಕ್ಕೆ ವಿವರಣೆ ನೀಡದಿರುವುದಕ್ಕೆ ಪೊಲೀಸರನ್ನು ತರಾಟೆಗೆ ತೆಗೆದುಕೊಂಡಿತು.

ಅಲ್ಲದೆ, ಅಸಹಜ ಸಾವು ಎಂಬ ಪ್ರಕರಣ ದಾಖಲಿಸಿಕೊಳ್ಳುವ ಮೊದಲೇ ಮೃತದೇಹದ ಮರಣೋತ್ತರ ಪರೀಕ್ಷೆಯನ್ನು ಆಗಸ್ಟ್ 9ರಂದು ಸಂಜೆ 6.10ರಿಂದ 7.10ರ ನಡುವೆ ನಡೆಸಿದ್ದಕ್ಕೆ ಅಸಮಾಧಾನ ವ್ಯಕ್ತಪಡಿಸಿತು.

‘ಮರಣೋತ್ತರ ಪರೀಕ್ಷೆಯನ್ನು ಆಗಸ್ಟ್ 9ರ ಸಂಜೆ 6.10ಕ್ಕೆ ನಡೆಸಿದ್ದರೂ, ತಾಲಾ ಪೊಲೀಸ್ ಠಾಣೆಗೆ ರಾತ್ರಿ 11.30ಕ್ಕೆ ಅಸಹಜ ಸಾವು ಕುರಿತ ಮಾಹಿತಿ ರವಾನಿಸಿದ್ದು ಹೇಗೆ? ಇದು ಮನಸ್ಸನ್ನು ಬಹಳವಾಗಿ ಕಲಕುವಂಥದ್ದು’ ಎಂದು ಪೀಠವು ಹೇಳಿತು.

ತನಿಖೆಯ ಸಂದರ್ಭದಲ್ಲಿ ಅಸಡ್ಡೆ ತೋರಲಾಗಿದೆ ಎಂಬುದರತ್ತ ಬೊಟ್ಟು ಮಾಡಿದ ನ್ಯಾಯಮೂರ್ತಿ ಪಾರ್ದೀವಾಲಾ ಅವರು, ‘ನೀವು ಮರಣೋತ್ತರ ಪರೀಕ್ಷೆ ಆರಂಭಿಸುತ್ತೀರಿ ಎಂದಾದರೆ ಅದು ಅಸಹಜ ಸಾವು ಎಂದೇ ಅರ್ಥ. ಹೀಗಿದ್ದರೂ, ಅಸಹಜ ಸಾವು ಪ್ರಕರಣವನ್ನು ಮರಣೋತ್ತರ ಪರೀಕ್ಷೆ ನಡೆಸಿದ ನಂತರದಲ್ಲಿ ರಾತ್ರಿ 11.30ಕ್ಕೆ ದಾಖಲಿಸಿಕೊಳ್ಳಲಾಗಿದೆ, ನಂತರ 11.45ಕ್ಕೆ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದರು.

‘ಮೃತದೇಹ ಕಂಡ ಸರಿಸುಮಾರು 14 ಗಂಟೆಗಳ ನಂತರದಲ್ಲಿ ಎಫ್‌ಐಆರ್ ದಾಖಲು ಮಾಡಿಕೊಂಡಿದ್ದಕ್ಕೆ ಕಾರಣ ಏನು? ಇಲ್ಲಿ ಬಹುಮುಖ್ಯವಾದ ಸಂಗತಿಯೆಂದರೆ ಕಾಲೇಜಿನ ಪ್ರಾಂಶುಪಾಲರು ಕಾಲೇಜಿಗೆ ನೇರವಾಗಿ ಬರಬೇಕಿತ್ತು, ಎಫ್‌ಐಆರ್ ದಾಖಲಿಸಲು ನಿರ್ದೇಶನ ನೀಡಬೇಕಿತ್ತು. ಅವರು ಯಾರ ಜೊತೆ ಸಂಪರ್ಕದಲ್ಲಿದ್ದರು? ಅದರ ಉದ್ದೇಶ ಏನು?’ ಎಂದು ನ್ಯಾಯಪೀಠವು ಪಶ್ಚಿಮ ಬಂಗಾಳ ಸರ್ಕಾರದ ಪರ ವಕೀಲ ಕಪಿಲ್ ಸಿಬಲ್ ಅವರನ್ನು ಪ್ರಶ್ನಿಸಿತು.

## ಸುರಕ್ಷತೆಗೆ ನಿರ್ದೇಶನ



- ವೈದ್ಯರ ಸುರಕ್ಷೆಗೆ, ಪ್ರತಿಭಟನೆಯ ವೇಳೆ ಪಾಲಿಸಬೇಕಿರುವ ನಿಯಮಗಳ ಕುರಿತು, ಪ್ರತಿಭಟನಕಾರರ ಹಕ್ಕುಗಳ ಬಗ್ಗೆ ಹಲವು ನಿರ್ದೇಶನಗಳನ್ನು ಪೀಠವು ನೀಡಿದೆ:
- ಆರೋಗ್ಯಸೇವೆ ಒದಗಿಸುವ ವೃತ್ತಿನಿರತರ ಸುರಕ್ಷತೆ ಖಾತರಿಪಡಿಸಲು ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿಯು ರಾಜ್ಯಗಳ ಮುಖ್ಯ ಕಾರ್ಯದರ್ಶಿ ಹಾಗೂ ಡಿಜಿಪಿ ಜೊತೆ ಮಾತುಕತೆ ನಡೆಸಬೇಕು. ಈ ಪ್ರಕ್ರಿಯೆಯು ವಾರದಲ್ಲಿ ಪೂರ್ಣಗೊಳ್ಳಬೇಕು.
- ಅಪರಾಧ ನಡೆದ ಬಗ್ಗೆ ಮೊದಲ ಮಾಹಿತಿ ಪಡೆದ ಪೊಲೀಸ್ ಅಧಿಕಾರಿಯು ಸೆಪ್ಟೆಂಬರ್ 5ರಂದು ಕೋರ್ಟ್‌ನಲ್ಲಿ ಹಾಜರಿರಬೇಕು ಹಾಗೂ ಮಾಹಿತಿ ದೊರೆತ ಸಮಯದ ಬಗ್ಗೆ ತಿಳಿಸಬೇಕು.
- ಕೋಲ್ಕತ್ತದಲ್ಲಿ ನಡೆದ ಘಟನೆ ಕುರಿತಾಗಿ ನಡೆಯುತ್ತಿರುವ ಶಾಂತಿಯುತ ಪ್ರತಿಭಟನೆಗಳಿಗೆ ಪಶ್ಚಿಮ ಬಂಗಾಳ ಸರ್ಕಾರವು ಅಡ್ಡಿ ಉಂಟುಮಾಡಬಾರದು.
- ರಾಷ್ಟ್ರೀಯ ಕಾರ್ಯಪಡೆಗೆ ಅಗತ್ಯ ಸಲಹೆ ನೀಡಲು ಸಾಧ್ಯವಾಗುವಂತೆ ಪೋರ್ಟಲ್ ಒಂದನ್ನು ಕೇಂದ್ರ ಆರೋಗ್ಯ ಸಚಿವಾಲಯವು ರೂಪಿಸಬೇಕು.

## ಮುಷ್ಕರ ಹಿಂಪಡೆದ ವೈದ್ಯರು

ನವದೆಹಲಿ (ಪಿಟಿಐ): ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಹಾಗೂ ಆಕೆಯ ಹತ್ಯೆಯನ್ನು ಖಂಡಿಸಿ 11 ದಿನಗಳಿಂದ ನಡೆಸುತ್ತಿದ್ದ ಮುಷ್ಕರವನ್ನು ಕೈಬಿಟ್ಟಿರುವುದಾಗಿ ದೆಹಲಿಯ ಏಮ್ಸ್ ಮತ್ತು ಆರ್‌ಎಂಎಲ್ ಆಸ್ಪತ್ರೆಯ ಸ್ಥಾನಿಕ ವೈದ್ಯರು ಗುರುವಾರ ಹೇಳಿದ್ದಾರೆ.

ಮುಷ್ಕರ ಕೈಬಿಡುವಂತೆ ಸುಪ್ರೀಂ ಕೋರ್ಟ್ ಮನವಿ ಮಾಡಿದ ಪರಿಣಾಮವಾಗಿ ವೈದ್ಯರು ಈ ತೀರ್ಮಾನ ಪ್ರಕಟಿಸಿದ್ದಾರೆ. ಮುಷ್ಕರವನ್ನು ಕೈಬಿಡಬೇಕು, ಕರ್ತವ್ಯಕ್ಕೆ ಮರಳಬೇಕು, ಕೆಲಸಕ್ಕೆ ಹಾಜರಾದ ನಂತರದಲ್ಲಿ ಯಾವುದೇ ಶಿಸ್ತುಕ್ರಮ ಜರುಗಿಸುವುದಿಲ್ಲ ಎಂದು ಕೋರ್ಟ್ ಹೇಳಿತ್ತು.




ವೈದ್ಯ ವಿದ್ಯಾರ್ಥಿನಿ ಅತ್ಯಾಚಾರ, ಕೊಲೆ ಖಂಡಿಸಿ ಸಂಘಟನೆಯೊಂದರ ಸದಸ್ಯರು ಗುರುವಾರ ಕೋಲ್ಕತ್ತದಲ್ಲಿ ಮೆರವಣಿಗೆ ನಡೆಸಿದರು –ಪಿಟಿಐ ಚಿತ್ರ

## ಪ್ರಕರಣ ಮುಚ್ಚಿಹಾಕುವ ಯತ್ನ: ಸಿಬಿಐ ಆರೋಪ

ಕೋಲ್ಕತ್ತದ ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ನಡೆದ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಹಾಗೂ ಆಕೆಯ ಹತ್ಯೆ ಪ್ರಕರಣವನ್ನು ಮುಚ್ಚಿಹಾಕುವ ಯತ್ನವು ಸ್ಥಳೀಯ ಪೊಲೀಸರಿಂದ ನಡೆದಿದೆ ಎಂದು ಸಿಬಿಐ ಸುಪ್ರೀಂ ಕೋರ್ಟ್‌ನಲ್ಲಿ ಗುರುವಾರ ಆರೋಪಿಸಿದೆ.

ಅಪರಾಧ ಕೃತ್ಯ ನಡೆದ ಸ್ಥಳದಲ್ಲಿನ ಚಿತ್ರಣವನ್ನು ತಾನು ತನಿಖೆಯ ಹೊಣೆ ವಹಿಸಿಕೊಳ್ಳುವ ಹೊತ್ತಿಗಾಗಲೇ ಬದಲಿಸಲಾಗಿದೆ ಎಂದು ಕೂಡ ಸಿಬಿಐ, ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಸಿಬಿಐ ಪರವಾಗಿ ಕೋರ್ಟ್‌ಗೆ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ.ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ಪೀಠಕ್ಕೆ ಈ ಮಾಹಿತಿ ನೀಡಿದರು.

ವಿಡಿಯೊ ಚಿತ್ರೀಕರಣ ಆಗಬೇಕು ಎಂದು ಆಸ್ಪತ್ರೆಯ ಹಿರಿಯ ವೈದ್ಯರು ಹಾಗೂ ವಿದ್ಯಾರ್ಥಿನಿಯ ಸಹಪಾಠಿಗಳು ಒತ್ತಾಯಿಸಿದ್ದರು. ಅಂದರೆ, ಮುಚ್ಚಿಹಾಕುವ ಯತ್ನ ನಡೆದಿದೆ ಎಂಬುದು ಅವರ ಅರಿವಿಗೂ ಬಂದಿತ್ತು ಎಂದು ಮೆಹ್ತಾ ವಿವರಿಸಿದರು.

‘ಐದನೆಯ ದಿನ ನಾವು ತನಿಖೆ ಶುರು ಮಾಡಿದೆವು. ಸ್ಥಳೀಯ ಪೊಲೀಸರು ಅದಕ್ಕೂ ಮೊದಲು ಸಂಗ್ರಹಿಸಿದ್ದನ್ನೆಲ್ಲ ನಮಗೆ ಕೊಡಲಾಯಿತು. ತನಿಖೆಯೇ ಒಂದು ಸವಾಲಾಗಿತ್ತು. ಏಕೆಂದರೆ ಅಪರಾಧ ನಡೆದ ಸ್ಥಳದಲ್ಲಿನ ಚಿತ್ರಣವನ್ನೇ ಬದಲಾಯಿಸಲಾಗಿತ್ತು. ಸಂತ್ರಸ್ತೆಯ ಮೃತದೇಹದ ಅಂತ್ಯಸಂಸ್ಕಾರ ನಡೆದ ನಂತರ ಎಫ್‌ಐಆರ್ ದಾಖಲಿಸಲಾಗಿದೆ’ ಎಂದು ಮೆಹ್ತಾ ಹೇಳಿದರು.

‘ಆಸ್ಪತ್ರೆಯ ಉಪ ಸೂಪರಿಂಟೆಂಡೆಂಟ್ ಅವರು ಸಂತ್ರಸ್ತೆಯ ಪಾಲಕರಿಗೆ ಮೊದಲಿಗೆ, ಆಕೆಗೆ ಹುಷಾರಿಲ್ಲ ಎಂದು ತಿಳಿಸಿದ್ದರು. ಪಾಲಕರು ಆಸ್ಪತ್ರೆಯನ್ನು ತಲುಪಿದಾಗ, ಆಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಅವರಿಗೆ ಹೇಳಲಾಯಿತು...’ ಎಂದರು. ಈ ಪೀಠದಲ್ಲಿ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರೂ ಇದ್ದಾರೆ.

ಆಗಸ್ಟ್ 9ರ ಬೆಳಿಗ್ಗೆ ತಾಲಾ ಪೊಲೀಸ್ ಠಾಣೆಗೆ ಕರೆ ಮಾಡಿದಾಗ, ಸಂತ್ರಸ್ತೆಯು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಾಳೆ ಎಂದು ವೈದ್ಯರು ಪೊಲೀಸರಿಗೆ ಹೇಳಿದ್ದರು. ಆದರೆ ಆ ಹೊತ್ತಿಗಾಗಲೇ ಆಕೆ ಮೃತಪಟ್ಟಿದ್ದಳು ಎಂದೂ ಮೆಹ್ತಾ ಹೇಳಿದರು.

## ‘ಅತ್ಯಾಚಾರ: ಪ್ರಬಲ ಕಾಯ್ದೆ ತನ್ನಿ’

ಪ್ರಜಾವಾಣಿ ವಾರ್ತೆ



ಮಮತಾ ಬ್ಯಾನರ್ಜಿ

ಕೋಲ್ಕತ್ತ: ಅತ್ಯಾಚಾರ ಸೇರಿದಂತೆ ಮಹಿಳೆಯರ ಮೇಲಿನ ದೌರ್ಜನ್ಯಗಳಿಗೆ ಕಡಿವಾಣ ಹಾಕುವುದಕ್ಕೆ ಕೇಂದ್ರ ಸರ್ಕಾರ ಕಠಿಣ ಕಾನೂನು ರೂಪಿಸಬೇಕು ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಗುರುವಾರ ಒತ್ತಾಯಿಸಿದ್ದಾರೆ. ಈ ಕುರಿತು ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

ಕೋಲ್ಕತ್ತದ ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಹಾಗೂ ಕೊಲೆ ಖಂಡಿಸಿ ವ್ಯಾಪಕ ಪ್ರತಿಭಟನೆ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿಯೇ ಮಮತಾ ಬ್ಯಾನರ್ಜಿ ಅವರು ಪ್ರಧಾನಿಗೆ ಪತ್ರ ಬರೆದಿದ್ದಾರೆ.

ಆದರೆ, ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಹಾಗೂ ಕೊಲೆ ಕುರಿತು ಈ ಪತ್ರದಲ್ಲಿ ಉಲ್ಲೇಖಿಸಿಲ್ಲ.

## ಸುಳ್ಳು ಪತ್ತೆ ಪರೀಕ್ಷೆಗೆ ಅನುಮತಿ

ನವದೆಹಲಿ (ಪಿಟಿಐ): ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರ್.ಜಿ ಕರ್ ವೈದ್ಯಕೀಯ ಕಾಲೇಜಿನ (ಆರ್‌ಜಿಕೆಎಂಸಿಎಚ್) ಮಾಜಿ ಪ್ರಾಂಶುಪಾಲ ಸಂದೀಪ್ ಘೋಷ್ ಹಾಗೂ ಇತರ ನಾಲ್ವರು ವೈದ್ಯರನ್ನು ಸುಳ್ಳು ಪತ್ತೆ ಪರೀಕ್ಷೆಗೆ ಒಳಪಡಿಸಲು ವಿಶೇಷ ನ್ಯಾಯಾಲಯ, ಸಿಬಿಐ ಅಧಿಕಾರಿಗಳಿಗೆ ಅನುಮತಿ ನೀಡಿದೆ.

ಸಿಬಿಐ ಅಧಿಕಾರಿಗಳು ಘೋಷ್ ಹಾಗೂ ಹಾಗೂ ಘಟನೆ ನಡೆದ ದಿನ (ಆಗಸ್ಟ್ 9) ಕರ್ತವ್ಯದಲ್ಲಿದ್ದ ನಾಲ್ವರು ವೈದ್ಯರನ್ನು ಗುರುವಾರ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಿ ಅನುಮತಿ ಕೋರಿದರು. ಸಿಬಿಐ ಮನವಿಯನ್ನು ವಿಶೇಷ ನ್ಯಾಯಾಲಯ ಪರಿಗಣಿಸಿತು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

**ಮೂವರು ಅಧಿಕಾರಿಗಳು ವರ್ಗಾವಣೆ:** ಪ್ರತಿಭಟನೆ ನಡೆಸುತ್ತಿರುವ ಕಿರಿಯ ವೈದ್ಯರ ಬೇಡಿಕೆಗೆ ಮಣಿದಿರುವ ಪಶ್ಚಿಮ ಬಂಗಾಳ ಸರ್ಕಾರ, ಆರ್.ಜಿ ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಮೂವರು ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದಾರೆ. ಅದೇ ರೀತಿ ಕಾಲೇಜಿನ ಮಾಜಿ ಪ್ರಾಂಶುಪಾಲ ಘೋಷ್ ಅವರನ್ನು ಕಲ್ಕತ್ತ ನ್ಯಾಷನಲ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಪ್ರಾಂಶುಪಾಲರ ಹುದ್ದೆಯಿಂದಲೂ ವಜಾಗೊಳಿಸಲಾಗಿದೆ ಎಂದು ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ಎನ್.ಎಸ್.ನಿಗಮ್ ಗುರುವಾರ ಹೇಳಿದ್ದಾರೆ.

### ‘50 ದಿನಗಳ ಒಳಗೆ ಶಿಕ್ಷೆ ಪ್ರಕಟಿಸಲಿ’

ಕೋಲ್ಕತ್ತ (ಪಿಟಿಐ): ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ 50 ದಿನಗಳೊಳಗೆ ವಿಚಾರಣೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವ ಕಾನೂನು ಜಾರಿಯಾಗಲಿ ಎಂದು ಟಿಎಂಸಿ ನಾಯಕ ಅಭಿಷೇಕ್ ಬ್ಯಾನರ್ಜಿ ಒತ್ತಾಯಿಸಿದ್ದಾರೆ.

‘ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರ ಪ್ರಕರಣಗಳಲ್ಲಿ 50 ದಿನಗಳೊಳಗೆ ವಿಚಾರಣೆ ಪೂರ್ಣಗೊಳಿಸಿ, ಶಿಕ್ಷೆ ವಿಧಿಸುವಂತಹ ಪ್ರಬಲ ಕಾನೂನು ನಮಗೆ ಅಗತ್ಯವಿದೆ. ತ್ವರಿತ ನ್ಯಾಯವನ್ನು ಖಾತರಿಪಡಿಸುವ ಕಾನೂನು ಜಾರಿಗೊಳಿಸಲು ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕು’ ಎಂದು ಗುರುವಾರ ಹೇಳಿದರು.

## ‘ವರ್ಷದ ಬಳಿಕ ಎಸ್‌ಐಟಿ ರಚಿಸಿದ್ದು ಏಕೆ?’

ಕೋಲ್ಕತ್ತ (ಪಿಟಿಐ): ಆರ್.ಜಿ ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಹಣಕಾಸು ಅವ್ಯವಹಾರದ ಆರೋಪಗಳು ಕೇಳಿಬಂದ ಒಂದು ವರ್ಷದ ನಂತರ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಿದ್ದು ಏಕೆ ಎಂದು ಕಲ್ಕತ್ತ ಹೈಕೋರ್ಟ್, ಪಶ್ಚಿಮ ಬಂಗಾಳ ಸರ್ಕಾರವನ್ನು ಗುರುವಾರ ಕೇಳಿದೆ.

ಸರ್ಕಾರಿ ಸ್ವಾಮ್ಯದ ಆರ್.ಜಿ ಕರ್ ಆಸ್ಪತ್ರೆಯ ಮಾಜಿ ಉಪ ಅಧೀಕ್ಷಕ ಅಖ್ತರ್ ಅಲಿ ಅವರು ಹಣಕಾಸಿನ ಅಕ್ರಮಗಳ ಬಗ್ಗೆ ಮಾಜಿ ಪ್ರಾಂಶುಪಾಲ ಸಂದೀಪ್ ಘೋಷ್ ವಿರುದ್ಧ ಜಾರಿ ನಿರ್ದೇಶನಾಲಯದಿಂದ (ಇ.ಡಿ) ತನಿಖೆ ನಡೆಸುವಂತೆ ಕೋರಿ ಹೈಕೋರ್ಟ್ ಮೊರೆ ಹೋಗಿದ್ದಾರೆ.

ಇದಕ್ಕೆ ಸಂಬಂಧಿಸಿದ ಅರ್ಜಿಯ ವಿಚಾರಣೆ ವೇಳೆ ನ್ಯಾಯಮೂರ್ತಿಗಳಾದ ರಾಜರ್ಷಿ ಭಾರದ್ವಾಜ್ ಅವರು, ಆರೋಪ ಬೆಳಕಿಗೆ ಬಂದ ಒಂದು ವರ್ಷದ ಬಳಿಕ ಎಸ್‌ಐಟಿ ರಚಿಸಿದ್ದು ಏಕೆ ಎಂದು ಕೇಳಿದರು.

ಘೋಷ್ ಅವರು ಹಣಕಾಸಿನ ಅವ್ಯವಹಾರದಲ್ಲಿ ತೊಡಗಿದ್ದಾರೆ ಎಂಬುದನ್ನು 2023ರಲ್ಲೇ ಸಂಬಂಧಪಟ್ಟವರ ಗಮನಕ್ಕೆ ತಂದಿದ್ದೆ ಎಂದು ಅಲಿ ಹೇಳಿದ್ದರು.

ಸರ್ಕಾರ, ಪೊಲೀಸರಿಗೆ ಚಾಟಿ ಬೀಸಿದ ಬಾಂಬೆ ಹೈಕೋರ್ಟ್

# ‘ಪ್ರತಿಭಟಿಸದೇ ಆಡಳಿತ ಎಚ್ಚೆತ್ತುಕೊಳ್ಳದು’

ಮುಂಬೈ (ಪಿಟಿಐ): ‘ಸಾರ್ವಜನಿಕರು ಬೀದಿಗಿಳಿದು ದೊಡ್ಡ ಮಟ್ಟದಲ್ಲಿ ಪ್ರತಿಭಟಿಸಿ, ಆಕ್ರೋಶ ಹೊರಹಾಕದ ಹೊರತು ಆಡಳಿತ ಯಂತ್ರವು ಕಾರ್ಯಪ್ರವೃತ್ತವಾಗುವುದಿಲ್ಲ. ಬಾಲಕಿಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ಪೊಲೀಸರು ಲಘುವಾಗಿ ನೋಡಿದರೆ ಹೇಗೆ? ಶಾಲೆಗಳೇ ಮಕ್ಕಳಿಗೆ ಸುರಕ್ಷಿತ ಅಲ್ಲ ಎಂದ ಮೇಲೆ ಅವರು ಎಲ್ಲಿಗೆ ಹೋಗಬೇಕು? ಆ ಪುಟ್ಟ ಮಕ್ಕಳು ಏನು ಮಾಡಬೇಕು? ಇವೆಲ್ಲವೂ ಆಘಾತಕಾರಿಯಾಗಿದೆ...’

–ಹೀಗೆ ಹೇಳಿದ್ದು ಬಾಂಬೆ ಹೈಕೋರ್ಟ್. ಬದ್ಲಾಪುರದಲ್ಲಿ ಬಾಲಕಿಯರ ಮೇಲಿನ ಲೈಂಗಿಕ ದೌರ್ಜನ್ಯದ ಪ್ರಕರಣ ಸಂಬಂಧ ನ್ಯಾಯಾಲಯವು ಸ್ವಯಂ ಪ್ರೇರಿತವಾಗಿ ಗುರುವಾರ ಪ್ರಕರಣ ದಾಖಲಿಸಿಕೊಂಡಿದೆ. ರಾಜ್ಯ ಸರ್ಕಾರ ಹಾಗೂ ಪೊಲೀಸರ ಕ್ರಮಗಳ ವಿರುದ್ಧ ನ್ಯಾಯಾಲಯ ಆಕ್ರೋಶ ವ್ಯಕ್ತಪಡಿಸಿದೆ. ನ್ಯಾಯಮೂರ್ತಿಗಳಾದ ರೇವತಿ ಮೋಹಿತೆ ಡೆರೆ ಹಾಗೂ ಪೃಥ್ವಿರಾಜ್ ಚೌಹಾಣ್ ವಿಚಾರಣೆ ನಡೆಸಿದರು.

‘ಲೈಂಗಿಕ ದೌರ್ಜನ್ಯ ನಡೆದಿರುವುದು ತಿಳಿದಿದ್ದರೂ ಶಾಲೆಯ ಆಡಳಿತ ಮಂಡಳಿಯು ಪೊಲೀಸರಿಗೆ ದೂರು ನೀಡಲಿಲ್ಲ. ಇದರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು’ ಎಂದು ನ್ಯಾಯಾಲಯ ಹೇಳಿತು. ಎಫ್‌ಐಆರ್ ದಾಖಲಿಸಿಕೊಳ್ಳದ ಪೊಲೀಸರ ಕುರಿತೂ ಕೋರ್ಟ್ ಆಕ್ರೋಶ ಹೊರಹಾಕಿತು.

‘ಈ ಪ್ರಕರಣವನ್ನು ಪೊಲೀಸರು ಸೂಕ್ತ ರೀತಿಯಲ್ಲಿ ನಿರ್ವಹಿಸಲಿಲ್ಲ. ಅವರ ಕಾರ್ಯವಿಧಾನದ ಕುರಿತು ನಮಗೆ ಬೇಸರ ಇದೆ. ಸಂತ್ರಸ್ತೆಯರಿಗೆ ನ್ಯಾಯ ಸಿಗಬೇಕು ಎಂಬುದು ನಮ್ಮ ನಿಲುವು. ಪೊಲೀಸರಿಗೂ ಇದೇ ಆಸ್ಥೆ ಇರಬೇಕಿತ್ತು. ಇಲ್ಲಿ ಬಾಲಕಿಯರು ತಮಗಾದ ದೌರ್ಜನ್ಯದ ಕುರಿತು ಹೇಳಿಕೊಂಡಿದ್ದಾರೆ. ಬಾಲಕಿಯರು ಹೀಗೆ ಹೇಳಿಕೊಳ್ಳದೆಯೇ ಇಂಥ ಇನ್ನೆಷ್ಟು ಘಟನೆಗಳು ಮುಚ್ಚಿಹೋಗಿವೆಯೋ’ ಎಂದು ಹೇಳಿತು.

‘ಕಾಣೆಯಾದ ಮಹಿಳೆಯರ ಪತ್ತೆ ಸರ್ಕಾರದ ಕರ್ತವ್ಯ’: ‘ಮಾನವ ಕಳ್ಳಸಾಗಣೆಗೆ ಗುರಿಯಾಗಿ ಕಾಣೆಯಾಗುವ ಮಕ್ಕಳು ಹಾಗೂ ಮಹಿಳೆಯನ್ನು ಪತ್ತೆ ಮಾಡುವುದು ಸರ್ಕಾರದ ಕರ್ತವ್ಯ’ ಎಂದು ಬಾಂಬೆ ಹೈಕೋರ್ಟ್ ಹೇಳಿದೆ.

2019ರಿಂದ 2021ರವರೆಗೆ ಮಹಾರಾಷ್ಟ್ರದಲ್ಲಿ ಸುಮಾರು ಒಂದು ಲಕ್ಷ ಮಹಿಳೆಯರು ಕಾಣೆಯಾಗಿದ್ದಾರೆ. ಇವರನ್ನು ಪತ್ತೆಹಚ್ಚುವ ಸಂಬಂಧ ರಾಜ್ಯ ಪೊಲೀಸರಿಗೆ ನಿರ್ದೇಶನ ನೀಡಬೇಕು ಎಂದು ಕೋರಿ ಪಿಐಎಲ್ ಸಲ್ಲಿಕೆಯಾಗಿದೆ. ಈ ಬಗ್ಗೆ ಮುಖ್ಯ ನ್ಯಾಯಮೂರ್ತಿ ಡಿ.ಕೆ. ಉಪಾಧ್ಯಾಯ ಹಾಗೂ ನ್ಯಾಯಮೂರ್ತಿ ಅಮಿತ್ ಬೋರ್ಕರ್ ಅವರಿದ್ದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ಪೊಲೀಸರು ಎಫ್‌ಐಆರ್ ದಾಖಲಿಸಿಕೊಳ್ಳಲಿಲ್ಲ. ಶಾಲೆಯ ಆಡಳಿತ ಮಂಡಳಿಯು ಘಟನೆಯ ಕುರಿತು ಮೌನ ವಹಿಸಿತು. ತಮಗಾದ ದೌರ್ಜನ್ಯ ಕುರಿತು ಜನರು ಮಾತನಾಡದಂತೆ ಇಂಥ ನಡವಳಿಕೆಗಳು ಮಾಡುತ್ತವೆ. ಲೈಂಗಿಕ ದೌರ್ಜನ್ಯದಂಥ ವಿಷಯಗಳನ್ನು ಹೇಗೆ ನಿಭಾಯಿಸಬೇಕು ಎಂಬುದರ ಕುರಿತು ಪೊಲೀಸರಿಗೆ ಸಂವೇದನೆ ಮೂಡಿಸಲು ಕ್ರಮ ಕೈಗೊಳ್ಳಬೇಕು

**ಬಾಂಬೆ ಹೈಕೋರ್ಟ್**

### ಎಸ್‌ಐಟಿಗೆ ಸೂಚನೆ

- ತನಿಖೆ ಪೂರ್ಣಗೊಳಿಸಿ ಆಗಸ್ಟ್ 27ರ ಒಳಗೆ ವರದಿ ಸಲ್ಲಿಸಿ
- ಎಫ್‌ಐಆರ್ ದಾಖಲಿಸಿಕೊಳ್ಳಲು ಯಾಕಾಗಿ ವಿಳಂಬ ಮಾಡಲಾಯಿತು ಹಾಗೂ ಮತ್ತೊಬ್ಬ ಸಂತ್ರಸ್ತೆಯ ಹೇಳಿಕೆಯನ್ನು ಇದುವರೆಗೂ ಯಾಕೆ ದಾಖಲಿಸಿಕೊಂಡಿಲ್ಲ ಎಂಬ ಅಂಶಗಳು ವರದಿಯಲ್ಲಿರಬೇಕು
- ಎಫ್‌ಐಆರ್ ಪ್ರತಿ, ಪೊಲೀಸರ ಕೇಸ್ ಡೈರಿ ಜೊತೆಗೆ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ನೀಡಿ

### ನಮ್ಮ ಮಗ ಅಮಾಯಕ: ಪೋಷಕರ ಸಮರ್ಥನೆ

‘ನಮ್ಮ ಮಗ ಅಮಾಯಕ. ಸಣ್ಣವನಿರುವಾಗ ಆತನಿಗೆ ಮಾನಸಿಕ ಸಮಸ್ಯೆ ಇತ್ತು. ಆದರೆ, ಆತನಿಗೆ ಔಷಧ ಕೊಡಿಸಲಾಗಿದೆ. ನಮ್ಮ ಮಗನನ್ನು ಈ ಪ್ರಕರಣದಲ್ಲಿ ಸಿಲುಕಿಸಲಾಗುತ್ತಿದೆ. ಆತನ ಮೇಲಿರುವ ಆರೋಪಗಳೆಲ್ಲವೂ ಸುಳ್ಳು’ ಎಂದು ಬದ್ಲಾಪುರ ಪ್ರಕರಣ ಆರೋಪಿಯ ಪೋಷಕರು ಮರಾಠಿ ಮಾಧ್ಯಮವೊಂದಕ್ಕೆ ಹೇಳಿಕೆ ನೀಡಿದ್ದಾರೆ.

‘ಘಟನೆ ನಡೆದ ಹಿಂದಿನ 15 ದಿನಗಳಿಂದ ಆತ ಅಲ್ಲಿ ಕೆಲಸ ಮಾಡುತ್ತಿದ್ದ. ಅವನು ದಿನ ಬೆಳಿಗ್ಗೆ 11ಕ್ಕೆ ಶಾಲೆಗೆ ಶೌಚಾಲಯ ಸ್ವಚ್ಛತೆಗೆ ಹೋಗುತ್ತಾನೆ. ಆಮೇಲೆ ಬೇರೆ ಕಡೆ ಇದೇ ಕೆಲಸ ಮಾಡಲು ಹೋಗುತ್ತಾನೆ. ನಾವು ಕೂಡ ಇದೇ ಶಾಲೆಯಲ್ಲಿ ಸ್ವಚ್ಛತಾ ಕೆಲಸ ಮಾಡುತ್ತೇವೆ’ ಎಂದರು.

‘ಘಟನೆ ಬಗ್ಗೆ ನಮಗೆ ಆಗಸ್ಟ್ 13ಕ್ಕೆ ತಿಳಿಯಿತು. ನಂತರ 17ಕ್ಕೆ ಆತನನ್ನು ಪೊಲೀಸರು ಬಂಧಿಸಿದರು ಎಂಬುದನ್ನು ಅದೇ ಶಾಲೆಯಲ್ಲಿ ಕೆಲಸ ಮಾಡುವ ಮಹಿಳೆಯೊಬ್ಬರು ತಿಳಿಸಿದರು. ನಾವು ತಕ್ಷಣವೇ ಪೊಲೀಸ್ ಠಾಣೆಗೆ ತೆರಳಿದೆವು. ಅಲ್ಲಿ ನಮ್ಮ ಮಗನಿಗೆ ಪೊಲೀಸರು ಹೊಡೆಯುತ್ತಿದ್ದರು. ನಮ್ಮ ಸಣ್ಣ ಮಗನಿಗೂ ಪೊಲೀಸರು ಹೊಡೆದರು’ ಎಂದರು.

**ಲೈಂಗಿಕ ದೌರ್ಜನ್ಯದ ವಿರುದ್ಧ ಪ್ರತಿಭಟಿಸುತ್ತಿದ್ದವರು ಸ್ಥಳೀಯರೇ ಆಗಿದ್ದರು. ಈ ಮಾಹಿತಿಯು ಪೊಲೀಸರ ರಿಮ್ಯಾಂಡ್ ಅರ್ಜಿಯಲ್ಲಿಯೇ ಇದೆ**

**ಸಂಜಯ್ ರಾವುತ್,** ಶಿವಸೇನಾ (ಉದ್ಧವ್ ಬಣ) ಸಂಸದ

**ದೌರ್ಜನ್ಯ ಪ್ರಕರಣ ವಿರುದ್ಧ ನಡೆದ ಪ್ರತಿಭಟನೆಯನ್ನು ‘ರಾಜಕೀಯ ಪ್ರೇರಿತ’ ಎನ್ನುವವರು ಒಂದೊ ಹುಚ್ಚರು ಅಥವಾ ಆರೋಪಿಗಳನ್ನು ರಕ್ಷಿಸುತ್ತಿರುವವರು**

**ಉದ್ಧವ್ ಠಾಕ್ರೆ,** ಶಿವಸೇನಾ (ಉದ್ಧವ್ ಬಣ) ಮುಖ್ಯಸ್ಥ

## ‘ರಾಜಕೀಯಕ್ಕೆ ಬಳಸದಿರಿ’

ಒಂದನೇ ಪುಟದಿಂದ...

‘ಪರಿಸ್ಥಿತಿಯನ್ನು ರಾಜಕೀಯಕ್ಕೆ ಬಳಸಬೇಡಿ... ತ್ವರಿತವಾಗಿ ತನಿಖೆ ನಡೆಸಿ, ತಪ್ಪು ಮಾಡಿದವರು ಕಾನೂನಿಗೆ ಅನುಗುಣವಾಗಿ ಶಿಕ್ಷೆ ಅನುಭವಿಸುವಂತೆ ನೋಡಿಕೊಳ್ಳುವ ಕೆಲಸವನ್ನು ನಾವು ಮಾಡುತ್ತಿದ್ದೇವೆ’ ಎಂದು ಪೀಠವು ಹೇಳಿತು.

ಆರ್.ಜಿ. ಕರ್ ಆಸ್ಪತ್ರೆಯಲ್ಲಿ ನಡೆದ ಅತ್ಯಾಚಾರ, ಹತ್ಯೆ ಪ್ರಕರಣವನ್ನು ಮುಂದಿಟ್ಟುಕೊಂಡು ಮಮತಾ ಅವರ ರಾಜೀನಾಮೆ ಕೇಳುವವರು ಹಾಗೂ ಅವರನ್ನು ದೂಷಿಸುವವರ ಬೆರಳುಗಳನ್ನು ಕತ್ತರಿಸಿ ಹಾಕಲಾಗುವುದು ಎಂದು ಸಚಿವ ಉದಯನ್ ಗುಹಾ ಹೇಳಿರುವುದು ವಿವಾದ ಸೃಷ್ಟಿಸಿದೆ.

‘ಸೋಮವಾರಕ್ಕೆ ಮೊದಲು ರಾಜೀನಾಮೆ ಕೊಡಿ, ಇಲ್ಲವಾದರೆ ನಿಮ್ಮನ್ನು (ಮಮತಾ) ಹೊಣೆ ಮಾಡಲಾಗುತ್ತದೆ ಅಥವಾ ಮಂಗಳವಾರ ಗುಂಡುಗಳು ಹಾರುತ್ತವೆ’ ಎಂದು ಸುದ್ದಿ ವಾಹಿನಿಯೊಂದರ ಜೊತೆ ಮಾತನಾಡುವ ಸಂದರ್ಭದಲ್ಲಿ ಅಧಿಕಾರಿ ಅವರು ಹೇಳಿದ್ದಾರೆ ಎನ್ನಲಾಗಿದೆ.

ತ್ರಿಪುರಾದಲ್ಲಿ ಹಿಂದೆಂದೂ ಕಂಡರಿಯದ ಭೀಕರ ಪ್ರವಾಹ

# ನೆರವಿಗೆ ಧಾವಿಸಿದ ಎನ್‌ಡಿಆರ್‌ಎಫ್

ಅಗರ್ತಲಾ (ಪಿಟಿಐ): ತ್ರಿಪುರಾದಲ್ಲಿ ಐದು ದಿನಗಳಿಂದ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ಉಂಟಾಗಿರುವ ಪ್ರವಾಹ ಸಂಬಂಧಿತ ಅವಘಡಗಳು ಮತ್ತು ಭೂಕುಸಿತದಲ್ಲಿ ಇದುವರೆಗೆ 10 ಜನರು ಮೃತಪಟ್ಟಿದ್ದಾರೆ, ಒಬ್ಬರು ಕಾಣೆಯಾಗಿದ್ದಾರೆ.

ಸುಮಾರು 32 ಸಾವಿರ ಜನರನ್ನು ಸ್ಥಳಾಂತರಿಸಿ, 330 ಪರಿಹಾರ ಕೇಂದ್ರಗಳಲ್ಲಿ ಆಶ್ರಯ ಕಲ್ಪಿಸಲಾಗಿದೆ. ಗುರುವಾರ ಕೂಡ ಭಾರಿ ಮಳೆಯಾಗಿದ್ದು, ಪಶ್ಚಿಮ ತ್ರಿಪುರಾ ಮತ್ತು ಸೆಪಹಿಜಾಲಾ ಜಿಲ್ಲೆಗಳಲ್ಲಿ ರೆಡ್ ಅಲರ್ಟ್ ಘೋಷಿಸಲಾಗಿದೆ.

ಪ್ರವಾಹ ಪರಿಹಾರ ಕಾರ್ಯಾಚರಣೆಯಲ್ಲಿ ರಾಜ್ಯ ಸರ್ಕಾರಕ್ಕೆ ನೆರವಾಗಲು ಕೇಂದ್ರದಿಂದ 11 ಎನ್‌ಡಿಆರ್‌ಎಫ್ ತಂಡಗಳು ಪರಿಹಾರ ಸಾಮಗ್ರಿಗಳು ಮತ್ತು ವಿಪತ್ತು ನಿರ್ವಹಣೆಯ ಸಲಕರಣೆಗಳೊಂದಿಗೆ ತ್ರಿಪುರಾಕ್ಕೆ ಬಂದಿಳಿದಿವೆ.

ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್), ಎನ್‌ಡಿಆರ್‌ಎಫ್, ಅಸ್ಸಾಂ ರೈಫಲ್ಸ್ ಸೇರಿ ಕೇಂದ್ರ ಅರೆಸೇನಾ ಪಡೆಗಳು ಪ್ರವಾಹ ಪೀಡಿತ ಪ್ರದೇಶಗಳಲ್ಲಿ ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಯಲ್ಲಿ ತೊಡಗಿವೆ.

‘ರಾಜ್ಯದ ಪ್ರಮುಖ ನದಿಗಳಲ್ಲಿನ ನೀರಿನ ಮಟ್ಟವು ಅಪಾಯದ ಮಟ್ಟ ಮೀರಿದೆ. 1,900ಕ್ಕೂ ಹೆಚ್ಚು ಕಡೆ ಭೂಕುಸಿತ ಸಂಭವಿಸಿ, ಸಂಪರ್ಕ ಕಡಿತಗೊಂಡಿದೆ’ ಎಂದು ರಾಜ್ಯ ಸರ್ಕಾರ ಬುಧವಾರ ಪ್ರಕಟಣೆಯಲ್ಲಿ ತಿಳಿಸಿತ್ತು.

‘ಅಗರ್ತಲಾದ ಮಹಾರಾಜ ಬಿರ್ ಬಿಕ್ರಮ್ ಮಾಣಿಕ್ಯ ಬಹದ್ದೂರ್ ವಿಮಾನ ನಿಲ್ದಾಣಕ್ಕೆ ಪರಿಹಾರ ಸಾಮಗ್ರಿಗಳು ಮತ್ತು ವಿಪತ್ತು ನಿರ್ವಹಣಾ ಸಲಕರಣೆಗಳು ಬಂದು ತಲುಪಿವೆ. ಪ್ರವಾಹಪೀಡಿತ ಪ್ರದೇಶಗಳಿಗೆ ಆದಷ್ಟು ಶೀಘ್ರ ತಲುಪಿಸುವ ವಿಶ್ವಾಸವಿದೆ’ ಎಂದು ತ್ರಿಪುರಾ ಮುಖ್ಯಮಂತ್ರಿ ಮಾಣಿಕ್ ಸಹಾ ಗುರುವಾರ ‘ಫೇಸ್‌ಬುಕ್’ನಲ್ಲಿ ಪೋಸ್ಟ್ ಮಾಡಿದ್ದಾರೆ.



ಅಗರ್ತಲಾದ ಹೊರ ವಲಯದ ಅಥಾಯ್‌ನಗರ ಗ್ರಾಮದಲ್ಲಿ ಭಾರಿ ಮಳೆಯಿಂದ ಉಂಟಾಗಿರುವ ಪ್ರವಾಹದಲ್ಲಿ ಸಿಲುಕಿರುವ ಜನರನ್ನು ಎನ್‌ಡಿಆರ್‌ಎಫ್ ತಂಡದ ಸಿಬ್ಬಂದಿ ಸುರಕ್ಷಿತ ಸ್ಥಳಗಳಿಗೆ ಗುರುವಾರ ಸ್ಥಳಾಂತರಿಸಿದರು– ಪಿಟಿಐ ಚಿತ್ರ

**ಮೋದಿ ನೇತೃತ್ವದ ಸರ್ಕಾರವು ಈ ಬಿಕ್ಕಟ್ಟಿನ ವೇಳೆ ತ್ರಿಪುರಾದ ನಮ್ಮ ಸಹೋದರಿಯರು, ಸಹೋದರರ ಜತೆ ದೃಢವಾಗಿ ನಿಂತಿದೆ**

**ಅಮಿತ್‌ ಶಾ,** ಕೇಂದ್ರ ಗೃಹ ಸಚಿವ

**ಹಿಂದೆಂದೂ ಕಂಡರಿಯದ ನೈಸರ್ಗಿಕ ವಿಪತ್ತನ್ನು ನಿಭಾಯಿಸಲು ರಾಜ್ಯ ಸರ್ಕಾರ ನಿರಂತರವಾಗಿ ಕೆಲಸ ಮಾಡುತ್ತಿದೆ**

**ಮಾಣಿಕ್ ಸಹಾ,** ತ್ರಿಪುರಾ ಮುಖ್ಯಮಂತ್ರಿ

### ‘ಬಾಂಗ್ಲಾ ವರದಿ ಸತ್ಯಕ್ಕೆ ದೂರ’

ನವದೆಹಲಿ(ಪಿಟಿಐ): ತ್ರಿಪುರಾದ ಗುಮ್ಟಿ ನದಿಯ ಅಣೆಕಟ್ಟೆಯ ಬಾಗಿಲು ತೆರೆದಿರುವುದರಿಂದ ದೇಶದ ಕೆಲವು ಭಾಗಗಳಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ ಎಂಬ ಬಾಂಗ್ಲಾದೇಶದ ವರದಿ ವಾಸ್ತವಾಂಶದಿಂದ ಕೂಡಿಲ್ಲ ಎಂದು ಭಾರತ ಗುರುವಾರ ಹೇಳಿದೆ.

‘ದುಂಬೂರ್ ಅಣೆಕಟ್ಟೆಯ ಬಾಗಿಲು ತೆರೆದಿರುವುದರಿಂದ ಬಾಂಗ್ಲಾದೇಶದ ಪೂರ್ವ ಗಡಿಯಲ್ಲಿರುವ ಜಿಲ್ಲೆಗಳಲ್ಲಿ ಪ್ರವಾಹ ಉಂಟಾಗಿದೆ ಎಂದು ಬಾಂಗ್ಲಾದೇಶದಲ್ಲಿ ಕಳವಳ ವ್ಯಕ್ತವಾಗಿರುವುದನ್ನು ನಾವು ನೋಡಿದ್ದೇವೆ. ವಾಸ್ತವವಾಗಿ ಇದು ಸರಿಯಲ್ಲ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿದೆ.

ಬಾಂಗ್ಲಾದೇಶದಲ್ಲಿನ ಪ್ರವಾಹವು ಅಣೆಕಟ್ಟೆಯ ಕೆಳಗಿರುವ ಜಲಾನಯನ ಪ್ರದೇಶಗಳಲ್ಲಿನ ಮಳೆ ನೀರಿನಿಂದ ಉಂಟಾಗಿದೆ ಎಂದು ಹೇಳಿದೆ.

**ಷೇರುಪೇಟೆ ವಹಿವಾಟು** ▲ 147

80,905 ಹಿಂದಿನ ಅಂತ್ಯ — 81,053 ಇಂದಿನ ಅಂತ್ಯ

**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 24,770 |
| ಇಂದಿನ ಅಂತ್ಯ | 24,811 |
| ▲ | 41 |
| ದಿನದ ಕನಿಷ್ಠ | 24,810 |

**ವಿನಿಮಯ ದರ**

| | |
|---|---|
| $ ಡಾಲರ್ | 83.97 |
| £ ಪೌಂಡ್ | 110.22 |
| € ಯುರೊ | 93.54 |
| ¥ ಯೆನ್ (100ಕ್ಕೆ) | 57 |

**ಖಾದ್ಯ ತೈಲ ಮುಂಬೈ (10 ಕೆಜಿಗೆ)** (ಆವರಣದಲ್ಲಿ ಹಿಂದಿನ ದರ)

| | |
|---|---|
| ಶೇಂಗಾ (ರಿಫೈನ್ಡ್) | ₹1610 (1610) |
| ಸೋಯಾ (ರಿಫೈನ್ಡ್) | ₹945 (940) |
| ಸೂರ್ಯಕಾಂತಿ (ರಿಫೈನ್ಡ್) | ₹934 (940) |
| ಪಾಮೋಲಿನ್ | ₹940 (938) |



**ಕೊಬ್ಬರಿ ಧಾರಣೆ** (ಕ್ವಿಂಟಲ್‌ಗೆ)

| | |
|---|---|
| ಅರಸೀಕೆರೆ | ₹9500-12000 |
| ಕೆ.ಆರ್. ಪೇಟೆ | ₹9751-9751 |
| ತಿಪಟೂರು | ₹11700-12222 |
| ತುರುವೇಕೆರೆ | ₹11000-12000 |

**ಎನ್.ಆರ್.ಪುರ ರಬ್ಬರ್**



| | |
|---|---|
| ಆರ್‌ಎಸ್‌ಎಸ್-4 | ₹231 |
| ಆರ್‌ಎಸ್‌ಎಸ್-5 | ₹225 |
| ಗುಡ್ ಲಾಟ್ | ₹210 |

(ಪ್ರತಿ ಕೆ.ಜಿಗೆ)

**ರಾಮನಗರ ರೇಷ್ಮೆಗೂಡು**

| | |
|---|---|
| ಮಿಶ್ರತಳಿ (ಸಿ.ಬಿ) | ₹344-511 |
| ದ್ವಿತಳಿ (ಬಿ.ವಿ) | ₹322-625 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| ಬೆಂಗಳೂರು | |
| 100ಕ್ಕೆ | ₹480 |
| 12 ಕ್ಕೆ | ₹66 |
| ಮೈಸೂರು | |
| 100ಕ್ಕೆ | ₹482 |

**ಮುಂಬೈ ಧಾರಣೆ**

ಶೇಂಗಾ
23-08-2024

| | |
|---|---|
| ಜಾವಾ 70/80(ಹೊಸ) | 11600-11700 |
| ಜಾವಾ 80/90(ಹೊಸ) | 11000-11100 |
| ದಪ್ಪ ಮಧ್ಯಪ್ರದೇಶ(ಹೊಸ) | 9400-9500 |
| ದಪ್ಪ ಗುಜರಾತ್(ಹೊಸ) | 10200-10300 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1545 (1545) |
| ಒಂದು ವಾರದ ಡೆಲಿವರಿ | 1540 (1540) |
| ಸೋಯಾ ಕಚ್ಚಾ | 950 (892) |
| ಪಾಮ್ ವಾರದ ಡೆಲಿವರಿ | 932 (928) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 915 (915) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ ₹71,000 (71,350)
ಬೆಳ್ಳಿ ಕೆ.ಜಿ ₹84,600 (84,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

## ಹಾಲಿನ ಮಾದರಿ ವರ್ಗೀಕರಿಸದಂತೆ ಸೂಚನೆ

ನವದೆಹಲಿ (ಪಿಟಿಐ): ಹಾಲು ಹಾಗೂ ಹಾಲಿನ ಉತ್ಪನ್ನಗಳ ಪ್ಯಾಕೆಟ್ ಮೇಲೆ 'ಎ1' ಮತ್ತು 'ಎ2' ಮಾದರಿ ಉತ್ಪನ್ನ ಎಂಬುದಾಗಿ ಲೇಬಲ್ ಅಂಟಿಸುವುದು ಗ್ರಾಹಕರನ್ನು ದಿಕ್ಕು ತಪ್ಪಿಸುತ್ತದೆ. ಹಾಗಾಗಿ, ಇ-ಕಾಮರ್ಸ್ ಕಂಪನಿಗಳು ಹಾಗೂ ಆಹಾರ ಪದಾರ್ಥ ಮಾರಾಟಗಾರರು ಈ ಲೇಬಲ್‌ಗಳನ್ನು ತೆಗೆದು ಹಾಕಬೇಕು ಎಂದು ಭಾರತದ ಆಹಾರ ಸುರಕ್ಷತೆ ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ಸೂಚಿಸಿದೆ.

ಈ ಮಾದರಿಯಡಿ ಉತ್ಪನ್ನಗಳ ವರ್ಗೀಕರಣಕ್ಕೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006ರ ಅಡಿ ಅವಕಾಶವಿಲ್ಲ ಎಂದು ಹೇಳಿದೆ.

ಹಸು, ಎಮ್ಮೆ ಹಾಲಿನಲ್ಲಿರುವ ಪ್ರಮುಖ ಪ್ರೊಟೀನ್‌ಗಳಲ್ಲಿ ಗಿಣ್ಣು (ಕೇಸಿನ್) ಒಂದಾಗಿದೆ. ಹಾಲಿನಲ್ಲಿರುವ ಬೀಟಾ ಕೇಸಿನ್ ಪ್ರೊಟೀನ್ ಬಗ್ಗೆ ತಪಾಸಣೆ ನಡೆಸಲಾಗಿದೆ. 'ಎ1' ಮತ್ತು 'ಎ2' ಲೇಬಲ್ ಅಂಟಿಸಿರುವ ಹಾಲಿನಲ್ಲಿ ವ್ಯತ್ಯಾಸ ಕಂಡುಬಂದಿದೆ ಎಂದು ಹೇಳಿದೆ.

ಇ-ಕಾಮರ್ಸ್ ಕಂಪನಿಗಳು ತಮ್ಮ ವೆಬ್‌ಸೈಟ್‌ನಿಂದಲೂ ಈ ಮಾಹಿತಿಯನ್ನು ತೆಗೆದು ಹಾಕಬೇಕು ಎಂದು ಸೂಚಿಸಿದೆ.

'ಹಾಲು ಮತ್ತು ಅದರ ಉತ್ಪನ್ನಗಳ ಮೇಲೆ ಈ ಮಾದರಿಯ ಲೇಬಲ್ ಅಂಟಿಸುವುದು ಮಾರುಕಟ್ಟೆಯ ತಂತ್ರವಾಗಿದೆ' ಎಂದು ಪರಾಗ್ ಮಿಲ್ಕ್ ಫುಡ್ಸ್ ಮುಖ್ಯಸ್ಥ ದೇವೇಂದ್ರ ಶಾ ತಿಳಿಸಿದ್ದಾರೆ.

ಮುಂಗಾರು ವರದಾನ: ಹಣಕಾಸು ಸಚಿವಾಲಯದ ವರದಿ ಹೇಳಿಕೆ

# ಹಣದುಬ್ಬರ ಇಳಿಕೆ ನಿರೀಕ್ಷೆ



ನವದೆಹಲಿ (ಪಿಟಿಐ): ದೇಶದಲ್ಲಿ ಮುಂಗಾರು ಉತ್ತಮವಾಗಿದೆ. ಇದರಿಂದ ಸರಕು ಮತ್ತು ಸೇವೆಗಳ ವೆಚ್ಚದಲ್ಲಿನ ಬದಲಾವಣೆಯ ಸೂಚಕವಾದ ಕೋರ್ ಹಣದುಬ್ಬರವು ಮಂದಗತಿಯಲ್ಲಿದೆ. ಹಾಗಾಗಿ, ಚಿಲ್ಲರೆ ಹಣದುಬ್ಬರವು ಇಳಿಕೆಯ ಹಾದಿಯಲ್ಲಿ ಸಾಗಿದೆ ಎಂದು ಗುರುವಾರ ಬಿಡುಗಡೆಯಾಗಿರುವ ಕೇಂದ್ರ ಹಣಕಾಸು ಸಚಿವಾಲಯದ ವರದಿ ತಿಳಿಸಿದೆ.

ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಚಿಲ್ಲರೆ ಹಣದುಬ್ಬರವು ಜುಲೈ ತಿಂಗಳಿನಲ್ಲಿ ಐದು ವರ್ಷದ ಕನಿಷ್ಠ ಮಟ್ಟವಾದ ಶೇ 3.5ರಷ್ಟು ದಾಖಲಾಗಿದೆ.

ಉತ್ತಮವಾಗಿ ಮಳೆ ಸುರಿದಿರುವುದು ಮುಂಗಾರು ಬಿತ್ತನೆಗೆ ವರದಾನವಾಗಿದೆ. ಜಲಾಶಯಗಳಲ್ಲಿ ನೀರಿನ ಸಂಗ್ರಹ ಮಟ್ಟದಲ್ಲಿ ಏರಿಕೆಯಾಗಿದೆ. ಇದರಿಂದ ಹಿಂಗಾರು ಹಂಗಾಮಿನ ಬಿತ್ತನೆಗೂ ಸಹಕಾರಿಯಾಗಲಿದೆ. ಇದು ಮುಂಬರುವ ತಿಂಗಳುಗಳಲ್ಲಿ ಆಹಾರ ಹಣದುಬ್ಬರವು ಇಳಿಕೆಯ ಪಥದಲ್ಲಿ ಸಾಗಲು ನೆರವಾಗಲಿದೆ ಎಂದು ವರದಿ ತಿಳಿಸಿದೆ.

**ದೇಶೀಯ ಚಟುವಟಿಕೆ ಚೇತರಿಕೆ:** ದೇಶೀಯ ಚಟುವಟಿಕೆಗಳು ಚೇತರಿಕೆ ಕಂಡಿವೆ. ಇದು ತಯಾರಿಕಾ ಮತ್ತು ಸೇವಾ ವಲಯದ ಸೂಚ್ಯಂಕಗಳ ಏರಿಕೆಗೆ ನೆರವಾಗಿದೆ. ಬೇಡಿಕೆ ವಿಸ್ತರಣೆ ಹಾಗೂ ಹೊಸ ರಫ್ತು ಪ್ರಮಾಣದಲ್ಲಿ ಏರಿಕೆಯಾಗಿರುವುದರಿಂದ ತಯಾರಿಕಾ ವಲಯದ ಬೆಳವಣಿಗೆ ಸದೃಢವಾಗಿದೆ ಎಂದು ತಿಳಿಸಿದೆ.

ವರಮಾನ ಸಂಗ್ರಹದಲ್ಲಿ ಏರಿಕೆ ಆಗಿದೆ. ಸರ್ಕಾರವು ವೆಚ್ಚದಲ್ಲಿ ಶಿಸ್ತು ಕಾಪಾಡಿಕೊಂಡಿದೆ. ಆರ್ಥಿಕತೆ ದೃಢವಾಗಿರುವುದರಿಂದ ವಿತ್ತೀಯ ಕೊರತೆಯು ಬಜೆಟ್‌ನಲ್ಲಿ ಅಂದಾಜಿಸಿರುವ ಮಟ್ಟಕ್ಕೆ ಇಳಿಕೆಯಾಗಲಿದೆ ಎಂದು ಹೇಳಿದೆ.

### ಆರ್ಥಿಕತೆ ಬೆಳವಣಿಗೆ ಸದೃಢ

ಮುಂಗಾರು ಸ್ವಲ್ಪ ಅಸ್ಥಿರಗೊಂಡಿದ್ದರೂ ದೇಶದ ಆರ್ಥಿಕತೆ ಬೆಳವಣಿಗೆಯು ಸದೃಢವಾಗಿದೆ. ಹಾಗಾಗಿ, 2024-25ನೇ ಆರ್ಥಿಕ ವರ್ಷದಲ್ಲಿ ಜಿಡಿಪಿಯು ಶೇ 6.5ರಿಂದ ಶೇ 7ರಷ್ಟು ಪ್ರಗತಿ ಕಾಣಲಿದೆ ಎಂದು ವರದಿ ತಿಳಿಸಿದೆ.

ಜುಲೈ ತಿಂಗಳಿನಲ್ಲಿನ ಆರ್ಥಿಕತೆಯ ವೇಗವನ್ನು ಅವಲೋಕಿಸಿದರೆ ಮುಂದಿನ ನಾಲ್ಕು ತಿಂಗಳವರೆಗೆ ಇದೇ ಬೆಳವಣಿಗೆಯನ್ನು ಕಾಯ್ದುಕೊಳ್ಳುವ ನಿರೀಕ್ಷೆಯಿದೆ ಎಂದು ತಿಳಿಸಿದೆ.

ಪ್ರಸಕ್ತ ಆರ್ಥಿಕ ವರ್ಷದ ಮೊದಲ ನಾಲ್ಕು ತಿಂಗಳ ಅವಧಿಯಲ್ಲಿ ಸಂಗ್ರಹವಾಗಿರುವ ಜಿಎಸ್‌ಟಿ ವರಮಾನವನ್ನು ಅವಲೋಕಿಸಿದರೆ ತೆರಿಗೆ ಸಂಗ್ರಹದ ಮೂಲ ವಿಸ್ತರಣೆಯಾಗಿದೆ. ಆರ್ಥಿಕ ಚಟುವಟಿಕೆಗಳು ದೃಢವಾಗಿರುವ ಚಿತ್ರಣಕ್ಕೆ ಕನ್ನಡಿ ಹಿಡಿದಿದೆ ಎಂದು ತಿಳಿಸಿದೆ.

# ಜಿಡಿಪಿ ಬೆಳವಣಿಗೆ ಮಂದಗತಿ

## ಜೂನ್ ತ್ರೈಮಾಸಿಕದಲ್ಲಿ ಶೇ 6ರಷ್ಟು ದಾಖಲು: ಐಸಿಆರ್‌ಎ

ನವದೆಹಲಿ (ಪಿಟಿಐ): 2024-25ನೇ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಬೆಳವಣಿಗೆಯು ಶೇ 6ರಷ್ಟು ಪ್ರಗತಿ ಕಾಣಲಿದೆ ಎಂದು ದೇಶೀಯ ಕ್ರೆಡಿಟ್ ರೇಟಿಂಗ್ಸ್ ಸಂಸ್ಥೆ ಐಸಿಆರ್‌ಎ ಅಂದಾಜಿಸಿದೆ.

ಸರ್ಕಾರದ ಸಾರ್ವಜನಿಕ ವೆಚ್ಚದಲ್ಲಿನ ಇಳಿಕೆ ಹಾಗೂ ನಗರ ಪ್ರದೇಶದಲ್ಲಿ ಬೇಡಿಕೆ ಕುಗ್ಗಿರುವುದೇ ಇದಕ್ಕೆ ಕಾರಣ ಎಂದು ಗುರುವಾರ ಬಿಡುಗಡೆಯಾಗಿರುವ ವರದಿ ತಿಳಿಸಿದೆ.

2024-25ನೇ ಪೂರ್ಣ ಆರ್ಥಿಕ ವರ್ಷದಲ್ಲಿ ಶೇ 6.8ರಷ್ಟು ದಾಖಲಾಗಲಿದೆ. ಇದು 2023-24ನೇ ಆರ್ಥಿಕ ವರ್ಷದಲ್ಲಿ ದಾಖಲಾಗಿದ್ದ, ಶೇ 8.2ರಷ್ಟಕ್ಕಿಂತಲೂ ಕಡಿಮೆಯಿದೆ ಎಂದು ಹೇಳಿದೆ.

'ಜೂನ್ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆಯು ಮಂದಗತಿಯಲ್ಲಿದೆ. ಈ ಹಿಂದಿನ ಆರು ತ್ರೈಮಾಸಿಕದ ಕನಿಷ್ಠ ಮಟ್ಟಕ್ಕೆ ದಾಖಲಾಗಲಿದೆ' ಎಂದು ತಿಳಿಸಿದೆ.



ಆಗಸ್ಟ್ 30ರಂದು ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯವು ಜೂನ್ ತ್ರೈಮಾಸಿಕದ ಜಿಡಿಪಿ ವರದಿಯನ್ನು ಬಿಡುಗಡೆ ಮಾಡಲಿದೆ.

2023-24ನೇ ಜೂನ್ ತ್ರೈಮಾಸಿಕದಲ್ಲಿ ಜಿಡಿಪಿಯು ಶೇ 8.2ರಷ್ಟು ದಾಖಲಾಗಿತ್ತು.

'ಲೋಕಸಭಾ ಚುನಾವಣೆಯಿಂದಾಗಿ ಜೂನ್ ತ್ರೈಮಾಸಿಕದಲ್ಲಿ ಕೇಂದ್ರ ಮತ್ತು ರಾಜ್ಯಗಳ ಸಾರ್ವಜನಿಕ ವೆಚ್ಚದಲ್ಲಿ ಇಳಿಕೆಯಾಗಿತ್ತು. ಇದರಿಂದ ಕೆಲವು ವಲಯಗಳ ಬೆಳವಣಿಗೆಗೆ ತಾತ್ಕಾಲಿಕ ಹಿನ್ನಡೆಯಾಗಿದೆ. ಇದು ಆರ್ಥಿಕತೆ ಬೆಳವಣಿಗೆ ಮೇಲೂ ಪರಿಣಾಮ ಬೀರಿದೆ' ಎಂದು ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ತಿಳಿಸಿದ್ದಾರೆ.

ಭಾರತೀಯ ರಿಸರ್ವ್ ಬ್ಯಾಂಕ್‌ನ ಗ್ರಾಹಕರ ವಿಶ್ವಾಸ ಸಮೀಕ್ಷೆ ಅನ್ವಯ ನಗರ ಪ್ರದೇಶದಲ್ಲಿ ಗ್ರಾಹಕರ ವಿಶ್ವಾಸವು ಅಚ್ಚರಿಯ ರೀತಿಯಲ್ಲಿ ಕುಸಿದಿದೆ. ಕಳೆದ ವರ್ಷ ಮುಂಗಾರು ಉತ್ತಮವಾಗಿರಲಿಲ್ಲ. ಇದು ಗ್ರಾಮೀಣ ಪ್ರದೇಶದ ಸುಧಾರಣೆಗೆ ಅಡ್ಡಿಯಾಯಿತು' ಎಂದು ಹೇಳಿದ್ದಾರೆ.

ಕೆಲವು ಕೈಗಾರಿಕಾ ವಲಯಗಳಲ್ಲಿ ಸರಕುಗಳ ಬೆಲೆ ಹೆಚ್ಚಳವಾಗಿದೆ. ಇದರಿಂದ ಕೈಗಾರಿಕೆಗಳ ಲಾಭದಾಯಕತೆಗೆ ಪೆಟ್ಟು ನೀಡಿದೆ ಎಂದು ಹೇಳಿದ್ದಾರೆ.

ಹಲವು ಸೇವಾ ವಲಯಗಳ ಮೇಲೆ ಬಿಸಿ ಗಾಳಿಯು ಪರಿಣಾಮ ಬೀರಿತು. ಇದು ವಿದ್ಯುತ್ ಬೇಡಿಕೆ ಪ್ರಮಾಣವನ್ನು ಹೆಚ್ಚಿಸಿತು. ಹಾಗಾಗಿ, ಜೂನ್ ತ್ರೈಮಾಸಿಕದ ಆಂತರಿಕ ಉತ್ಪನ್ನದಲ್ಲಿನ ಒಟ್ಟು ಮೌಲ್ಯವರ್ಧನೆಯ (ಜಿವಿಎ) ವೇಗ ಕೂಡ ಮಂದಗತಿಯಲ್ಲಿದೆ (ಶೇ 5.7ರಷ್ಟು) ಎಂದು ಹೇಳಿದ್ದಾರೆ.

## 'ಇ-ಕಾಮರ್ಸ್‌ಗೆ ವಿರೋಧವಿಲ್ಲ'

ಮುಂಬೈ (ಪಿಟಿಐ): 'ಭಾರತವು ಇ-ಕಾಮರ್ಸ್ ಕಂಪನಿಗಳ ವಿರುದ್ಧವಿಲ್ಲ. ಆದರೆ, ಕಂಪನಿಗಳು ನ್ಯಾಯೋಚಿತ ಹಾಗೂ ಪ್ರಾಮಾಣಿಕವಾಗಿ ವ್ಯವಹಾರ ನಡೆಸುವುದನ್ನು ಅಪೇಕ್ಷಿಸುತ್ತದೆ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ಅಮೆಜಾನ್, ಫ್ಲಿಪ್‌ಕಾರ್ಟ್‌ನಂತಹ ದೈತ್ಯ ಕಂಪನಿಗಳು ಸ್ಪರ್ಧಿಸಲು ಸಾಧ್ಯವೇ ಇಲ್ಲದಷ್ಟು ಕಡಿಮೆ ಬೆಲೆಯನ್ನು ನಿಗದಿ ಮಾಡುತ್ತಿವೆ. ಇದರಿಂದ ಸ್ಥಳೀಯ ಮಾರುಕಟ್ಟೆ ಹಾಗೂ ಉದ್ಯೋಗದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂದು ಗೋಯಲ್ ಹೇಳಿದ್ದು, ಚರ್ಚೆಗೆ ಗ್ರಾಸವಾಗಿತ್ತು. 'ನಾವು ವಿದೇಶಿ ನೇರ ಬಂಡವಾಳ ಹೂಡಿಕೆಗೆ ಆಹ್ವಾನ ನೀಡುತ್ತೇವೆ. ಹೊಸ ತಂತ್ರಜ್ಞಾನಕ್ಕೂ ಅಷ್ಟೇ ಮನ್ನಣೆ ನೀಡುತ್ತೇವೆ. ಜಾಗತಿಕ ಮಟ್ಟದಲ್ಲಿ ಉನ್ನತ ಸ್ತರದಲ್ಲಿ ಇರುವುದಕ್ಕೆ ಇಚ್ಛಿಸುತ್ತೇವೆ. ಯಾವುದೇ ಕಂಪನಿಯ ವಿರುದ್ಧವಿಲ್ಲ. ಗ್ರಾಹಕರಿಗೆ ಸರಕು ಮತ್ತು ಸೇವೆ ಪೂರೈಕೆಯಲ್ಲಿ ಪ್ರಾಮಾಣಿಕತೆ ಕಾಯ್ದುಕೊಳ್ಳಬೇಕು ಎಂಬುದು ಭಾರತದ ಅಪೇಕ್ಷೆಯಾಗಿದೆ' ಎಂದು ಹೇಳಿದ್ದಾರೆ.

**ಅಡಿಕೆ ಮಾರುಕಟ್ಟೆ ಧಾರಣೆ**



| | |
|---|---|
| **ಬಂಟ್ವಾಳ** | |
| ಕೋಕ | 18000-28500 |
| ಹೊಸತು | 28500-39500 |
| ಹಳತು | 39500-47500 |
| **ಕಾರ್ಕಳ** | |
| ಹೊಸತು | 25000-39500 |
| ಹಳತು | 30000-47500 |
| **ಕುಮಟ** | |
| ಚಿಪ್ಪು | 13099-31111 |
| ಕೋಕ | 11200-28111 |
| ಹಳೆಚಾಲಿ | 35369-39799 |
| ಹೊಸಚಾಲಿ | 31869-35699 |
| **ಶಿರಸಿ** | |
| ಬೆಟ್ಟೆ | 30260-38618 |
| ಬಿಳಿಗೋಟು | 20505-29790 |
| ಚಾಲಿ | 32550-36711 |
| ಕೆಂಪುಗೋಟು | 23405-27699 |
| **ಸಿದ್ದಾಪುರ** | |
| ಬಿಳಿಗೋಟು | 25699-28500 |
| ಕೋಕ | 22899-28699 |
| ಚಾಲಿ | 33009-35400 |
| ಕೆಂಪುಗೋಟು | 23019-25689 |
| ರಾಶಿ | 42599-47619 |
| ತಟ್ಟಿಬೆಟ್ಟೆ | 33889-38099 |
| **ಶಿವಮೊಗ್ಗ** | |
| ಬೆಟ್ಟೆ | 44114-55200 |
| ಗೊರಬಲು | 19850-32900 |
| ರಾಶಿ | 31009-48799 |
| ಸರಕು | 51000-88996 |
| **ಸಾಗರ** | |
| ಬಿಳಿಗೋಟು | 12099-26386 |
| ಚಾಲಿ | 16199-33369 |
| ಕೋಕ | 12099-26599 |
| ಕೆಂಪುಗೋಟು | 23899-32009 |
| ರಾಶಿ | 27099-48499 |
| ಸಿಪ್ಪೆಗೋಟು | 13189-17699 |
| **ಚನ್ನಗಿರಿ** | |
| ರಾಶಿ | 38599-48600 |

## ಬಾಂಗ್ಲಾ: ವಿಶ್ವಸಂಸ್ಥೆ ತಜ್ಞರ ತಂಡ ಭೇಟಿ

ಢಾಕಾ (ಪಿಟಿಐ): ಬಾಂಗ್ಲಾದೇಶದಲ್ಲಿ ನಡೆದ ಮೀಸಲಾತಿ ವಿರೋಧಿ ಪ್ರತಿಭಟನೆಯಲ್ಲಿ 650 ಮಂದಿ ಮೃತಪಟ್ಟ ಪ್ರಕರಣದ ಕುರಿತು ತನಿಖೆಯ ರೂಪುರೇಷೆ ಸಿದ್ಧಪಡಿಸಲು ತಜ್ಞರನ್ನು ಒಳಗೊಂಡ ತಂಡವು ಗುರುವಾರ ರಾಜಧಾನಿ ಢಾಕಾಗೆ ಬಂದಿಳಿಯಿತು.


'ದೌರ್ಜನ್ಯ ಕುರಿತು ತನಿಖೆ ನಡೆಸಲು ಪ್ರಾಥಮಿಕ ಹಂತವಾಗಿ ಈ ತಂಡವು ಬಂದಿಳಿದಿದೆ. ವಿಶ್ವಸಂಸ್ಥೆಯ ಸತ್ಯಶೋಧನಾ ತಂಡ ಬರುವ ಮುನ್ನ ತನಿಖೆಯ ಚೌಕಟ್ಟು ರೂಪಿಸುವ ನಿಟ್ಟಿನಲ್ಲಿ ಬಾಂಗ್ಲಾದೇಶದೊಂದಿಗೆ ಒಪ್ಪಂದವನ್ನು ಎದುರು ನೋಡುತ್ತಿದ್ದೇವೆ' ಎಂದು ವಿಶ್ವಸಂಸ್ಥೆಯ ಅಧಿಕಾರಿಯೊಬ್ಬರ ಹೇಳಿಕೆಯನ್ನು ಉಲ್ಲೇಖಿಸಿ 'ದಿ ಡೈಲಿ ಸ್ಟಾರ್' ಸುದ್ದಿಪತ್ರಿಕೆ ವರದಿ ಮಾಡಿದೆ.

'ಜುಲೈ 1ರಿಂದ ಆಗಸ್ಟ್ 15ರ ತನಕ ನಡೆದ ಎಲ್ಲ ಮಾದರಿಯ ಮಾನವ ಹಕ್ಕುಗಳ ಉಲ್ಲಂಘನೆಯ ಬಗೆಗೆ ಹಾಗೂ ತನಿಖೆಗೆ ಪೂರಕವಾದ ನಿಯಮ-ಷರತ್ತುಗಳ ಕುರಿತಂತೆಯೂ ಮಧ್ಯಂತರ ಸರ್ಕಾರದ ಅಧಿಕಾರಿಗಳ ಜತೆ ಚರ್ಚೆ ನಡೆಸಲಿದೆ. ಒಂದು ವಾರ ತಂಡವು ಢಾಕಾದಲ್ಲಿಯೇ ಉಳಿಯಲಿದೆ.

## ಟೆಕ್ಸಾಸ್: ಅತಿ ಎತ್ತರದ ಹನುಮ ಪ್ರತಿಮೆ ಅನಾವರಣ

ಹೂಸ್ಟನ್ (ಪಿಟಿಐ): ಟೆಕ್ಸಾಸ್‌ನಲ್ಲಿನ ಅತಿ ಎತ್ತರದ 90 ಅಡಿಯ ಹನುಮಂತನ ಕಂಚಿನ ಪ್ರತಿಮೆಯನ್ನು ಅನಾವರಣಗೊಳಿಸಲಾಗಿದ್ದು, ಇದಕ್ಕೆ 'ಯೂನಿಯನ್ ಪ್ರತಿಮೆ' ಎಂದು ಹೆಸರಿಡಲಾಗಿದೆ.

ವಿಶ್ವದ ಅತಿ ಎತ್ತರದ ಪ್ರತಿಮೆಗಳಲ್ಲಿ ಯೂನಿಯನ್ ಪ್ರತಿಮೆಯೂ ಒಂದಾಗಿದ್ದು, ಇದು ಅಮೆರಿಕದ 3ನೇ ಅತಿ ಎತ್ತರದ ಪ್ರತಿಮೆ. ಭಾರತದ ಹೊರಗಿರುವ ಹನುಮಂತನ ಪ್ರತಿಮೆಗಳಲ್ಲೇ ಅತ್ಯಂತ ಎತ್ತರದ್ದು. ನ್ಯೂಯಾರ್ಕ್‌ನಲ್ಲಿರುವ ಸ್ಟ್ಯಾಚ್ಯೂ ಆಫ್ ಲಿಬರ್ಟಿ (151



ಅಡಿ) ಮತ್ತು ಫ್ಲಾರಿಡಾದ ಹಾಲಂಡೇಲ್ ಬೀಚ್‌ನಲ್ಲಿರುವ ಪೆಗಾಸಸ್ ಮತ್ತು ಡ್ರ್ಯಾಗನ್ (110 ಅಡಿ) ಹೊರತುಪಡಿಸಿದರೆ, ಇಲ್ಲಿ ಅತಿ ಎತ್ತರದ ಪ್ರತಿಮೆ ಇದಾಗಿದೆ.

ವಿಮೆ ಪ್ರೀಮಿಯಂ ಮೇಲಿನ ತೆರಿಗೆ ಕಡಿತ ಕುರಿತು ಚರ್ಚೆ

# ಜಿಎಸ್‌ಟಿ ಸರಳೀಕರಣಕ್ಕೆ ಆಕ್ಷೇಪ

ನವದೆಹಲಿ (ಪಿಟಿಐ): ಜಿಎಸ್‌ಟಿ ವ್ಯವಸ್ಥೆಯಡಿ ತೆರಿಗೆ ಪ್ರಮಾಣ ಸರಳಗೊಳಿಸಲು ರಚಿಸಿರುವ ಏಳು ಸಚಿವರನ್ನು ಒಳಗೊಂಡ ಸಮಿತಿ ಸಭೆಯು ಗುರುವಾರ ನಡೆಯಿತು.



ಜಿಎಸ್‌ಟಿ ಅಡಿ ರಚಿಸಿರುವ ನಾಲ್ಕು ಸ್ಲ್ಯಾಬ್‌ಗಳ ಪರಿಷ್ಕರಣೆ ಮತ್ತು ಕೆಲವು ಸರಕುಗಳಿಗೆ ಜಿಎಸ್‌ಟಿ ಕಡಿತಗೊಳಿಸುವ ಬಗ್ಗೆಯೂ ಚರ್ಚಿಸಲಾಯಿತು. ಆರೋಗ್ಯ ಮತ್ತು ಜೀವ ವಿಮೆ ಪ್ರೀಮಿಯಂ ಮೇಲಿನ ಶೇ 18ರಷ್ಟು ಜಿಎಸ್‌ಟಿ ಕಡಿತಗೊಳಿಸುವ ಬಗ್ಗೆಯೂ ಕೆಲವು ಸಚಿವರು ಸಭೆಯಲ್ಲಿ ಪ್ರಸ್ತಾಪಿಸಿದರು ಎಂದು ಹೇಳಲಾಗಿದೆ.

ತೆರಿಗೆ ಪ್ರಮಾಣ ಸರಳಗೊಳಿಸುವುದಕ್ಕೆ ಸಂಬಂಧಿಸಿದಂತೆ ಹೆಚ್ಚಿನ ದತ್ತಾಂಶ ಸಂಗ್ರಹಿಸಲು ಕೇಂದ್ರ ಮತ್ತು ರಾಜ್ಯಗಳ ತೆರಿಗೆ ಅಧಿಕಾರಿಗಳನ್ನು ಒಳಗೊಂಡಿರುವ ಸಮಿತಿಗೆ ಸೂಚಿಸಲಾಯಿತು.

**ಸ್ಲ್ಯಾಬ್ ಬದಲಾವಣೆಗೆ ಆಕ್ಷೇಪ:** ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಮಿತಿಯ ಸಂಚಾಲಕರಾದ ಬಿಹಾರದ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ, 'ಸ್ಲ್ಯಾಬ್‌ಗಳ ಬದಲಾವಣೆ ಮಾಡದಂತೆ ಕೆಲವು ಸಚಿವರು ಒತ್ತಾಯಿಸಿದ್ದಾರೆ' ಎಂದರು.

'ಈ ಬಗ್ಗೆ ಹೆಚ್ಚಿನ ಚರ್ಚೆ ನಡೆಯಬೇಕಿದೆ. ಆ ಬಳಿಕ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು' ಎಂದರು.

ಪಶ್ಚಿಮ ಬಂಗಾಳದ ಹಣಕಾಸು ಸಚಿವೆ ಚಂದ್ರಿಮಾ ಭಟ್ಟಾಚಾರ್ಯ ಮಾತನಾಡಿ, 'ತೆರಿಗೆ ಸ್ಲ್ಯಾಬ್‌ನಲ್ಲಿ ಬದಲಾವಣೆ ಮಾಡದಂತೆ ಒತ್ತಾಯಿಸಿದ್ದೇನೆ' ಎಂದರು.

ಕರ್ನಾಟಕದ ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಾತನಾಡಿ, 'ಜಿಎಸ್‌ಟಿ ಪದ್ಧತಿ ಸದೃಢವಾಗಿದೆ' ಎಂದರು.

'ಆರೋಗ್ಯ ಮತ್ತು ಜೀವ ವಿಮೆ ಪ್ರೀಮಿಯಂಗೆ ವಿಧಿಸುವ ಜಿಎಸ್‌ಟಿ ಕೈಬಿಡುವ ಬಗ್ಗೆ ಮತ್ತಷ್ಟು ವಿವರ ನೀಡಲು ಅಧಿಕಾರಿಗಳ ಸಮಿತಿಗೆ ಕೋರಲಾಗಿದೆ. ಸೆಪ್ಟೆಂಬರ್ 9ರಂದು ನಡೆಯುವ ಮಂಡಳಿಯ ಸಭೆಯ ಕಾರ್ಯಸೂಚಿಯಲ್ಲಿ ಈ ವಿಷಯ ಸೇರ್ಪಡೆಯಾಗಲಿದೆ ಎಂಬುದನ್ನು ಖಚಿತವಾಗಿ ಹೇಳಲು ಸಾಧ್ಯವಿಲ್ಲ' ಎಂದರು.

## ದರ ಕುಸಿತ: ರಸ್ತೆಗೆ ಟೊಮೆಟೊ ಸುರಿದ ರೈತರು

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ಬೆಲೆ ಕುಸಿತ ಹಾಗೂ ಹೂಜಿ ರೋಗ ಬಾಧೆಯಿಂದ ಬೇಸತ್ತ ರೈತರು ಪಟ್ಟಣದ ಎಪಿಎಂಸಿ ರಸ್ತೆಯ ಬದಿ ಗುರುವಾರ ಟೊಮೆಟೊ ಸುರಿದು ಆಕ್ರೋಶ ವ್ಯಕ್ತಪಡಿಸಿದರು.

ಸದ್ಯ ಗ್ರೇಡ್2 ಟೊಮೆಟೊ ದರ 25 ಕೆ.ಜಿಯ ಪ್ರತಿ ಬಾಕ್ಸ್‌ಗೆ ₹50ಕ್ಕೆ ಕುಸಿದಿದೆ. ಪ್ರತಿ ಕೆಜಿ ಟೊಮೆಟೊ ಬೆಲೆ ₹2 ಆಗಿದೆ. 'ರೋಗಬಾಧೆಯೂ ಕಾಡುತ್ತಿದ್ದು ಗ್ರಾಹಕರು ಖರೀದಿಗೆ ಆಸಕ್ತಿ ತೋರುತ್ತಿಲ್ಲ. ಮನೆಗೂ ಸಾಗಿಸಲಾಗದೆ ಮಾರಾಟ ಮಾಡಲೂ ಆಗದ ಪರಿಸ್ಥಿತಿ ಎದುರಾಗಿದೆ' ಎಂದು ರೈತರು ಅಲವತ್ತುಕೊಂಡರು. 'ಕೇರಳ ಹಾಗೂ ತಮಿಳುನಾಡು ಗಡಿಗೆ ಹತ್ತಿರವಾಗಿರುವುದರಿಂದ ಅಲ್ಲಿನವರೂ ಇಲ್ಲಿನ ಎಪಿಎಂಸಿಯಲ್ಲಿ ಹೆಚ್ಚು ತರಕಾರಿ ಖರೀದಿಸುತ್ತಾರೆ. ಅಲ್ಲಿಯೂ ಮಳೆಯಾಗುತ್ತಿದೆ. ಇದರಿಂದ ಖರೀದಿಗೆ ಉತ್ಸಾಹ ತೋರುತ್ತಿಲ್ಲ. ತಾಲ್ಲೂಕಿನಲ್ಲೂ ಮಳೆಯಾಗುತ್ತಿದೆ. ಇದರಿಂದ ರೋಗಬಾಧೆ ಕಾಣಿಸಿಕೊಂಡಿದ್ದು, ಗುಣಮಟ್ಟದೊಂದಿಗೆ ದರವೂ ಕುಸಿದಿದೆ' ಎಂದು ನೋವು ತೋಡಿಕೊಂಡರು.

ಪೋಲೆಂಡ್ ಪ್ರಧಾನಿ ಡೊನಾಲ್ಡ್ ಟಸ್ಕ್ ಜೊತೆ ಮೋದಿ ಮಾತುಕತೆ

# 'ಶಾಂತಿ ಸ್ಥಾಪನೆಗೆ ಭಾರತದ ನೆರವು'

ವಾಸಾ (ಪೋಲೆಂಡ್) (ಪಿಟಿಐ): ಯಾವುದೇ ಸಮಸ್ಯೆಗೆ ಯುದ್ಧರಂಗದಲ್ಲಿ ಪರಿಹಾರ ಕಂಡುಕೊಳ್ಳಲು ಸಾಧ್ಯವಿಲ್ಲ ಎಂಬುದು ಭಾರತದ ಬಲವಾದ ನಂಬಿಕೆ ಎಂದು ಹೇಳಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಈ ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರತೆಯ ಪುನರ್‌ಸ್ಥಾಪನೆಗೆ ಸಾಧ್ಯವಿರುವ ಎಲ್ಲ ರೀತಿಯ ಸಹಕಾರ ನೀಡಲು ಭಾರತ ಸಿದ್ಧವಿದೆ ಎಂದು ಹೇಳಿದ್ದಾರೆ.

ಯುದ್ಧಪೀಡಿತ ಉಕ್ರೇನ್‌ಗೆ ಭೇಟಿ ನೀಡುವ ಒಂದು ದಿನ ಮೊದಲು ಪ್ರಧಾನಿ ಈ ಮಾತು ಹೇಳಿದ್ದಾರೆ. ಪೋಲೆಂಡ್ ಪ್ರಧಾನಿ ಡೊನಾಲ್ಡ್ ಟಸ್ಕ್ ಅವರ ಜೊತೆ ವಿಸ್ತೃತ ಮಾತುಕತೆ ನಡೆಸಿದ ಮೋದಿ ಅವರು ಹೀಗೆ ಹೇಳಿದ್ದಾರೆ.

ಪೋಲೆಂಡ್ ಹಾಗೂ ಉಕ್ರೇನ್ ಪ್ರವಾಸಕ್ಕೆ ತೆರಳಿರುವ ಮೋದಿ ಅವರು, ಪೋಲೆಂಡ್‌ನಿಂದ ಉಕ್ರೇನ್ ರಾಜಧಾನಿ ಕೀವ್‌ಗೆ ರೈಲಿನ ಮೂಲಕ ತೆರಳಲಿದ್ದಾರೆ. ಉಕ್ರೇನ್‌ಗೆ ಭೇಟಿ ನೀಡುವಂತೆ ಮೋದಿ ಅವರಿಗೆ ಅಲ್ಲಿನ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಆಹ್ವಾನ ನೀಡಿದ್ದರು.

ರೈಲು ಪ್ರಯಾಣವು ಅಂದಾಜು 10 ತಾಸಿನದ್ದಾಗಿರಲಿದೆ. ಮೋದಿ ಅವರು ಕೀವ್‌ನಲ್ಲಿ ಸುಮಾರು ಏಳು ತಾಸು ಇರಲಿದ್ದಾರೆ.

'ಉಕ್ರೇನ್ ಮತ್ತು ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟು ನಮ್ಮೆಲ್ಲರಿಗೂ ಕಳವಳ ಮೂಡಿಸುವಂಥದ್ದು' ಎಂದು ಮೋದಿ ಅವರು ಟಸ್ಕ್ ಜೊತೆಗಿನ ಮಾತುಕತೆ ನಂತರ ಬಿಡುಗಡೆ ಮಾಡಿರುವ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.



ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಪೋಲೆಂಡ್ ಪ್ರಧಾನಿ ಡೊನಾಲ್ಡ್ ಟಸ್ಕ್ ಅವರು ವಾಸಾದಲ್ಲಿ ಗುರುವಾರ ಪತ್ರಿಕಾಗೋಷ್ಠಿ ನಡೆಸಿದ ನಂತರ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು —ಎಎಫ್‌ಪಿ ಚಿತ್ರ

'ಯಾವುದೇ ಬಿಕ್ಕಟ್ಟು ಸೃಷ್ಟಿಯಾದಾಗ ಅಮಾಯಕರು ಪ್ರಾಣ ಕಳೆದುಕೊಳ್ಳುವುದು ಇಡೀ ಮನುಕುಲಕ್ಕೆ ಬಹಳ ದೊಡ್ಡ ಸವಾಲಾಗಿ ಪರಿಣಮಿಸಿದೆ. ಶಾಂತಿ ಮತ್ತು ಸ್ಥಿರತೆ ಬಹುಬೇಗ ಮರಳುವಂತೆ ಆಗಲು ನಾವು ಮಾತುಕತೆ ಮತ್ತು ರಾಜತಾಂತ್ರಿಕ ಮಾರ್ಗವನ್ನು ಬೆಂಬಲಿಸುತ್ತೇವೆ' ಎಂದು ಮೋದಿ ಅವರು ಹೇಳಿದ್ದಾರೆ.

'ಈ ವರ್ಷ ನಾವು ಪೋಲೆಂಡ್ ಜೊತೆಗಿನ ನಮ್ಮ ರಾಜತಾಂತ್ರಿಕ ಸಂಬಂಧದ 70ನೆಯ ವರ್ಷವನ್ನು ಆಚರಿಸುತ್ತಿದ್ದೇವೆ. ಈ ಸಂದರ್ಭದಲ್ಲಿ ನಾವು ಸಂಬಂಧವನ್ನು ಪರಸ್ಪರ ಸಹಕಾರದ, ಉನ್ನತ ಮಟ್ಟದ ಸಂಬಂಧವನ್ನಾಗಿ ಪರಿವರ್ತಿಸುತ್ತಿದ್ದೇವೆ' ಎಂದೂ ಅವರು ಹೇಳಿದ್ದಾರೆ.

'ಭಾರತದಲ್ಲಿಯೇ ತಯಾರಿಸಿ' ಉಪಕ್ರಮಕ್ಕೆ ಕೈಜೋಡಿಸುವಂತೆ ಮೋದಿ ಅವರು ಪೋಲೆಂಡ್ ಕಂಪನಿಗಳನ್ನು ಆಹ್ವಾನಿಸಿದರು. ಪೋಲೆಂಡ್ ಪ್ರಧಾನಿ ಜೊತೆಗಿನ ಮಾತುಕತೆಗೂ ಮೊದಲು ಮೋದಿ ಅವರಿಗೆ ಕೆಂಪುಹಾಸಿನ ಸ್ವಾಗತ ನೀಡಲಾಯಿತು.

ಪೋಲೆಂಡ್ ಅಧ್ಯಕ್ಷ ಆಂಡ್ರೆ ಸೆಬಾಸ್ಟಿಯನ್ ಡೂಡಾ ಅವರ ಜೊತೆಗೂ ಪ್ರಧಾನಿ ಮೋದಿ ದ್ವಿಪಕ್ಷೀಯ ಸಂಬಂಧ ಸುಧಾರಿಸುವ ನಿಟ್ಟಿನಲ್ಲಿ ಮಾತುಕತೆ ನಡೆಸಿದರು.

> ಉಕ್ರೇನ್ ಮತ್ತು ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟು ನಮ್ಮೆಲ್ಲರಿಗೂ ಕಳವಳ ಮೂಡಿಸುವಂಥದ್ದು. ಇದಕ್ಕಾಗಿ ರಾಜತಾಂತ್ರಿಕ ಮಾರ್ಗ ಅನಿವಾರ್ಯ
> **ನರೇಂದ್ರ ಮೋದಿ,** ಭಾರತದ ಪ್ರಧಾನಿ

**ಮುಖ್ಯಾಂಶಗಳು**

- ಅಮಾಯಕರು ಪ್ರಾಣ ಕಳೆದುಕೊಳ್ಳುವುದು ಮನುಕುಲಕ್ಕೆ ಸವಾಲು
- ಭಾರತದಲ್ಲಿಯೇ ತಯಾರಿಸಲು ಪೋಲೆಂಡ್ ಕಂಪನಿಗಳಿಗೆ ಆಹ್ವಾನ
- ಉಕ್ರೇನ್‌ಗೆ ರೈಲಿನಲ್ಲೇ ಸಾಗಲಿರುವ ಮೋದಿ

### ಪ್ರತಿಭಟನೆನಿರತ ರೈತರ ಬೇಡಿಕೆಗಳ ಇತ್ಯರ್ಥಕ್ಕೆ ಸಮಿತಿ ರಚನೆ

# ರೈತರ ಮನವೊಲಿಸಿ; ಟ್ರ್ಯಾಕ್ಟರ್, ಟ್ರಾಲಿ ತೆರವುಗೊಳಿಸಿ: 'ಸುಪ್ರೀಂ'

**ನವದೆಹಲಿ (ಪಿಟಿಐ):** ಉಭಯ ರಾಜ್ಯಗಳ ನಡುವಣ ಶಂಭು ಗಡಿಯಲ್ಲಿ ನಿಲ್ಲಿಸಲಾಗಿರುವ ಟ್ರ್ಯಾಕ್ಟರ್‌ಗಳು ಹಾಗೂ ಟ್ರಾಲಿಗಳನ್ನು ಪ್ರತಿಭಟನೆನಿರತ ರೈತರ ಮನವೊಲಿಸಿ, ತೆರವುಗೊಳಿಸಿ ಎಂದು ಹರಿಯಾಣ ಮತ್ತು ಪಂಜಾಬ್ ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಗುರುವಾರ ಸೂಚಿಸಿದೆ.

ಜೊತೆಗೆ, 'ಕೃಷಿಕರ ಎಲ್ಲ ಬೇಡಿಕೆಗಳನ್ನು ಸೌಹಾರ್ದವಾಗಿ ಚರ್ಚಿಸಿ, ಪರಿಹಾರ ಕಲ್ಪಿಸಲು ಬಹುಸದಸ್ಯರ ಸಮಿತಿ ರಚಿಸಲಾಗುವುದು' ಎಂದೂ ಸುಪ್ರೀಂ ಕೋರ್ಟ್ ಹೇಳಿದೆ.

ಈ ವಿಚಾರಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ದೀಪಂಕರ್ ದತ್ತಾ, ಉಜ್ಜಲ್ ಭುಯಾಂ ಅವರಿದ್ದ ಪೀಠವು ನಡೆಸಿತು.

'ಸುಪ್ರೀಂ ಕೋರ್ಟ್ ಹಾಗೂ ಎರಡೂ ರಾಜ್ಯಗಳ ಸರ್ಕಾರಗಳಿಗೆ ನಿಮ್ಮ ಬೇಡಿಕೆಗಳು/ಸಮಸ್ಯೆಗಳ ಕುರಿತು ಕಾಳಜಿ ಇದೆ ಎಂಬುದನ್ನು ಪ್ರತಿಭಟನೆನಿರತ ರೈತರಿಗೆ ಮನವರಿಕೆ ಮಾಡಿಕೊಡಬೇಕು. ಅವರ ಸಮಸ್ಯೆಗಳ ಇತ್ಯರ್ಥಕ್ಕಾಗಿ ಸಮಿತಿಯೊಂದನ್ನು ರಚಿಸಲಾಗುತ್ತದೆ' ಎಂಬುದನ್ನು ತಿಳಿಸುವಂತೆ ಹರಿಯಾಣ ಮತ್ತು ಪಂಜಾಬ್ ಸರ್ಕಾರಗಳಿಗೆ ಹೇಳಿದ ಪೀಠ, ವಿಚಾರಣೆಯನ್ನು ಸೆಪ್ಟೆಂಬರ್ 2ಕ್ಕೆ ಮುಂದೂಡಿತು.

#### ನ್ಯಾಯಪೀಠದ ಸೂಚನೆಗಳು



- ರೈತರೊಂದಿಗೆ ಮಾತುಕತೆ ನಡೆಸುವ ಕಾರ್ಯವನ್ನು ಪಂಜಾಬ್ ಮತ್ತು ಹರಿಯಾಣ ಸರ್ಕಾರಗಳು ಜಂಟಿಯಾಗಿ ನಿಭಾಯಿಸಬೇಕು
- ಮುಂದಿನ ವಿಚಾರಣೆ ವೇಳೆ, ಮಾತುಕತೆಯಲ್ಲಿನ ಪ್ರಗತಿ ಕುರಿತು ನ್ಯಾಯಾಲಯಕ್ಕೆ ಮಾಹಿತಿ ನೀಡಬೇಕು
- ರೈತರೊಂದಿಗೆ ಮಾತುಕತೆ ನಂತರ ಉಭಯ ರಾಜ್ಯ ಸರ್ಕಾರಗಳಿಗೆ ಶಿಫಾರಸುಗಳನ್ನು ಮಾಡುವ ಅಧಿಕಾರವನ್ನು ಸಮಿತಿ ಹೊಂದಿರಲಿದೆ. ಅಗತ್ಯವೆನಿಸಿದಲ್ಲಿ ಕೇಂದ್ರ ಸರ್ಕಾರಕ್ಕೂ ಶಿಫಾರಸುಗಳನ್ನು ಮಾಡಬಹುದು

'ರೈತರಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಒಳಗೊಂಡ ಪಟ್ಟಿಯನ್ನು ಸಲ್ಲಿಸುವಂತೆ ಕ್ರಮವಾಗಿ ಪಂಜಾಬ್ ಮತ್ತು ಹರಿಯಾಣ ರಾಜ್ಯಗಳ ಅಡ್ವೊಕೇಟ್ ಜನರಲ್ ಹಾಗೂ ಎಎಜಿ ಅವರಿಗೆ ಸಲಹೆ ನೀಡಿದ್ದೇವೆ. ರಚನೆಗೊಳ್ಳಲಿರುವ ಸಮಿತಿಯು ಕೂಡ ಈ ಸಮಸ್ಯೆಗಳನ್ನು ಗಮನಿಸಲಿದೆ' ಎಂದು ನ್ಯಾಯಮೂರ್ತಿಗಳು ತಿಳಿಸಿದ್ದಾರೆ.

'ಪ್ರಸ್ತಾವಿತ ಸಮಿತಿಯು ಪರಿಶೀಲನೆ ನಡೆಸಲಿರುವ ವಿಚಾರಗಳ ವ್ಯಾಪ್ತಿಯು ದೊಡ್ಡದಾಗಿರಲಿದೆ ಎಂದು ಪೀಠ ಈಗಾಗಲೇ ಸ್ಪಷ್ಟಪಡಿಸಿದೆ. ಬರುವ ದಿನಗಳಲ್ಲಿ, ಕಾನೂನು ಮತ್ತು ಸುವ್ಯವಸ್ಥೆಗೆ ಪದೇಪದೇ ಅಡ್ಡಿಯಾಗಬಹುದಾದ ಸಮಸ್ಯೆಗಳನ್ನು ಗುರುತಿಸಿ, ಸೌಹಾರ್ದ ಹಾಗೂ ನ್ಯಾಯಯುತವಾಗಿ ಬಗೆಹರಿಸುವ ದಿಸೆಯಲ್ಲಿ ಸಮಿತಿ ಶಿಫಾರಸುಗಳನ್ನು ಮಾಡಲಿದೆ. ಈ ಕುರಿತು ಮೂರು ದಿನಗಳಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ಪೀಠ ಸೂಚಿಸಿದೆ.

ಅರ್ಜಿದಾರರೊಬ್ಬರ ಪರ ಹಾಜರಿದ್ದ ವಕೀಲರು, 'ಪಂಜಾಬ್ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿರುವ ಪ್ರತಾಪ್ ಸಿಂಗ್ ಬಾಜ್ವಾ ಅವರು ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿರುವ ಅರ್ಜಿಯ ಮೂಲ ದಾವೆದಾರರಾಗಿದ್ದಾರೆ. ಹೀಗಾಗಿ, ಉದ್ದೇಶಿತ ಸಮಿತಿಯಲ್ಲಿ ಅವರನ್ನು ಸೇರ್ಪಡೆ ಮಾಡಬೇಕು' ಎಂದು ಪೀಠವನ್ನು ಕೋರಿದರು.

ಹರಿಯಾಣ ಸರ್ಕಾರದ ಪರ ಹಾಜರಿದ್ದ, ಹಿರಿಯ ಹೆಚ್ಚುವರಿ ಅಡ್ವೊಕೇಟ್ ಜನರಲ್ ಲೋಕೇಶ್ ಸಿನ್ಹಾಲ್ ಇದಕ್ಕೆ ವಿರೋಧ ವ್ಯಕ್ತಪಡಿಸಿ, 'ಉದ್ದೇಶಿತ ಸಮಿತಿಯಲ್ಲಿ ಯಾವ ರಾಜಕೀಯ ವ್ಯಕ್ತಿಯೂ ಇರಕೂಡದು' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಪೀಠ, 'ಯಾವುದೇ ರಾಜಕೀಯ ವ್ಯಕ್ತಿಯನ್ನು ಈ ಸಮಿತಿ ಸದಸ್ಯರನ್ನಾಗಿ ಮಾಡಲು ಅವಕಾಶ ನೀಡುವುದಿಲ್ಲ' ಎಂದು ಹೇಳಿತು.

ಶಂಭು ಗಡಿಯಲ್ಲಿ ಹಾಕಿರುವ ತಡೆಗೋಡೆಯನ್ನು ವಾರದಲ್ಲಿ ತೆರವುಗೊಳಿಸಬೇಕು ಎಂದು ಹೈಕೋರ್ಟ್ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಹರಿಯಾಣ ಸರ್ಕಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ.

'ಸುಪ್ರೀಂ ಕೋರ್ಟ್ ಆ. 12ರಂದು ನೀಡಿದ್ದ ಆದೇಶದ ಅನುಸಾರ ಪ್ರತಿಭಟನೆ ನಿರತ ರೈತರ ಜೊತೆಗೆ ಚರ್ಚಿಸಿದ್ದು, ಹೆದ್ದಾರಿ ತಡೆಯನ್ನು ಭಾಗಶಃ ಕೈಬಿಡಲು ಒಪ್ಪಿದ್ದಾರೆ' ಎಂದು ಪಂಜಾಬ್ ಸರ್ಕಾರವು ನ್ಯಾಯಪೀಠಕ್ಕೆ ತಿಳಿಸಿತು.

ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಕಿಸಾನ್ ಮಜ್ದೂರ್ ಮೋರ್ಚಾ ರೈತ ಸಂಘಟನೆಗಳು ರೈತರ ಧರಣಿ ಬೆಂಬಲಿಸಿ ದೆಹಲಿ ಚಲೋ ಅಭಿಯಾನಕ್ಕೆ ಕರೆ ನೀಡಿದ್ದ ಕಾರಣ ಹರಿಯಾಣ ಸರ್ಕಾರವು ಅಂಬಾಲಾ –ನವದೆಹಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಪ್ರತಿಭಟನೆ ಹತ್ತಿಕ್ಕಲು ತಡೆಗೋಡೆಯನ್ನು ರಚಿಸಿತ್ತು.

## ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಲು ಸೂಚನೆ

**ಕೊಚ್ಚಿ (ಪಿಟಿಐ):** ಮಲಯಾಳ ಚಿತ್ರರಂಗದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ನ್ಯಾಯಮೂರ್ತಿ ಹೇಮಾ ನೇತೃತ್ವದ ಸಮಿತಿಯ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಕೇರಳ ಹೈಕೋರ್ಟ್ ಗುರುವಾರ ಸೂಚಿಸಿದೆ.

ಹಂಗಾಮಿ ಮುಖ್ಯನ್ಯಾಯಮೂರ್ತಿ ಎ.ಮುಹಮ್ಮದ್ ಮುಷ್ತಾಕ್ ಹಾಗೂ ನ್ಯಾಯಮೂರ್ತಿ ಎಸ್.ಮಾನು ಅವರಿದ್ದ ವಿಭಾಗೀಯ ಪೀಠ ಈ ಸೂಚನೆ ನೀಡಿದೆ.

ಈ ವಿಚಾರವಾಗಿ, ತಿರುವನಂತಪುರ ನಿವಾಸಿ ನವಾಸ್ ಎಂಬುವವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಂಡ ಪೀಠ, ಸಮಿತಿಯ ವರದಿಯು ಗಂಭೀರ ಆರೋಪಗಳನ್ನು ಒಳಗೊಂಡಿದೆ ಎಂದು ಹೇಳಿದೆ. ಪಿಐಎಲ್‌ಗೆ ಸಂಬಂಧಿಸಿ ಅಫಿಡವಿಟ್ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದ ಪೀಠ, ವರದಿಯಲ್ಲಿನ ಆರೋಪಗಳ ಆಧಾರದಲ್ಲಿ ಯಾವ ಕ್ರಮ ಕೈಗೊಳ್ಳಲಾಗುತ್ತದೆ ಎಂದೂ ಸರ್ಕಾರವನ್ನು ಪ್ರಶ್ನಿಸಿದೆ.

'ಸಮಿತಿ ಸಲ್ಲಿಸಿರುವ ವರದಿ ಗೌಪ್ಯ ದಾಖಲೆಯಾಗಿದೆ. ಕತ್ತರಿ ಪ್ರಯೋಗಕ್ಕೆ ಒಳಪಡಿಸದ ಈ ಮೂಲ ವರದಿಯಲ್ಲಿ ಉಲ್ಲೇಖವಾಗಿರುವ ಎಲ್ಲ ಹೆಸರುಗಳ ತನ್ನ ಬಳಿ ಇವೆ ಎಂದೂ ಸರ್ಕಾರ ತಿಳಿಸಿದೆ.

'ಚಿತ್ರರಂಗದಲ್ಲಿ ಮಹಿಳೆಯರ ಪರಿಸ್ಥಿತಿ ಕುರಿತು ಅಧ್ಯಯನ ನಡೆಸಿ, ವರದಿ ಸಿದ್ಧಪಡಿಸುವ ಜವಾಬ್ದಾರಿ ಸಮಿತಿಗೆ ವಹಿಸಲಾಗಿತ್ತು. ಗೋಪ್ಯತೆ ಕಾಪಾಡುವ ಭರವಸೆ ನೀಡಿದ್ದರಿಂದ ಕೆಲವರು ಸಮಿತಿ ಮುಂದೆ ಹೇಳಿಕೆಗಳನ್ನು ನೀಡಿದ್ದಾರೆ. ಹೀಗಾಗಿ, ಪ್ರಕರಣ ದಾಖಲಿಸುವುದಕ್ಕೆ ಸಂಬಂಧಿಸಿ ಸರ್ಕಾರಕ್ಕೆ ಕೆಲ ಮಿತಿಗಳು ಇವೆ ಎಂದೂ ತಿಳಿಸಿದೆ.

# ಕಾಂಗ್ರೆಸ್–ಎನ್‌ಸಿ ಮೈತ್ರಿ ಅಂತಿಮ

### ಜಮ್ಮು ಮತ್ತು ಕಾಶ್ಮೀರ: ಫಾರೂಕ್ ಅಬ್ದುಲ್ಲಾ ಘೋಷಣೆ



ಎನ್‌ಸಿ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಅವರು ರಾಹುಲ್ ಗಾಂಧಿ ಅವರನ್ನು ಬರಮಾಡಿಕೊಂಡರು. ಮಧ್ಯದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಇದ್ದಾರೆ –ಪಿಟಿಐ ಚಿತ್ರ

**ಶ್ರೀನಗರ (ಪಿಟಿಐ):** ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯ ಎಲ್ಲ 90 ಕ್ಷೇತ್ರಗಳಲ್ಲೂ ಕಾಂಗ್ರೆಸ್ ಜತೆಗಿನ ಮೈತ್ರಿ ಅಂತಿಮಗೊಂಡಿದೆ ಎಂದು ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಗುರುವಾರ ಪ್ರಕಟಿಸಿದ್ದಾರೆ.

ಮೈತ್ರಿ ಸಂಬಂಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಅಬ್ದುಲ್ಲಾ ಅವರ ನಿವಾಸದಲ್ಲಿ ಚರ್ಚೆ ನಡೆಸಿದ್ದಾರೆ. ಸಭೆಯ ಬೆನ್ನಲ್ಲೇ ಈ ಘೋಷಣೆ ಹೊರಬಿದ್ದಿದೆ.

'ನಾವು ಸೌಹಾರ್ದಯುತ ವಾತಾವರಣ ದಲ್ಲಿ ನಡೆಸಿದ ಸಭೆಯು ಫಲಪ್ರದ ವಾಗಿದೆ. ಕಾಂಗ್ರೆಸ್ ಮತ್ತು ಎನ್‌ಸಿ ನಡುವೆ ಎಲ್ಲ 90 ಕ್ಷೇತ್ರಗಳಲ್ಲೂ ಮೈತ್ರಿ ಅಂತಿಮಗೊಂಡಿದೆ' ಎಂದು ಅಬ್ದುಲ್ಲಾ ಹೇಳಿದರು.

ಜಮ್ಮುಮತ್ತುಕಾಶ್ಮೀರ ವಿಧಾನಸಭೆಗೆ ಮೂರು ಹಂತಗಳಲ್ಲಿ (ಸೆಪ್ಟೆಂಬರ್ 18, 25 ಮತ್ತು ಅಕ್ಟೋಬರ್ 1) ಮತದಾನ ನಡೆಯಲಿದ್ದು, ಅಕ್ಟೋಬರ್ 4ರಂದು ಫಲಿತಾಂಶ ಪ್ರಕಟಗೊಳ್ಳಲಿದೆ.

ಸೀಟು ಹಂಚಿಕೆ ಯಾವ ರೀತಿ ನಡೆಯಲಿದೆ ಎಂಬ ಪ್ರಶ್ನೆಗೆ, 'ಮೊದಲ ಹಂತದ ಮತದಾನಕ್ಕೆ ಮುನ್ನ ಎಲ್ಲವೂ ಅಂತಿಮಗೊಳ್ಳಲಿದೆ' ಎಂದರು.

ಮೆಹಬೂಬಾ ಮುಫ್ತಿ ನೇತೃತ್ವದ ಪಿಡಿಪಿ ಜತೆಗೆ ಚುನಾವಣಾ ಪೂರ್ವ ಅಥವಾ ಚುನಾವಣೆಯ ಬಳಿಕ ಮೈತ್ರಿ ಬಗ್ಗೆ ಕೇಳಿದಾಗ, 'ಮೊದಲು ನಾವು ಚುನಾವಣೆಯನ್ನು ಎದುರಿಸೋಣ. ಇಂತಹ ವಿಚಾರಗಳ ಬಗ್ಗೆ (ಪಿಡಿಪಿ ಜತೆಗೆ ಮೈತ್ರಿ) ಆ ಬಳಿಕ ನಿರ್ಧರಿಸೋಣ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

#### 'ರಾಜ್ಯದ ಸ್ಥಾನಮಾನ: ಕಾಂಗ್ರೆಸ್ ಆದ್ಯತೆ'

ಪ್ರಜಾ ಮತ
ಜನತಂತ್ರದ ಹಬ್ಬ

**ಶ್ರೀನಗರ (ಪಿಟಿಐ):** ಜಮ್ಮು ಮತ್ತು ಕಾಶ್ಮೀರಕ್ಕೆ ಮತ್ತೆ ರಾಜ್ಯದ ಸ್ಥಾನಮಾನವನ್ನು ನೀಡುವುದು ಕಾಂಗ್ರೆಸ್ ಮತ್ತು 'ಇಂಡಿಯಾ' ಮೈತ್ರಿಕೂಟದ ಆದ್ಯತೆಯಾಗಿದೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್‌ನ ಜನರಿಗೆ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮರಳಿ ದೊರಕಿಸಿಕೊಡುವುದು ತಮ್ಮ ಪಕ್ಷದ ಗುರಿ ಎಂದು ಅವರು ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ವಿಧಾನಸಭಾ ಚುನಾವಣೆಗೂ ಮುಂಚಿತವಾಗಿ ರಾಜ್ಯದ ಸ್ಥಾನಮಾನ ಮರುಸ್ಥಾಪಿಸಬಹುದು ಎಂಬುದು ನಮ್ಮ ನಿರೀಕ್ಷೆಯಾಗಿತ್ತು. ಆದರೂ ಪರವಾಗಿಲ್ಲ, ಚುನಾವಣೆ ಘೋಷಣೆಯಾಗಿರುವುದು ಈ ನಿಟ್ಟಿನಲ್ಲಿ ಇಟ್ಟಿರುವ ಮೊದಲ ಹೆಜ್ಜೆ ಎಂದು ಭಾವಿಸಿದ್ದೇವೆ. ರಾಜ್ಯದ ಸ್ಥಾನಮಾನ ಆದಷ್ಟು ಬೇಗ ಮರುಸ್ಥಾಪನೆಯಾಗಲಿದೆ ಎಂಬುದು ನಮ್ಮ ವಿಶ್ವಾಸ' ಎಂದು ಹೇಳಿದರು.

# ಸೆಬಿ ಅಧ್ಯಕ್ಷೆ ರಾಜೀನಾಮೆಗೆ ಆಗ್ರಹ




ಕಾಂಗ್ರೆಸ್ ವತಿಯಿಂದ ದೆಹಲಿಯ ಜಂತರ್ ಮಂತರ್‌ನಲ್ಲಿ ಗುರುವಾರ ಪ್ರತಿಭಟನೆ ನಡೆಯಿತು –ಪಿಟಿಐ ಚಿತ್ರ

**ನವದೆಹಲಿ (ಪಿಟಿಐ):** 'ಸೆಬಿ ಅಧ್ಯಕ್ಷೆ ಮಾಧವಿ ಪುರಿ ಬುಚ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಜೊತೆಗೆ ಅದಾನಿ ಸಮೂಹವು ನಡೆಸಿದೆ ಎನ್ನಲಾದ ಅಕ್ರಮ ಸಂಬಂಧ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ರಚಿಸಿ ತನಿಖೆ ನಡೆಸಬೇಕು' ಎಂದು ಆಗ್ರಹಿಸಿ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಗುರುವಾರ ದೇಶದಾದ್ಯಂತ ಪ್ರತಿಭಟನೆ ನಡೆಸಿದರು.

ಕಾಂಗ್ರೆಸ್‌ನ ದೆಹಲಿ ಘಟಕವು ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಿತು. ದೆಹಲಿ ಕಾಂಗ್ರೆಸ್ ಘಟಕದ ಅಧ್ಯಕ್ಷ ದೇವೇಂದ್ರ ಯಾದವ್, ಮುಖಂಡರಾದ ಸಚಿನ್ ಪೈಲಟ್, ಕನ್ಹಯ್ಯ ಕುಮಾರ್, ಉದಿತ್ ರಾಜ್ ಸೇರಿ ಇತರರು ಭಾಗವಹಿಸಿದ್ದರು.

'ಅದಾನಿ ಸಮೂಹ ನಡೆಸಿದ ಅಕ್ರಮ ಹಾಗೂ ಸೆಬಿ ಅಧ್ಯಕ್ಷೆ ಮಾಧವಿ ಬುಚ್ ಅವರ ಕುರಿತು ಹಿಂಡೆನ್‌ಬರ್ಗ್ ಸಂಸ್ಥೆ ನೀಡಿದ ವರದಿಗಳು, ಅದರಲ್ಲಿನ ಆರೋಪಗಳ ಕುರಿತು ನಮಗೆ ಸ್ಪಷ್ಟನೆ ಬೇಕು. ನೀವು ತಪ್ಪು ಮಾಡಿಲ್ಲ ಎಂದಾದಮೇಲೆ, ಜೆಪಿಸಿಯನ್ನು ಏಕೆ ರಚಿಸುತ್ತಿಲ್ಲ. ಸರ್ಕಾರ ಈ ಕುರಿತು ಪಾರದರ್ಶಕವಾಗಿ ನಡೆದುಕೊಳ್ಳಬೇಕು' ಎಂದು ಸಚಿನ್ ಪೈಲಟ್ ಹೇಳಿದರು.

#### 'ಜಾಮೀನಿಗೆ ಅತಿಯಾದ ಷರತ್ತು ಬೇಡ'



**ನವದೆಹಲಿ (ಪಿಟಿಐ):** ಜಾಮೀನು ಮಂಜೂರು ಮಾಡುವುದು ಹಾಗೂ ಅದಕ್ಕೆ ಸಂಬಂಧಿಸಿದಂತೆ ವಿಪರೀತವಾದ ಷರತ್ತುಗಳನ್ನು ವಿಧಿಸುವುದು ಬಲಗೈಯಲ್ಲಿ ಕೊಟ್ಟು, ಎಡಗೈಯಿಂದ ಹಿಂಪಡೆಯುವುದಕ್ಕೆ ಸಮ ಎಂದು ಸುಪ್ರೀಂ ಕೋರ್ಟ್ ಗುರುವಾರ ನೀಡಿರುವ ತೀರ್ಪೊಂದರಲ್ಲಿ ಹೇಳಿದೆ.

ಸಂವಿಧಾನದ 21ನೇ ವಿಧಿಯು ನೀಡಿರುವ ಮೂಲಭೂತ ಹಕ್ಕುಗಳನ್ನು ರಕ್ಷಿಸುವ ಹಾಗೂ ಸಂಬಂಧಪಟ್ಟ ವ್ಯಕ್ತಿಯ ಹಾಜರಿರುವಿಕೆಯನ್ನು ಖಾತರಿಪಡಿಸುವ ಜಾಮೀನು ಆದೇಶವು ಸೂಕ್ತವಾಗುತ್ತದೆ ಎಂದು ಹೇಳಿದೆ. ವಂಚನೆ ಸೇರಿದಂತೆ ಬೇರೆ ಬೇರೆ ರಾಜ್ಯಗಳಲ್ಲಿ 13 ಪ್ರಕರಣಗಳು ದಾಖಲಾಗಿರುವ ವ್ಯಕ್ತಿಯೊಬ್ಬರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಕೆ.ವಿ. ವಿಶ್ವನಾಥನ್ ಅವರು ಇದ್ದ ವಿಭಾಗೀಯ ಪೀಠವು ಈ ತೀರ್ಪು ನೀಡಿದೆ.

ತಮಗೆ ಈ 13 ಪ್ರಕರಣಗಳಲ್ಲಿಯೂ ಜಾಮೀನು ದೊರೆತಿದೆ, ಎರಡು ಪ್ರಕರಣಗಳಿಗೆ ಸಂಬಂಧಿಸಿದ ಜಾಮೀನು ಷರತ್ತುಗಳನ್ನು ಪೂರೈಸಲಾಗಿದೆ ಎಂದು ಅರ್ಜಿದಾರರು ಹೇಳಿದ್ದರು. ಆದರೆ ಇನ್ನುಳಿದ 11 ಪ್ರಕರಣಗಳಿಗೆ ಪ್ರತ್ಯೇಕವಾದ ಶ್ಯೂರಿಟಿ ಒದಗಿಸುವುದಕ್ಕೆ ತಮ್ಮಿಂದ ಆಗುತ್ತಿಲ್ಲ ಎಂದು ಅರ್ಜಿದಾರ ಹೇಳಿದ್ದ ಮಾತನ್ನು ಪೀಠವು ದಾಖಲಿಸಿಕೊಂಡಿತ್ತು.

# 'ಜನಗಣತಿ ಜತೆ ಜಾತಿಗಣತಿಯೂ ನಡೆಯಲಿ'

ಪ್ರಜಾವಾಣಿ ವಾರ್ತೆ



**ನವದೆಹಲಿ:** ಕೇಂದ್ರ ಸರ್ಕಾರವು ಜನಗಣತಿಯ ಜತೆಯಲ್ಲೇ ಜಾತಿಗಣತಿಯನ್ನೂ ಸುಲಭವಾಗಿ ನಡೆಸಬಹುದು ಎಂದು ಕಾಂಗ್ರೆಸ್ ಗುರುವಾರ ಹೇಳಿದೆ.

'1951ರಿಂದ ಪ್ರತಿ ಜನಗಣತಿಯಲ್ಲೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಯ ಮಾಹಿತಿಯನ್ನು ಸಂಗ್ರಹಿಸುತ್ತಾ ಬರಲಾಗಿದೆ. ಜಾತಿಗಣತಿ ಪ್ರಶ್ನಾವಳಿಗೆ, ಹೆಚ್ಚುವರಿಯಾಗಿ ಒಂದು ಕಾಲಂ ಅನ್ನು ಸೇರಿಸುವ ಮೂಲಕ ಇತರೆ ಹಿಂದುಳಿದ ವರ್ಗಗಳ ಜಾತಿವಾರು ಮಾಹಿತಿಯನ್ನು ಯಾವುದೇ ತೊಂದರೆ ಇಲ್ಲದೆ ಸಂಗ್ರಹಿಸಬಹುದು' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಗುರುವಾರ ಹೇಳಿದ್ದಾರೆ.

'ಸರ್ಕಾರ ಹೀಗೆ ಮಾಡಿದರೆ ಜಾತಿಗಣತಿ ನಡೆಸುವಂತೆ ಕೇಳಿ ಬರುತ್ತಿರುವ ಬೇಡಿಕೆಯನ್ನು ಈಡೇರಿಸಿದಂತೆ ಆಗಲಿದೆ ಮತ್ತು ಸರ್ಕಾರದ ಕಾರ್ಯಕ್ರಮಗಳು ಅರ್ಹರಿಗೆ ತಲುಪಲು ಅನುಕೂಲ ಆಗಲಿದೆ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಜನಗಣತಿ ಕಾರ್ಯ ವಿಳಂಬವಾಗಿರುವ ಕಾರಣ ಸರ್ಕಾರದ ಆರ್ಥಿಕ ಯೋಜನೆಗಳು ಮತ್ತು ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅಗತ್ಯವಿರುವ ಪ್ರಮುಖ ಮಾಹಿತಿಯನ್ನು ಸಂಗ್ರಹಿಸಲು ಸಾಧ್ಯವಾಗಿಲ್ಲ. ಇದರ ಪರಿಣಾಮ, 12 ಕೋಟಿಗೂ ಹೆಚ್ಚು ಮಂದಿ ಆಹಾರ ಭದ್ರತಾ ಕಾಯ್ದೆಯಡಿ ಹಾಗೂ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆಯಡಿ ದೊರೆಯಬೇಕಿದ್ದ ಪ್ರಯೋಜನಗಳಿಂದ ವಂಚಿತರಾಗಿದ್ದಾರೆ' ಎಂದಿದ್ದಾರೆ.

ಕೇಂದ್ರ ಸರ್ಕಾರ ಇದೇ ಸೆಪ್ಟೆಂಬರ್‌ನಲ್ಲಿ ಜನಗಣತಿ ಕಾರ್ಯ ಆರಂಭಿಸುವ ಸಾಧ್ಯತೆ ಇದೆ ಎಂದು ಮೂಲಗಳು ಬುಧವಾರ ಹೇಳಿದ್ದವು. ಅದರ ಬೆನ್ನಲ್ಲೇ ಕಾಂಗ್ರೆಸ್ ಈ ಬೇಡಿಕೆಯಿಟ್ಟಿದೆ. ಜನಗಣತಿ ಕಾರ್ಯ ಯಾವಾಗ ಆರಂಭಿಸಲಾಗುತ್ತದೆ ಎಂಬ ಬಗ್ಗೆ ಸರ್ಕಾರ ಅಧಿಕೃತವಾಗಿ ಏನನ್ನೂ ಹೇಳಿಲ್ಲ.

ದೇಶದಾದ್ಯಂತ ಜಾತಿಗಣತಿ ನಡೆಸಬೇಕು ಎಂದು 'ಇಂಡಿಯಾ' ಮೈತ್ರಿಕೂಟ, ಅದರಲ್ಲೂ ಮುಖ್ಯವಾಗಿ ಕಾಂಗ್ರೆಸ್ ಪಕ್ಷವು ಒತ್ತಾಯ ಮಾಡುತ್ತಲೇ ಬಂದಿದೆ.

## ಒಳಮೀಸಲಾತಿ ಮರುಪರಿಶೀಲನೆ ಕೋರಿ 'ಸುಪ್ರೀಂ'ಗೆ ಅರ್ಜಿ

**ನವದೆಹಲಿ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳವರಿಗೆ ಒಳಮೀಸಲಾತಿ ಕಲ್ಪಿಸುವ ಕುರಿತು ಆಗಸ್ಟ್ 1ರಂದು ತನ್ನ ತೀರ್ಪನ್ನು ಮರುಪರಿಶೀಲಿಸುವಂತೆ ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ.

ಮುಂಬೈನ ಜೈಶ್ರೀ ಲಕ್ಷ್ಮಣರಾವ್ ಪಾಟೀಲ ಎಂಬುವವರು ಅರ್ಜಿ ಸಲ್ಲಿಸಿದ್ದಾರೆ. 'ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳನ್ನು ಗುರುತಿಸುವ ವಿಶೇಷ ಅಧಿಕಾರವನ್ನು, ಸಂವಿಧಾನದ 341 ಹಾಗೂ 432ನೇ ವಿಧಿ ಅನ್ವಯ ರಾಷ್ಟ್ರಪತಿಗಳು ಮಾತ್ರ ಹೊಂದಿದ್ದಾರೆ' ಎಂದು ಜೈಶ್ರೀ ಪಾಟೀಲ ಅರ್ಜಿಯಲ್ಲಿ ತಿಳಿಸಿದ್ದಾರೆ.

'ಯಾವುದೇ ಸಮುದಾಯವು ಮುಂದುವರಿದಿದೆ ಅಥವಾ ಎಸ್‌ಸಿ/ಎಸ್‌ಟಿ ಪಟ್ಟಿಯಿಂದ ಹೊರಬಿದ್ದಿದೆ ಎಂದಾದಾಗ, ಅಂತಹ ಸಮುದಾಯಗಳನ್ನು ಪಟ್ಟಿಯಿಂದ ಹೊರಗಿಡುವ ಇಲ್ಲವೇ ಪಟ್ಟಿಗೆ ಸೇರಿಸುವ ಅಧಿಕಾರವನ್ನು 1950ರಲ್ಲಿ ಹೊರಡಿಸಿರುವ ಆದೇಶವು ಸಂಸತ್‌ಗೆ ಮಾತ್ರ ನೀಡಿದೆ. ಈ ವಿಷಯವನ್ನು ಸಮವರ್ತಿ ಪಟ್ಟಿಯಲ್ಲಿ ಸೇರಿಸುವ ಕುರಿತು ರಾಜ್ಯಗಳಿಂದಲೂ ಪರ್ಯಾಲೋಚನೆ ನಡೆದಿಲ್ಲ. ಕೆನೆಪದರದವರನ್ನು ಎಸ್‌ಟಿ, ಎಸ್‌ಟಿ ಪಟ್ಟಿಯಿಂದ ಹೊರಗಿಡುವುದಕ್ಕೆ ನೀಡುವ ಯಾವುದೇ ನಿರ್ದೇಶನವು ಕಾನೂನು ಬಾಹಿರವಾಗುತ್ತದೆ' ಎಂದು ಜೈಶ್ರೀ ಪಾಟೀಲ ವಿವರಿಸಿದ್ದಾರೆ.

### ಅಸ್ಸಾಂ ಸಿ.ಎಂ ನಡೆಗೆ ಪತ್ರಕರ್ತರ ಸಂಘಟನೆಗಳ ಖಂಡನೆ


# ಮುಸ್ಲಿಂ ಪತ್ರಕರ್ತನ ನಿಂದನೆ

ಪ್ರಜಾವಾಣಿ ವಾರ್ತೆ

**ಗುವಾಹಟಿ:** ಮುಖ್ಯಮಂತ್ರಿ ಪ್ರತಿನಿಧಿಸುವ ಕ್ಷೇತ್ರದಲ್ಲಿ ಗುಡ್ಡ ಕತ್ತರಿಸುತ್ತಿರುವುದಕ್ಕೆ ಸಂಬಂಧಿಸಿ ಪ್ರಶ್ನೆ ಕೇಳಿದ ಪತ್ರಕರ್ತರೊಬ್ಬರು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ಪ್ರಶ್ನೆಗೆ ಉತ್ತರಿಸಬೇಕಾದ ಶರ್ಮಾ, ಪತ್ರಕರ್ತನ ಧರ್ಮ ಯಾವುದೆಂದು ಕೆದಕಿದ್ದಾರೆ. ಇದಕ್ಕೆ ಪತ್ರಕರ್ತರ ಸಂಘಟನೆಗಳಿಂದ ವ್ಯಾಪಕ ಟೀಕೆ ಮತ್ತು ಖಂಡನೆ ವ್ಯಕ್ತವಾಗಿದೆ.

ಮಂಡಕಟಾ ಪ್ರದೇಶದಲ್ಲಿ ಬೆಟ್ಟಗಳನ್ನು ಕತ್ತರಿಸುತ್ತಿರುವ ಕುರಿತು ಅಸ್ಸಾಂನ 'ನ್ಯೂಸ್‌ನೌ' ನ್ಯೂಸ್ ಪೋರ್ಟಲ್‌ನ ಪತ್ರಕರ್ತ ಶಾ ಆಲಂ ಅವರು, ಮುಖ್ಯಮಂತ್ರಿ ಅವರ ಪ್ರತಿಕ್ರಿಯೆ ಕೇಳಿದ್ದಾರೆ. ಅದಕ್ಕೆ ಶರ್ಮಾ, 'ನಿನ್ನ ಹೆಸರೇನು' ಎಂದು ಕೇಳಿದ್ದು, ಪತ್ರಕರ್ತ 'ಶಾ ಆಲಂ' ಎಂದು ಉತ್ತರಿಸಿದ್ದಾರೆ.

ಆಗ ಶರ್ಮಾ, 'ಶಾ ಆಲಂ ಮತ್ತು ಮಹಬೂಬುಲ್ ಹಕ್ ಸೇರಿದಂತೆ ನಿಮ್ಮವರು (ಮುಸ್ಲಿಮರು) ನಮ್ಮನ್ನು (ಹಿಂದೂಗಳನ್ನು) ಬದುಕಲು ಬಿಡುವಿರಾ' ಎಂದು ಪ್ರಶ್ನಿಸಿದ್ದಾರೆ. ಮೇಘಾಲಯದ ಯುಎಸ್‌ಟಿಎಂ ಖಾಸಗಿ ವಿಶ್ವವಿದ್ಯಾಲಯದ ಮಾಲೀಕ ಹಕ್ ಅವರೂ ಈಚೆಗೆ ಗುಡ್ಡ ಕತ್ತರಿಸುವುದರ ಬಗ್ಗೆ ಪ್ರಶ್ನಿಸಿದ್ದರು. ಅಸ್ಸಾಂ–ಮೇಘಾಲಯ ಗಡಿಯುದ್ದಕ್ಕೂ ಬೆಟ್ಟಗಳನ್ನು ಕತ್ತರಿಸಿದ್ದರಿಂದ ಗುವಾಹಟಿಯಲ್ಲಿ ಪ್ರವಾಹ ಉಂಟಾಗಿದೆ ಎಂದು ಆರೋಪಿಸಿದ್ದರು.



ಹಿಮಂತ ಬಿಸ್ವ ಶರ್ಮಾ

'ಯುಎಸ್‌ಟಿಎಂ ಅನ್ನು ರಕ್ಷಿಸಲು ನೀನು ಪ್ರಯತ್ನಿಸುತ್ತಿರುವುದು ಏಕೆ? ಅದಕ್ಕೆ ಕಾರಣವೇನು? ನೀನು ಅವರಿಂದ ಜಾಹೀರಾತು ಪಡೆಯುತ್ತಿದ್ದೀಯಾ?' ಎಂದು ಶರ್ಮಾ ಹೇಳಿದ್ದಾರೆ. 'ಅಸ್ಸಾಂನಲ್ಲಿ ನಮಗೆ ಜೀವಿಸಲು ಸಾಧ್ಯವೇ, ಇಲ್ಲವೇ ಎಂಬುದನ್ನು ಶಾ ಆಲಂ ಮತ್ತು ಹಕ್ ಅವರು ವಿವರಿಸಿ ಹೇಳಬೇಕು' ಎಂದಿದ್ದಾರೆ.

'ಅಸ್ಸಾಂನ ಜನಸಂಖ್ಯಾ ಸ್ವರೂಪದಲ್ಲಿ ಆಗುತ್ತಿರುವ ಬದಲಾವಣೆಯನ್ನು ಗಮನಿಸಿದರೆ ಅಸ್ಸಾಂನ ಜನರು ಬದುಕುಳಿಯುವರೇ' ಎಂದೂ ಪ್ರಶ್ನಿಸಿದ್ದಾರೆ.

**ಖಂಡನೆ:** ಗುವಾಹಟಿ ಪ್ರೆಸ್ ಕ್ಲಬ್, ದಿಸ್ಪುರ ಪ್ರೆಸ್ ಕ್ಲಬ್, ಅಸ್ಸಾಂ ಪತ್ರಕರ್ತರ ಸಂಘ ಮತ್ತು ಅಸ್ಸಾಂ ಮಹಿಳಾ ಪತ್ರಕರ್ತರ ವೇದಿಕೆ ಒಳಗೊಂಡಂತೆ ಪತ್ರಕರ್ತರ ವಿವಿಧ ಸಂಘಟನೆಗಳು ಮುಖ್ಯಮಂತ್ರಿ ಅವರ ನಡೆಯನ್ನು ಖಂಡಿಸಿವೆ.

'ಪತ್ರಿಕಾ ಸಂವಾದದ ವೇಳೆ ಮುಖ್ಯಮಂತ್ರಿ ಅವರು ಅನಗತ್ಯವಾಗಿ ಪತ್ರಕರ್ತನ ಧರ್ಮದ ಬಗ್ಗೆ ಕೆದಕಿದ್ದಾರೆ. ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳಲು ಮತ್ತು ಮಾಧ್ಯಮದ ಘನತೆ ಎತ್ತಿಹಿಡಿಯಲು ಎಲ್ಲ ರಾಜಕೀಯ ನಾಯಕರನ್ನು ಒತ್ತಾಯಿಸುತ್ತೇವೆ' ಎಂದು ಗುವಾಹಟಿ ಪ್ರೆಸ್ ಕ್ಲಬ್ ಹೇಳಿಕೆಯಲ್ಲಿ ತಿಳಿಸಿದೆ

### ವಕ್ಫ್ (ತಿದ್ದುಪಡಿ) ಮಸೂದೆ: ಜಂಟಿ ಸಮಿತಿ ಮೊದಲ ಸಭೆ

# ತಿದ್ದುಪಡಿಗೆ ಪ್ರತಿಪಕ್ಷಗಳ ವಿರೋಧ

**ನವದೆಹಲಿ (ಪಿಟಿಐ):** ವಕ್ಫ್ (ತಿದ್ದುಪಡಿ) ಮಸೂದೆಗೆ ಸಂಬಂಧಿಸಿದಂತೆ ಸಂಸತ್ತಿನ ಜಂಟಿ ಸಮಿತಿಯು ತನ್ನ ಮೊದಲ ಸಭೆಯನ್ನು ಗುರುವಾರ ನಡೆಸಿತು. ಸುಮಾರು ಆರು ಗಂಟೆಗಳವರೆಗೆ ನಡೆದ ಸಭೆಯಲ್ಲಿ ವಿರೋಧ ಪಕ್ಷಗಳ ಪ್ರತಿನಿಧಿಗಳು ತಿದ್ದುಪಡಿ ಮಸೂದೆಯನ್ನು ತೀವ್ರವಾಗಿ ವಿರೋಧಿಸಿದರು.

ಸಭೆಯಲ್ಲಿ ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯವು ಮಸೂದೆಯಲ್ಲಿನ ಮಹತ್ವದ ಅಂಶಗಳನ್ನು ಸಭೆಗೆ ವಿವರಿಸಿತು.

ಸಭೆಯಲ್ಲಿದ್ದ ಬಿಜೆಪಿ ಸದಸ್ಯರು ಮಸೂದೆಯಲ್ಲಿನ ಪ್ರಸ್ತಾವಿತ ತಿದ್ದುಪಡಿಗಳು ಮಹಿಳಾ ಸಬಲೀಕರಣದ ಉದ್ದೇಶವನ್ನು ಒಳಗೊಂಡಿವೆ ಎಂದು ಶ್ಲಾಘಿಸಿದರು. ಮಸೂದೆಯಲ್ಲಿನ ನಿಬಂಧನೆಗಳ ಬಗ್ಗೆ ಕೆಲವರು ತಮ್ಮ ಅಭಿಪ್ರಾಯಗಳನ್ನು ದಾಖಲಿಸಿ, ಸಲಹೆಗಳನ್ನು ನೀಡಿದರು. ಕೆಲ ವಿಷಯಗಳಿಗೆ ಸಂಬಂಧಿಸಿದಂತೆ ಸ್ಪಷ್ಟೀಕರಣಗಳನ್ನೂ ಪಡೆದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸಮಿತಿಯ ಅಧ್ಯಕ್ಷ ಜಗದಾಂಬಿಕಾ ಪಾಲ್, 'ಆರು ಗಂಟೆಗಳ ಕಾಲ ನಡೆದ ಸಭೆಯು ಫಲಪ್ರದವಾಗಿದೆ' ಎಂದರು. ಇತ್ತೀಚಿನ ದಿನಗಳಲ್ಲಿ ಸಂಸದೀಯ ಸಮಿತಿ ನಡೆಸಿದ ಸುದೀರ್ಘ ಸಭೆಗಳಲ್ಲಿ ಇದೂ ಒಂದಾಗಿದೆ ಎಂದು ಸದಸ್ಯರೊಬ್ಬರು ಪ್ರತಿಕ್ರಿಯಿಸಿದರು. ಸಮಿತಿಯ ಮುಂದಿನ ಸಭೆ ಇದೇ 30ರಂದು ನಡೆಯಲಿದ್ದು, ವಿವಿಧ ರಾಜ್ಯಗಳ ವಕ್ಫ್ ಸಂಸ್ಥೆಗಳ ಅಭಿಪ್ರಾಯಗಳನ್ನು ಕೇಳುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

**ಪ್ರತಿ ಪಕ್ಷಗಳ ವಿರೋಧ:** 'ಸಭೆಯಲ್ಲಿ ಕೇಳಿದ ಪ್ರಶ್ನೆಗಳಿಗೆ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯ ಸಮರ್ಪಕ ಉತ್ತರ ನೀಡಲಿಲ್ಲ. ಸಚಿವಾಲಯದವರು ಸರಿಯಾಗಿ ಸಿದ್ಧವಾದಂತೆ ತೋರಲಿಲ್ಲ' ಎಂದು ವಿವಿಧ ಪಕ್ಷಗಳ ಸದಸ್ಯರು ವಿರೋಧ ವ್ಯಕ್ತಪಡಿಸಿದರು.

ಸಭೆಯಲ್ಲಿ ಬಿಜೆಪಿಯ ಸಂಜಯ್ ಜೈಸ್ವಾಲ್, ಅಪರಾಜಿತಾ ಸಾರಂಗಿ, ತೇಜಸ್ವಿ ಸೂರ್ಯ, ದಿಲೀಪ್ ಸೈಕಿಯಾ ಮತ್ತು ಗುಲಾಂ ಅಲಿ; ಕಾಂಗ್ರೆಸ್ ಪಕ್ಷದ ಗೌರವ್ ಗೊಗೊಯ್ ಮತ್ತು ನಾಸೀರ್ ಹುಸೇನ್; ಟಿಎಂಸಿಯ ಕಲ್ಯಾಣ್ ಬ್ಯಾನರ್ಜಿ, ವೈಎಸ್‌ಆರ್ ಕಾಂಗ್ರೆಸ್‌ನ ವಿ. ವಿಜಯಸಾಯಿ ರೆಡ್ಡಿ, ಎಎಪಿಯ ಸಂಜಯ್ ಸಿಂಗ್, ಎಐಎಂಐಎಂನ ಅಸಾದುದ್ದೀನ್ ಒವೈಸಿ, ಡಿಎಂಕೆಯ ಎ. ರಾಜಾ, ಎಲ್‌ಜೆಪಿಯ ಅರುಣ್ ಭಾರ್ತಿ, ಟಿಡಿಪಿಯ ಲಾವು ಶ್ರೀಕೃಷ್ಣ ದೇವರಾಯಲು ಭಾಗವಹಿಸಿದ್ದರು.

ಬಿಜೆಪಿ ಮಿತ್ರ ಪಕ್ಷಗಳಾದ ಲೋಕ ಜನಶಕ್ತಿ ಪಕ್ಷ (ರಾಮ್ ವಿಲಾಸ್) ಮತ್ತು ತೆಲುಗು ದೇಶಂ ಪಕ್ಷ (ಟಿಡಿಪಿ) ಮುಸ್ಲಿಂ ಸಮುದಾಯದ ಕಳವಳಗಳ ಕುರಿತು ವ್ಯಾಪಕ ಸಮಾಲೋಚನೆ ನಡೆಯಬೇಕು ಎಂದು ಕರೆ ನೀಡಿವೆ.

ವಿವಾದಿತ ಆಸ್ತಿಯ ಮಾಲೀಕತ್ವವನ್ನು ನಿರ್ಧರಿಸುವಲ್ಲಿ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡುವ ಮತ್ತು ವಕ್ಫ್ ಮಂಡಳಿಗಳಲ್ಲಿ ಮುಸ್ಲಿಮೇತರ ಸದಸ್ಯರಿಗೆ ಅವಕಾಶ ನೀಡುವುದೂ ಸೇರಿದಂತೆ ಮಸೂದೆಯ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ವಿರೋಧ ಪಕ್ಷಗಳ ಸದಸ್ಯರು ಪ್ರಶ್ನಿಸಿದರು.

**'ಸಾಮಾಜಿಕ ಅಸ್ಥಿರತೆ':** ಉದ್ದೇಶಿತ ಕಾನೂನು ಅನುಷ್ಠಾನವಾದರೆ ಅದರಿಂದ ಸಾಮಾಜಿಕ ಅಸ್ಥಿರತೆ ಉಂಟಾಗುತ್ತದೆ ಎಂದು ಎಐಎಂಐಎಂನ ಅಸಾದುದ್ದೀನ್ ಒವೈಸಿ ಹೇಳಿದರು ಎಂದು ಮೂಲಗಳು ತಿಳಿಸಿವೆ. ಸಾಂವಿಧಾನಿಕ ಮೌಲ್ಯಗಳು ಮತ್ತು ವೈಯಕ್ತಿಕ ಸ್ವಾತಂತ್ರ್ಯವನ್ನು ಅತಿಕ್ರಮಿಸದಂತೆ ಸಮಿತಿ ಎಚ್ಚರವಹಿಸುತ್ತದೆ ಎಂಬ ವಿಶ್ವಾಸವಿದೆ ಎಂದು ಕಾಂಗ್ರೆಸ್‌ನ ಗೌರವ್ ಗೊಗೊಯ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಮಸೂದೆಗೆ ಸಂಬಂಧಿಸಿದಂತೆ ವ್ಯಕ್ತವಾಗಿರುವ ಕಳವಳಗಳ ಬಗ್ಗೆ ಚರ್ಚಿಸಲಾಗುವುದು ಮತ್ತು ಸಂಬಂಧಿಸಿದ ವಿವಿಧ ಮಧ್ಯಸ್ಥಗಾರರ ಅಭಿಪ್ರಾಯ ಕೇಳಲಾಗುವುದು. 44 ತಿದ್ದುಪಡಿಗಳ ಬಗ್ಗೆ ಚರ್ಚಿಸಿ ಮುಂದಿನ ಅಧಿವೇಶನದ ವೇಳೆಗೆ ಉತ್ತಮ ಮತ್ತು ಸಮಗ್ರ ಮಸೂದೆ ಸಿದ್ಧವಾಗುವಂತೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಭೆಯ ಆರಂಭದಲ್ಲಿ ಸಮಿತಿಯ ಅಧ್ಯಕ್ಷರಾದ ಜಗದಾಂಬಿಕಾ ಪಾಲ್ ಹೇಳಿದರು.

#### ನಾಯ್ಡು, ನಿತೀಶ್ ಬೆಂಬಲ: ಸೈಫುಲ್ಲಾ

ಟಿಡಿಪಿ ಮುಖ್ಯಸ್ಥ ಚಂದ್ರಬಾಬು ನಾಯ್ಡು ಮತ್ತು ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಅವರು ತಮ್ಮ ಪಕ್ಷಗಳು ವಕ್ಫ್ (ತಿದ್ದುಪಡಿ) ಮಸೂದೆಯನ್ನು ವಿರೋಧಿಸುತ್ತವೆ ಎಂದು ಭರವಸೆ ನೀಡಿದ್ದಾರೆ ಎಂದು ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಅಧ್ಯಕ್ಷ ಖಾಲಿದ್ ಸೈಫುಲ್ಲಾ ರಹಮಾನಿ ಗುರುವಾರ ತಿಳಿಸಿದರು.

ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ, ಜಮಿಯತ್ ಉಲೇಮಾ–ಎ–ಹಿಂದಿ ಮತ್ತು ಇತರ ಮುಸ್ಲಿಂ ಸಂಘಟನೆಗಳು ನಡೆಸಿದ ಜಂಟಿ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಈ ಮಸೂದೆಯನ್ನು ಹಿಂಪಡೆಯದಿದ್ದರೆ ದೇಶದಾದ್ಯಂತ ಚಳವಳಿ ಆರಂಭಿಸುವುದಾಗಿ ಅವರು ಹೇಳಿದರು. ಆರ್‌ಜೆಡಿ ನಾಯಕ ತೇಜಸ್ವಿ ಯಾದವ್, ಶಿವಸೇನಾದ ಉದ್ಧವ್ ಠಾಕ್ರೆ ಮತ್ತು ಡಿಎಂಕೆ ನಾಯಕ ಎಂ.ಕೆ.ಸ್ಟಾಲಿನ್ ಅವರೂ ಮಸೂದೆ ವಿರೋಧಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ಅವರು ತಿಳಿಸಿದರು.

# ಚೆಸ್: ಪ್ರಜ್ಞಾನಂದ ವಿರುದ್ಧ ಸೋಲಿನಿಂದ ಗುಕೇಶ್ ಪಾರು

**ಸೇಂಟ್ ಲೂಯಿಸ್ (ಅಮೆರಿಕ), (ಪಿಟಿಐ):** ವಿಶ್ವ ಚಾಂಪಿಯನ್‌ಷಿಪ್ ಚಾಲೆಂಜರ್ ಡಿ.ಗುಕೇಶ್ ಅವರು ಸಿಂಕ್ವೆಫೀಲ್ಡ್ ಕಪ್ ಚೆಸ್ ಟೂರ್ನಿಯ ಮೂರನೇ ಸುತ್ತಿನಲ್ಲಿ ಸ್ವದೇಶದ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಎದುರು ಸೋಲಿನ ಭೀತಿಯಿಂದ ಪಾರಾಗಿ ಡ್ರಾ ಮಾಡಿಕೊಳ್ಳುವಲ್ಲಿ ಯಶಸ್ವಿ ಆದರು.

ಫ್ರಾನ್ಸ್‌ನ ಇಬ್ಬರು ಆಟಗಾರರ ನಡುವಣ ಇನ್ನೊಂದು ಪಂದ್ಯದಲ್ಲಿ, ಅಲಿರೇಜಾ ಫಿರೋಜ್ ಅವರು ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಜೊತೆ ತೀರಾ ಹಿನ್ನಡೆಯ ಸ್ಥಿತಿಯಿಂದ ಬಚಾವಾದರು. ಅಂತಿಮವಾಗಿ ನಡೆಗಳ ಪುನರಾವರ್ತನೆಯ ಮೂಲಕ ಈ ಪಂದ್ಯ 'ಡ್ರಾ' ಆಯಿತು. ಉಜ್ಬೇಕಿಸ್ತಾನದ ನಾಡಿರ್ಬೆಕ್ ಅಬ್ದುಸತ್ತಾರೋವ್ ಅವರು ಹೋರಾಟ ತೋರಿದರೂ, ಪ್ರಮಾದ ಎಸಗಿದ ಕಾರಣ ಎದುರಾಳಿ ಫ್ಯಾಬಿಯಾನೊ ಕರುವಾನ ಅವರ ಎದುರು ಸೋಲಬೇಕಾಯಿತು. ಇದು ಅಮೆರಿಕದ ಆಟಗಾರನಿಗೆ ಈ ಟೂರ್ನಿಯಲ್ಲಿ ಮೊದಲ ಜಯ.

ನಿರ್ಣಾಯಕ ಫಲಿತಾಂಶ ಕಂಡ ಇನ್ನೊಂದು ಪಂದ್ಯದಲ್ಲಿ ರಷ್ಯಾದ ಇಯಾನ್ ನಿಪೊಮ್‌ನಿಷಿ ಅವರು ನೆದರ್ಲೆಂಡ್ಸ್‌ನ ಅನೀಶ್ ಗಿರಿ ಅವರನ್ನು ಸೋಲಿಸಿದರು. ನಿಪೊಮ್‌ನಿಷಿ ಅವರ ಅಸಾಂಪ್ರದಾಯಿಕ ಓಪನಿಂಗ್‌ಗೆ ತಕ್ಕುದಾದ ನಡೆಗಳನ್ನು ಇರಿಸುವಲ್ಲಿ ಡಚ್ ಆಟಗಾರ ಎಡವಿದರು.

ವಿಶ್ವ ಚಾಂಪಿಯನ್, ಚೀನಾದ ಡಿಂಗ್ ಲಿರೆನ್ ಅವರು ಅಮೆರಿಕದ ವೆಸ್ಲಿ ಸೊ ವಿರುದ್ಧ ಗೆಲುವಿನ ಅವಕಾಶಗಳನ್ನು ಸೃಷ್ಟಿಸಿಕೊಂಡರೂ, ಅಂತಿಮ ಗಳಿಗೆಯಲ್ಲಿ ಎಡವಿದ್ದರಿಂದ 'ಡ್ರಾ'ಕ್ಕೆ ತೃಪ್ತಿಪಡಬೇಕಾಯಿತು.



ಪ್ರಜ್ಞಾನಂದ –ಪಿಟಿಐ ಚಿತ್ರ

10 ಆಟಗಾರರು ಭಾಗವಹಿಸುತ್ತಿರುವ ಈ ರೌಂಡ್ ರಾಬಿನ್ ಟೂರ್ನಿಯಲ್ಲಿ ಇನ್ನೂ ಆರು ಸುತ್ತಿನ ಪಂದ್ಯಗಳು ಬಾಕಿವುಳಿದಿವೆ. ಅಲಿರೇಜಾ ಫಿರೋಜ್ ಮತ್ತು ನಿಪೊಮ್‌ನಿಷಿ ಅವರು 3 ಸುತ್ತುಗಳಿಂದ 2 ಪಾಯಿಂಟ್ಸ್ ಕಲೆಹಾಕಿ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ಪ್ರಜ್ಞಾನಂದ, ಗುಕೇಶ್, ವೇಷಿಯರ್ ಲಗ್ರಾವ್, ಕರುವಾನ, ವೆಸ್ಲಿ ಸೊ ಮತ್ತು ಡಿಂಗ್ ಲಿರೆನ್ ತಲಾ ಒಂದೂವರೆ ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ಅಬ್ದುಸತ್ತಾರೋವ್ ಮತ್ತು ಅನಿಶ್ ಗಿರಿ ತಲಾ ಒಂದು ಪಾಯಿಂಟ್ಸ್ ಗಳಿಸಿದ್ದಾರೆ.

ಗುಕೇಶ್ ತಮ್ಮ ಸರದಿಯ ನಾಲ್ಕು ನಿಮಿಷಗಳಲ್ಲಿ 18 ನಡೆಗಳನ್ನು ಇರಿಸಿದ್ದರು. ಪ್ರಜ್ಞಾನಂದ ಎಚ್ಚರಿಕೆಯ ಆಟಕ್ಕೆ ಒತ್ತು ನೀಡಿದರು.

ಗುಕೇಶ್ ನಾಲ್ಕನೇ ಸುತ್ತಿನಲ್ಲಿ ಅಲಿರೇಜಾ ಅವರನ್ನು ಎದುರಿಸುವರು. ಪ್ರಜ್ಞಾನಂದ ಇನ್ನೊಂದೆಡೆ ಅನಿಶ್ ಗಿರಿ ಅವರನ್ನು ಎದುರಿಸಲಿದ್ದಾರೆ.

#### ಅಗ್ರಸ್ಥಾನದಲ್ಲಿ ಗಂಗೂಲಿ

**ಗುರುಗ್ರಾಮ:** ಅಗ್ರ ಶ್ರೇಯಾಂಕದ ಸೂರ್ಯಶೇಖರ ಗಂಗೂಲಿ ಅವರು 61ನೇ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್‌ನ ಆರನೇ ಸುತ್ತಿನ ನಂತರ ಸಂಭವನೀಯ ಆರು ಪಾಯಿಂಟ್‌ಗಳೊಡನೆ ಅಗ್ರಸ್ಥಾನಕ್ಕೇರಿದರು.

ಗುರುವಾರ ನಡೆದ ಪಂದ್ಯದಲ್ಲಿ ಆರು ಬಾರಿಯ ಚಾಂಪಿಯನ್ ಗಂಗೂಲಿ (ಪಿಎಸ್‌ಪಿಬಿ), ರೈಲ್ವೇಸ್‌ನ ನೀಲಾಶ್ ಸಹಾ ಅವರನ್ನು ಮಣಿಸಿದರು. ರೈಲ್ವೇಸ್‌ನ ಸಯಂತನ್ ದಾಸ್ ಮತ್ತು ಅರಣ್ಯಕ್ ಘೋಷ್ ತಲಾ ಐದೂವರೆ ಪಾಯಿಂಟ್‌ಗಳೊಂದಿಗೆ ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ. 12 ಆಟಗಾರರು ತಲಾ ಐದು ಅಂಕ ಪಡೆದಿದ್ದಾರೆ.

ಎರಡನೇ ಬೋರ್ಡ್‌ನಲ್ಲಿ ಅರಣ್ಯಕ್, ಗ್ರ್ಯಾಂಡ್‌ಮಾಸ್ಟರ್ ಎಸ್.ಪಿ.ಸೇತುರಾಮನ್ (ಪಿಎಸ್‌ಪಿಬಿ, 5) ಜೊತೆ ಡ್ರಾ ಮಾಡಿಕೊಂಡರು. ಸಯಂತನ್, ಆಕಾಶ್ ಜಿ. (4.5) ವಿರುದ್ಧ ಜಯಗಳಿಸಿದರು.

## ಆಸ್ಟ್ರೇಲಿಯಾಕ್ಕೆ ಮಿನ್ನುಮಣಿ ಲಗಾಮು

**ಗೋಲ್ಡ್ ಕೋಸ್ಟ್ (ಆಸ್ಟ್ರೇಲಿಯಾ), (ಪಿಟಿಐ):** ಸ್ಪಿನ್ನರ್‌ಗಳಾದ ಮಿನ್ನು ಮಣಿ ಮತ್ತು ಪ್ರಿಯಾ ಮಿಶ್ರಾ ಕ್ರಮವಾಗಿ ಐದು ಮತ್ತು ನಾಲ್ಕು ವಿಕೆಟ್‌ಗಳನ್ನು ಪಡೆದು, ಏಕೈಕ 'ಅನಧಿಕೃತ' ಟೆಸ್ಟ್ ಪಂದ್ಯದ ಮೊದಲ ದಿನವಾದ ಗುರುವಾರ ಆಸ್ಟ್ರೇಲಿಯಾ 'ಎ' ತಂಡವನ್ನು 212 ರನ್‌ಗಳಿಗೆ ಉರುಳಿಸಿದರು.

ನಾಲ್ಕು ದಿನಗಳ ಈ ಪಂದ್ಯದ ಮೊದಲ ದಿನದ ಕೊನೆಗೆ ಭಾರತ ಮಹಿಳಾ 'ಎ' 2 ವಿಕೆಟ್‌ಗೆ 100 ರನ್ ಗಳಿಸಿದ್ದು ಉತ್ತಮ ಆರಂಭ ಮಾಡಿದೆ. ತಂಡ 112 ರನ್‌ಗಳಿಂದ ಹಿಂದಿದೆ.

ನಾಯಕಿ ಮತ್ತು ಆಫ್ ಸ್ಪಿನ್ನರ್ ಮಿನ್ನು 58ಕ್ಕೆ 5 ವಿಕೆಟ್ ಪಡೆದರೆ, ನೀಳಕಾಯದ ಲೆಗ್ ಸ್ಪಿನ್ನರ್ ಪ್ರಿಯಾ 58 ರನ್ನಿಗೆ 4 ವಿಕೆಟ್ ಕಬಳಿಸಿದರು.

ಆತಿಥೇಯ ತಂಡದ ಜಾರ್ಜಿಯಾ ವೊಲ್ (71, 95ಎ, 4x12) ಸೊಗಸಾದ ಆಟವಾಡಿದರು.

ಭಾರತ ತಂಡವು ಪ್ರಿಯಾ ಪುನಿಯಾ (7) ಅವರನ್ನು ಬೇಗ ಕಳೆದುಕೊಂಡಿತು. ಆರಂಭ ಆಟಗಾರ್ತಿ ಶ್ವೇತಾ ಸೆಹ್ರಾವತ್ (ಔಟಾಗದೆ 40, 109ಎ, 4x3) ಮತ್ತು ತೇಜಲ್ ಹಸಬನಿಸ್ (ಔಟಾಗದೆ 31, 64ಎ, 2x4) ಮುರಿಯದ ಮೂರನೇ ವಿಕೆಟ್‌ಗೆ 53 ರನ್ ಸೇರಿಸಿದ್ದಾರೆ.

**ಸ್ಕೋರುಗಳು: ಆಸ್ಟ್ರೇಲಿಯಾ 'ಎ':** 65.5 ಓವರುಗಳಲ್ಲಿ 212 (ಜಾರ್ಜಿಯಾ ವೊಲ್ 71; ಮಿನ್ನು ಮಣಿ 58ಕ್ಕೆ5, ಪ್ರಿಯಾ ಮಿಶ್ರಾ 58ಕ್ಕೆ4); **ಭಾರತ 'ಎ':** 36 ಓವರುಗಳಲ್ಲಿ 2 ವಿಕೆಟ್‌ಗೆ 100 (ಶ್ವೇತಾ ಸೆಹ್ರಾವತ್ ಬ್ಯಾಟಿಂಗ್ 40, ತೇಜಲ್ ಹಸಬನಿಸ್ ಬ್ಯಾಟಿಂಗ್ 31)

### ಎನ್‌ಆರ್‌ಜೆ ರಾಜ್ಯ ಸೀನಿಯರ್ ಈಜು ಚಾಂಪಿಯನ್‌ಷಿಪ್

# ಬಿಎಸಿಯ ಪೃಥ್ವಿ, ತಾನ್ಯಾ ಕೂಟ ದಾಖಲೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಆತಿಥೇಯ ಬಸವನಗುಡಿ ಈಜು ಕೇಂದ್ರದ ಪೃಥ್ವಿ ಆರ್. (25.07 ಸೆ.) ಮತ್ತು ಜೆಐಆರ್‌ಎಸ್‌ನ ತಾನ್ಯಾ (5 ನಿ.11.17ಸೆ.) ಇಲ್ಲಿ ನಡೆಯುತ್ತಿರುವ ಎನ್‌ಆರ್‌ಜೆ ರಾಜ್ಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷರ 50 ಮೀಟರ್ ಬಟರ್‌ಫ್ಲೈ ಮತ್ತು ಮಹಿಳೆಯರ 400 ಮೀ. ಮೆಡ್ಲೆಯಲ್ಲಿ ಕೂಟ ದಾಖಲೆ ನಿರ್ಮಿಸಿದರು.

ಬಿಎಸಿಯ ಅನೀಶ್ ಎಸ್. ಗೌಡ ಪುರುಷರ 1500 ಮೀ. ಫ್ರೀಸ್ಟೈಲ್, 800 ಮೀ. ಫ್ರೀಸ್ಟೈಲ್, 200 ಮೀ. ಬಟರ್ ಫ್ಲೈ ಮತ್ತು 200 ಮೀ. ಫ್ರೀಸ್ಟೈಲ್ ಸ್ಪರ್ಧೆಗಳಲ್ಲಿ ಚಿನ್ನ ಗೆದ್ದರು. ಮಹಿಳೆಯರ ವಿಭಾಗದಲ್ಲಿ ಬಿಎಸಿಯ ಶಿರಿನ್ ಎರಡು ಸ್ಪರ್ಧೆಯಲ್ಲಿ ಚಿನ್ನ ಗೆದ್ದರು.

**ಫಲಿತಾಂಶ: ಚಿನ್ನ ಗೆದ್ದವರು: ಪುರುಷರು:** 1500 ಮೀ. ಫ್ರೀಸ್ಟೈಲ್: ಅನೀಶ್ ಎಸ್. ಗೌಡ (ಬಿಎಸಿ 16ನಿ.15.60ಸೆ); 800 ಮೀ. ಫ್ರೀಸ್ಟೈಲ್: ಅನೀಶ್ ಎಸ್. ಗೌಡ (ಬಿಎಸಿ, 8ನಿ. 34.65 ಸೆ); 100 ಮೀ. ಬ್ರೆಸ್ಟ್ ಸ್ಟ್ರೋಕ್: ವಿದಿತ್ ಎಸ್. ಶಂಕರ್ (ಡಾಲ್ಫಿನ್ ಅಕ್ವಾಟಿಕ್ಸ್, 1ನಿ. 06.05ಸೆ); 200 ಮೀ. ಬ್ಯಾಕ್ ಸ್ಟ್ರೋಕ್: ಆಕಾಶ್ ಮಣಿ (ಬಿಎಸಿ, 2 ನಿ.06.80 ಸೆ); 200 ಮೀ. ಬಟರ್ ಫ್ಲೈ: ಅನೀಶ್ ಎಸ್. ಗೌಡ (ಬಿಎಸಿ, 2 ನಿ.06.21ಸೆ.); 4x200 ಮೀ. ಫ್ರೀಸ್ಟೈಲ್: ಡಾಲ್ಫಿನ್ ಅಕ್ವಾಟಿಕ್ಸ್ (8 ನಿ.10.96ಸೆ.); 400ಮೀ ಮೆಡ್ಲೆ: ನವನೀತ್ ಆರ್. ಗೌಡ (ಡಾಲ್ಫಿನ್, 4 ನಿ.52.12 ಸೆ); 200 ಮೀ. ಫ್ರೀಸ್ಟೈಲ್: ಅನೀಶ್ ಎಸ್. ಗೌಡ (ಬಿಎಸಿ, 1 ನಿ.52.78 ಸೆ.); 50 ಮೀ. ಬಟರ್‌ಫ್ಲೈ: ಪೃಥ್ವಿ ಎಂ. (ಬಿಎಸಿ, 25.07 ಸೆ, ಕೂಟ ದಾಖಲೆ); 50 ಮೀ. ಬ್ರೆಸ್ಟ್ ಸ್ಟ್ರೋಕ್: ವಿದಿತ್ ಎಸ್. ಶಂಕರ್ (ಡಾಲ್ಫಿನ್, 28.85 ಸೆ); 4x100ಮೀ ಫ್ರೀಸ್ಟೈಲ್: ಡಾಲ್ಫಿನ್ ಅಕ್ವಾಟಿಕ್ಸ್ ಎ (3 ನಿ.33.20 ಸೆ).



ಬಿಎಸಿಯ ಪೃಥ್ವಿ ಆರ್.



ಬಿಎಸಿಯ ಶಿರಿನ್

**ಮಹಿಳೆಯರು:** 1500 ಮೀ. ಫ್ರೀಸ್ಟೈಲ್: ಶಿರಿನ್ (ಬಿಎಸಿ, 17 ನಿ.57.94 ಸೆ); 800 ಮೀ. ಫ್ರೀಸ್ಟೈಲ್: ಶಿರಿನ್ (ಬಿಎಸಿ, 9 ನಿ.25.37 ಸೆ); 100 ಮೀ. ಬ್ರೆಸ್ಟ್ ಸ್ಟ್ರೋಕ್: ಲಿನೇಶಾ ಎ.ಕೆ. (ಗ್ಲೋಬಲ್ ಸ್ವಿಮ್ ಸೆಂಟರ್, 1 ನಿ.16.99 ಸೆ); 200 ಮೀ. ಬ್ಯಾಕ್ ಸ್ಟ್ರೋಕ್: ನೈಶಾ (ಬಿಎಸಿ, 2 ನಿ.30.09 ಸೆ); 200 ಮೀ. ಬಟರ್ ಫ್ಲೈ: ಹಶಿಕಾ ರಾಮಚಂದ್ರ (ಬಿಎಸಿ, 2 ನಿ. 26.12 ಸೆ); 4x100ಮೀ ಫ್ರೀಸ್ಟೈಲ್: ಬಿಎಸಿ ಎ (4 ನಿ.11.70) ಸೆ; 400 ಮೀ ಮೆಡ್ಲೆ: ತಾನ್ಯಾ (ಜೆಐಆರ್‌ಎಸ್, 5 ನಿ.11.17 ಸೆ, ಕೂಟ ದಾಖಲೆ); 200 ಮೀ. ಫ್ರೀಸ್ಟೈಲ್: ಹಶಿಕಾ ರಾಮಚಂದ್ರ (ಬಿಎಸಿ, 2 ನಿ. 10.03 ಸೆ); 50 ಮೀ. ಬಟರ್‌ಫ್ಲೈ: ಮಾನವಿ ವರ್ಮಾ (ಡಾಲ್ಫಿನ್, 28.80 ಸೆ); 50 ಮೀ. ಬ್ರೆಸ್ಟ್ ಸ್ಟ್ರೋಕ್: ಲಿನೇಶಾ ಎ.ಕೆ. (ಜಿಎಸ್‌ಸಿ, 34.45 ಸೆ.).

### ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್: ಬೆಂಗಳೂರು ತಂಡಕ್ಕೆ ರೋಚಕ ಗೆಲುವು

# ಮೈಸೂರಿಗೆ ನಾಲ್ಕನೇ ಜಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಿ.ಎ. ಕಾರ್ತಿಕ್ (30 ಮತ್ತು 32ಕ್ಕೆ3) ಅವರ ಆಲ್‌ರೌಂಡ್ ಆಟದ ನೆರವಿನಿಂದ ಮೈಸೂರು ವಾರಿಯರ್ಸ್ ತಂಡ, ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಗುರುವಾರ ಶಿವಮೊಗ್ಗ ಲಯನ್ಸ್ ತಂಡವನ್ನು 28 ರನ್‌ಗಳಿಂದ ಸೋಲಿಸಿತು. ಈ ಟೂರ್ನಿಯಲ್ಲಿ ಶಿವಮೊಗ್ಗ ತಂಡಕ್ಕೆ ಗೆಲುವು ಗಗನಕುಸುಮವಾಗುತ್ತಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬ್ಯಾಟ್ ಮಾಡಲು ಕಳಿಸಲ್ಪಟ್ಟ ಮೈಸೂರು ವಾರಿಯರ್ಸ್ 7 ವಿಕೆಟ್‌ಗೆ 179 ರನ್‌ಗಳ ಹೋರಾಟದ ಮೊತ್ತ ಗಳಿಸಿತು.

ಇದಕ್ಕೆ ಉತ್ತರವಾಗಿ ಶಿವಮೊಗ್ಗ ಲಯನ್ಸ್ 9 ವಿಕೆಟ್‌ಗೆ 151 ರನ್ ಗಳಿಸಲಷ್ಟೇ ಶಕ್ತವಾಯಿತು. ನಾಲ್ಕನೇ ಗೆಲುವಿನೊಡನೆ ಮೈಸೂರು ಎಂಟು ಪಾಯಿಂಟ್ಸ್ ಗಳಿಸಿತು. ಆರು ಪಂದ್ಯಗಳನ್ನು ಆಡಿರುವ ಶಿವಮೊಗ್ಗ ಇನ್ನೂ ಪಾಯಿಂಟ್ಸ್ ಖಾತೆ ತೆರೆದಿಲ್ಲ.

ಆರಂಭ ಆಟಗಾರ ಸಿ.ಎ.ಕಾರ್ತಿಕ್ 30 ರನ್ (23ಎ) ಗಳಿಸಿದರೆ, ನಾಯಕ ಕರುಣ್ ನಾಯರ್ 45 (23ಎ, 4x6, 6x2) ಅಗ್ರ ಕ್ರಮಾಂಕದಲ್ಲಿ ಉಪಯುಕ್ತ ಕೊಡುಗೆ ನೀಡಿದರು. ವಿಕೆಟ್ ಕೀಪರ್ ಸುಮಿತ್ ಕುಮಾರ್ (28, 23), ಮನೋಜ್ ಭಾಂಡಗೆ (23, 7ಎ) ಮತ್ತು ಜೆ.ಸುಚಿತ್ (ಅಜೇಯ 22, 8ಎ) ಕೊನೆಯಲ್ಲಿ ಬಿರುಸಿನ ಆಟವಾಡಿ ತಂಡ ಉತ್ತಮ ಮೊತ್ತ ಕಲೆಹಾಕಲು ನೆರವಾದರು. ವೇಗದ ಬೌಲರ್ ಎಚ್.ಎಸ್.ಶರತ್ 29 ರನ್ನಿಗೆ 4 ವಿಕೆಟ್ ಪಡೆದರು.

ಶಿವಮೊಗ್ಗ ಲಯನ್ಸ್ ಪರ ನಾಯಕ ನಿಹಾಲ್ ಉಳ್ಳಾಲ್ (46, 38ಎ) ಮತ್ತು ಅಭಿನವ್ ಮನೋಹರ್ (46, 29ಎ, 4x3, 6x4) ಮಾತ್ರ ಹೋರಾಟ ತೋರಿದರು.

**ಬೆಂಗಳೂರಿಗೆ ಜಯ:** ದಿನದ ಮತ್ತೊಂದು ಪಂದ್ಯದಲ್ಲಿ ಕ್ರಾಂತಿ ಕುಮಾರ್ (39 ರನ್, 39ಕ್ಕೆ 2) ಅವರ ಆಲ್‌ರೌಂಡ್ ಆಟದ ಬಲದಿಂದ ಬೆಂಗಳೂರು ಬ್ಲಾಸ್ಟರ್ಸ್ ತಂಡವು 7 ರನ್‌ಗಳಿಂದ ಮಂಗಳೂರು ಡ್ರ್ಯಾಗನ್ಸ್ ವಿರುದ್ಧ ರೋಚಕ ಜಯ ಸಾಧಿಸಿತು.

ಮೊದಲು ಬ್ಯಾಟಿಂಗ್‌ಗೆ ಇಳಿದ ಬೆಂಗಳೂರು ತಂಡವು 20 ಓವರ್‌ಗಳಲ್ಲಿ 144 ರನ್ ಗಳಿಸಿತು. ಮಂಗಳೂರು ತಂಡದ ಬೌಲರ್‌ಗಳಾದ ಅಭಿಲಾಷ್ ಶೆಟ್ಟಿ ಮತ್ತು ಎಂ.ಬಿ. ದರ್ಶನ್ ತಲಾ ನಾಲ್ಕು ವಿಕೆಟ್ ಪಡೆದು ಮಿಂಚಿದ್ದರು.

ಗುರಿಯನ್ನು ಬೆನ್ನತ್ತಿದ ಮಂಗಳೂರು ತಂಡವು 7 ವಿಕೆಟ್‌ಗೆ 138 ರನ್ ಗಳಿಸಿ ಹೋರಾಟವನ್ನು ಮುಗಿಸಿತು. ನಿಕಿನ್ ಜೋಸ್ (61; 51ಎ) ಹೊರತುಪಡಿಸಿ ಉಳಿದವರು ನಿರಾಸೆ ಮೂಡಿಸಿದರು.

**ಸಂಕ್ಷಿಪ್ತ ಸ್ಕೋರು: ಮೈಸೂರು ವಾರಿಯರ್ಸ್:** 20 ಓವರುಗಳಲ್ಲಿ 7 ವಿಕೆಟ್‌ಗೆ 179 (ಕಾರ್ತಿಕ್ ಸಿ.ಎ. 30, ಕರುಣ್ ನಾಯರ್ 45, ಸುಮಿತ್ ಕುಮಾರ್ 28, ಮನೋಜ್ ಭಾಂಡಗೆ 23, ಜೆ.ಸುಚಿತ್ ಔಟಾಗದೇ 22; ಎಸ್.ಎಸ್.ಶರತ್ 29ಕ್ಕೆ4); **ಶಿವಮೊಗ್ಗ ಲಯನ್ಸ್:** 20 ಓವರುಗಳಲ್ಲಿ 9 ವಿಕೆಟ್‌ಗೆ 151 (ನಿಹಾಲ್ ಉಳ್ಳಾಲ್ 46, ಅಭಿನವ್ ಮನೋಹರ್ 46; ವಿದ್ಯಾಧರ ಪಾಟೀಲ 29ಕ್ಕೆ3, ಸಿ.ಎ.ಕಾರ್ತಿಕ್ 31ಕ್ಕೆ3). **ಪಂದ್ಯದ ಆಟಗಾರ:** ಸಿ.ಎ.ಕಾರ್ತಿಕ್

**ಬೆಂಗಳೂರು ಬ್ಲಾಸ್ಟರ್ಸ್:** 20 ಓವರ್‌ಗಳಲ್ಲಿ 144 (ಎಲ್.ಆರ್. ಚೇತನ್ 30, ಸೂರಜ್ ಅಹುಜಾ 38, ಕ್ರಾಂತಿ ಕುಮಾರ್ 39; ಅಭಿಲಾಷ್ ಶೆಟ್ಟಿ 9ಕ್ಕೆ 4, ಎಂ.ಬಿ. ದರ್ಶನ್ 31ಕ್ಕೆ 4). **ಮಂಗಳೂರು ಡ್ರ್ಯಾಗನ್ಸ್:** 20 ಓವರ್‌ಗಳಲ್ಲಿ 7ಕ್ಕೆ 138 (ನಿಕಿನ್ ಜೋಸ್ 61, ಲೋಚನ್ ಗೌಡ 28; ಸಂತೋಖ್ ಸಿಂಗ್ 11ಕ್ಕೆ 2, ಕ್ರಾಂತಿ ಕುಮಾರ್ 39ಕ್ಕೆ 2). **ಪಂದ್ಯದ ಆಟಗಾರ:** ಕ್ರಾಂತಿ ಕುಮಾರ್



ಮೈಸೂರು ವಾರಿಯರ್ಸ್ ತಂಡದ ಬೌಲರ್ ದೀಪಕ್ ದೇವಾಡಿಗ ಅವರು ಶಿವಮೊಗ್ಗ ತಂಡದ ನಿಹಾಲ್ ಉಳ್ಳಾಲ್ ಅವರ ವಿಕೆಟ್ ಪಡೆದು ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

| ತಂಡಗಳು | ಪಂದ್ಯ | ಗೆಲುವು | ಸೋಲು | ಅಂಕ | ನೆಟ್ ರನ್‌ರೇಟ್ |
|---|---|---|---|---|---|
| ಬೆಂಗಳೂರು ಬ್ಲಾಸ್ಟರ್ಸ್ | 5 | 4 | 1 | 8 | 1.111 |
| ಮೈಸೂರು ವಾರಿಯರ್ಸ್ | 6 | 4 | 2 | 8 | 1.048 |
| ಹುಬ್ಬಳ್ಳಿ ಟೈಗರ್ಸ್ | 5 | 4 | 1 | 8 | -0.013 |
| ಗುಲ್ಬರ್ಗ ಮಿಸ್ಟಿಕ್ಸ್ | 5 | 2 | 2 | 5 | -0.192 |
| ಮಂಗಳೂರು ಡ್ರ್ಯಾಗನ್ಸ್ | 5 | 1 | 3 | 3 | -0.193 |
| ಶಿವಮೊಗ್ಗ ಲಯನ್ಸ್ | 6 | 0 | 6 | 0 | -2.246 |

ಇಂದಿನ ಪಂದ್ಯಗಳು
ಬೆಂಗಳೂರು ಬ್ಲಾಸ್ಟರ್ಸ್–ಹುಬ್ಬಳ್ಳಿ ಟೈಗರ್ಸ್ (ಮಧ್ಯಾಹ್ನ 3): ಮಂಗಳೂರು ಡ್ರ್ಯಾಗನ್ಸ್–ಗುಲ್ಬರ್ಗ ಮಿಸ್ಟಿಕ್ಸ್ (ರಾತ್ರಿ 7)
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

### ಲಾರ್ಡ್ಸ್‌ನಲ್ಲಿ ಮೊದಲ ಬಾರಿ ಮಹಿಳಾ ಟೆಸ್ಟ್ ಕ್ರಿಕೆಟ್

## 2026ರಲ್ಲಿ ಭಾರತ–ಇಂಗ್ಲೆಂಡ್ ಮುಖಾಮುಖಿ

**ಲಂಡನ್ (ಪಿಟಿಐ):** ಮೊದಲ ಬಾರಿ ಲಾರ್ಡ್ಸ್ ಕ್ರಿಕೆಟ್ ಕ್ರೀಡಾಂಗಣವು ಮಹಿಳಾ ಕ್ರಿಕೆಟ್ ಟೆಸ್ಟ್ ಪಂದ್ಯವೊಂದರ ಆತಿಥ್ಯ ವಹಿಸಲಿದೆ. ಭಾರತ ಮತ್ತು ಇಂಗ್ಲೆಂಡ್ ಮಹಿಳಾ ತಂಡಗಳ ನಡುವೆ 2026ರಲ್ಲಿ ಈ ಟೆಸ್ಟ್ ಪಂದ್ಯ 'ಕ್ರಿಕೆಟ್‌ನ ತವರು' ಕ್ರೀಡಾಂಗಣದಲ್ಲಿ ನಡೆಯಲಿದೆ ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ಗುರುವಾರ ಪ್ರಕಟಿಸಿದೆ.

ಭಾರತ ಮತ್ತು ಇಂಗ್ಲೆಂಡ್ ತಂಡಗಳು 2025ರ ಜುಲೈನಲ್ಲಿ ಮೂರು ಪಂದ್ಯಗಳ ಏಕದಿನ ಸರಣಿ ಆಡಲಿದೆ. ಇದಕ್ಕೆ ಮೊದಲು ಐದು ಪಂದ್ಯಗಳ ಟಿ20 ಸರಣಿ ನಡೆಯಲಿದೆ. ನಂತರ ಏಕೈಕ ಟೆಸ್ಟ್ ಪಂದ್ಯ ಆಡಲು ಭಾರತ 2026ರಲ್ಲಿ ಮತ್ತೆ ಇಂಗ್ಲೆಂಡ್‌ಗೆ ತೆರಳಲಿದೆ ಎಂದು ಇಸಿಬಿ ಹೇಳಿದೆ.

'ಭಾರತ ಮಹಿಳಾ ತಂಡ 2026ರಲ್ಲಿ ಮರಳಲಿದ್ದು, ಇಂಗ್ಲೆಂಡ್ ಮಹಿಳೆಯರ ವಿರುದ್ಧ ಲಾರ್ಡ್ಸ್‌ನಲ್ಲಿ ಮೊದಲ ಬಾರಿ ಮಹಿಳೆಯರ ಟೆಸ್ಟ್ ಪಂದ್ಯವೊಂದರಲ್ಲಿ ಆಡಲಿದೆ ಎಂಬುದನ್ನು ಖಚಿತಪಡಿಸುತ್ತಿದ್ದೇವೆ. ಇದು ವಿಶೇಷ ಸಂದರ್ಭವಾಗಲಿದೆ. ಮಹತ್ವದ್ದು ಕೂಡ' ಎಂದು ಇಸಿಬಿ ಸಿಇಒ ರಿಚರ್ಡ್ ಗೌಲ್ಡ್ ಹೇಳಿರುವುದಾಗಿ ಮಂಡಳಿಯ ವೆಬ್‌ಸೈಟ್‌ನಲ್ಲಿ ತಿಳಿಸಲಾಗಿದೆ.

ಟಿ20 ಸರಣಿಯ ಮೊದಲ ಪಂದ್ಯ ಜೂನ್ 28ರಂದು ನಾಟಿಂಗ್‌ಹ್ಯಾಮ್‌ನಲ್ಲಿ ನಡೆಯಲಿದೆ. ಎರಡನೇ ಪಂದ್ಯ ಜುಲೈ 1ರಂದು ಬ್ರಿಸ್ಟಲ್‌ನಲ್ಲಿ, ಮೂರನೇ ಪಂದ್ಯ ಜುಲೈ 4ರಂದು ಓವಲ್‌ನಲ್ಲಿ ಹಾಗೂ ಕೊನೆಯ ಎರಡು ಪಂದ್ಯಗಳು ಕ್ರಮವಾಗಿ ಜುಲೈ 9 ಮತ್ತು 12ರಂದು ಓಲ್ಡ್ ಟ್ರಾಫರ್ಡ್ ಮತ್ತು ಎಜ್‌ಬಾಸ್ಟನ್‌ನಲ್ಲಿ ನಡೆಯಲಿದೆ.

ಏಕದಿನ ಸರಣಿಯ ಮೊದಲ ಪಂದ್ಯ ಸೌತಾಂಪ್ಟನ್‌ನಲ್ಲಿ ಜುಲೈ 16ರಂದು, ಎರಡನೇ ಪಂದ್ಯ ಲಾರ್ಡ್ಸ್‌ನಲ್ಲಿ ಜುಲೈ 19ರಂದು ಹಾಗೂ ಮೂರನೇ ಪಂದ್ಯ ಚೆಸ್ಟರ್–ಲಿ–ಸ್ಟ್ರೀಟ್‌ನಲ್ಲಿ ಜುಲೈ 22ರಂದು ನಡೆಯಲಿವೆ.

## ಕುಸ್ತಿ: ಭಾರತದ ಮೂವರಿಗೆ ಚಿನ್ನ

**ಅಮ್ಮಾನ್ (ಜೋರ್ಡಾನ್), (ಪಿಟಿಐ):** ಭಾರತದ ಮಹಿಳಾ ಕುಸ್ತಿಪಟುಗಳಾದ ಅದಿತಿ ಕುಮಾರಿ, ನೇಹಾ ಮತ್ತು ಪುಲ್ಕಿತ್ ಅವರು ವಿಶ್ವ 17 ವರ್ಷದೊಳಗಿನವರ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ತಮ್ಮ ವಿಭಾಗಗಳ ಸ್ಪರ್ಧೆಗಳಲ್ಲಿ ಚಿನ್ನದ ಪದಕ ಗೆದ್ದುಕೊಂಡರು.

ಅದಿತಿ (43 ಕೆಜಿ) 7–0 ಯಿಂದ ಗ್ರೀಸ್‌ನ ಮರಿಯಾ ಲೂಯಿಜಾ ಜಿಕಿಕಾ ಅವರನ್ನು ಮಣಿಸಿದರು. ನೇಹಾ (57 ಕೆಜಿ) ಜಪಾನ್‌ನ ಸೋ ಟ್ಸುಟ್ಸುಯಿ ಅವರನ್ನು ಸೋಲಿಸಿದರು. ಪುಲ್ಕಿತ್ (65 ಕೆಜಿ) 6–3ರಿಂದ ಡೇರಿಯಾ ಫ್ರೋಲೋವಾ ಅವರನ್ನು ಮಣಿಸಿದರು.

## ರಾಜ್ಯಮಟ್ಟದ ಕ್ರಾಸ್ ಕಂಟ್ರಿ 25ರಂದು

**ಧಾರವಾಡ:** 'ಕ್ರೀಡಾ ದಿನಾಚರಣೆ ಪ್ರಯುಕ್ತ ಜಿಲ್ಲಾ ಒಲಿಂಪಿಕ್ ಸಂಸ್ಥೆ ಹಾಗೂ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವತಿಯಿಂದ ಇದೇ 25ರಂದು ಧಾರವಾಡದಲ್ಲಿ ರಾಜ್ಯಮಟ್ಟದ ಮುಕ್ತ ಕ್ರಾಸ್ ಕಂಟ್ರಿ ನಡೆಯಲಿದೆ' ಎಂದು ಸಂಸ್ಥೆ ಅಧ್ಯಕ್ಷ ಶಿವು ಹಿರೇಮಠ ತಿಳಿಸಿದರು.

ನಗರದ ಆರ್.ಎನ್.ಶೆಟ್ಟಿ ಕ್ರೀಡಾಂಗಣದಲ್ಲಿ ಬೆಳಿಗ್ಗೆ 7 ಗಂಟೆಗೆ ಸ್ಪರ್ಧೆ ಆರಂಭವಾಗಲಿದೆ. 16 ವರ್ಷ ಮೇಲ್ಪಟ್ಟ ಮಹಿಳೆಯರು ಮತ್ತು ಪುರುಷರು 10 ಕಿ.ಮೀ ವಿಭಾಗದಲ್ಲಿ ಮತ್ತು 16 ವರ್ಷದೊಳಗಿನ ಬಾಲಕರು ಮತ್ತು ಬಾಲಕಿಯರು 4 ಕಿ.ಮೀ ವಿಭಾಗದಲ್ಲಿ ಭಾಗವಹಿಸಬಹುದು ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸ್ಪರ್ಧೆಯ ಮಾಹಿತಿ, ನೋಂದಣಿಗೆ ಮೊಬೈಲ್: 97400 24123 ಅಥವಾ 94485 90704 ಸಂಪರ್ಕಿಸಬಹುದು.

## ಸತೀಶ್ ನಿರ್ಗಮನ

**ಯೊಕೊಹಾಮ (ಜಪಾನ್) (ಪಿಟಿಐ):** ಭಾರತದ ಸತೀಶ್ ಕುಮಾರ್ ಕರುಣಾಕರನ್ ಗುರುವಾರ ಜಪಾನ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನ ಎರಡನೇ ಸುತ್ತಿನಲ್ಲಿ ಮೂರು ಗೇಮ್‌ಗಳ ಹೋರಾಟದ ನಂತರ ನಿರಾಸೆ ಅನುಭವಿಸಿದರು.

ಸತೀಶ್ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ 21-18, 18-21, 8-21ರಿಂದ ವಿಶ್ವದ 40ನೇ ಕ್ರಮಾಂಕದ ಥಾಯ್ಲೆಂಡ್‌ನ ಕಾಂತಾಫೋನ್ ವಾಂಗ್‌ಚರೋನ್ ಅವರಿಗೆ ಮಣಿದರು.

# ಟಿ.ಟಿ.ಗೆ ಅರ್ಚನಾ ವಿರಾಮ

### ಅಮೆರಿಕದಲ್ಲಿ ಉನ್ನತ ವ್ಯಾಸಂಗಕ್ಕೆ ಆಟಗಾರ್ತಿಯ ನಿರ್ಧಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅನಿರೀಕ್ಷಿತ ನಿರ್ಧಾರವೊಂದರಲ್ಲಿ ಟೇಬಲ್ ಟೆನಿಸ್ ಆಟಗಾರ್ತಿ ಅರ್ಚನಾ ಕಾಮತ್ ಅವರು ಆಟಕ್ಕೆ ವಿರಾಮ ನೀಡಿದ್ದು, ಅಮೆರಿಕದಲ್ಲಿ ಮಾಸ್ಟರ್ಸ್ ಪದವಿ ವ್ಯಾಸಂಗಕ್ಕೆ ನಿರ್ಧರಿಸಿದ್ದಾರೆ. ಇತ್ತೀಚೆಗೆ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿ ಕ್ವಾರ್ಟರ್‌ಫೈನಲ್ ತಲುಪಿದ್ದ ತಂಡದಲ್ಲಿ ಆಡಿದ್ದ ಅರ್ಚನಾ ಕೆಲವೇ ದಿನಗಳ ಅಂತರದಲ್ಲಿ ಈ ನಿರ್ಧಾರಕ್ಕೆ ಬಂದಿದ್ದಾರೆ.

'ಅರ್ಚನಾ ಈ ನಿರ್ಧಾರವನ್ನು ದಿಢೀರನೇ ತೆಗೆದುಕೊಂಡಿಲ್ಲ. ಒಲಿಂಪಿಕ್ಸ್ ಮುಗಿದಿದ್ದು, ಈಗ ಉನ್ನತ ವ್ಯಾಸಂಗದ ನಿರ್ಧಾರಕ್ಕೆ ಬಂದಿದ್ದೇವೆ. ಹಾಗೆ ನೋಡಿದರೆ ಅರ್ಚನಾಗೆ ಆಟದಷ್ಟೇ ಓದೂ ಕೂಡ ಅತಿ ಮೆಚ್ಚಿನ ವಿಷಯ' ಎಂದು ಆಟಗಾರ್ತಿಯ ತಂದೆ ಡಾ.ಜಿ.ಗಿರೀಶ್ ಕಾಮತ್ 'ಪ್ರಜಾವಾಣಿ'ಗೆ ತಿಳಿಸಿದರು.

24 ವರ್ಷ ವಯಸ್ಸಿನ ಅರ್ಚನಾ ಉನ್ನತ ರ್‍ಯಾಂಕಿಂಗ್ ಆಧಾರದಲ್ಲಿ ಒಲಿಂಪಿಕ್ಸ್ ತಂಡಕ್ಕೆ ಆಯ್ಕೆಯಾಗಿದ್ದರು. ಒಲಿಂಪಿಕ್ಸ್ ಕ್ವಾರ್ಟರ್‌ಫೈನಲ್‌ನಲ್ಲಿ ಭಾರತ, ಜರ್ಮನಿ ತಂಡಕ್ಕೆ 1–3ರಲ್ಲಿ ಸೋತಿತ್ತು. ತನಗಿಂತ ಉನ್ನತ ಕ್ರಮಾಂಕದ ಆಟಗಾರ್ತಿ ಷಿಯೊನಾ ಶಾನ್‌ಅವರನ್ನು ಸೋಲಿಸಿದ್ದ ಅರ್ಚನಾ ಭಾರತಕ್ಕೆ ಆ ಏಕೈಕ ಗೆಲುವು ಗಳಿಸಿಕೊಟ್ಟಿದ್ದರು.

'ಪ್ಯಾರಿಸ್ ಒಲಿಂಪಿಕ್ಸ್ ನಂತರ ಉನ್ನತ ವ್ಯಾಸಂಗದ ನಿರ್ಧಾರ ಕೈಗೊಂಡೆ. ಸಾರ್ವಜನಿಕ ನೀತಿಗೆ ಸಂಬಂಧಿಸಿ ಎರಡು ವರ್ಷಗಳ ಮಾಸ್ಟರ್ಸ್ ಪದವಿಗೆ ನೋಂದಾಯಿಸಿಕೊಂಡಿದ್ದೇನೆ. ಉನ್ನತ ವ್ಯಾಸಂಗದ ನನ್ನ ಗುರಿಯನ್ನು ಮತ್ತಷ್ಟು ಮುಂದಕ್ಕೆ ಹಾಕಲು ಬಯಸುವುದಿಲ್ಲ' ಎಂದು ಅರ್ಚನಾ ಹೇಳಿದರು.

'ನನ್ನ ಪಾಲಿಗೆ ಇಂಥ ನಿರ್ಧಾರ ಸುಲಭವಾಗಿರಲಿಲ್ಲ. ನಾನು ಸ್ಪರ್ಧಾತ್ಮಕ ಟೇಬಲ್ ಟೆನಿಸ್‌ಗೆ ವಿದಾಯ ಹೇಳುವುದಾದರೆ, ಅದು ನನ್ನ ಓದಿನ ಕಡೆಗಿನ ಪ್ರೀತಿಯಿಂದ ಮಾತ್ರ. ಟಿ.ಟಿ. ಅಮೋಘ ಕ್ರೀಡೆ. ದೀರ್ಘಕಾಲ ಆಡುವ ಅವಕಾಶ ನನಗೆ ದೊರಕಿತು. ಅದರ ಕಡೆಗಿನ ನನ್ನ ಪ್ರೀತಿ ಮುಂದುವರಿಯಲಿದೆ' ಎಂದು ಅರ್ಚನಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ವಿವಿಧ ಕ್ರೀಡಾ ಯೋಜನೆಗಳ ಮೂಲಕ ತಮಗೆ ಆರ್ಥಿಕ ನೆರವು ನೀಡಿದ್ದಕ್ಕೆ ಅವರು ಕೃತಜ್ಞತೆ ವ್ಯಕ್ತಪಡಿಸಿದ್ದಾರೆ. ತಮ್ಮ ವೃತ್ತಿ ಜೀವನದುದ್ದಕ್ಕೂ ನೆರವು ನೀಡಿದ ತರಬೇತುದಾರರಿಗೆ ಮತ್ತು ನೆರವು ಸಿಬ್ಬಂದಿಗೂ ಧನ್ಯವಾದ ಸಮರ್ಪಿಸಿದ್ದಾರೆ.

'ನನಗೆ ಅತ್ಯುತ್ತಮ ನೆರವು ತಂಡ ದೊರಕಿತು. ಅನ್ಮೋಲ್ ಗಾರ್ಗ್ (ನನ್ನ ಟಿಟಿ ಕೋಚ್), ಜೈ ಸನನ್ ಸರ್ (ಸ್ಟ್ರೆಂಥ್ ಅಂಡ್ ಕಂಡಿಷನಿಂಗ್ ಕೋಚ್) ಮತ್ತು ಶಂತನು ಕುಲಕರ್ಣಿ ಸರ್ (ನನ್ನ ಕ್ರೀಡಾ ಮನಃಶಾಸ್ತ್ರಜ್ಞ) ಅವರಿಗೆ ಧನ್ಯವಾದಗಳು' ಎಂದಿದ್ದಾರೆ.

'ಈ ವರ್ಷ ದೇಶಿಯ ಟೂರ್ನಿಗಳಲ್ಲಿ ಅವರು ಅತ್ಯುತ್ತಮ ಸಾಧನೆ ತೋರಿದ್ದರು. ಮೂರು ಪ್ರಶಸ್ತಿಗಳ ಜೊತೆಗೆ ನಾಲ್ಕರಲ್ಲಿ ಫೈನಲ್ ತಲುಪಿದ್ದರು. ಒಲಿಂಪಿಕ್ಸ್‌ನಲ್ಲಿ ದೇಶವನ್ನು ಪ್ರತಿನಿಧಿಸುವ ಅವಕಾಶ ದೊರಕಿದ್ದಕ್ಕೆ ಅವರು ಆಭಾರಿಯಾಗಿದ್ದಾರೆ' ಎಂದು ಡಾ.ಗಿರೀಶ್ ತಿಳಿಸಿದ್ದಾರೆ.

ಅರ್ಚನಾಳ ಅಣ್ಣ ಅಭಿನವ್ ಅವರು ನಾಸಾದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಉನ್ನತ ಶಿಕ್ಷಣ ಪಡೆಯುವ ದಿಸೆಯಲ್ಲಿ ಸೋದರಿಗೆ ಪ್ರೇರಣೆಯಾಗಿದ್ದಾರೆ. ಅರ್ಚನಾ 2018ರಲ್ಲಿ ಮೊದಲ ರಾಷ್ಟ್ರೀಯ ಸೀನಿಯರ್ ಪ್ರಶಸ್ತಿ ಗೆದ್ದುಕೊಂಡಿದ್ದರು. ಅದೇ ವರ್ಷ ಬ್ಯೂನೊ ಏರ್ಸ್‌ನಲ್ಲಿ ಯೂತ್ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದರು.



ಅರ್ಚನಾ ಕಾಮತ್ –ಪ್ರಜಾವಾಣಿ ಚಿತ್ರ

### ಎಚ್‌ಪಿಎಸ್‌ಎಲ್ ಬೆಂಗಳೂರು ಡರ್ಬಿ ಕಪ್ ಅನಾವರಣ

# ಬೇಸಿಗೆ ಡರ್ಬಿಗೆ ₹2 ಕೋಟಿ ಬಹುಮಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಉದ್ಯಾನನಗರಿಯ ರೇಸ್‌ಪ್ರಿಯರು ಕಾತರದಿಂದ ಕಾಯುತ್ತಿದ್ದ ಬೆಂಗಳೂರು ಬೇಸಿಗೆ ಡರ್ಬಿ ಭಾನುವಾರ (ಆ.25) ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ನಡೆಯಲಿದೆ. ಈ ಬಾರಿಯ ಒಟ್ಟು ಬಹುಮಾನ ಮೊತ್ತವು ₹ 2 ಕೋಟಿ ಆಗಿದೆ.

ಗುರುವಾರ ಸಂಜೆ ಬಿಟಿಸಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಟ್ರೋಫಿ ಅನಾವರಣಗೊಳಿಸಲಾಯಿತು. ಮುಖ್ಯ ಪ್ರಾಯೋಜಕತ್ವ ನೀಡಿರುವ ಎಚ್‌ಪಿಎಸ್‌ಎಲ್ ಸಂಸ್ಥೆಯ ನಿರ್ದೇಶಕ ವಿ.ಎಸ್.ಎನ್. ರಾಜು ಅವರು ಬಿಟಿಸಿಯ ಸ್ಟೀವರ್ಡ್ ಹಾಗೂ ಅಧ್ಯಕ್ಷತೆ ವಹಿಸಿದ್ದ ಅರವಿಂದ್ ಕಾತರಕಿ ಅವರಿಗೆ ಟ್ರೋಫಿ ಹಸ್ತಾಂತರಿಸಿದರು.

ಇದೇ ಸಂದರ್ಭದಲ್ಲಿ ಡರ್ಬಿಯಲ್ಲಿ ಸ್ಪರ್ಧಿಸುವ ಕುದುರೆಗಳ ಕ್ರಮ ಸಂಖ್ಯೆಗಳ ಡ್ರಾ ಕೂಡ ನಡೆಯಿತು. ಭಾನುವಾರ ಸಂಜೆ 4.05ಕ್ಕೆ ಬೇಸಿಗೆ ಕಾಲದ ರೇಸ್‌ಗಳು ನಡೆಯಲಿವೆ. 12 ಅಶ್ವಗಳು ಕಣದಲ್ಲಿವೆ. ಅದರಲ್ಲಿ ಹತ್ತು ಗಂಡು ಮತ್ತು ಎರಡು ಹೆಣ್ಣು ಕುದುರೆಗಳಿವೆ. ಮೊದಲ ಸ್ಥಾನ ಪಡೆಯುವ ಕುದುರೆಗೆ ಸುಮಾರು ₹ 99 ಲಕ್ಷ ಬಹುಮಾನ ನೀಡಲಾಗುತ್ತಿದೆ.

**ಬುಕ್‌ಮೇಕರ್ಸ್‌ಗಳಿಗೆ ಅವಕಾಶ:** ಕಾರಣಾಂತರಗಳಿಂದ ಹಣದ ಬಿಕ್ಕಟ್ಟು ಎದುರಿಸುತ್ತಿರುವ ಬಿಟಿಸಿಯು ಈ ಬಾರಿಯ ಡರ್ಬಿಗೆ ಉತ್ತಮ ಮೊತ್ತದ ಬಹುಮಾನವನ್ನು ನಿಗದಿಪಡಿಸಿದೆ. ಅಲ್ಲದೇ ಈ ಡರ್ಬಿಗೆ ಬುಕ್‌ಮೇಕರ್ಸ್‌ಗಳಿಗೆ ಅನುಮತಿ ನೀಡಲಾಗಿದ್ದು ಬಿಟಿಸಿಗೆ ಸ್ವಲ್ಪಮಟ್ಟಿಗೆ ಸಮಾಧಾನಕರ ಸಂಗತಿಯಾಗಿದೆ. 17 ಬುಕ್‌ಮೇಕರ್ಸ್‌ಗಳಿಗೆ ಲೈಸೆನ್ಸ್ ನೀಡಲಾಗುತ್ತಿದೆ.

'ಬಿಟಿಸಿಗೆ ಬುಕ್‌ಮೇಕರ್ಸ್‌ಗಳು ಜೀವನಾಡಿಗಳಿದ್ದಂತೆ. ಅವರಿಲ್ಲದ ಕಾರಣಕ್ಕೆ ಟೋಟಲೈಟರ್ಸ್ ಮೇಲೆ ಒತ್ತಡ ಹೆಚ್ಚಿತ್ತು. ಜಿಎಸ್‌ಟಿ (ಸರಕು ಮತ್ತು ಸೇವಾ ತೆರಿಗೆ) ಹೊರೆಯಿಂದಲೂ ಆದಾಯ ಕುಸಿದಿತ್ತು. ₹ 2200 ಕೋಟಿ ವಹಿವಾಟು ಬದಲು ₹ 300 ಕೋಟಿಗೆ ಇಳಿದಿದೆ. ಶೇ 28ರಷ್ಟು ಜಿಎಸ್‌ಟಿ ಪಾವತಿಸಲೇಬೇಕು. ಆದ್ದರಿಂದ ಬುಕ್‌ಮೇಕರ್ಸ್‌ಗಳಿಂದ ಬರುವ ಲೈಸೆನ್ಸ್ ಶುಲ್ಕವು ಮಹತ್ವದ್ದಾಗಿದೆ' ಎಂದು ಸ್ಟೀವರ್ಡ್ ಉದಯ್ ಈಶ್ವರನ್ ವಿವರಿಸಿದರು.

'ಕ್ಲಬ್‌ಗೆ ಆಫ್‌ಕೋರ್ಸ್ ರೇಸ್ ಬೆಟ್ಟಿಂಗ್ ಮೂಲಕ ಹೆಚ್ಚು ಆದಾಯ ಸಿಗುತ್ತದೆ. ಆನ್‌ಕೋರ್ಸ್ ಬೆಟ್ಟಿಂಗ್ ಆದಾಯದಲ್ಲಿ ನಿರ್ವಹಣೆ ವೆಚ್ಚ ಸರಿದೂಗಿಸಬೇಕಾಗುತ್ತದೆ. ಬುಕ್‌ಮೇಕರ್ಸ್ ಇಲ್ಲದೇ ಆದಾಯ ಖೋತಾ ಆಗಿತ್ತು. ಇದೀಗ 17 ಬುಕ್‌ಮೇಕರ್ಸ್‌ಗೆ ಲೈಸೆನ್ಸ್ ನೀಡಲು ಅನುಮತಿ ಸಿಗುತ್ತಿದೆ. ಸರ್ಕಾರವು ಈ ಕುರಿತು ಮುತುವರ್ಜಿ ವಹಿಸಿ ಕಾನೂನುಪ್ರಕಾರ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಹೇಳಿದರು.

ಇತ್ತೀಚೆಗೆ ಕ್ಲಬ್‌ನಲ್ಲಿ ನಡೆದ ಕೆಲವು ವಿವಾದಗಳ ಕುರಿತು ಪ್ರತಿಕ್ರಿಯಿಸಿದ ಅವರು, 'ಸರ್ಕಾರದ ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಅವರಿಗೆ ಕ್ಲಬ್ ಕುರಿತು ಸಮಗ್ರ ವಿವರಣೆ ನೀಡಿದ್ದೇವೆ. 13 ಸ್ಲೈಡ್‌ಗಳ ಪ್ರೆಸೆಂಟೇಷನ್ ಕೂಡ ನೀಡಿದ್ದು, ಅವರಿಗೂ ಬುಕ್‌ಮೇಕರ್ಸ್‌ಗಳ ಪಾತ್ರದ ಕುರಿತು ಅರಿವು ಮೂಡಿದೆ. ಅಕ್ರಮ ಬುಕ್‌ಕೀಪಿಂಗ್ ಚಟುವಟಿಕೆಗೆ ಕಡಿವಾಣ ಹಾಕಲು ನಾವು (ಕ್ಲಬ್) ಶ್ರಮಿಸಿದ್ದರ ಕುರಿತು ಅವರಿಗೂ ಮನವರಿಕೆಯಾಗಿದೆ' ಎಂದರು.



ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಗುರುವಾರ ಎಚ್‌ಪಿಎಸ್‌ಎಲ್ ಸ್ಪೋರ್ಟ್ಸ್ ಆ್ಯಂಡ್ ಲೀಸರ್ ಪ್ರೈವೇಟ್ ಲಿಮಿಟೆಡ್ ನಿರ್ದೇಶಕ ವಿ.ಎಸ್.ಎನ್. ರಾಜು (ಬಲಬದಿ) ಅವರು ಸ್ಟೀವರ್ಡ್ ಅರವಿಂದ್ ಕಾತರಕಿ ಅವರಿಗೆ ಬೆಂಗಳೂರು ಬೇಸಿಗೆ ಡರ್ಬಿ (ಗ್ರೇಡ್ 1) ಟ್ರೋಫಿಯನ್ನು ಹಸ್ತಾಂತರಿಸಿದರು –ಪ್ರಜಾವಾಣಿ ಚಿತ್ರ